ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ಬೀಗಕ್ಕಿರುವ ನಿಷ್ಠೆ ಮತ್ಯಾವುದಕ್ಕೂ ಇರಲು ಸಾಧ್ಯವಿಲ್ಲ. ಬೀಗವನ್ನು ಮುರಿಯಬಹುದು. ಆದರೆ ಅದು ಎಂದೆಂದಿಗೂ ತನ್ನ ಕೀಲಿಯನ್ನು ಮಾತ್ರ ಬದಲಿಸುವುದಿಲ್ಲ. ಒಂದು ಬೀಗಕ್ಕೆ ಒಂದೇ ಕೀಲಿ. ನಮ್ಮ ನಿಷ್ಠೆಯೂ ಹಾಗೇ ಇರಬೇಕು.

ವಕ್ರತುಂಡೋಕ್ತಿ

ಸ್ಮಶಾನದಲ್ಲಿ ಕೆಲಸ ಮಾಡುವವನು ಸತ್ತರೆ ಆಗುವ ಒಂದು ಸಮಸ್ಯೆ ಅಂದ್ರೆ, ಆತ ತಾನು ಕೆಲಸ ಮಾಡುವ ಜಾಗಕ್ಕೆ ಮತ್ತೊಮ್ಮೆ ಬರಬೇಕಾಗುತ್ತದೆ.

ಪುಟ ತೆರೆದಂತೆ...

ರೆಸಾರ್ಟ್‌ನಲ್ಲೊಂದು ಮ್ಯಾನೇಜ್‌ಮೆಂಟ್ ಪಾಠ!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

ಭಾರತದ ತೆರಿಗೆ ವ್ಯವಸ್ಥೆಯ ಆಸಕ್ತಿದಾಯಕ ಇತಿಹಾಸ
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
ಸಂ.ಗಮ | 7

ವಿಶ್ವವಾಣಿ ಪುಸ್ತಕ ಪ್ರಕಾಶನದ 9 ಕೃತಿಗಳು ಲೋಕಾರ್ಪಣೆ

ನೂರಾರು ಸಾಹಿತ್ಯಾಭಿಮಾನಿಗಳ ಸಮಾಗಮ

ಯಾವ್ಯಾವ ಕೃತಿಗಳು ಲೋಕಾರ್ಪಣೆ

- **ವಿಶ್ವೇಶ್ವರ್ ಭಟ್** ಆಸ್ಕ್ ದ ಎಡಿಟರ್-3, ಸಂಪಾದಕರ ಸದ್ಯಶೋಧನೆ-4, 5, ಅರ್ಧನಾರೀಶ್ವರ, ಕುಡಿಯೋಣ ಬಾರಾ
- **ಕಿರಣ್ ಉಪಾಧ್ಯಾಯ** ಹೊರದೇಶವಾಸಿ
- **ಶಿಶಿರ್ ಹೆಗಡೆ** ಶಿಶಿರ ಕಾಲ-2
- **ರೂಪಾ ಗುರುರಾಜ್** ಒಂದೊಳ್ಳೆ ಮಾತು-3
- **ರಾಜು ಅಡಕಳ್ಳಿ** ಹೊಸಮುಖ

ಬೆಂಗಳೂರಿನ ಕೆ.ಜಿ. ರಸ್ತೆಯ ಎಫ್‌ಕೆಸಿಸಿಐ ಸಭಾಂಗಣದಲ್ಲಿ ಶನಿವಾರ ಸಂಜೆ ವಿಶ್ವವಾಣಿ ಪ್ರಕಾಶನದ 9 ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು. ಶಿಕ್ಷಣ ತಜ್ಞ, ಸಂಸ್ಕೃತಿ ಚಿಂತಕ ಗುರುರಾಜ ಕರ್ಜಗಿ, ಖ್ಯಾತ ವನ್ಯಜೀವಿ ತಜ್ಞ ಡಾ. ಉಲ್ಲಾಸ ಕಾರಂತ, ಮಾಜಿ ಸಂಸದ ಪ್ರತಾಪ್ ಸಿಂಹ, ಏಷ್ಯಾನೆಟ್ ಸುವರ್ಣ ನ್ಯೂಸ್ ಸಂಪಾದಕ ಅಜಿತ್ ಹನುಮಕ್ಕನವರ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಅಂಕಣಕಾರರಾದ ರಾಜು ಅಡಕಳ್ಳಿ, ಕಿರಣ ಉಪಧ್ಯಾಯ, ಶಿಶಿರ ಹೆಗಡೆ, ರೂಪಾ ಗುರುರಾಜ್ ಉಪಸ್ಥಿತರಿದ್ದರು. ಶ್ರೀ ವಾಗ್ದೇವಿ ವಿದ್ಯಾವರ್ಧಕ ಟ್ರಸ್ಟ್, ವಿಶ್ವವಾಣಿ ಪುಸ್ತಕ ಪ್ರಕಾಶನ ಹಾಗೂ ಪರಿಶ್ರಮ ನೀಟ್ ಅಕಾಡೆಮಿ ಆಶ್ರಯದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಬೆಂಗಳೂರು: ಕರ್ನಾಟಕವಷ್ಟೇ ಅಲ್ಲದೇ ಹೊರರಾಜ್ಯ, ಹೊರದೇಶಗಳಿಂದ ಬಂದಿದ್ದ ನೂರಾರು ಸಾಹಿತ್ಯಾಭಿಮಾನಿಗಳ ಸಮಾಗಮ. ವಾರಾಂತ್ಯದ ಮೂಡ್‌ನಲ್ಲಿದ್ದ ಅನೇಕ ಪುಸ್ತಕಾಭಿಮಾನಿಗಳು ಒಂದೆಡೆ ಸೇರಿ, 9 ಪುಸ್ತಕಗಳ ಲೋಕಾರ್ಪಣೆಯ ಹಬ್ಬವನ್ನು ಸಂಭ್ರಮಿಸಿದ ಗಳಿಗೆ. ಪುಸ್ತಕ ಪಡೆದು, ಲೇಖಕರಿಂದ ಹಸ್ತಾಕ್ಷರ ಪಡೆದು ಖುಷಿಪಟ್ಟ ಓದುಗ ವರ್ಗ. ಈ ಎಲ್ಲದಕ್ಕೂ ಸಾಕ್ಷಿಯಾದ್ದು ವಿಶ್ವವಾಣಿ ಪುಸ್ತಕದ ವತಿಯಿಂದ ಹಮ್ಮಿಕೊಂಡಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮ.

ಶನಿವಾರ ಸಂಜೆ ಶ್ರೀ ವಾಗ್ದೇವಿ ವಿದ್ಯಾವರ್ಧಕ ಟ್ರಸ್ಟ್, ವಿಶ್ವವಾಣಿ ಪುಸ್ತಕ ಹಾಗೂ ಪರಿಶ್ರಮ ನೀಟ್ ಅಕಾಡೆಮಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 9 ಕೃತಿಗಳ ಬಿಡುಗಡೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ನೂರಾರು ಪುಸ್ತಕ ಪ್ರೇಮಿಗಳ ಉಪಸ್ಥಿತಿಯಲ್ಲಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ 5 ಪುಸ್ತಕ ಸೇರಿ ವಿಶ್ವವಾಣಿ ಅಂಕಣಕಾರರಾದ ಕಿರಣ್ ಉಪಾಧ್ಯಾಯ, ಶಿಶಿರ್ ಹೆಗಡೆ, ರೂಪಾ ಗುರುರಾಜ್ ಅವರ ಒಂದೊಂದು ಪುಸ್ತಕ ಹಾಗೂ ಲೋಕಧ್ವನಿ ಅಂಕಣಕಾರ ರಾಜು ಅಡಕಳ್ಳಿ ಅವರ ಒಂದು ಪುಸ್ತಕ ಬಿಡುಗಡೆ ನೆರವೇರಿತು.

→ 4

> ಅಂಕಣ ಬರಹ ಅವರಸದ ಸಾಹಿತ್ಯವೆಂದು ಅನೇಕರು ಹೇಳುತ್ತಾರೆ. ಆದರೆ ಅಂಕಣ ಬರಹ ಸುಲಭವಲ್ಲ. ಪರಿಸ್ಥಿತಿ, ಮನಸ್ಥಿತಿ ಎಲ್ಲವೂ ಮುಖ್ಯವಾಗುತ್ತದೆ. ಅದ್ಭುತ ಸಾಹಿತಿಗಳೂ ಒಂದೆರೆಡು ಅಂಕಣ ಬರೆಯುವಷ್ಟರಲ್ಲಿ ನಮ್ಮಿಂದ ಸಾಧ್ಯವಿಲ್ಲ ಎನ್ನುವ ಮಾತನ್ನು ಆಡಿದ್ದಾರೆ.
>
> **- ವಿಶ್ವೇಶ್ವರ ಭಟ್**
> ವಿಶ್ವವಾಣಿ ಪ್ರಧಾನ ಸಂಪಾದಕ

ಮಾತಂದ್ರೆ ಮಾತು

ಕುಮಾರಸ್ವಾಮಿ ಅವರು ನಮ್ಮನ್ನು ಸರ್ವನಾಶ ಮಾಡಲು ಪ್ರತಿನಿತ್ಯ ರಾಜಕಾರಣ ಮಾಡುತ್ತಿದ್ದಾರೆ. ಅವರ ನಡೆ, ನುಡಿ, ಭಾವನೆ, ಚಿಂತನೆ, ಅವರ ಆಚಾರ, ವಿಚಾರ ಎಲ್ಲವೂ ನಮಗೆ ಗೊತ್ತಿದೆ. ಬೆಂಗಳೂರು ದಕ್ಷಿಣ ಜಿಲ್ಲೆಯ ಹೆಸರನ್ನು ಮತ್ತೆ ಬದಲಾಯಿಸುವುದು ಅವರ ಹಣೆಯಲ್ಲಿ ಬರೆದಿಲ್ಲ. 2028ರಲ್ಲೂ ಕಾಂಗ್ರೆಸ್ ಸರಕಾರವೇ ಅಧಿಕಾರಕ್ಕೆ ಬರಲಿದೆ.

- ಡಿ.ಕೆ.ಶಿವಕುಮಾರ್
ಉಪಮುಖ್ಯಮಂತ್ರಿ

ಫನ್‌ತರಂಗ

- ರಘುಪತಿ ಶೃಂಗೇರಿ -

ಕನ್ನಡ ಚಲನಚಿತ್ರ 'ಕುಬುಸ' ತೆರೆಗೆ

ಯೋಧ ಹುತಾತ್ಮ, ಉಗ್ರನ ಹತ್ಯೆ

ಶ್ರೀನಗರ: ಉತ್ತರ ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿ ಮಾಛಿಲ್ ಸೆಕ್ಟಾರ್‌ನ ಕುಂಕಾಡಿ ಪ್ರದೇಶದಲ್ಲಿನ ಗಡಿ ನಿಯಂತ್ರಣ ರೇಖೆ ದಾಟಿ ಭಾರತದೊಳಕ್ಕೆ ಉಗ್ರರನ್ನು ನುಸುಳಿಸುವ ದುಸ್ಸಾಹಸಕ್ಕೆ ಪಾಕ್‌ನ ಬಿಎಟಿ ಸಿಬ್ಬಂದಿ ಶನಿವಾರ ನಸುಕಿನಲ್ಲಿ ಯತ್ನಿಸಿದ್ದನ್ನು ಭಾರತದ ಸಶಸ್ತ್ರ ಪಡೆಗಳು ವಿಫಲಗೊಳಿಸಿ ಒಬ್ಬ ಉಗ್ರನನ್ನು ಹೊಡೆದುರುಳಿಸಿವೆ. ಇದೇ ವೇಳೆ, ಯೋಧರೊಬ್ಬರು ವೀರಮರಣ ಹೊಂದಿದ್ದಾರೆ. ಮೇಜರ್ ಶ್ರೇಣಿಯ ಸೇನಾಧಿಕಾರಿ ಮತ್ತು ಮೂವರು ಯೋಧರು ಗಾಯಗೊಂಡಿದ್ದಾರೆ. ಇದೇ ವೇಳೆ, ಒಡಿಶಾ ರಾಜ್ಯದಲ್ಲಿದ್ದ 2 ಸಾವಿರ ಯೋಧರ ಬಿಎಸ್‌ಎಫ್‌ನ 2 ತುಕಡಿಗಳನ್ನು ಉಗ್ರರ ಉಪಟಳ ಹೆಚ್ಚಿರುವ ಜಮ್ಮು ಭಾಗಕ್ಕೆ ಕಳುಹಿಸಿಕೊಡಲಾಗಿದೆ.

ಹೈವೇ ವೇಗ ಮಿತಿ ದಾಟಿದರೆ FIR

ಬೆಂಗಳೂರು: ಹೈವೇಗಳಲ್ಲಿ 130 ಕಿ.ಮೀಟರ್‌ಗಿಂತ ಹೆಚ್ಚು ವೇಗದಲ್ಲಿ ವಾಹನ ಚಲಾಯಿಸಿದರೆ ಮಾಲೀಕರ ಮೇಲೆ ಎಫ್‌ಐಆರ್ ದಾಖಲಾಗಲಿದೆ ಎಂದು ಸಂಚಾರ ಹಾಗೂ ರಸ್ತೆ ಸುರಕ್ಷತೆ ಎಡಿಜಿಪಿ ಅಲೋಕ್ ಕುಮಾರ್ ಟ್ವಿಟರ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಇದುವರೆಗೂ ನಿಗದಿಪಡಿಸಿದ ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ವಾಹನ ಚಲಾಯಿಸಿದರೆ ಕೇವಲ ದಂಡ ವಿಧಿಸಲಾಗುತ್ತಿತ್ತು. ಆದರೆ ಆಗಸ್ಟ್ 1 ರಿಂದ ದಂಡದ ಜತೆ ಪ್ರಕರಣ ಸಹ ದಾಖಲಿಸಲಾಗುವುದು ಎಂದು ತಿಳಿಸಿದ್ದಾರೆ.

5 ವರ್ಷಗಳಲ್ಲಿ 628 ಹುಲಿ ಸಾವು

ದೆಹಲಿ: ಬೇಟೆ ಸೇರಿದಂತೆ ನೈಸರ್ಗಿಕ ಕಾರಣಗಳು ಮತ್ತು ಇತರ ಕಾರಣಗಳಿಂದಾಗಿ ಕಳೆದ 5 ವರ್ಷಗಳಲ್ಲಿ ದೇಶದಲ್ಲಿ ಒಟ್ಟು 628 ಹುಲಿಗಳು ಸಾವಿಗೀಡಾಗಿವೆ ಎಂದು ಕೇಂದ್ರ ಪರಿಸರ ಖಾತೆ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ರಾಜ್ಯಸಭೆಗೆ ತಿಳಿಸಿದ್ದಾರೆ. 2019ರಲ್ಲಿ 96, 2020ರಲ್ಲಿ 106, 2021ರಲ್ಲಿ 127, 2022ರಲ್ಲಿ 121 ಮತ್ತು 2023ರಲ್ಲಿ 178 ಹುಲಿಗಳು ಸಾವಿಗೀಡಾಗಿವೆ ಎಂದು ತಿಳಿಸಿದ್ದಾರೆ. ಈ ಅವಧಿಯಲ್ಲಿ ಹುಲಿ ದಾಳಿಯಲ್ಲಿ 349 ಜನರು ಮೃತಪಟ್ಟಿದ್ದಾರೆ ಎಂದರು.

ರಾಜ್ಯಾದ್ಯಂತ ಸುರಿಯುತ್ತಿರುವ ಕುಂಭದ್ರೋಣ ಮಳೆಗೆ ಜನಜೀವನ ಅಸ್ತವ್ಯಸ್ತ
ಹಲವು ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣ, ಸಾರಿಗೆ ಸಂಪರ್ಕ ಬಂದ್

ಜಲದಿಗ್ಬಂಧನ

ಹುಬ್ಬಳ್ಳಿ: ರಾಜ್ಯಾದ್ಯಂತ ಸುರಿಯುತ್ತಿರುವ ನಿರಂತರ ಮಳೆಗೆ ಜನರು ಜನಜೀವನ ಅಸ್ತವ್ಯಸ್ತವಾಗಿದ್ದು, ಅನೇಕ ಕಡೆ ಪ್ರವಾಹದ ವಾತಾವರಣ ನಿರ್ಮಾಣವಾಗಿದೆ.

ಒಂದು ಕಡೆ ಉತ್ತರ ಕರ್ನಾಟಕದಲ್ಲಿ ಮಳೆ, ಪ್ರವಾಹಕ್ಕೆ ಅನೇಕ ಜಿಲ್ಲೆಗಳಲ್ಲಿ ಅವಾಂತರಗಳು ಸೃಷ್ಟಿಯಾಗಿವೆ. ಇನ್ನೊಂದೆಡೆ ಕಾವೇರಿ ಕೊಳ್ಳದ ವ್ಯಾಪ್ತಿಯ 11 ಜಿಲ್ಲೆಗಳಲ್ಲಿ ನದಿಗಳ ನೀರಿನ ಮಟ್ಟ ಏರಿಕೆಯಾಗಿದ್ದು, ಹಲವು ಸೇತುವೆಗಳು ಮುಳುಗಡೆಯಾಗಿದೆ. ರಾಜ್ಯಾದ್ಯಂತ ಸುಮಾರು 231 ಗ್ರಾಮಗಳಲ್ಲಿ ಪ್ರವಾಹದ ಪರಿಸ್ಥಿತಿ ನಿರ್ಮಾಣವಾಗಿದೆ. ಆಯಾ ಜಿಲ್ಲಾಡಳಿತ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ. ನೂರಾರು ಜನರನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.

ಆತಂಕದಲ್ಲಿ ಬದುಕುತ್ತಿರುವ ಜನರು: ಕೃಷ್ಣಾ, ದೂಧಗಂಗಾ, ವೇದಗಂಗಾ, ಘಟಪ್ರಭಾ, ಮಲಪ್ರಭಾ, ತುಂಗಭದ್ರಾ, ಕಾವೇರಿ, ಕಪಿಲಾ ನದಿಗಳ ಒಳಹರಿವು ಹೆಚ್ಚಾಗಿದ್ದು, ನದಿಗೆ ಭಾರೀ ಪ್ರಮಾಣದಲ್ಲಿ ನೀರು ಬಿಡುಗಡೆ ಗೊಳಿಸಲಾಗುತ್ತಿದೆ. ಪರಿಣಾಮವಾಗಿ ಬೆಳಗಾವಿ, ಬಾಗಲಕೋಟೆ, ವಿಜಯಪುರ, ರಾಯಚೂರು, ಯಾದಗಿರಿ, ಬಳ್ಳಾರಿ, ಕೊಪ್ಪಳ, ಮಂಡ್ಯ, ಮೈಸೂರು, ಹಾಸನ ಜಿಲ್ಲೆಗಳಲ್ಲಿ ನದಿಗಳ ತೀರ ಪ್ರದೇಶಗಳಲ್ಲಿ ಆತಂಕ ಮನೆ ಮಾಡಿದೆ. ಜನರು ಭಯದಲ್ಲಿ ಬದುಕುವ ಸ್ಥಿತಿ ನಿರ್ಮಾಣವಾಗಿದೆ.

50ಕ್ಕೂ ಹೆಚ್ಚು ಸೇತುವೆಗಳು ಮುಳುಗಡೆ: ನಿರಂತರ ಮಳೆ, ಪ್ರವಾಹ ಕಾರಣದಿಂದ ವಿವಿಧ ತಾಲೂಕಗಳ ವ್ಯಾಪ್ತಿಯಲ್ಲಿರುವ 50ಕ್ಕೂ ಹೆಚ್ಚು ಸೇತುವೆಗಳು ಮುಳುಗಡೆಯಾಗಿವೆ. ಕೆಲವು ಗ್ರಾಮಗಳು ನಡುಗಡ್ಡೆಯಾಗಿವೆ. ಬೆಳಗಾವಿಯಲ್ಲಿ 32, ಬಾಗಲಕೋಟೆಯಲ್ಲಿ 12, ರಾಯಚೂರಿನಲ್ಲಿ 2, ಯಾದಗಿರಿ, ಕಂಪ್ಲಿಯಲ್ಲಿ ತಲಾ 1 ಸೇರಿದಂತೆ 52 ಸೇತುವೆಗಳು ಜಲಾವೃತವಾಗಿವೆ. ಹಲವು ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ.

→ 4

ಘಟಪ್ರಭಾ ನದಿ ಉಕ್ಕಿ ಹರಿಯುತ್ತಿರುವುದರಿಂದ ಬೆಳಗಾವಿ ಜಿಲ್ಲೆಯ ಗೋಕಾಕ ನಗರಕ್ಕೆ ನೀರು ನುಗ್ಗಿದೆ.

- ಮಳೆ ಸಂಬಂಧಿ ಅವಘಡಗಳಿಗೆ ಹಾವೇರಿ, ಗೋಕಾಕ ಮತ್ತು ಧಾರವಾಡದಲ್ಲಿ ಮೂವರು ಬಲಿ.
- ರಾಯಚೂರಲ್ಲಿ ಕೃಷ್ಣಾ ನದಿ ತೀರದ ಗ್ರಾಮಗಳಿಗೆ ಪ್ರವಾಹದ ಭೀತಿ ಹಿನ್ನೆಲೆಯಲ್ಲಿ 10ಕ್ಕೂ ಗರ್ಭಿಣಿಯರ ಸ್ಥಳಾಂತರ
- ಚಿತ್ರದುರ್ಗದ ಭೀಮಸಮುದ್ರ ಬಳಿ ತೊರೆ ಬಯಲು ಗ್ರಾಮದಲ್ಲಿ ಮನೆ ಗೋಡೆ ಕುಸಿದು 7 ಮೇಕೆಗಳು ಸಾವು
- ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಹಲಗೂರು ಸಮೀಪದ ಮುತ್ತತ್ತಿಗೆ ಪ್ರವಾಸಿಗರು, ಭಕ್ತರ ಪ್ರವೇಶಕ್ಕೆ ನಿಷೇಧ
- ಶ್ರೀರಂಗಪಟ್ಟಣದಲ್ಲಿ ಪಿಂಡ ಪ್ರದಾನಕ್ಕೆ ಬ್ರೇಕ್. ನದಿಗೆ ಇಳಿಯದಂತೆ ಕಬ್ಬಿಣದ ರಾಡ್‌ಗಳನ್ನು ಬಳಸಿ ತಡೆಗೋಡೆ ನಿರ್ಮಾಣ, ರಂಗನತಿಟ್ಟು ಪಕ್ಷಿಧಾಮದಲ್ಲಿ ಪ್ರವಾಸಿಗರ ನಿರ್ಬಂಧ

ನೆರೆ ಪರಿಹಾರ; 777 ಕೋಟಿ ರುಪಾಯಿ ಬಿಡುಗಡೆ

ರಾಜ್ಯದಲ್ಲಿ ನೆರೆ ಪರಿಹಾರ ಹಾಗೂ ಇತರೆ ಕಾರ್ಯಕ್ರಮಗಳಿಗೆ ಒಟ್ಟು ₹777 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಕಂದಾಯ ಸಚಿವ

ಕೃಷ್ಣ ಬೈರೇಗೌಡ ತಿಳಿಸಿದರು. ನೆರೆ ಹಾವಳಿಗೆ ತುತ್ತಾದವರಿಗೆ ತಕ್ಷಣ ನೆರವು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಮನೆಗೆ ಭಾಗಶಃ ಹಾನಿಯಾದರೆ ₹50 ಸಾವಿರ ಕೊಡಲು ಸಿಎಂ ಜತೆ ಚರ್ಚಿಸಲಾಗಿದೆ. ಪೂರ್ಣ ಹಾನಿಯಾದರೆ ₹1.25 ಲಕ್ಷ ಪರಿಹಾರದ ಜತೆ ಹೊಸ ಮನೆ ನೀಡುತ್ತೇವೆ. ಈ ಬಗ್ಗೆ ಸರಕಾರ ಕ್ರಮ ಕೈಗೊಂಡಿದೆ ಎಂದರು.

ನಾಳೆ ಬಾಗಿನ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ 29ರಂದು ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಗಳಿಗೆ ಬಾಗಿನ ಅರ್ಪಿಸಲಿದ್ದಾರೆ. ಕಳೆದ ವರ್ಷ ಕೆಆರ್‌ಎಸ್ ಕಟ್ಟೆ ಭರ್ತಿ ಯಾಗಿರಲಿಲ್ಲ. ಆದರೆ ಈ ಬಾರಿ ನಿರೀಕ್ಷೆಗೂ ಮೀರಿದ ಪ್ರಮಾಣ ದಲ್ಲಿ ನೀರು ಹರಿದು ಬರುತ್ತಿದೆ. ತಮಿಳುನಾಡಿಗೂ ನಿಗದಿಗಿಂತ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದಿದೆ.

2 ದಿನ ರೈಲು ರದ್ದು

ಮಂಗಳೂರು: ಶಿರಾಡಿಘಾಟ್ ಪ್ರದೇಶದ ಎಡಕುಮೇರಿ ಮತ್ತು ಕಡಗರವಳ್ಳಿ ನಡುವೆ ಭೂ ಕುಸಿತ ಸಂಭವಿಸಿದ ಹಿನ್ನೆಲೆ ಯಲ್ಲಿ ಯಶವಂತಪುರ-ಮಂಗಳೂರು ಜಂಕ್ಷನ್ ಸಾಪ್ತಾಹಿಕ ಎಕ್ಸ್‌ಪ್ರೆಸ್ ಹಾಗೂ ಕಾರವಾರ-ಯಶವಂತಪುರ ಎಕ್ಸ್‌ಪ್ರೆಸ್ ರೈಲುಗಳನ್ನು ಎರಡು ದಿನ ರದ್ದುಪಡಿಸಲಾಗಿದೆ. ಹಾಸನ-ಮಂಗಳೂರು ನಡುವೆ ಸಂಚರಿಸುವ ಹಲವು ರೈಲುಗಳಿಗೆ ಕೇರಳ-ತಮಿಳುನಾಡು ಮೂಲಕ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಕಣ್ಣೂರು-ಮಂಗಳೂರು ರೈಲು ಕೇರಳ ಮೂಲಕ ಸಂಚರಿಸಿ ಸೇಲಂ ಮಾರ್ಗವಾಗಿ ಬೆಂಗಳೂರು ತಲುಪಿದೆ. ಪ್ರಯಾಣಿಕರು ಕಾದು ಸಂಕಷ್ಟ ಅನುಭವಿಸಬೇಕಾಯಿತು.

ನೀತಿ ಸಭೆಯಲ್ಲಿ ದೀದಿ ಡ್ರಾಮಾ, ನಿತೀಶ್ ಗೈರು

ನೀತಿ ಆಯೋಗದ ಸಭೆಗೆ ಕರ್ನಾಟಕ ಸೇರಿ ಹಲವು ರಾಜ್ಯಗಳ ಬಹಿಷ್ಕಾರ | 2047ರಲ್ಲಿ ವಿಕಸಿತ ಭಾರತ ನಿರ್ಮಾಣಕ್ಕೆ ರಾಜ್ಯಗಳ ಸಹಕಾರ ಕೋರಿದ ಪ್ರಧಾನಿ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಶನಿವಾರ ದೆಹಲಿಯಲ್ಲಿ ಆಯೋಜಿತವಾಗಿದ್ದ ನೀತಿ ಆಯೋಗದ ಆಡಳಿತ ಮಂಡಳಿಯ 9ನೇ ಸಭೆ, ಮೈಕ್ ಸಂಪರ್ಕ ಕಡಿತ ಆರೋಪ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ, ಸಭಾತ್ಯಾಗ, ಪ್ರತಿಪಕ್ಷ ಆಡಳಿತದ ರಾಜ್ಯಗಳ ಸಿಎಂಗಳಿಂದ ಬಹಿಷ್ಕಾರ ಮೊದಲಾದ ಘಟನೆಗಳಿಗೆ ಸಾಕ್ಷಿಯಾಯಿತು.

ಎನ್‌ಡಿಎ ಮೈತ್ರಿಕೂಟದ ಪಕ್ಷವಾದ ಜೆಡಿಯು ಮುಖಂಡ, ಬಿಹಾರ ಸಿಎಂ ನಿತೀಶ್ ಕುಮಾರ್ ಕೂಡಾ ಮಹತ್ವದ ಸಭೆಯಿಂದ ದೂರ ಉಳಿದಿದ್ದರು. ಅವರು ಗೈರಾಗಲು ಕಾರಣ ತಿಳಿದುಬಂದಿಲ್ಲ. ಅವರ ಬದಲಾಗಿ ಇಬ್ಬರು ಡಿಸಿಎಂಗಳು ಸಭೆಗೆ ಆಗಮಿಸಿದ್ದರು.

ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಧಾನಿ ಮೋದಿ, ದೇಶದಲ್ಲಿನ ಎಲ್ಲ ರಾಜ್ಯಗಳಿಂದ ಸಂಯೋಜಿತ ಪ್ರಯತ್ನಗಳು ನಡೆದಲ್ಲಿ 2047ರ ವೇಳೆಗೆ 'ವಿಕಸಿತ ಭಾರತ' ಕನಸನ್ನು ಈಡೇರಿಸಿಕೊಳ್ಳಬಹುದು ಎಂದರು.

'ವಿಕಸಿತ ರಾಜ್ಯಗಳಿಂದಲೇ ವಿಕಸಿತ ಭಾರತ ಒಡಮೂಡುತ್ತದೆ. ರಾಜ್ಯಗಳು ನೇರವಾಗಿ ಜನರ ಸಂಪರ್ಕ ಹೊಂದಿರುವುದರಿಂದ ಈ ಗುರಿ ಸಾಧಿಸುವಲ್ಲಿ ಸಕ್ರಿಯ ಪಾತ್ರ ವಹಿಸಬೇಕಿದೆ' ಎಂದು ಮೋದಿ ಸಿಎಂ ಗಮನ ಸೆಳೆಯಲೆತ್ನಿಸಿದರು.

ಮಮತಾ ಸಭಾತ್ಯಾಗ: ಸಭೆಯಲ್ಲಿ ಅರ್ಧಕ್ಕೇ ಮೈಕ್ ಆಫ್ ಮಾಡಿದರು, ನನಗೆ ಪೂರ್ಣ ಮಾತನಾಡಲು ಬಿಡಲಿಲ್ಲ ಎಂದು ಆರೋಪಿಸಿದ ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಸಭೆಯಿಂದ ಅರ್ಧಕ್ಕೆ ಎದ್ದು ಬಂದರು. ಬಿಜೆಪಿ ಸಿಎಂಗಳಿಗೆ 20 ನಿಮಿಷ ನೀಡಿದ್ದರೆ, ನನಗೆ ಅಷ್ಟು ಸಮಯ ನೀಡಲಿಲ್ಲ ಎಂದು ಟೀಕಿಸಿದರು. ಮಮತಾ ಬ್ಯಾನರ್ಜಿ ಅವರ ಆರೋಪ ಪೂರ್ಣ ಸುಳ್ಳು ಎಂದು 'ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ'(ಪಿಐಬಿ) ಹಾಗೂ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಬಳಿಕ ಸುದ್ದಿಗಾರರಿಗೆ ಸ್ಪಷ್ಟಪಡಿಸಿದರು.

ಏಳು ಮುಖ್ಯಮಂತ್ರಿಗಳಿಂದ ಬಹಿಷ್ಕಾರ

ಕಾಂಗ್ರೆಸ್ ಆಡಳಿತದ ರಾಜ್ಯಗಳಾದ ಕರ್ನಾಟಕ, ತೆಲಂಗಾಣ, ಹಿಮಾಚಲ ಪ್ರದೇಶದ ಮುಖ್ಯಮಂತ್ರಿಗಳು ನೀತಿ ಆಯೋಗದ ಮಹತ್ವದ ಸಭೆಯನ್ನು ಬಹಿಷ್ಕರಿಸಿದ್ದರು. ಕರ್ನಾಟಕ ಸಿಎಂ ಸಿದ್ದರಾಮಯ್ಯ, ತೆಲಂಗಾಣದ ಸಿಎಂ ರೇವಂತ್ ರೆಡ್ಡಿ, ಹಿಮಾಚಲ ಪ್ರದೇಶ ಸಿಎಂ ಸುಖವಿಂದರ್ ಸಿಂಗ್ ಸುಖು ಹಾಗೂ ತಮಿಳುನಾಡು ಸಿಎಂ ಎಂ.ಕೆ.ಸ್ಟಾಲಿನ್, ಕೇರಳ ಸಿಎಂ ಪಿಣರಾಯಿ ವಿಜಯನ್, ಪಂಜಾಬ್ ಸಿಎಂ ಭಗವಂತ ಮಾನ್, ಕೇಂದ್ರಾಡಳಿತ ಪ್ರದೇಶ ದೆಹಲಿಯ ಎಎಪಿ ಸರಕಾರದ ಪ್ರತಿನಿಧಿ ನೀತಿ ಆಯೋಗದ ಮಹತ್ವದ ಸಭೆ ಬಹಿಷ್ಕರಿಸಿದ್ದರು. ಬಜೆಟ್‌ನಲ್ಲಿ ತಾರತಮ್ಯ ಮಾಡಲಾಗಿದೆ ಎಂದು ಅಸಮಾಧಾನವೇ ಬಹಿಷ್ಕಾರಕ್ಕೆ ಕಾರಣ ಎಂದೂ ಹೇಳಿದ್ದಾರೆ.

ಶೂಟಿಂಗ್: ಮನು ಭಾಕರ್ ಫೈನಲ್‌ಗೆ

ಪ್ಯಾರಿಸ್: ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟದಲ್ಲಿ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಶೂಟಿಂಗ್ ವಿಭಾಗದಲ್ಲಿ ಮನು ಭಾಕರ್ ಫೈನಲ್‌ಗೆ ಪ್ರವೇಶಿಸಿದ್ದಾರೆ.

- 10 ಮೀಟರ್ ಏರ್ ಪಿಸ್ತೂಲ್ ಶೂಟಿಂಗ್‌ನಲ್ಲಿ ಮನು ಭಾಕರ್ 580 ಅಂಕ ಗಳಿಸಿ ಪ್ರಶಸ್ತಿ ಸುತ್ತಿಗೆ
- ಹಾಕಿಯಲ್ಲಿ ನ್ಯೂಜಿಲೆಂಡ್ ವಿರುದ್ಧ ಗೆದ್ದು ಬೀಗಿದ ಭಾರತ ತಂಡ

ಹಾಕಿ ತಂಡ ತಂಡ ನ್ಯೂಜಿಲೆಂಡ್ ವಿರುದ್ಧ ಗೆದ್ದು ಶುಭಾರಂಭ ಮಾಡಿದೆ.

ಶನಿವಾರ ನಡೆದ ಅರ್ಹತಾ ಸುತ್ತಿನಲ್ಲಿ 580 ಅಂಕ ಪಡೆದ ಮನು, 3ನೆಯವರಾಗಿ ಪ್ರಶಸ್ತಿ ಸುತ್ತಿಗೆ ಲಗ್ಗೆ ಇಟ್ಟಿದ್ದಾರೆ. ಹಂಗೇರಿಯ ವೆರೊನಿಕಾ ಮೇಜರು 582 ಅಂಕಗಳೊಂದಿಗೆ ಅಗ್ರಸ್ಥಾನಿಯಾಗಿ ಫೈನಲ್‌ಗೆ ಲಗ್ಗೆ ಇಟ್ಟರು. 3 ವರ್ಷಗಳ ಹಿಂದೆ ಪಿಸ್ತೂಲ್ ದೋಷದಿಂದಾಗಿ ಫೈನಲ್‌ಗೆ ಪ್ರವೇಶಿಸಲು ವಿಫಲರಾಗಿದ್ದ ಮನು, ಇದೇ ಮೊದಲ ಬಾರಿಗೆ ಒಲಿಂಪಿಕ್‌ನಲ್ಲಿ ಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ನೈಸ್ ರೋಡ್ ಬಳಿ ಸ್ಕೈಡೆಕ್ | ಎಸ್ಟೀಮ್ ಮಾಲ್ ಟು ಸಿಲ್ಕ್ ಬೋರ್ಡ್ ಸುರಂಗ ಮಾರ್ಗಕ್ಕೆ ಚಿಂತನೆ

ಬ್ರ್ಯಾಂಡ್ ಬೆಂಗಳೂರಿಗೆ ಮಾಸ್ಟರ್ ಪ್ಲ್ಯಾನ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆ ಅಡಿಯಲ್ಲಿ ಬೆಂಗಳೂರು ನಗರದ ಸರ್ವತೋಮುಖ ಅಭಿವೃದ್ಧಿ ಕುರಿತಂತೆ ಬೆಂಗಳೂರು ವ್ಯಾಪ್ತಿಯ ಸಚಿವರು ಹಾಗೂ ಶಾಸಕರ ಜತೆ ವಿಧಾನಸೌಧದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶನಿವಾರ 'ನಾಗರಿಕರ ಧ್ವನಿ-ಅದೇ ಸರಕಾರದ ಧ್ವನಿ' ಸಭೆ ನಡೆಸಿದರು. ಹಾಗೆಯೇ, ಬೆಂಗಳೂರು ಅಭಿವೃದ್ಧಿಗೆ ಸರಕಾರ ಏನೆಲ್ಲ ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ವಿವರಿಸಿದರು.

ಕೆಂಪೇಗೌಡರು ಬೆಂಗಳೂರನ್ನು ನಿರ್ಮಿಸಿ ನಮ್ಮೆಲ್ಲರಿಗೂ ಸುಂದರ ನಗರವನ್ನು ಉಡುಗೊರೆಯಾಗಿ ನೀಡಿದ್ದಾರೆ. ಬೆಂಗಳೂರು, ಅಪಾರ ಮಾನವ ಸಂಪನ್ಮೂಲ, ಸಂಸ್ಕೃತಿ, ಉದ್ಯೋಗ, ಹವಾಮಾನದಿಂದ ನೆರೆಹೊರೆ ರಾಜ್ಯದ ಜನರನ್ನು ಸೆಳೆಯುತ್ತಿದೆ. ಆದರೆ ಬೆಂಗಳೂರು ಕೂಡ ಸಮಸ್ಯೆಗಳಿಂದ ಹೊರತಾಗಿಲ್ಲ. ಕಾವೇರಿ ನೀರಿನ ಸಮಸ್ಯೆ, ಸಂಚಾರ, ಕಸದ ನಿರ್ವಹಣೆ, ಕೆರೆಗಳ ನಿರ್ವಹಣೆ ಇತ್ಯಾದಿಗಳನ್ನು ಕುರಿತು ಕೂಲಂಕಷವಾಗಿ ಚರ್ಚಿಸಲಾಗುತ್ತಿದೆ ಎಂದು ತಿಳಿಸಿದರು.

ಭವಿಷ್ಯದ ದೃಷ್ಟಿಯಿಂದ, ಬೆಂಗಳೂರು ಅಭಿವೃದ್ಧಿಯನ್ನು ಪಾರದರ್ಶಕವಾಗಿ ಮಾಡಬೇಕಾಗಿದೆ. ಅತ್ಯುತ್ತಮ ಕಾರ್ಯಕ್ರಮದ ಆಯ್ಕೆಯ ಕುರಿತು ಚರ್ಚಿಸಲಾಗುತ್ತಿದೆ. 70 ಸಾವಿರ ನಾಗರಿಕರು ಈ ಕುರಿತು ಸಲಹೆ ನೀಡಿದ್ದಾರೆ. ಉತ್ತಮ ಯೋಜನೆಗಳನ್ನು ರೂಪಿಸಿ ಜನಪರ ಆಡಳಿತ ನೀಡುವ ಉದ್ದೇಶದಿಂದ ಈ ರೀತಿಯ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಗ್ರೇಟರ್ ಬೆಂಗಳೂರು ವಿಚಾರವಾಗಿ ಅಶ್ವತ್ಥ್ ನಾರಾಯಣ ಅವರು ಗಾಬರಿಯಾಗುವುದು ಬೇಡ, ಬೆಂಗಳೂರಿನ ಭವಿಷ್ಯದ ಹಿತ ಕಾಯಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದರು.

→ 4



ಬ್ರ್ಯಾಂಡ್ ಬೆಂಗಳೂರು ಕುರಿತ ಕಿರುಹೊತ್ತಿಗೆಯನ್ನು ಡಿಸಿಎಂ ಡಿ.ಕೆ.ಶಿವಕುಮಾರ್, ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ, ವಸತಿ ಸಚಿವ ಜಮೀರ್ ಅಹ್ಮದ್, ಬಿಬಿಎಂಪಿ ಆಯುಕ್ತರಾದ ತುಷಾರ್ ಗಿರಿನಾಥ್ ಅವರು ಬಿಡುಗಡೆಗೊಳಿಸಿದರು.

ಪ್ರವಾಸೋದ್ಯಮಕ್ಕೆ ಆದ್ಯತೆ

ಬೆಂಗಳೂರಿನಲ್ಲಿ ವಿಧಾನಸೌಧ ಕಟ್ಟಡ ಬಿಟ್ಟರೆ ಪ್ರವಾಸಿಗರ ಆಕರ್ಷಕ ಕೇಂದ್ರಗಳು ಹೆಚ್ಚಾಗಿಲ್ಲ. ಕಬ್ಬನ್ ಪಾರ್ಕ್ ಹಾಗೂ ಲಾಲ್‌ಬಾಗ್ ನೋಡುತ್ತಿದ್ದ ಕಾಲ ಮುಗಿದಿದೆ. ಸಣ್ಣ ಮಕ್ಕಳು ನೆಹರು ಪ್ಲಾನಿಟೋರಿಯಂ ನೋಡಬಹುದು. ಇದರ ಹೊರತಾಗಿ ಪ್ರಮುಖವಾಗಿ ಪ್ರವಾಸಿಗರನ್ನು ಆಕರ್ಷಿಸುವ ಕೇಂದ್ರವಿಲ್ಲ. ಹೀಗಾಗಿ ಬೆಂಗಳೂರಿನಲ್ಲಿ ಸ್ಕೈಡೆಕ್ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಈ ವಿಚಾರವಾಗಿ ವಿವರಣೆ ನೀಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಬಸ್ ಟಿಕೆಟ್ ದರ ಏರಿಕೆಗೆ ಪ್ರಸ್ತಾವನೆ

ನಿಗಮಗಳ ಸಾಲ 4 ಸಾವಿರ ಕೋಟಿಗೆ ರು. ಹೆಚ್ಚಳ | ಸದ್ಯವೇ ಸಿಎಂ ಸಭೆ

ಬೆಂಗಳೂರು: ಬಸ್ ಪ್ರಯಾಣ ದರ ಹೆಚ್ಚಳ ಮಾಡುವಂತೆ ಸಾರಿಗೆ ನಿಗಮಗಳ ಆಡಳಿತ ಮಂಡಳಿಗಳು ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಶೀಘ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆ ನಡೆಸಿ ಈ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದಾರೆ.

- ಹೊಸ ಬಸ್‌ಗಳ ಸೇರ್ಪಡೆಗೆ ತಕ್ಕಂತೆ ಸಾರಿಗೆ ನಿಗಮಗಳ ಆದಾಯದಲ್ಲಿ ಹೆಚ್ಚಳವಾಗಿಲ್ಲ
- ಸಿಬ್ಬಂದಿ ವೇತನ, ಡೀಸೆಲ್ ಬೆಲೆ ಹೆಚ್ಚಳದಿಂದಾಗಿ ಆರ್ಥಿಕವಾಗಿ ಸದೃಢಗೊಳ್ಳಲು ಪರದಾಟ
- 5 ವರ್ಷಗಳಲ್ಲಿ ನಿಗಮಗಳ ಸಾಲ, ಹೊಣೆಗಾರಿಗೆ 4 ಸಾವಿರ ಕೋಟಿ ರು.ಗಿಂತ ಹೆಚ್ಚಿಗೆ

ಶಕ್ತಿ ಯೋಜನೆ ಜಾರಿ ನಂತರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಾಲ್ಕೂ ನಿಗಮಗಳ ಪ್ರಯಾಣಿಕರ ಮತ್ತು ಆದಾಯದಲ್ಲಿ ಹೆಚ್ಚಳವಾಗಿದೆ. ಆದರೂ ಸಿಬ್ಬಂದಿ ವೇತನ, ಡೀಸೆಲ್ ಬೆಲೆ ಹೆಚ್ಚಳದಿಂದಾಗಿ ನಿಗಮಗಳು ಆರ್ಥಿಕವಾಗಿ ಸದೃಢಗೊಳ್ಳಲು ಪರದಾಡುತ್ತಿವೆ. ಹೀಗಾಗಿ ಶೇ.15ರಿಂದ 20ರಷ್ಟು ದರ ಹೆಚ್ಚಳ ಮಾಡಬೇಕು ಎಂದು ಸರಕಾರಕ್ಕೆ ಸಲ್ಲಿಸುವ ಪ್ರಸ್ತಾವನೆಯಲ್ಲಿ ಕೋರಲಾಗಿದೆ.

ಡೀಸೆಲ್, ಬಿಡಿ ಭಾಗಗಳ ದರ ಹೆಚ್ಚಳ, ಸಿಬ್ಬಂದಿ ವೇತನ ಹೆಚ್ಚಳ ಸೇರಿದಂತೆ ವರ್ಷದಿಂದ ವರ್ಷಕ್ಕೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಾಲ್ಕೂ ನಿಗಮಗಳ ಖರ್ಚು ಹೆಚ್ಚುತ್ತಿದೆ. ಆದಾಯಕ್ಕಿಂತ ಖರ್ಚು ಹೆಚ್ಚಾದ ಪರಿಣಾಮ ಕಳೆದ 5 ವರ್ಷಗಳಲ್ಲಿ ನಿಗಮಗಳ ಸಾಲ ಮತ್ತು ಹೊಣೆಗಾರಿಕೆ 4 ಸಾವಿರ ಕೋಟಿ ರು.ಗೆ ಹೆಚ್ಚಳವಾಗಿದೆ. ಅದರ ಜತೆಗೆ ಪ್ರಯಾಣಿಕರ ಬೇಡಿಕೆಗನುಗುಣವಾಗಿ ಹೊಸ ಬಸ್‌ಗಳನ್ನು ಸೇರ್ಪಡೆ ಮಾಡಲಾಗುತ್ತಿದೆ.

ಹೊಸ ಬಸ್‌ಗಳ ಸೇರ್ಪಡೆಗೆ ತಕ್ಕಂತೆ ನಿಗಮಗಳ ಆದಾಯದಲ್ಲಿ ಹೆಚ್ಚಳವಾಗಿಲ್ಲ. ಹೀಗಾಗಿಯೇ ಬಸ್ ಪ್ರಯಾಣ ದರ ಹೆಚ್ಚಳ ಮಾಡುವಂತೆ ನಿಗಮಗಳಿಂದ ಪ್ರಸ್ತಾವನೆ ಸಲ್ಲಿಕೆಯಾಗಿದೆ. ಪ್ರಯಾಣ ದರ ಹೆಚ್ಚಳಕ್ಕೆ ಸಂಬಂಧಿಸಿದಂತೆ ಒಂದೊಂದೇ ನಿಗಮಗಳು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತಿವೆ. ಕೆಲ ದಿನಗಳ ಹಿಂದಷ್ಟೇ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಪ್ರಯಾಣ ದರ ಹೆಚ್ಚಳಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಇದೀಗ ಕೆಎಸ್‌ಆರ್‌ಟಿಸಿ ಕೂಡ ಪ್ರಯಾಣ ದರ ಹೆಚ್ಚಳ ಮಾಡುವಂತೆ ಮನವಿ ಸಲ್ಲಿಸಿದೆ.

ಶೇ.15-20 ಹೆಚ್ಚಳಕ್ಕೆ ಕೋರಿಕೆ

ಕಳೆದ 2-3 ವರ್ಷಗಳ ಹಿಂದೆಯೇ ಸಾರಿಗೆ ನಿಗಮಗಳು ಪ್ರಯಾಣ ದರ ಹೆಚ್ಚಳಕ್ಕೆ ಮನವಿ ಸಲ್ಲಿಸಲಾಗಿತ್ತು. ಆದರೆ, ಸರಕಾರ ಅದಕ್ಕೆ ಅನುಮತಿ ನೀಡಿರಲಿಲ್ಲ. ಇದೀಗ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಜು.12ರಂದು ನಡೆದ ಕೆಎಸ್‌ಆರ್‌ಟಿಸಿ ಆಡಳಿತ ಮಂಡಳಿ ಸಭೆಯಲ್ಲಿ ನಿಗಮದ ಲಾಭ, ನಷ್ಟದ ಬಗ್ಗೆ ಚರ್ಚೆ ನಡೆಸಲಾಗಿದ್ದು, ಪ್ರಯಾಣ ದರ ಶೇ.15ರಿಂದ 20ರಷ್ಟು ಹೆಚ್ಚಳ ಮಾಡುವಂತೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ವಾಯುವ್ಯ ಸಾರಿಗೆ ನಿಗಮವೂ ಅಷ್ಟೇ ಪ್ರಮಾಣದ ದರ ಹೆಚ್ಚಳಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿದೆ.

ಎಪಿಎಂಸಿಯಿಂದಲೇ ಅವ್ಯವಹಾರ

ಯಲ್ಲಾಪುರ ಟಿಎಸ್‌ಎಸ್ ಟೆಂಡರ್ ಪ್ರಕರಣ | ಅಲ್ಲಗಳೆದ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ

ಶಿರಸಿ: ಯಲ್ಲಾಪುರ ಟಿಎಸ್‌ಎಸ್ ನಲ್ಲಿ ಟೆಂಡರ್ ಅವ್ಯವಹಾರ ನಡೆದಿದೆ ಎಂಬ ವಿಷಯವನ್ನು ಸಂಸ್ಥೆಯ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ಅಲ್ಲಗಳೆದಿದ್ದಾರೆ. ಇದು ಯಲ್ಲಾಪುರ ಎಪಿಎಂಸಿ ಹಾಗೂ ಅದರ ಸಿಬ್ಬಂದಿಯಿಂದ ನಡೆದ ವ್ಯವಹಾರ ಎಂದು ತಿಳಿಸಿದ್ದಾರೆ.

ಈ ಕುರಿತು ನಗರದ ಟಿಎಸ್‌ಎಸ್ ಸಂಸ್ಥೆಯಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ವೈದ್ಯ, ಕಳೆದ ಕೆಲ ದಿನಗಳ ಹಿಂದೆ ರೈತರ ಅಡಿಕೆಯ ಮಾರಾಟದ ಟೆಂಡರ್ ವ್ಯವಸ್ಥೆಯಲ್ಲಿ ಟಿಎಸ್‌ಎಸ್ ನಿಂದ ಹಾನಿಯಾಗಿದೆ ಎಂದು ಹೇಳಿದ್ದಾರೆ.

ಆದರೆ ಎಪಿಎಂಸಿ ಅವರು ಮಾಡಿದ ವ್ಯವಹಾರನ್ನು ನಮ್ಮ ಸಂಸ್ಥೆ ಹಾಗೂ ಸಿಬ್ಬಂದಿ ಮೇಲೆ ಹೊರಿಸಿದ್ದಾರೆ. ಆದರೆ ಇದಕ್ಕೂ ನಮಗೂ ಸಂಬಂಧವಿಲ್ಲ. ಇದರ ದಾಖಲೆಯೂ ನಮ್ಮ ಬಳಿಯಿದೆ.

ಕಾರಣ ಈ ಆರೋಪದ ಕುರಿತು ಸಮಗ್ರ ತನಿಖೆ ಆಗಬೇಕು ಎಂದು ಟಿಎಸ್‌ಎಸ್ ವತಿಯಿಂದಲೇ ಮೇಲಾಧಿಕಾರಿ ಗಳಿಗೆ, ಸರ್ಕಾರಕ್ಕೆ ಪತ್ರ ಬರೆಯಲಾಗುತ್ತದೆ. ಇದನ್ನು ಠರಾವು ಸಹ ಮಾಡಲಾಗಿದೆ ಎಂದರು.

ಶಿರಸಿ ಟಿಎಸ್‌ಎಸ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ಮಾತನಾಡಿದರು. ಪ್ರಧಾನ ವ್ಯವಸ್ಥಾಪಕ (ಪ್ರಭಾರಿ) ಗಿರೀಶ ಹೆಗಡೆ, ಉಪಾಧ್ಯಕ್ಷ ಎಂ.ಎನ್. ಭಟ್ ತೋಟಿಮನೆ, ಹಾಗೂ ಇತರ ನಿರ್ದೇಶಕರು ಇದ್ದರು.

ಯಲ್ಲಾಪುರ ಟಿಎಸ್‌ಎಸ್ ನಲ್ಲಿ ಅಡಿಕೆಗೆ ನಿಗದಿಯಾದ ಮೊದಲ ಟೆಂಡರ್ ರದ್ದುಪಡಿಸಿ ಎರಡನೇ ಟೆಂಡರ್ ನೀಡಲು ಎಪಿಎಂಸಿ ಅವರೇ ತಿಳಿಸಿದ್ದರೆ.

ಅವರೇ ಇದ್ದು ಎರಡನೇ ಟೆಂಡರ್‌ಗೆ ರೈತರ ಅಡಿಕೆ ಮಾರಾಟಕ್ಕೆ ಹೇಳಿದ್ದರು. ಆದರೆ ರೈತರು ಕೇಳಿದ ಸಂದರ್ಭದಲ್ಲಿ ಎಪಿಎಂಸಿ ಸಿಬ್ಬಂದಿ ಫಸ್ಟ್ ಟೆಂಡರ್ ಕೊಡಿ ಎಂದರು. ಇದರಿಂದ ಸಮಸ್ಯೆ ಆಗಿದೆಯೇ ಹೊರತು ನಮ್ಮಿಂದ ಏನೂ ತಪ್ಪಾಗಿಲ್ಲ ಎಂದರು.

ಟಿಎಸ್ ಎಸ್ ಸಂಸ್ಥೆಯಲ್ಲಿ ವ್ಯಾಪಾರಸ್ಥರು ಒಮ್ಮೆ ಟೆಂಡರ್ ಬರೆದ ಬಳಿಕ ಅದನ್ನು ಬದಲಾಯಿಸಲು ಅವಕಾಶವಿಲ್ಲ. ಒಂದೊಮ್ಮೆ ಕಣ್ತಪ್ಪಿನಿಂದ ಜಾಸ್ತಿ ಬರೆದಿದ್ದರೆ ಅದನ್ನು ನದರ್ ಚೂಕ್ ಅಡಿಯಲ್ಲಿ ಪರಿಗಣಿಸಿ, ವ್ಯಾಪಾರಸ್ಥರು, ರೈತರ ಜೊತೆ ಚರ್ಚಿಸಿ, ರೈತರ ಒಪ್ಪಿಗೆ ಸಿಕ್ಕ ಬಳಿಕವೇ ಟೆಂಡರ್ ದರ ಬದಲಿಸುತ್ತಿವೆ.

ಆದರೆ, ಯಲ್ಲಾಪುರದಲ್ಲಿ ಎಪಿಎಂಸಿಯಲ್ಲಿ ಈ ರೀತಿ ದರ ಬದಲಾವಣೆ ಯಾಗುತ್ತಿರುವ ಬಗ್ಗೆ ಆರೋಪಗಳು ಕೇಳಿಬರುತ್ತಿವೆ. ನಾವು ಮಾಹಿತಿಗಾಗಿ ಎಪಿಎಂಸಿಯ ದರ ಪಟ್ಟಿ ಪರಿಶೀಲಿಸಲು ಯತ್ನಿಸಿದರೆ ಯಲ್ಲಾಪುರ ಎಪಿಎಂಸಿ ಹಳೆಯ ದಾಖಲೆಗಳೇ ವೆಬ್ ಸೈಟ್‌ನಲ್ಲಿ ಕಾಣದಂತಾಗಿದೆ. ಈ ಎಲ್ಲದರ ಬಗ್ಗೆ ಸೂಕ್ತ ತನಿಖೆ ಆಗಬೇಕೆಂದು ನಾವು ಆಗ್ರಹಿಸಲಿದ್ದೇವೆ ಎಂದರು.

> ಟೆಂಡರ್ ವ್ಯತ್ಯಾಸದ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಎಪಿಎಂಸಿ ಬೆಂಗಳೂರು ಕಚೇರಿಗೆ ಹಾಗೂ ಸರ್ಕಾರಕ್ಕೆ ಪತ್ರ ಬರೆಯಲಿದ್ದೇವೆ. ಅದನ್ನು ಸ್ಥಳೀಯ ಕಚೇರಿಗೂ ಮಾಹಿತಿ ನೀಡಲಿದ್ದೇವೆ.
> -ಗೋಪಾಲಕೃಷ್ಣ ವೈದ್ಯ, ಟಿಎಸ್‌ಎಸ್ ಅಧ್ಯಕ್ಷ

ಶಿರಸಿ ಮತ್ತು ಸಿದ್ದಾಪುರದಲ್ಲಿ ಇ ಟೆಂಡರ್ ಮೂಲಕವೇ ಅಡಕೆ ಹರಾಜು ಪ್ರಕ್ರಿಯೆ ನಡೆಯುತ್ತದೆ. ಆದರೆ, ಯಲ್ಲಾಪುರದಲ್ಲಿ ಎಪಿಎಂಸಿ ಒಳಗೇ ಟೆಂಡರ್ ಪ್ರಕಟವಾಗುತ್ತಿದೆ. ಎಪಿಎಂಸಿ ಯವರೇ ಮೊದಲ ಟೆಂಡರ್ ನಿರ್ಲಕ್ಷಿಸಿ ಎರಡನೇ ಟೆಂಡರ್‌ದಾರರಿಗೆ ಅಡಕೆ ಮಾರಾಟ ಮಾಡಿಸಿದ್ದಾರೆ.

ಏಕೆ ಹೀಗೆ ಮಾಡಿದ್ದೀರಿ ಎಂದು ನಾವು ಎಪಿಎಂಸಿಯವರಿಗೆ ಪ್ರಶ್ನಿಸಿದ್ದಕ್ಕೆ ಎಪಿಎಂಸಿ ನಮಗೆ ನೋಟೀಸ್ ನೀಡಿದೆ. ಈಗ ಎಪಿಎಂಸಿ ಅಧಿಕಾರಿಗಳು ಮಾಡಿದ ತಪ್ಪನ್ನು ಉದ್ದೇಶಪೂರ್ವಕವಾಗಿ ನಮ್ಮ ಮೇಲೆ ಹೊರಿಸಿ ಸಂಸ್ಥೆ ಹೆಸರಿಗೆ ಕಳಂಕ ತರುತ್ತಿದ್ದಾರೆ ಎಂದು ಆರೋಪಿಸಿದರು. ಸಂಸ್ಥೆಯ ಉಪಾಧ್ಯಕ್ಷ ಎಂ.ಎನ್. ಭಟ್ ತೋಟಿಮನೆ, ಪ್ರಭಾರಿ ವ್ಯವಸ್ಥಾಪಕ ಗಿರೀಶ ಹೆಗಡೆ ಹಾಗೂ ಇತರ ಎಲ್ಲಾ ನಿರ್ದೇಶಕರು ಇದ್ದರು.

ಮನೆಗಳಿಗೆ ನೀರು ನುಗ್ಗಿದರೆ 10 ಸಾವಿರ ರು. ಪರಿಹಾರ ನೀಡಿ

ಕಾರವಾರ: ಪ್ರವಾಹದ ಸಂದರ್ಭದಲ್ಲಿ ಮನೆಗಳಿಗೆ ನೀರು ನುಗ್ಗಿದಲ್ಲಿ ಕೊಡುವ ಪರಿಹಾರಕ್ಕೂ ರಾಜ್ಯ ಸರ್ಕಾರ ಕತ್ತರಿ ಹಾಕಿದೆ. ಬಿಜೆಪಿ ಸರ್ಕಾರ ಇದ್ದಾಗ 10 ಸಾವಿರ ರೂಪಾಯಿ ಕೊಡುತ್ತಿದ್ದುದನ್ನು ಕಾಂಗ್ರೆಸ್ ಸರ್ಕಾರ ಈಗ 5 ಸಾವಿರ ರೂಪಾಯಿಗಳಿಗೆ ಇಳಿಸಿದೆ. ಬಡವರು, ಪ್ರವಾಹ ಸಂತ್ರಸ್ತರ ಹಿತದೃಷ್ಟಿಯಿಂದ ಮನೆಯೊಳಗೆ ನೀರು ನುಗ್ಗಿದಲ್ಲಿ ನೀಡುವ ಪರಿಹಾರವನ್ನು ಕೂಡಲೇ ಈ ಹಿಂದಿನಂತೆ 10 ಸಾವಿರ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ಎಸ್.ನಾಯ್ಕ ಆಗ್ರಹಿಸಿದ್ದಾರೆ.

ಮನೆಗಳಿಗೆ ನೀರು ನುಗ್ಗಿದ ಪ್ರಕರಣದಲ್ಲಿ ಈ ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಎನ್ ಡಿ ಆರ್ ಎಫ್ ಹಾಗೂ ಎಸ್ ಡಿ ಆರ್ ಎಫ್ ಮಾರ್ಗಸೂಚಿ ದರಕ್ಕೆ ಹೆಚ್ಚುವರಿಯಾಗಿ ರಾಜ್ಯ ಸರ್ಕಾರದಿಂದ ಹಣ ಸೇರಿಸಿ ಒಟ್ಟೂ 10 ಸಾವಿರ ರೂ. ಪರಿಹಾರ ನೀಡುತ್ತಿತ್ತು. ಅಂದಿನ ಬಿಜೆಪಿ ಸರ್ಕಾರದ ಕ್ರಮ ಸಾರ್ವತ್ರಿಕವಾಗಿ ಮೆಚ್ಚುಗೆಗೆ ಪಾತ್ರವಾಗಿತ್ತು. ಜೊತೆಗೆ ಪ್ರವಾಹ ಸಂತ್ರಸ್ತರಿಗೂ ಅನುಕೂಲವಾಗಿತ್ತು. ಈಗ ರಾಜ್ಯ ಸರ್ಕಾರ ಹೆಚ್ಚುವರಿ ಹಣ ನೀಡದೆ ಕೇವಲ 5 ಸಾವಿರ ರೂ. ಪರಿಹಾರ ನೀಡಿ ಕೈತೊಳೆದುಕೊಳ್ಳುತ್ತಿದೆ.

ಮನೆಯೊಳಗೆ ನೀರು ನುಗ್ಗಿದಲ್ಲಿ ಧವಸ ಧಾನ್ಯಗಳು, ಬಟ್ಟೆ, ಪಾತ್ರೆ ಪರಿಕರಗಳು, ದಿನ ಬಳಕೆ ಸಾಮಗ್ರಿಗಳು ಹೀಗೆ ಎಲ್ಲ ಹಾಳಾಗುತ್ತವೆ. ಅಮೂಲ್ಯ ವಸ್ತುಗಳು ನಾಶವಾದ ಉದಾಹರಣೆಯೂ ಇದೆ. ಹೀಗಿರುವಾಗ ಕೇವಲ 5 ಸಾವಿರ ರೂ. ಪರಿಹಾರ ನೀಡಿದರೆ ಅದು ಯಾವುದಕ್ಕೂ ಸಾಲದು. ಮಳೆ ನೀರು ಮನೆಯೊಳಗೆ ನುಗ್ಗಿದಾಗ ಸ್ವಚ್ಛಗೊಳಿಸುವುದಕ್ಕೆ ಸಾವಿರಾರು ರೂಪಾಯಿ ವ್ಯಯಿಸಬೇಕು. ರಾಜ್ಯ ಸರ್ಕಾರ ಅತಿ ಕಡಿಮೆ ಪರಿಹಾರ ನೀಡುತ್ತಿರುವುದರಿಂದ ಬಡವರು, ದೀನ ದಲಿತರು, ಹಿಂದುಳಿದ ಪ್ರವಾಹ ಸಂತ್ರಸ್ತರು ತೀವ್ರ ತೊಂದರೆಗೊಳಗಾಗಿದ್ದಾರೆ.

ಈ ಎಲ್ಲ ಕಾರಣಗಳಿಂದ ಸರ್ಕಾರ ಕೂಡಲೇ ಮನೆಗಳಿಗೆ ನೀರು ನುಗ್ಗಿದಾಗ ಆ ಮನೆಯ ಮಾಲೀಕರಿಗೆ 5 ಸಾವಿರಕ್ಕೆ ಬದಲಾಗಿ 10 ಸಾವಿರ ರೂ. ಪರಿಹಾರ ನೀಡಬೇಕೆಂದು ಸರ್ಕಾರವನ್ನು ಆಗ್ರಹಿಸುವುದಾಗಿ ರೂಪಾಲಿ ಎಸ್ .ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶವ ಪರೀಕ್ಷೆ ವಿಳಂಬ: ವೈದ್ಯರ ತರಾಟೆಗೆ ತೆಗೆದುಕೊಂಡ ಶಾಸಕ ಶಿವರಾಮ ಹೆಬ್ಬಾರ

ಶಿರಸಿ: ಅನಗತ್ಯ ಕಾರಣಗಳನ್ನು ಹೇಳಿ ಮೃತಪಟ್ಟ ವ್ಯಕ್ತಿಯ ಶವ ಪರೀಕ್ಷೆಯನ್ನು ವಿಳಂಬ ಮಾಡುತ್ತಿದ್ದ ವೈದ್ಯರನ್ನು ಹಾಗೂ ಸಿಬ್ಬಂದಿಯನ್ನು ಶಾಸಕ ಶಿವರಾಮ ಹೆಬ್ಬಾ ತೀವ್ರ ತರಾಟೆಗೆ ತೆಗೆದುಕೊಂಡ ಘಟನೆ ನಗರದ ಪಂಡಿತ ಸಾರ್ವಜನಿಕ ಆಸ್ಪತ್ರೆಯಲ್ಲಿ ಶನಿವಾರ ನಡೆದಿದೆ.

ಬನವಾಸಿ ಹೋಬಳಿ ವ್ಯಾಪ್ತಿಯ ಬಿಸ್ಲಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅತೀವ ಮಳೆಯಿಂದಾಗಿ ಕಾಲುವೆ ಬಿದ್ದು ಗ್ರಾಮಸ್ಥರ ಮಾಹದೇವ ಹಸ್ಲರ್ ಮೃತಪಟ್ಟ ಅಹಿತಕರ ಘಟನೆ ಸಂಬಂಧಿಸಿತ್ತು.

ಶವ ಪರೀಕ್ಷೆಗಾಗಿ ಮೃತದೇಹವನ್ನು ನಗರದ ಸರಕಾರಿ ಆಸ್ಪತ್ರೆಗೆ ತಂದು ಸುಮಾರು 3 ಗಂಟೆಗೆ ಅಧಿಕ ಸಮಯವಾದರು ಸಹ ಅನಗತ್ಯ ಕಾರಣಗಳನ್ನು ಹೇಳಿ ಶವಪರೀಕ್ಷೆ ನಡೆಸದೆ ವೈದ್ಯಾಧಿಕಾರಿಗಳು ಕುಟುಂಬಸ್ಥರಿಗೆ ತೊಂದರೆ ನೀಡುತ್ತಿದರು.

ಈ ಘಟನೆಯ ಸುದ್ದಿ ಶಾಸಕ ಹೆಬ್ಬಾರಗೆ ತಿಳಿಯುತ್ತಿದ್ದಂತೆ ನಗರದ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ತಕ್ಷಣ ಸಂಬಂಧಿಸಿದ ವೈದ್ಯಕೀಯ ಸಿಬ್ಬಂದಿಗಳನ್ನು ಸ್ಥಳಕ್ಕೆ ಕರೆಹಿಸಿ ಬಡವರಿಗೆ ಸತಾಹಿಸುವ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿ ಇಂತಹ ಮಾನವೀಯ ಕರ್ತವ್ಯದ ಅಗತ್ಯತೆಯ ಬಗ್ಗೆ ಅಧಿಕಾರಿಗಳಿಗೆ ತಿಳಿಸಿ ಶೀಘ್ರವಾಗಿ ಶವ ಪರೀಕ್ಷೆ ಮಾಡಿ ಕುಟುಂಬಸ್ಥರಿಗೆ ಹಸ್ತಾಂತರಿಸುವಂತೆ ತಿಳಿಸಿದರು.

ಸಂಬಂಧಿಸಿದ ಅಧಿಕಾರಿಗಳಿಗೆ ದೂರವಾಣಿ ಮೂಲಕ ಮಾತನಾಡಿ ಇಂತಹ ಸಂದರ್ಭಗಳಲ್ಲಿ ಮಾನವೀಯ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುವಂತೆ ಸೂಚಿಸಿದರು. ಮೃತಪಟ್ಟ ಮಾದೇವ ಹಸ್ಲರ್ ಅವರ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಪರಿಹಾರವನ್ನು ಒದಗಿಸುವ ಭರವಸೆಯನ್ನು ನೀಡಿದರು.

ಕುಮಟಾದಲ್ಲಿ ಟ್ರೆಂಡ್ಸ್ ಮಳಿಗೆ ಆರಂಭ

ಕುಮಟಾ: ಭಾರತದ ಅತಿದೊಡ್ಡ ಮತ್ತು ವೇಗವಾಗಿ ಬೆಳೆಯುತ್ತಿರುವ ಉಡುಪು ಮತ್ತು ಪರಿಕರಗಳ ವಿಶೇಷ ಸರಣಿಯಾದ ರಿಲಯನ್ಸ್ ರಿಟೇಲ್‌ನ ಟ್ರೆಂಡ್ಸ್, ಉತ್ತರ ಕನ್ನಡ ಜಿಲ್ಲೆಯ ಕುಮಟಾ ಪಟ್ಟಣದಲ್ಲಿ ತನ್ನ ಹೊಸ ಮಳಿಗೆ ಆರಂಭಿಸಿದೆ.

ಕುಮಟಾ ಪಟ್ಟಣದ ಮೊದಲ ಟ್ರೆಂಡ್ಸ್ ಮಳಿಗೆಯಾಗಿರುವ ಈ 4545 ಚದರ ಅಡಿ ಮಳಿಗೆಯು ಅದ್ಭುತ ಬೆಲೆಗಳಲ್ಲಿ ಉತ್ತಮ ಪ್ರಸ್ತುತವೆನಿಸುವ ಫ್ಯಾಷನ್ ಪಡೆಯಬಹುದು. ಟ್ರೆಂಡ್ಸ್ ಭಾರತದಲ್ಲಿ ತನ್ನ ವ್ಯಾಪ್ತಿಯನ್ನು ಮೆಟ್ರೊ ನಗರಗಳಿಂದ ಹಿಡಿದು ಮಿನಿ ಮೆಟ್ರೋಗಳು, 1ನೇ ಹಾಗೂ 2ನೇ ಶ್ರೇಣಿಯ ಪಟ್ಟಣಗಳು ಮತ್ತು ಅದರಾಚೆಗೆ ಬಲಪಡಿಸುವ ಮೂಲಕ ದೇಶದ ಗ್ರಾಹಕರೊಂದಿಗೆ ಸಂಪರ್ಕ ಸಾಧಿಸಿ ನೆಚ್ಚಿನ ಫ್ಯಾಷನ್ ತಾಣವಾಗಿದ್ದು, ನಿಜವಾಗಿಯೂ ಪ್ರಜಾಪ್ರಭುತ್ವವನ್ನು ಪ್ರಜಾಪ್ರಭುತ್ವಗೊಳಿಸುತ್ತಿದೆ.

ಕುಮಟಾದ ಟ್ರೆಂಡ್ಸ್ ಮಳಿಗೆ, ಆಧುನಿಕ ನೋಟ ಮತ್ತು ವಾತಾವರಣ ಹೊಂದಿದ್ದು, ಈ ಪ್ರದೇಶದ ಗ್ರಾಹಕರಿಗೆ ಸಂಬಂಧಿಸಿದ ಮತ್ತು ಕೈಗೆಟುಕುವ ಬೆಲೆಯಲ್ಲಿ ದೊರಕುವ ಮತ್ತು ಹಣಕ್ಕೆ ಹೆಚ್ಚಿನ ಮೌಲ್ಯವನ್ನು ಒದಗಿಸುವ ಅತ್ಯಾಕರ್ಷಕ ಶ್ರೇಣಿಯ ಉತ್ತಮ ಗುಣಮಟ್ಟದ ಮತ್ತು ಫ್ಯಾಶನ್ ಸರಕುಗಳನ್ನು ಒಳಗೊಂಡಿದೆ.

ಈ ಪಟ್ಟಣದ ಗ್ರಾಹಕರು ಟ್ರೆಂಡಿ ವುಮೆನ್ಸ್ ವೇರ್, ಮೆನ್ಸ್ ವೇರ್, ಕಿಡ್ಸ್ ವೇರ್ ಮತ್ತು ಫ್ಯಾಶನ್ ಆಕ್ಸೆಸರಿಸ್, ಆಹ್ಲಾದಕರ ಬೆಲೆಯಲ್ಲಿ ಶಾಪಿಂಗ್ ಮಾಡುವ ವಿಶಿಷ್ಟವಾದ ವಿಶೇಷ ಮತ್ತು ಉತ್ಕೃಷ್ಟ ಅನುಭವವನ್ನು ಎದುರು ನೋಡಬಹುದು ಎಂದು ಪ್ರಕಟಣೆ ಹೇಳಿದೆ.

ಕುಸಿದ ಮನೆಗಳಿಗೆ ಶಾಸಕ ಬಸವರಾಜ ಬೇಟಿ: ಸಾಂತ್ವನ

ಹಾವೇರಿ: ಅತಿವೃಷ್ಟಿಯಿಂದ ಹಾನಿಗೊಳಗಾದ ಬ್ಯಾಡಗಿ ತಾಲೂಕಿನ ವಿವಿಧ ಗ್ರಾಮಗಳಿಗೆ ಶಾಸಕ ಬಸವರಾಜ ಶಿವಣ್ಣನವರ್ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿ ಸಂತ್ರಸ್ತರಿಗೆ ಧೈರ್ಯ ತುಂಬಿದರು.

ಶನಿವಾರ ತಾಲೂಕಿನ ಕದರಮಂಡಲಗಿ, ಬಿಸಲಹಳ್ಳಿ, ಬನ್ನಿಹಟ್ಟಿ, ಶಿಡೆನೂರ, ಸೇರಿದಂತೆ ಇನ್ನಿತರ ಗ್ರಾಮಗಳಿಗೆ ತಹಸೀಲ್ದಾರ ಫಿರೋಜ ಷಾ ಸೋಮನಕಟ್ಟಿ. ತಾಪಂ ಕರ್‌ಯ ನಿರ್ವಹಕ ಅಧಿಕಾರಿ ಮಲ್ಲಿಕಾರ್ಜುನ್.ಕೆ.ಎಂ, ಸೇರಿದಂತೆ ವಿವಿಧ ಅಧಿಕಾರಿಗಳ ತಂಡದೊಅದಿಗೆ ಶಾಸಕ ಬಸವರಾಜ ಶಿವಣ್ಣನವರ ಭೇಟಿ ನೀಡಿದರು.

ಮೊದಲು ಕದರಮಂಡಲಗಿ ಗ್ರಾಮಕ್ಕೆ ತೆರಳಿದ ಅವರು ಮಳೆಯಿಂದ ಹಾನಿಗೊಳಗಾದ ಗ್ರಾಮದಲ್ಲಿನ ಸುಮಾರು 8 ಮನೆಗಳನ್ನ ವೀಕ್ಷಣೆ ಮಾಡಿದರು, ನಂತರ ಹಾನಿಗೊಳಗಾದ ಮನೆಯ ಮಾಲೀಕರಿಗೆ ಧರ್‌ಯ ತುಂಬುವ ಮಾತುಗಳನ್ನಾಡಿದರು. ನಂತರ ಅಲ್ಲಿಯೇ ಇದ್ದ ತಹಸೀಲ್ದಾರ್ ಸೇರಿದಂತೆ ಇತರ ಅಧಿಕಾರಿಗಳಿಗೆ ಸಂತ್ರಸ್ಥರಿಗೆ ಸೂಕ್ತ ಪರಿಹಾರ ನೀಡುವಂತೆ ಸೂಚನೆಯನ್ನು ನೀಡಿದರು. ಅಲ್ಲಿಂ ದ ಬಿಸಲಹಳ್ಳಿ, ಬನ್ನಿಹಟ್ಟಿ, ಶಿಡೆನೂರ, ಸೇರಿದಂತೆ ವಿವಿಧ ಗ್ರಾಮಗಳಿಗೂ ಸಹ ಭೇಟಿ ನೀಡಿ ಅಲ್ಲಿಯೂ ಮಳೆಯಿಂದ ಹಾನಿಗೊಳ ಗಾದ ಮನೆ ಹಾಗೂ ಬೆಳೆಗಳನ್ನು ವೀಕ್ಷಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರಸಕ್ತ ವರ್ಷ ರಾಜ್ಯದಲ್ಲಿ ಉತ್ತಮ ಮಳೆಯಾಗಿದೆ ಇದು ಒಂದೆಡೆ ಸಂತೋಷದಾಯಕ ವಿಷಯವಾದರೇ ಮತ್ತೊಂದೆಡೆ ಮಳೆಯಿಂದಾಗಿ ಸಾಕಷ್ಟು ಹಾನಿ ಕೂಡ ಸಂಭವಿಸಿದೆ, ಅಲ್ಲದೇ ಹಲವರು ಪ್ರಾಣವನ್ನು ಕಳೆದುಕೊಂಡಿದ್ದಾರೆ ಇದು ನೋವಿನ ಸಂಗತಿಯಾಗಿದೆ, ಅತೀವೃಷ್ಟಿಯಿಂಧ ಮನೆ ಕಳೆದುಕೊಂಡ ಯಾರೊಬ್ಬರು ಸಹ ಆತಂಕ ಪಡುವ ಅಗತ್ಯವಿಲ್ಲ ಹಾನಿಗೆ ಅನುಗುಣವಾಗಿ ನಿಯಮದಂತೆ ಅರ್ಹ ಪ್ರತಿಯೊಬ್ಬರಿಗೂ ಸಹ ಸರ್ಕಾರದ ವತಿಯಿಂದ ಪರಿಹಾರದ ಮೊತ್ತ ದೊರೆಯಲಿದ್ದು ಮುಂದೆ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗಲಿದೆ, ಸರ್ಕಾರ ಸದಾ ನಿಮ್ಮೊಂದಿಗಿದೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ತಾಲೂಕಾಧ್ಯಕ್ಷ ದಾನಪ್ಪ ಚೂರಿ. ಶಂಭನಗೌಡ ಪಾಟೀಲ್. ಚನ್ನಬಸಪ್ಪ ಹುಲ್ಲತ್ತಿ. ಸೇರಿದಂತೆ ಗ್ರಾಮ ಪಂಚಾಯತಿ ಪಿಡಿಒ ಹಾಗೂ ತಹಸೀಲ್ದಾರ್ ಕಚೇರಿ ಸಿಬ್ಬಂದಿ ಉಪಸ್ಥಿತರಿದ್ದರು.

ಯಲ್ಲಾಪುರ ತಾಲೂಕಿನ ಇಡಗುಂದಿಯ ಕೊಡ್ಲಗದ್ದೆ ಬಳಿರಭಸವಾಗಿ ಬೀಸಿದ ಗಾಳಿ ಮಳೆಗೆ ಮರವೊಂದು ಕಂಟೆನರ್ ಲಾರಿ ಮೇಲೆ ಬಿದ್ದಿರುವ ಘಟನೆ ಶನಿವಾರ ನಡೆದಿದೆ.ರಸ್ತೆಯ ಮೇಲೆ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಕೆಲಕಾಲವಾಹನ ಸಂಚಾರಕ್ಕೆ ವ್ಯತ್ಯಯವುಂಟಾಗಿತ್ತು.ಘಟನಾ ಸ್ಥಳಕ್ಕೆ ಅರಣ್ಯ, ಹೆಸ್ಕಾಂ ಪೊಲೀಸ್ ಇಲಾಖೆ ಸಿಬ್ಬಂದಿ, ಶೌರ್ಯ ತಂಡ ದವರು ಆಗಮಿಸಿ ಮರವನ್ನು ತೆರವು ಗೊಳಿಸುವ ಕಾರ್ಯ ನಡೆಸಿ ಸಂಚಾಕ್ಕೆ ಅನುವು ಮಾಡಿಕೊಟ್ಟರು.

ಹಳ್ಳಕ್ಕೆ ಬಿದ್ದು ಗಂಡು ಚಿರತೆ ಸಾವು

ಮುಂಡಗೋಡ: ತಾಲೂಕಿನ ದೊಡ್ಡ ಹಾರವಳ್ಳಿ ಭಾಗದ ಅರಣ್ಯ ಪ್ರದೇಶದ ಹಳ್ಳದಲ್ಲಿ ಶುಕ್ರವಾರ ಚಿರತೆಯ ಶವ ಪತ್ತೆಯಾಗಿದೆ. ಸುಮಾರು 2.5 ವರ್ಷದ ಗಂಡು ಚಿರತೆ ಇದಾಗಿದೆ ಎಂದು ಅಂದಾಜಿಸಲಾಗಿದ್ದು, ಚಿರತೆಯ ದೇಹ ಸಂಪೂರ್ಣ ಕೊಳೆತಿದ್ದು ದೇಹದ ಮೇಲೆ ಹುಳುಗಳಾಗಿವೆ. ಕಾತೂರ ವಲಯ ಅರಣ್ಯಾಧಿಕಾರಿ ಮಂಜುನಾಥ ನಾಯ್ಕ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಹಾರುವ ವೇಳೆಯಲ್ಲಿ ಹಳ್ಳದಲ್ಲಿ ಬಿದ್ದು, ನೀರಿನ ಸುಳಿಗೆ ಸಿಲುಕಿ ಚಿರತೆ ಸಾವನಪ್ಪಿದೆ ಎಂದು ತಿಳಿಸಿದ್ದಾರೆ. ಮುಂಡಗೋಡ ಪಶು ವೈದ್ಯಾಧಿಕಾರಿ ಕೃಷ್ಣಮೂರ್ತಿ ಹೆಗಡೆ ಹಾಗೂ ಸಿಬ್ಬಂದಿ ಸ್ಥಳದಲ್ಲಿಯೇ ಚಿರತೆಯ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ನಿಯಮಾನುಸಾರವಾಗಿ ಅರಣ್ಯ ಇಲಾಖೆ ವತಿಯಿಂದ ಅಂತಿಮ ಸಂಸ್ಕಾರ ನೆರವೇರಿಸಲಾಯಿತು.

ಯಲ್ಲಾಪುರ ಪಟ್ಟಣದ ಕಾಳಮ್ಮನಗರದಲ್ಲಿ ರಭಸವಾಗಿ ಬೀಸಿದ ಗಾಳಿ ಮಳೆಗೆ ಮರವೊಂದು ಮನೆಯಮೇಲೆ ಬಿದ್ದಿರುವ ಘಟನೆ ಶನಿವಾರ ನಡೆದಿದೆ. ಎಚ್ ಆರ ಖಾನ ಎಂಬುವರ ಮನೆಯ ಮೇಲೆ ಮರ ಬಿದ್ದು ಮನೆಗೆ ಹೊದಿಸಿದ್ದ ಹಂಚುಗಳು ಪುಡಿಪುಡಿಯಾಗಿ, ಮನೆಯಲ್ಲಿದ್ದ ಪಾತ್ರೆ ,ದಿನಬಳಕೆ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಮನೆಯಲ್ಲಿ ನೀರು ನಿಂತು ಪರಿತಪಿಸುವಂತಾಗಿತ್ತು.

ನೆರೆ ಸಂತ್ರಸ್ತರಿಗೆ ಶಿರಸಿ ರೋಟರಿಯಿಂದ ನೆರವು

ಶಿರಸಿ: ನಿರಂತರ ಮಳೆ ಮತ್ತು ಗುಡ್ಡಕುಸಿತದ ಪರಿಣಾಮವಾಗಿ ಸಂತ್ರಸ್ತರಾಗಿ, ಕುಮಟಾ ತಾಲೂಕಿನ ಗಂಗೆಕೊಳ್ಳ ಮತ್ತು ಬಾವಿಕೊಡ್ಲದಲ್ಲಿನ ಆಶ್ರಯ ಕೇಂದ್ರಗಳಲ್ಲಿ ತಾತ್ಕಾಲಿಕ ಆಶ್ರಯ ಪಡೆದವರ ಸಮಸ್ಯೆಗೆ ಸಕಾಲಿಕವಾಗಿ ಸ್ಪಂದಿಸಿದ ಶಿರಸಿ ರೋಟರಿ ಅಗತ್ಯ ನೆರವನ್ನು ನೀಡಿದೆ.

ಶಿರಸಿ ರೋಟರಿ ಅಧ್ಯಕ್ಷೆ ಡಾ. ಸುಮನ್ ಹೆಗಡೆ, ಕಾರ್ಯದರ್ಶಿ ಸರಸ್ವತಿ ಎನ್ ರವಿ, ಖಜಾಂಚಿ ವಿನಾಯಕ ಜೋಶಿ ಮತ್ತು ತಂಡ ಕುಮಟಾ ಆಶ್ರಯಕೇಂದ್ರಗಳಿಗೆ ತೆರಳಿ 50 ಸಂತ್ರಸ್ತ ಫಲಾನುಭವಿಗಳಿಗೆ ಸುಮಾರು ಒಂದು ತಿಂಗಳಿಗಾಗುವಷ್ಟು ಕಿರಾಣಿ ಕಿಟ್ ಗಳನ್ನು ತಾವೇ ವಿತರಿಸಿ ಬಂದಿದ್ದಾರೆ.

ಸ್ಕೊಡ್‌ವೆಸ್ ಸಂಸ್ಥೆಯ ಐವರು ಸ್ವಯಂ ಸೇವಕರ ಎರಡು ದಿನಗಳ ಶ್ರಮದಿಂದ 50 ಜನ ಅರ್ಹ ಸಂತ್ರಸ್ತರನ್ನು ಗುರುತಿಸಿ ಸಹಾಯ ಒದಗಿಸಲಾಯಿತು. ಇನ್ನೋರ್ವ ರೋಟರಿ ಸದಸ್ಯ, ಮನು ವಿಕಾಸದ ಗಣಪತಿ ಭಟ್ಟರು ಈ 50 ಕುಟುಂಬಗಳಿಗೆ ಆಶ್ರಯ ಕಿಟ್ ಗಳನ್ನೂ ವಿತರಿಸಿದ್ದಾರೆ.

ಸಂತ್ರಸ್ತರಿಗೆ ನೆರವು ನೀಡುವ ಕರೆಗೆ ಶಿರಸಿ ರೋಟರಿ ಸದಸ್ಯರು ತಕ್ಷಣ ಸ್ಪಂದಿಸಿದ್ದು, ಕಿಟ್ ತಯಾರಿಯಲ್ಲಿ ರೋಷನ್ ಹುಲೇಕಲ್ ಮತ್ತು ವಾಹನ ವ್ಯವಸ್ಥೆಗೆ ವಿನಾಯಕ ಜೋಷಿ ವಿಶೇಷ ಸಹಕಾರ ನೀಡಿರುವುದಾಗಿ ಶಿರಸಿ ರೋಟರಿಯ ಸಾರ್ವಜನಿಕ ಸಂಪರ್ಕಾಧಿಕಾರಿ ರವಿ ಹೆಗಡೆ ಗಡಿಹಳ್ಳಿ ತಿಳಿಸಿದ್ದಾರೆ.

ಟಿಎಸ್‌ಎಸ್ ಆವರಣದಲ್ಲಿ ಗಮನ ಸೆಳೆದ ಡೇರೆ ಮೇಳ

ಶಿರಸಿ: ದಿ. ತೋಟಗಾರ್ಸ್ ಕೋ-ಆಪರೇಟಿವ್ ಸೇಲ್ ಸೊಸೈಟಿ ಲಿ., ಶಿರಸಿ ಹಾಗೂ ಮಾತೃಮಂಡಳದ ಸಹಯೋಗದೊಂದಿಗೆ ಸಂಘದ ಪ್ರಧಾನ ಕಚೇರಿ ಆವರಣದಲ್ಲಿ ಶನಿವಾರ ಒಂದು ದಿನದ ಡೇರೆ ಹೂವಿನ ಗಿಡಗಳ ಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಿತು.

ಟಿಎಸ್‌ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ಕಾರ್ಯಕ್ರಮ ಚಾಲನೆ ನೀಡಿ ಮಾತನಾಡಿದರು. ಇವತ್ತಿನ ಭೀಕರ ಮಳೆಯ ವಾತಾವರಣದಲ್ಲಿ ಕೂಡ ಮನೆವಾರ್ತೆಯನ್ನು ನೋಡಿ ಕೊಳ್ಳುವುದರ ಜೊತೆಗೆ ಯಾವುದೇ ಲಾಭದ ಉದ್ದೇಶವಿಲ್ಲದೇ ಇದ್ದರೂ ಅತ್ಯಂತ ಉತ್ಸಾಹದಿಂದ ಗಿಡಗಳನ್ನು ತಯಾರಿಸಿ ಮಾರಾಟಕ್ಕೆ ತಂದ್ದಾರೆ. ಮಹಿಳೆಯರನ್ನು ಮತ್ತು ಮಾತೃಮಂಡಳಿ ಸದಸ್ಯರನ್ನು ಶ್ಲಾಘಿಸಿದರು. ಸಂಘಟಕರ ಪರವಾಗಿ ಮಾತೃ ಮಂಡಳ ಸದಸ್ಯೆ ಅಂಜನಾ ಹೆಗಡೆ ಮಾತನಾಡಿ, ವಿವಿಧ ವರ್ಣದ ಡೇರೆ ತಳಿಗಳ ಬಗ್ಗೆ ಅಭ್ಯಸಿಸಿ ಸೂಕ್ತ ರೀತಿಯಲ್ಲಿ ಬೆಳೆದು ಮಾರಾಟಕ್ಕೆ ತರುವುದು ಮಹಿಳೆಯರಿಗೆ ಆದಾಯಕ್ಕೆ ಆಧಾರವಾಗಿದೆ.

ಸುಮಾರು 12-13 ವರ್ಷಗಳಿಂದ ವೇದಾ ಸೀತಾರಾಮ ಹೆಗಡೆ ಇವರ ನೇತೃತ್ವದಲ್ಲಿ ಟಿ.ಎಸ್.ಎಸ್ ನಲ್ಲಿ ಯಶಸ್ವಿಯಾಗಿ ಡೇರೆ ಮೇಳವನ್ನು ನಡೆಸಿಕೊಂಡು ಬಂದಿದ್ದೇವೆ. ಟಿಎಸ್‌ಎಸ್ ಆಡಳಿತ ಮಂಡಳಿಯವರು ಈ ಮೇಳ ಆಯೋಜಿಸಲು ಸಹಕರಿಸುತ್ತಿರುವದಕ್ಕೆ ಹರ್ಷ ವ್ಯಕ್ತಪಡಿಸಿದರು. ಅನೇಕ ಮಹಿಳೆಯರು ಮಹನೀಯರು ಮನೆಯಲ್ಲಿ ಬೆಳೆದ ಡೇರೆ ಗಿಡಗಳೊಂದಿಗೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು, ಟಿ.ಎಸ್.ಎಸ್. ಉಪಾಧ್ಯಕ್ಷರು ಎಂ.ಎನ್. ಭಟ್ಟ ತೋಟಿಮನೆ, ಪ್ರಭಾರಿ ಪ್ರಧಾನ ವ್ಯವಸ್ಥಾಪಕ ಗಿರೀಶ ಹೆಗಡೆ, ಸಿಬ್ಬಂದಿ ಸದಸ್ಯರು ಗ್ರಾಹಕರು ಉಪಸ್ಥಿತರಿದ್ದರು. ಗೋಪಾಲ ಹೆಗಡೆ ಕಾರ್ಯಕ್ರಮ ನಿರ್ವಹಿಸಿದರು.

ಎರಡು ವರ್ಷದ ಅವಧಿಯಲ್ಲಿ 4.77 ಕೋಟಿ ರು. ವಹಿವಾಟು

ಮುಂಡಗೋಡ: ಮಹಿಳೆಯರೇ ಮುನ್ನಡೆಸುವ ಸ್ತ್ರೀ ಚೈತನ್ಯ ಸೌಹಾರ್ದ ಸಹಕಾರಿ ಸಂಘ, ಮುಂಡಗೋಡ ಇದರ ಎರಡನೇ ವರ್ಷದ ಕಿರು ಅವಧಿಯಲ್ಲಿ ಪ್ರಗತಿಪಥದತ್ತ ಮುನ್ನಡೆದಿದೆ. ಇದಕ್ಕೆಲ್ಲ ನಂಬಿಕೆ ಮತ್ತು ವಿಶ್ವಾಸದಿಂದ ತಮ್ಮ ದುಡಿತದ ಹಣ ತೊಡಗಿಸಿದ ಮಹಿಳಾ ಶೇರುದಾರರು, ಸಕ್ರೀಯ ಸಹಭಾಗಿತ್ವದಿಂದ ಕಾರ್ಯನಿರ್ವಹಿಸಿದ ಆಡಳಿತ ಮಂಡಳಿ ಹಾಗೂ ಭದ್ರತೆಯಿಂದ ಕಾರ್ಯನಿರ್ವಹಿಸಿದ ಸಿಬ್ಬಂದಿಯ ಕಠಿಣ ಪರಿಶ್ರಮವೇ ಕಾರಣ ಎಂದು ಸ್ತ್ರೀ ಚೈತನ್ಯ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷೆ ಮಹಾಲಕ್ಷ್ಮಿ ನಾಯ್ಕ ಶ್ಲಾಘಿಸಿದರು.

ಬಂಕಾಪುರ ರಸ್ತೆಯಲ್ಲಿರುವ ಸ್ತ್ರೀ ಚೈತನ್ಯ ಸೌಹಾರ್ದ ಸಹಕಾರಿ ಸಂಘದ ಮುಖ್ಯ ಶಾಖಾ ಕಚೇರಿಯಲ್ಲಿ ಶುಕ್ರವಾರ 2024-25ನೇ ಸಾಲಿನ ವಾರ್ಷಿಕ ಸರ್ವ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೂ.4.94 ಲಕ್ಷ ಶೇರು ಬಂಡವಾಳದಿಂದ ಜೂನ್ 2022 ರಲ್ಲಿ ಆರಂಭಿಸಿದ ಸಹಕಾರಿ ಸಂಘ ಈಗ ರೂ.9.43 ಲಕ್ಷದ ಶೇರು ಹೊಂದಿದ್ದು, ಕಳೆದ ಎರಡು ವರ್ಷದ ಅವಧಿಯಲ್ಲಿ 4.77 ಕೋಟಿ ವಹಿವಾಟು ನಡೆಸಿದ್ದು, ಮಾರ್ಚ್ 2024ರ ಅಂತ್ಯಕ್ಕೆ ರೂ. 61.71 ಲಕ್ಷ ಸಾಲ ನೀಡಿದೆ ಎಂದರು.

ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯರ ಸಬಲೀಕರಣದ ಉದ್ದೇಶದಿಂದ ಲೊಯೋಲ ವಿಕಾಸ ಕೇಂದ್ರದ ಮಾರ್ಗದರ್ಶನದಲ್ಲಿ ಆರಂಭಗೊಂಡ ಸಹಕಾರಿ ಸಂಘವು ತನ್ನ ಉದ್ದೇಶ ಇಡೇರಿಸುವ ದಾರಿಯಲ್ಲಿ ಮುನ್ನಡೆದಿದೆ ಎಂದು ಉಪಾಧ್ಯಕ್ಷರಾದ ಪುಷ್ಪಾ ಕೊರವರ ಮೆಚ್ಚುಗೆ ವ್ಯಕ್ತಪಡಿಸಿದರು. ಶೇರುದಾರ ಮಹಿಳೆಯರು ಸ್ವ-ಸಹಾಯ ಸಂಘದ ಮೂಲಕ ತಾವು ತಯಾರಿಸಿದ ಉತ್ಪನ್ನಗಳ ಮಾರಾಟಕ್ಕೂ ಸಹಕಾರಿ ಸಂಘ ಅವಕಾಶ ಮಾಡಿಕೊಟ್ಟಿದ್ದು, ಇಂದು ಅಧಿಕೃತವಾಗಿ ರೆಡಿಮೇಡ್ ಬಟ್ಟೆ ವ್ಯಾಪಾರಕ್ಕೆ ಚಾಲನೆ ನೀಡಲಾಯಿತು. ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಾದ ಸುಮಿತಾ ಗೋಪಾಲ ಸರ್ವ ಸಾಮಾನ್ಯ ಸಭೆಗೆ ಸದಸ್ಯರನ್ನು ಸ್ವಾಗತಿಸಿ, ವಂದನಾರ್ಪಣೆ ಸಲ್ಲಿಸಿದರು. ಅಕೌಂಟಂಟ್ ಶ್ರುತಿ ನಿರೂಪಿಸಿದರು. ತಾಲೂಕಿನ ಬೇರೆ-ಬೇರೆ ಹಳ್ಳಿಗಳಿಂದ ಬಂದ ಶೇರುದಾರರು, ಆಡಳಿತ ಮಂಡಳಿ ಸದಸ್ಯರು, ಠೇವುದಾರರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಮುಂದುವರಿದ ಮಳೆ ; ಹಲವೆಡೆ ಅಪಾರ ಹಾನಿ

ಶಿರಸಿ : 15 ದಿನಗಳಿಂದ ಎಡೆಬಿಡದೇ ಸುರಿಯುತ್ತಿರುವ ಮಳೆಯು ಶುಕ್ರವಾರವೂ ಮುಂದುವರೆದಿದ್ದು, ಹಲವೆಡೆ ವಸತಿ ಮನೆಗಳಿಗೆ ಹಾನಿಯಾಗಿ ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ. ಮಳೆ ಗಾಳಿಯಿಂದ ನೈಗಾರ ಗ್ರಾಮದ ಹಾಸಣಗಿ ಮಜಿರೆಯ ಗೌರಿ ಹುಲಿಯಾ ಗೌಡ ಇವರ ವಾಸ್ತವ್ಯದ ಮನೆಯ ಮೇಲ್ಚಾವಣಿ ಶೀಟ್ ಹಾಗೂ ಹಂಚು ಬಿದ್ದು ಭಾಗಶಃ ಹಾನಿಯಾಗಿದ್ದು, ಅಂದಾಜು 30 ಸಾವಿರ ರೂ ಹಾನಿಯಾಗಿದೆ. ಮಣದೂರು ಗ್ರಾಮದ ಶಿರ್ಲಬೈಲ್ ಮಜಿರೆಯ ಕಮಲಾಕರ ಮರಿಯಾ ಗೌಡ ಇವರ ವಾಸ್ತವ್ಯದ ಮನೆಯ ಮೇಲ್ಚಾವಣಿ ಶೀಟ್ ಹಾಗೂ ಹಂಚು ಬಿದ್ದು ಭಾಗಶಃ ಹಾನಿಯಾಗಿದ್ದು, 20 ಸಾವಿರ ನಷ್ಟವಾಗಿದೆ. ಅದೇ ರೀತಿ ಕುಳವೆ ಗ್ರಾಮ ಪಂಚಾಯತ ವ್ಯಾಪ್ತಿಯ ಹಳ್ಳಿಕಾನ ಗ್ರಾಮದ ವೆಂಕಟ್ರಮಣ ನಾಯ್ಕ ರವರ ಮನೆಯ ಗೋಡೆ ಬಿದ್ದು 30 ಸಾವಿರ ಹಾನಿಯಾಗಿದೆ ಎಂದು ಕಂದಾಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕಾಂಗ್ರೆಸ್ ಉಪಾಧ್ಯಕ್ಷರಾಗಿ ರಾಯ್ಕರ ಆಯ್ಕೆ

ಶಿರಸಿ : ಜಿಲ್ಲಾ ಕಾಂಗ್ರೆಸ್ ಸಮಿತಿಯ ಇಂಟಕ ವಿಭಾಗದ ಜಿಲ್ಲಾ ಉಪಾಧ್ಯಕ್ಷರಾಗಿ ಯಲ್ಲಾಪುರ ತಾಲೂಕಿನ ಹಿತ್ಲಳ್ಳಿಯ ರಾಮಚಂದ್ರ ಬಿ. ರಾಯ್ಕರ ಅವರನ್ನು ಆಯ್ಕೆ ಮಾಡಲಾಗಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಾಜ್ಯ ಅಧ್ಯಕ್ಷ ಡಿ.ಕೆ. ಶಿವಕುಮಾರ ಅವರ ಆದೇಶದಂತೆ ಇಂಟಕ ಕಾಂಗ್ರೆಸ್ ಸಮಿತಿ ರಾಜ್ಯಅಧ್ಯಕ್ಷ ಲಕ್ಷ್ಮೀ ವೆಂಕಟೇಶ ಅವರ ಸೂಚನೆ ಮೇರೆಗೆ ಇವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ ಸಮಿತಿಯ ಇಂಟಕ ವಿಭಾಗದ ಜಿಲ್ಲಾಧ್ಯಕ್ಷ ಪ್ರೊ. ಎನ್.ಟಿ. ನಾಯ್ಕ ತಿಳಿಸಿದ್ದಾರೆ. ಅವರು ಇಂದು ಶಿರಸಿಯ ಸುಪ್ರಿಯಾ ಹೋಟೆಲ್‌ನ ಸಭಾಂಗಣದಲ್ಲಿ ನೇಮಕಾತಿ ಆದೇಶ ಪತ್ರವನ್ನು ನೀಡಿ ಯಲ್ಲಾಪುರ ಮತ್ತು ಹಳಿಯಾಳ ಹಾಗೂ ಜೊಯಿಡಾ ಅಲ್ಲದೆ ದಾಂಡೇಲಿ ಬ್ಲಾಕ ಇಂಟಕ್ ಕಾಂಗ್ರೆಸ್ ಸಮಿತಿಗಳನ್ನು ಕೂಡಲೇ ರಚಿಸುವ ಉಸ್ತುವಾರಿಯನ್ನು ಇವರಿಗೆ ನೀಡಲಾಗಿದೆ. ಈ ಸಂದರ್ಭದಲ್ಲಿ ಸಿದ್ದಾಪುರ ಬಾಕ್ ಇಂಟಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವಿನಾಯಕ ಎಂ. ನಾಯ್ಕ, ಮಹಿಳಾ ಅಧ್ಯಕ್ಷೆ ಮಾಣಿಕಾ ಶೆಟ್ಟಿ, ಶಿರಸಿ ಅಧ್ಯಕ್ಷ ನಾರಾಯಣ ನಾಯ್ಕ, ಪಾಂಡುರಂಗ ಪಾಟೀಲ್ ಮುಂತಾದವರು ಇದ್ದರು.

ಸಂತ್ರಸ್ತ ವಿದ್ಯಾರ್ಥಿಗಳಿಗೆ ಪಾಠೋಪಕರಣ ವಿತರಣೆ

ಅಂಕೋಲಾ : ಶಿರೂರಿನಲ್ಲಿ ನಡೆದ ಗುಡ್ಡ ಕಸಿತದ ಪರಿಣಾಮವಾಗಿ ಸಂತ್ರಸ್ತರಾದ ಪಕ್ಕದ ಇನ್ನೊಂದು ದಂಡೆಯಾದ ಉಳುವರೆ ಗ್ರಾಮದಲ್ಲಿ ಸಾಕಷ್ಟು ಹಾನಿಯಾಗಿದ್ದು, ಜಿಲ್ಲಾ ಕಸಾಪ ವತಿಯಿಂದ ಅಲ್ಲಿಯ ಸಂತ್ರಸ್ಥ ವಿದ್ಯಾರ್ಥಿಗಳಿಗೆ ಶುಕ್ರವಾರ ಪಾಠೋಪಕರಣ ಹಾಗೂ ಅಗತ್ಯ ಸಾಮಗ್ರಿಗಳ ನೆರವು ನೀಡಿದರು. ಉಳುವರೆ ಗ್ರಾಮದ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ದುರಂತದಲ್ಲಿ ಸಂತ್ರಸ್ಥರಾಗಿದ್ದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎನ್. ವಾಸರೆ, ತಾಲೂಕು ಅಧ್ಯಕ್ಷ ಗೋಪಾಲಕೃಷ್ಣ ನಾಯಕ ನೇತೃತ್ವದಲ್ಲಿ ದಾನಿಗಳಿಂದ ಒಂದಿಷ್ಟು ಶಾಲಾ ಸಾಮಗ್ರಿಗಳನ್ನು ಸಂಗ್ರಹಿಸಿ ಅದನ್ನ ಸಂತ್ರಸ್ತ ವಿದ್ಯಾರ್ಥಿಗಳಿಗೆ ವಿತರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಾಯಿ ಗಾಂವಕರ, ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಪಿ.ಆರ್. ನಾಯ್ಕ, ಹೊನ್ನಾವರ ತಾಲೂಕು ಘಟಕದ ಅಧ್ಯಕ್ಷ ಎಸ್. ಎಚ್ ಗೌಡ, ಜಿಲ್ಲಾ ಸಮಿತಿಯ ಸದಸ್ಯ ಡಾ. ವೆಂಕಟೇಶ ನಾಯ್ಕ, ಪಿ.ಎಮ್. ಮುಕ್ರಿ, ಹಿರಿಯ ಸಾಹಿತಿ ಬೀರಣ್ಣ ಎಂ. ನಾಯಕ, ಪ್ರಮುಖರಾದ ಪ್ರಕಾಶ ಕುಂಜಿ, ಎಂ.ಬಿ. ಆಗೇರ, ಸುಜಿತ್ ನಾಯ್ಕ, ಎಸ್. ಪ್ರಕಾಶ ಶೆಟ್ಟಿ, ಟಿ.ಎಸ್. ಬಾಲಮಣಿ, ಮೋಹನ ಹಲವಾಯಿ, ಕೀರ್ತಿ ಗಾಂವಕರ, ಮುಸ್ತಾಕ ಶೇಖ್, ಅನಿಲ ದಂಡಗಲ, ಅನಿಲ ನಾಯ್ಕರ, ಫ್ರಾನ್ಸಿಸ್ ಮಸ್ಕರಿನಸ್, ವಾಸರಕುದ್ರಿಗೆ ಗ್ರಾ.ಪಂ. ಅಧ್ಯಕ್ಷ ಪ್ರದೀಪ ನಾಯಕ, ಶಾಲಾ ಶಿಕ್ಷಕಿ ಸಂಧ್ಯಾ ನಾಯ್ಕ ಇತರರಿದ್ದರು.

ಸರಕಾರ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಹಾವೇರಿ: ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ನೇತೃತ್ವದ ಎನ್ ಡಿ ಎ ಸರಕಾರ ಮೊನ್ನೆ ಮಂಡಿಸಿರುವ ಕೇಂದ್ರ ಬಜೆಟ್ ನಲ್ಲಿ ರಾಜ್ಯಕ್ಕೆ ನಯಾ ಪೈಸೆ ಕೂಡಾ ನೀಡಿಲ್ಲ ಇದು ಖಂಡನೀಯ ಎಂದು ಹಾವೇರಿ ಜಿಲ್ಲಾ ಕಾಂಗ್ರೆಸ್ ಪಕ್ಷದವರು ಶಹರ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಕಾಲಿ ಚಂಬು ಹಿಡಿದು ಕೇಂದ್ರ ಸರಕಾರದ ಮಲತಾಯಿ ದೋರಣೆ ವಿರುದ್ದ ಶನಿವಾರ ಬೃಹತ್ ಪ್ರತಿಭಟನೆ ನಡೆಸಿದರು. ಮೈಲಾರ ಮಹದೇವಪ್ಪ ವೃತ್ತದಿಂದ ಪಾದಯಾತ್ರೆ ಆರಂಭಿಸಿ ಹೊಸಮನಿ ವೃತ್ತಕ್ಕೆ ಆಗಮಿಸಿ ಕೇಂದ್ರ ಸರಕಾರ ವಿರುದ್ಧ ಧಿಕ್ಕಾರ ಕೂಗಿದರು. ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ ಕೇಂದ್ರ ಸರಕಾರ ರಾಜ್ಯಕ್ಕೆ ಮಲತಾಯಿ ದೋರಣೆ ಮಾಡುತ್ತಿದೆ. ಕರ್ನಾಟಕಕ್ಕೆ ಒಂದು ನಯಾ ಪೈಸಾ ಕೂಡಾ ನೀಡಿಲ್ಲ. ಕಳೆದ ಹತ್ತು ವರ್ಷಗಳಿಂದ ರಾಜ್ಯದ ಜಿಎಸ್ಟಿ ಪಾಲನ್ನು ನೀಡದೇ ಸಂವಿಧಾನ ವಿರೋಧ ಕೆಲಸ ಮಾಡಿಕೊಂಡು ಬಂದಿದ್ದಾರೆ. ದ್ವೇಷ ರಾಜಕಾರಣ ನಿಲ್ಲಿಸಿ ರಾಜ್ಯ ಪಾಲನ್ನು ನೀಡಬೇಕು. ಬಿಜೆಪಿ ಸುಳ್ಳಿನ ಪಕ್ಷ ಎಂದು ಗಂಭೀರ ಆರೋಪ ಮಾಡಿದರು. ಮಾಜಿ ಶಾಸಕ ಕಾಂಗ್ರೆಸ್ ಮುಖಂಡ ನೆಹರು ಓಲೇಕಾರ ಮಾತನಾಡಿ ಬಿಜೆಪಿ ಪಕ್ಷವನ್ನು ಹತ್ತಿರಲ್ಲಿ ನೋಡಿದ್ದೇನೆ. ಸುಳ್ಳನ್ನು ಹತ್ತುಸಾರೆ ಹೇಳಿ ಸತ್ಯ ಅನ್ನುವ ಪ್ರಜಾ ವಿರೋಧಿ ಪಕ್ಷ ಇವರನ್ನು ನಂಬಬೇಡಿ ಎಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ನಗರ ಮಾಜಿ. ಜಿ.ಪಂ ಅಧ್ಯಕ್ಷ ಕೊಟ್ರೇಶಪ್ಪ ಬಸೇಗಣ್ಣಿ, ನಗರಪ್ರಾಧಿಕಾರ ಅಧ್ಯಕ್ಷರಾದ ಎಸ್. ಎಪ್.ಎನ್ ಗಾಜಿಗೌಡ್ರ, ಕಾಂಗ್ರೆಸ್ ಮುಖಂಡರಾದ ಎಂ.ಎಂ ಹಿರೇಮಠ, ಎಂ.ಎನ್ ಮೈದೂರ, ಪ್ರಭುಗೌಡ ಬಿಷ್ಟನಗೌಡ್ರ, ಚಂದ್ರಶೇಖರ ಮುದಕಣ್ಣನವರ ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಧಾರವಾಡದಲ್ಲಿ ಪಂಜಿನ ಮೆರವಣಿಗೆ

ಧಾರವಾಡ: 25 ನೇ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಧಾರವಾಡದ ಉಳವಿಚನ್ನಬಸವೇಶ್ವರ ದೇವಸ್ಥಾನದಿಂದ ಕಾರ್ಗಿಲ ಸ್ಥೂಪದವರೆಗೆ ಭಾರತೀಯ ಜನತಾ ಪಕ್ಷದ ಯುವಮೋರ್ಚಾ ಕಾರ್ಯಕರ್ತರು ಹಾಗೂ ಬಿಜೆಪಿಯ ಹಿರಿಯ ಮುಖಂಡರು ಪಂಜಿನ ಮೆರವಣಿಗೆ ನಡೆಸಿ,ಹುತಾತ್ಮ ವೀರಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಿ ನಮನಗಳನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾಜಿಮಹಾಪೌರರು ಈರೇಶ ಅಂಚಟಗೇರಿ ಮಾತನಾಡಿ, ಕಾರ್ಗಿಲ ಯುದ್ದದಲ್ಲಿ ಉಗ್ರರ ವೇಷದಲ್ಲಿ ಬಂದ ಪಾಕಿಸ್ತಾನಿ ಸೈನಿಕರನ್ನ ಸದೆಬಡೆದು ಭಾರತ ದಿಗ್ವಿಜಯ ಸಾಧಿಸಿದ್ದು, ಇಂದಿಗೆ 25 ವರ್ಷಗಳು ಸಂದಿವೆ ಎಂದು ಹೇಳಿದರು. ಮಾಜಿಮಹಾಪೌರರು ಈರೇಶ ಅಂಚಟಗೇರಿ , ಟಿ.ಎಸ್.ಪಾಟೀಲ, ವಿಜಯಾನಂದ ಶೆಟ್ಟಿ, ಶಕ್ತಿ ಹಿರೇಮಠ , ಬಸವರಾಜ ಗರಗ, ಪವನ ಥಿಟೆ, ರಾಹುಲ ಮಲ್ಲಿಗವಾಡ, ಹಾಗೂ ಯುವಮೋರ್ಚಾ ಕಾರ್ಯಕರ್ತರು ಉಪಸ್ಥಿತರಿದ್ದರು.

ಮನೆ ಗೋಡೆ ಕುಸಿತ: ಓರ್ವ ಸಾವು

ಧಾರವಾಡ: ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಅಡುಗೆ ಮಾಡುತ್ತಿದ್ದ ಸಮಯದಲ್ಲಿ ಮನೆಯೊಂದು ಕುಸಿದ ಪರಿಣಾಮ ಮನೆ ಯಜಮಾನ ಸಾವಿಗೀಡಾಗಿದ್ದು, ಮತ್ತಿಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ. ಧಾರವಾಡ ತಾಲೂಕಿನ ವೆಂಕಟಾಪೂರ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಘಟನೆಯಲ್ಲಿ ಯಲ್ಲಪ್ಪ ಇಟ್ಟಿಯವರ ಗಂಭೀರವಾಗಿ ಗಾಯಗೊಂಡಿದ್ದರು. ತಕ್ಷಣವೇ ಅವರನ್ನ ಆಸ್ಪತ್ರೆಗೆ ರವಾನೆ ಮಾಡಲಾಗಿತ್ತಾದರೂ, ಚಿಕಿತ್ಸೆ ಫಲಿಸದೇ ಸಾವಿಗೀಡಾಗಿದ್ದಾರೆ. ಘಟನೆಯಲ್ಲಿ ಯಲ್ಲಪ್ಪ ಅವರ ಮಡದಿ ಹನುಮವ್ವ ಮತ್ತು ಮಗಳು ಯಲ್ಲವ್ವ ಗಾಯಗೊಂಡಿದ್ದು, ಧಾರವಾಡ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ. ಗರಗ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಕಿರುಕುಳ: ಮಹಿಳೆಯಿಂದ ದೂರು ದಾಖಲು

ಕಲಘಟಗಿ: ಮುಸ್ಲಿಂ ಸಮುದಾಯದ ವ್ಯಕ್ತಿಯೋರ್ವನು ಮತಾಂದರ ಹೆಸರಿನಲ್ಲಿ ಜೈನ್ ಮಹಿಳೆಯನ್ನ ಮದುವೆಯಾಗಿ ಕಿರುಕುಳ ನೀಡುತ್ತಿದ್ದಾನೆ ಎಂದು ಆರೋಪಿಸಿ ಸಂತ್ರಸ್ತೆ ಮಹಿಳೆ ಕಲಘಟಗಿ ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾಳೆ. ಬೆಂಗಳೂರು ಕನಕನಗರ ನಿವಾಸಿ ಮುಜಾಹಿದ್ ಖಾನ್. ಕೆ(48) ಎಂಬಾತನು ಕಲಘಟಗಿ ಸಂತ್ರಸ್ತೆ ಮಹಿಳೆ ಅಶ್ವಿನಿ ಪದ್ಮರಾಜ ಜೈನ್(33) ಇವಳನ್ನು 2017 ಅಕ್ಟೋಬರ್ ತಿಂಗಳಲ್ಲಿ ಒತ್ತಾಯ ಪೂರ್ವಕವಾಗಿ ಮುಸ್ಲಿಂ ಧರ್ಮಕ್ಕೆ ಮತಾಂದರ ವಾಗುವಂತೆ ಕಿರುಕುಳನೀಡಿ ಮದುವೆ ಮಾಡಿಕೊಂಡು ನಂತರದಲ್ಲಿ ತಮ್ಮ ನಿವಾಸದಲ್ಲಿ ಮಹಿಳೆಯೆಗೆ ಅವಾಚ್ಯ ಶಬ್ದಗಳಿಂದ ನಿಂದಿಸು ವುದಲ್ಲದೆ ಸಂತ್ರಸ್ತೆ ಮಹಿಳೆಯನ್ನ ದೈಹಿಕ ಹಾಗೂ ಮಾನಸಿಕವಾಗಿ ತೊಂದರೆ ನೀಡುತ್ತಿರುವುದರಿಂದ ಮನನೊಂದ ಮಹಿಳೆ 2024 ರ ಜೂನ್ 10 ರಂದು ಕಲಘಟಗಿ ನ್ಯಾಯಾಲಯ ಮಟ್ಟಿಲೇರಿದ್ದಳು. ನ್ಯಾಯಲಯ ಆವರಣ ಸೇರಿದಂತೆ ಮಹಿಳೆಯ ಮನೆಗೆ ನುಗ್ಗಿ ಜೀವಬೆದರಿಕೆ ಹಾಕುವ ಮೂಲಕ ಸಹಿತ ಮುಜಾಹಿದ್ ಖಾನ್. ಕೆ ತೊಂದರೆ ಕೊಡುತ್ತಿದ್ದಾನೆ. ಈ ಕುರಿತು ಕಲಘಟಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಕೊರವರ್ ಅವರಿಗೆ ಶಿಕ್ಷಕ ರತ್ನ ಪ್ರಶಸ್ತಿ

ಅಣ್ಣಿಗೇರಿ: ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ,ರಾಜ್ಯ ಮಟ್ಟದ ದಿ ಬೆಸ್ಟ್ ಟೀಚರ್ ಪ್ರಶಸ್ತಿ, ಕನ್ನಡ ಪ್ರಶಸ್ತಿ, ನಿಧಿ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿ ಜೋತೆ– ಜೋತೆಗೆ ರಾಜ್ಯ ಮಟ್ಟದ ಶಿಕ್ಷಕ ರತ್ನ ಪ್ರಶಸ್ತಿಯೂ ಅಣ್ಣಿಗೇರಿ ಶ್ರೀ ಅಮೃತೇಶ್ವರ್ ಸಂಯುಕ್ತ ಪದವಿ ಪೂರ್ವ ಕಾಲೇಜ್ ನ ಪ್ರೌಢ ವಿಭಾಗದ ಕನ್ನಡ ಶಿಕ್ಷಕರಾದ ಗಂಗಾಧರ್ ಕೊರವರವರಿಗೆ ಲಭಿಸಿದೆ. ಈ ವರ್ಷದ ಇವರ ಶೈಕ್ಷಣಿಕ ಸಾಧನೆಯನ್ನು ಮನಗಂಡು ಕರ್ನಾಟಕ ವಿಶ್ವ ವಿದ್ಯಾಲಯದ ಕನಕ ಅಧ್ಯಯನ ಪೀಠ ಧಾರವಾಡ ಹಾಗೂ ಚೇತನ್ ಪೌಂಡೇಶನ್ ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ ನುಡಿ ಸಡಗರ ಸಂಭ್ರಮ ಕಾರ್ಯಕ್ರಮ ನಿಮಿತ್ಯ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಪ್ರಶಸ್ತಿಗೆ ಭಾಜನರಾದ ಶಿಕ್ಷಕರಿಗೆ ಶಿಕ್ಷಣ ಸಂಸ್ಥೆ ಚೇರ್ಮನರಾದ ಆರ್ ಎ ದೇಸಾಯಿ, ಆಡಳಿತ ಮಂಡಳಿ ಎಲ್ಲ ಸದಸ್ಯರು ಹಾಗೂ ಎಲ್ಲ ವಿಭಾಗದ ಬೋಧಕರು ಸಿಬ್ಬಂದಿ ಯವರು ಅಭಿನಂದನೆ ಸಲ್ಲಿಸಿದ್ದಾರೆ.

ಸಚಿವ ಸಂತೋಷ ಲಾಡ್ ಜಿಲ್ಲಾ ಪ್ರವಾಸ

ಧಾರವಾಡ: ರಾಜ್ಯ ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಲಾಡ್ ಅವರು ಜುಲೈ 29 ರಂದು ಧಾರವಾಡ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಜುಲೈ 28 ರಾತ್ರಿ ಬೆಂಗಳೂರಿನಿಂದ ಹೊರಡುವ ಅವರು ಜುಲೈ 29 ರಂದು ಬೆಳಿಗ್ಗೆ ಹುಬ್ಬಳ್ಳಿಗೆ ಆಗಮಿಸುವರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಬೆಳಿಗ್ಗೆ 10:30 ಗಂಟೆಗೆ ಹುಬ್ಬಳ್ಳಿ ಸವಾಯಿ ಗಂದರ್ವ ಹಾಲ್ ದಲ್ಲಿ ಆಯೋಜಿಸಿರುವ ಪತ್ರಿಕಾ ದಿನಾಚರಣೆಯಲ್ಲಿ ಭಾಗವಹಿಸುವರು. ನಂತರ ಅವರು ಮಧ್ಯಾಹ್ನ 12:30 ಗಂಟೆಗೆ ಧಾರವಾಡ ತಾಲೂಕಿನ ವೆಂಕಟಾಪುರ ಗ್ರಾಮಕ್ಕೆ ಭೇಟಿ ನೀಡುವರು. ಅತಿ ಮಳೆಯಿಂದ ಗೋಡೆ ಕುಸಿದು ಮೃತಪಟ್ಟ ಗ್ರಾಮದ ರೈತನ ಮನೆಗೆ ಭೇಟಿ ನೀಡಿ, ಅವರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಹುಬ್ಬಳ್ಳಿ ಕೆ.ಎಂ.ಸಿ ಯಲ್ಲಿ ಕರ್ನಾಟಕ ವೈದ್ಯಕೀಯ ಮಹಾ ವಿದ್ಯಾಲಯದ ಪ್ರಗತಿ ಪರಿಶೀಲನಾ ಸಭೆ ಜರುಗಿಸುವರು. ಅಂದು ಧಾರವಾಡದಲ್ಲಿ ವಾಸ್ತವ್ಯ ಮಾಡುವರು ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಇಂದ್ರಿಯಗಳ ನಿಗ್ರಹವೇ ತಪಸ್ಸು

ಗುಂದ ಸೀಮೆ, ಭಾಪಖಂಡ ಭಾಗದ ಶಿಷ್ಯರಿಂದ ಗುರು ಸೇವೆ | ಸ್ವರ್ಣವಲ್ಲೀ ಶ್ರೀಗಳ ಆಶೀರ್ವಚನ

ಶಿರಸಿ: ಇಂದ್ರಿಯಗಳ ಭೋಗದಿಂದ ಬರುವ ಸುಖ ತಾತ್ಕಾಲಿಕ, ಇಂದ್ರಿಯಗಳ ನಿಯಮನದಿಂದ ಶಾಶ್ವತವಾದ ನೆಮ್ಮದಿ ಹಾಗೂ ಸತ್ವಿಕವಾದ ನೆಮ್ಮದಿ ಎಂದು ಸೋಂದಾ ಸ್ವರ್ಣವಲ್ಲೀ ಮಹಾ ಸಂಸ್ಥಾನದ ಮಠಾಧೀಶ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮೀಜಿ ನುಡಿದರು.

ಅವರು ಸ್ವರ್ಣವಲ್ಲೀ ಮಠದಲ್ಲಿ ನಡೆಯುತ್ತಿರುವ ಉಭಯ ಶ್ರೀಗಳ ಚಾತುರ್ಮಾಸ್ಯ ವ್ರತಾಚರಣೆಯಲ್ಲಿ ಗುಂದ ಸೀಮೆ, ಭಾಪಖಂಡ ಭಾಗದ ಶಿಷ್ಯರು ಸಲ್ಲಿಸಿದ ಗುರು ಸೇವೆಯನ್ನು ಸ್ವೀಕರಿಸಿ ಆಶೀರ್ವಚನ ನುಡಿದರು.

ಪ್ರತಿಯೊಂದಕ್ಕೂ ನಮ್ಮ ಮನಸ್ಸು ಮುಖ್ಯ ಕಾರಣ. ಅದನ್ನು ನಿಗ್ರಹಿಸಿದರೆ ಎಲ್ಲವನ್ನೂ ನಿಗ್ರಹಿ ಸುವ ಸಾಮರ್ಥ್ಯ ನಮ್ಮಲ್ಲಿ ಬರುತ್ತದೆ. ನಮ್ಮನ್ನು ಧರ್ಮಾಚರಣೆಯಲ್ಲಿ ತೊಡಗಿಸುತ್ತದೆ ಎಂದರು.

ಮಠಕ್ಕೆ ಬಂದು ಗುರುಗಳ ದರ್ಶನ ಮಾಡುವುದು ಮತ್ತು ಮಾರ್ಗದರ್ಶನ ಪಡೆಯುವುದು ನಮ್ಮ ಜೀವನದಲ್ಲಿ ತಪಸ್ಸಿನ ಸಂದೇಶವನ್ನು ಪಡೆಯಲು, ತಪಸ್ಸಿನ ಮಾರ್ಗದಲ್ಲಿ ಹೋಗುವುದನ್ನು ರೂಢಿಸಿಕೊಳ್ಳಲು. ಲೋಕದಲ್ಲಿ ಪ್ರತಿಯೊಂದು ಪ್ರಾಣಿಗಳು ಅವರವರ ಇಂದ್ರಿಯಗಳ ಆಕರ್ಷಣೆ ಯಿಂದಾಗಲೇ ಅವು ತಮ್ಮ ಪ್ರಾಣವನ್ನು ಬಿಡುತ್ತಾರೆ. ಇಂದ್ರಿಯಗಳ ಆಕರ್ಷಣೆಯನ್ನು ತಡೆಗಟ್ಟುವಲ್ಲಿ ಪ್ರಯತ್ನ ಬೇಕು. ಅದನ್ನು ತಡೆಗಟ್ಟಿದರೆ ತಪಸ್ಸಾಗುತ್ತದೆ. ನಮ್ಮ ಜೀವನದ ನಿಶ್ರೇಯಸ್ಸಿಗೂ ಕಾರಣವಾಗುತ್ತದೆ ಎಂದರು.

ಇಂದ್ರಿಯಗಳನ್ನು ಹರಿದು ಬಿಟ್ಟರೆ ಅದು ನರಕ. ಮಾನಸಿಕ, ದೈಹಿಕ ಆರೋಗ್ಯ ಕೆಡುತ್ತದೆ. ಇಂದ್ರಿಯಗಳನ್ನು ಹರಿ ಬಿಡುವುದರಿಂದ ಪಾಪಗಳು ಹೆಚ್ಚುತ್ತವೆ. ಎಲ್ಲಾ ಪಾಪಗಳಿಗೂ ಮೂಲ ಕಾರಣ ಇಂದ್ರಿಯಗಳನ್ನು ಹರಿದು ಬಿಡುವುದೇ ಆಗಿದೆ. ಇಂದ್ರಿಯಗಳ ಆಕರ್ಷಣೆಯಿಂದ ಅನೇಕ ತಪ್ಪು ಕಾರ್ಯಗಳು ಆಗುತ್ತವೆ. ಅನೇಕ ದುಷ್ಟ ಕೆಲಸಗಳಿಗೂ ಇದೆ ಕಾರಣ ಎಂದ ಅವರು, ಆದ್ದರಿಂದ ಇಂದ್ರಿಯ ನಿಗ್ರಹ ಮಾಡಿಕೊಳ್ಳುವುದರ ಮೂಲಕ ತಪಸ್ಸನ್ನು ಸಿದ್ಧಿಸಿಕೊಳ್ಳಬಹುದು ಎಂದರು. ಮೇಲ್ನೋಟಕ್ಕೆ ಸ್ವರ್ಗದ ಅನುಭವವಾದರೂ ಅದು ಶಾಶ್ವತವಲ್ಲ. ಆದರೆ ನಿಜವಾದ ಸ್ವರ್ಗ ಆನಂದದ ಅನುಭವ. ಮೇಲ್ನೋಟಕ್ಕೆ ಕಾಣುವ ಆನಂದದ ಅನುಭವ ಅಲ್ಲ ಎಂದರು. ಇಂದ್ರಿಯಗಳ ನಿಯಮವೇ ತಪಸ್ಸು, ಸ್ವರ್ಗ, ಸಿದ್ಧಿ ಎಂದು ತಿಳಿಸಿದರು.

ಇಂದ್ರಿಯಗಳ ನಿಗ್ರಹವನ್ನು ಸಂಪಾದಿಸಿಕೊಳ್ಳಲು ಬೆಳಗ್ಗೆ ಮಧ್ಯಾಹ್ನ ಸಂಜೆ ಸಕಾಲದಲ್ಲಿ ಅನುಷ್ಠಾನಕ್ಕೆ ತೊಡಗುವುದು ಒಳ್ಳೆಯ ಸಾಧನ ಎಂದರು. ಸಂಧ್ಯಾಕಾಲದಲ್ಲಿ ಉತ್ತಮ ಆಚರಣೆ ಇಟ್ಟುಕೊಳ್ಳಬೇಕು, ಅನುಷ್ಠಾನಕ್ಕೆ ತೊಡಗಬೇಕು. ಸಂಧ್ಯಾಕಾಲದಲ್ಲಿ ಜಪ ಧ್ಯಾನ ಪೂಜೆ ಮಾಡಿದರೆ ಮನಸ್ಸು ಬೇಗ ಹಿಡಿತಕ್ಕೆ ಸಿಕ್ಕುತ್ತದೆ. ಮನಸ್ಸನ್ನು ನಿಗ್ರಹ ಮಾಡುಲು ಈ ಕಾಲ ಉತ್ತಮ ಕಾಲ. ಆದ್ದರಿಂದ ಪ್ರತಿಯೊಬ್ಬರು ಈ ಕಾಲವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಆಶಿಸಿದರು.

ಈ ವೇಳೆ ಕಿರಿಯ ಶ್ರೀಗಳಾದ ಆನಂದಬೋಧೇಂದ್ರ ಸರಸ್ವತೀ ಸ್ವಾಮಿಗಳು ಸಾನ್ನಿಧ್ಯ ನೀಡಿದ್ದರು. ಸೀಮಾ ಅಧ್ಯಕ್ಷ ದತ್ತಾತ್ರೇಯ ಹೆಗಡೆ ತಮ್ಮಣಗಿ, ಶಿವಾನಂದ ಪಾಟೀಲ, ಮಾತೃಮಂಡಳಿಯ ಪ್ರಮುಖರಾದ ಸೀತಾ ದಾನಗೇರಿ, ವಿಶಾಲಾಕ್ಷಿ ಭಟ್ ಪಟೋಳಿ ಉಪಸ್ಥಿತರಿದ್ದರು.



ಮನಸ್ಸು ಒಂದನ್ನು ನಿಗ್ರಹಿಸಿದರೆ ಉಳಿದೆಲ್ಲ ಇಂದ್ರಿಯಗಳು ನಿಗ್ರಹಕ್ಕೆ ಬರುತ್ತದೆ. ಇಂದಿನ ಕಾಲದಲ್ಲಿ ಅನೇಕ ಮನೆಗಳಲ್ಲಿ ಸಂಧ್ಯಾವಂದನೆ ದೇವರ ಪೂಜೆಗಳನ್ನು ಬಿಡುತ್ತಿದ್ದಾರೆ ಅದು ಸರಿಯಲ್ಲ.
- ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಸ್ವರ್ಣವಲ್ಲೀ ಮಹಾ ಸಂಸ್ಥಾನ

ತೀರ್ಥಹಳ್ಳಿ ಶ್ರೀಮಠದ ಜೀರ್ಣೋದ್ಧಾರ ಸನ್ನಿಹಿತ

ಗೋಕರ್ಣ: ಅತಿ ವಿಶಿಷ್ಟ ತೀರ್ಥಹಳ್ಳಿ ಮಠದ ಜೀರ್ಣೋದ್ಧಾರದ ಕಾಲ ಸನ್ನಿಹಿತವಾಗಿದೆ. ಸಮರ್ಪಣಾ ಮನೋಭಾವದ ತಂಡ ಇದರ ಅಭಿವೃದ್ಧಿಗೆ ಟೊಂಕ ಕಟ್ಟಿದ್ದು, ಇಡೀ ಸಮಾಜ ಈ ಮಹತ್ಕಾರ್ಯದಲ್ಲಿ ಕೈಜೋಡಿಸಬೇಕು ಎಂದು ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀರಾಘವೇಶ್ವರ ಭಾರತೀ ಮಹಾಸ್ವಾಮೀಜಿ ಕರೆ ನೀಡಿದರು.

ಅಶೋಕೆಯ 'ಗುರುದೃಷ್ಟಿ'ಯಲ್ಲಿ ಅನಾವರಣ ಚಾತುರ್ಮಾಸ್ಯ ಕೈಗೊಂಡಿರುವ ಪರಮಪೂಜ್ಯರು ಏಳನೇ ದಿನದ ಪ್ರವಚನ ಅನುಗ್ರಹಿಸಿದರು.

ತೀರ್ಥಹಳ್ಳಿ ಮಠದ ಮಹತಿಯ ಅನಾವರಣ ಗೊಂಡಿದೆ. ಅಪೂರ್ವ ಸೇವೆಯನ್ನು ಸಲ್ಲಿಸಿದವರನ್ನು ಸಮಾಜ ಗುರುತಿಸಬೇಕು ಎನ್ನುವುದು ನಮ್ಮ ಅಪೇಕ್ಷೆ. ಇಂದು ವ್ಯಕ್ತಿ ಮತ್ತು ವಿಷಯದ ಎರಡನ್ನೂ ಅನಾವರಣ ಮಾಡಿದಂತಾಗಿದೆ. ಶ್ರೀಮಠಕ್ಕೆ ದೊಡ್ಡ ಸೇವೆ ಸಲ್ಲಿಸಿದ, ಶ್ರೀಮಠದ ಶ್ಯಾನುಭಾಗರಾಗಿ, ಶ್ರೀಮಠದ ಧ್ವನಿಯಾಗಿ ಕೆಲಸ ಮಾಡಿದ ಶಿಷ್ಯರನ್ನು ಅನಾವರಣ ಅತಿಥಿಯಾಗಿ ಆಹ್ವಾನಿಸಿರುವುದು ಅರ್ಥಪೂರ್ಣ ಎಂದರು.

ದೊಡ್ಡಗುರುಗಳು ತಮ್ಮ ಜೀವಿತಾವಧಿಯ ಬಹುಕಾಲವನ್ನು ತೀರ್ಥಹಳ್ಳಿ ಮಠದಲ್ಲಿ ಕಳೆದಿದ್ದಾರೆ. ಮೂಲಮಠ, ಪ್ರಧಾನ ಮಠವನ್ನು, ಪ್ರಾಚೀನ ಕೆಕ್ಕಾರು ಮಠ, ನಮ್ಮ ಪರಂಪರೆಯಲ್ಲಿ ವಿಲೀನವಾದ ಬಾನ್ಕುಳಿ ಮಠ, ಅವರೇ ಸ್ಥಾಪನೆ ಮಾಡಿದ ಮಾಣಿ ಮಠ ಎಲ್ಲವನ್ನೂ ಬಿಟ್ಟು ತೀರ್ಥಹಳ್ಳಿಯಲ್ಲಿ ನೆಲೆಸಿದರು. ಇಡೀ ಜೀವನವನ್ನೇ ಕಳೆದದ್ದು ಅದ್ಭುತ. ಒಂದೊಂದು ತಲೆಮಾರು ಒಂದೊಂದು ಕಡೆ ಸಾಗುತ್ತದೆ ಎನ್ನುವುದಕ್ಕೆ ಇದು ನಿದರ್ಶನ ಎಂದು ಹೇಳಿದರು.

ಮೊಟ್ಟಮೊದಲು ಗುರುದರ್ಶನವಾದದ್ದು ಕಿರೀಟಧಾರಿ ಗಳಾಗಿದ್ದಾಗ ಕರೂರು ಸೀಮೆಯಲ್ಲಿ. ತೀರ್ಥಹಳ್ಳಿ ಮಠದಲ್ಲಿ 36ನೇ ಪೀಠಾಧಿಪತಿಗಳ ಆಯ್ಕೆಗೆ ನಡೆದ ಸಭೆಗೆ ನಾವೂ ಸಾಕ್ಷಿಗಳಾಗಿದ್ದೆವು. ದೊಡ್ಡಗುರುಗಳ ಪರೀಕ್ಷೆಗೆ, ಆಶೀರ್ವಾದಕ್ಕೆ ಅನುಗ್ರಹಕ್ಕೆ ಪಾತ್ರರಾದ ಕ್ಷಣಗಳನ್ನು ನೆನಪಿಸಿ ಕೊಂಡರು. ಹೀಗೆ ಸರಣಿ ಪರೀಕ್ಷೆಗಳನ್ನು ದೊಡ್ಡಗುರುಗಳು ಮಾಡುತ್ತಿದ್ದ ಸಂದರ್ಭದಲ್ಲಿ ಅನೇಕ ಬಾರಿ ಭೇಟಿ ನೀಡಿದ್ದೆವು ಎಂದು ಸ್ಮರಿಸಿಕೊಂಡರು.

ನದಿ ತೀರ, ಪುಣ್ಯ ಕ್ಷೇತ್ರ, ಪುಣ್ಯಭೂಮಿ, ತಪಸ್ಸಿಗೆ ಯೋಗ್ಯವಾದ ಭೂಮಿ. ಒಂದೆಡೆ ಮಾಯಾಲೋಕ, ಇನ್ನೊಂದೆಡೆ ಬ್ರಹ್ಮಲೋಕ ಎಂಬಂತಿದೆ. ತೀರ್ಥಹಳ್ಳಿ ಪಟ್ಟಣದ ಹೃದಯಭಾಗದಲ್ಲೇ ಇದ್ದರೂ ತಪಸ್ಸಿಗೆ ಅತ್ಯಂತ ಪ್ರಶಸ್ತ ತಾಣ ಎಂದು ಬಣ್ಣಿಸಿದರು.

ತೀರ್ಥಹಳ್ಳಿ ಮಠಕ್ಕೆ ಹಳೆ ಚರಿತ್ರೆಯೂ ಇದೆ. ಹೊಸ ಇತಿಹಾಸವೂ ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ಶಿಷ್ಯರು ಬರದೇ ಇರುವ ಕಾರಣ, ಗುರುಗಳ ಆಗಮನ ಕಡಿಮೆಯಾಗಿದ್ದರಿಂದ ಸ್ವಲ್ಪ ಗ್ರಹಣ ತಲುಗಿದಂತಾಗಿದೆ. ಇದರ ಜೀರ್ಣೋದ್ಧಾರ ವಾಗಬೇಕು. ಇದಕ್ಕೆ ಸೀಮಿತ ಸಂಖ್ಯೆಯ ಶಿಷ್ಯರು ಟೊಂಕ ಕಟ್ಟಿ ನಿಂತಿರುವುದು, ದೃಢಸಂಕಲ್ಪ ತಾಳಿರುವುದು ಶ್ಲಾಘನೀಯ. ಇಡೀ ಸಮಾಜ ಇದಕ್ಕೆ ಕೈಜೋಡಿಸಬೇಕು. ಮುಂದಿಟ್ಟ ಹೆಜ್ಜೆ ಗುರಿ ಸೇರಿಸುತ್ತದೆ. ಹೊಸ ರೂಪ ಪಡೆದು ಇಡೀ ಸಮಾಜದ ಮುಂದೆ ಅನಾವರಣಗೊಳ್ಳುವ ಸುದಿನದ ಪ್ರತೀಕ್ಷೆಯಲ್ಲಿದ್ದೇವೆ ಎಂದರು.

ರಾಮಚಂದ್ರಾಪುರ ಮಂಡಲದ ತೀರ್ಥರಾಜ ಪುರ, ಭೀಮನಕೋಣೆ, ಪುರಪ್ಪೆಮನೆ, ಶಿವಮೊಗ್ಗ ಮತ್ತು ಕಾನುಗೋಡು ವಲಯಗಳ ಶಿಷ್ಯಭಕ್ತರು ಶನಿವಾರದ ಭಿಕ್ಷಾಸೇವೆ ನೆರವೇರಿಸಿದರು. ಹಲವು ವರ್ಷಗಳ ಕಾಲ ಶ್ರೀಮಠದ ಸೇವೆ ಸಲ್ಲಿಸಿದ ಮಾಜಿ ಶ್ಯಾನುಭಾಗರಾದ ಬಾಬು ನಾರಾಯಣ ಭಟ್ಟ ತೀರ್ಥಹಳ್ಳಿ ಮಠದ ಮಹತಿಗಳ ಅನಾವರಣ ಮಾಡಿದರು.

ಚಾತುರ್ಮಾಸ್ಯ ಸೇವಾ ಸಮಿತಿ ಅಧ್ಯಕ್ಷ ಮಂಜುನಾಥ ಸುವರ್ಣಗದ್ದೆ, ಕಾರ್ಯದರ್ಶಿ ಶ್ರೀಕಾಂತ ಪಂಡಿತ್, ಹವ್ಯಕ ಮಹಾಮಂಡಲ ಪ್ರಧಾನ ಕಾರ್ಯದರ್ಶಿ ಉದಯಶಂಕರ ಭಟ್ ಮಿತ್ತೂರು, ವಿವಿವಿ ಸಮಿತಿ ಪ್ರಧಾನ ಕಾರ್ಯದರ್ಶಿ ನಾಗರಾಜ ಭಟ್ ಪೆದಮಲೆ, ಹಿರಿಯ ಲೋಕಸಂಪರ್ಕಾಧಿಕಾರಿ ಜಿ.ಕೆ.ಹೆಗಡೆ, ಹರಿಪ್ರಸಾದ್ ಪೆರಿಯಾಪು, ಶ್ರೀಕಾರ್ಯದರ್ಶಿ ಜಿ.ಕೆ.ಮಧು, ವ್ಯವಸ್ಥಾಪಕ ಪ್ರಮೋದ್ ಮುಡಾರೆ, ಶಾಸ್ತ್ರಿಗಳಾದ ಸುಬ್ರಾಯ ಅಗ್ನಿಹೋತ್ರಿ, ವಿನಾಯಕ ಶಾಸ್ತ್ರಿ, ರಾಘವೇಂದ್ರ ಮಧ್ಯಸ್ಥ, ಮಹಾಮಂಡಲದ ಪದಾಧಿಕಾರಿಗಳಾದ ಕೇಶವ ಪ್ರಕಾಶ್ ಎಂ., ಪ್ರಸನ್ನ ಉಡುಚೆ, ಕಾರ್ಯದರ್ಶಿ ರುಕ್ಮಾವತಿ ರಾಮಚಂದ್ರ, ರಾಮಚಂದ್ರಾಪುರ ಮಂಡಲದ ಅಧ್ಯಕ್ಷರಾದ ಪ್ರಕಾಶ್ ಬೇರಾಳ, ಕಾರ್ಯದರ್ಶಿ ರಮೇಶ್ ಕಾನುನೋಡು ಮೋಹನ ಭಟ್ ಹರಿಹರ ಮತ್ತಿತರರು ಉಪಸ್ಥಿತರಿದ್ದರು.

ಬಾಲಕರ ವಸತಿ ನಿಲಯಕ್ಕೆ ಆಗ್ರಹ

ಗಜೇಂದ್ರಗಢ: ಪಟ್ಟಣದಲ್ಲಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯಕ್ಕೆ ಆಗ್ರಹಿಸಿ ಎಸ್‌ಎಫ್‌ಐ ಸಂಘಟನೆ ನೇತೃತ್ವದಲ್ಲಿ ಸಾವಿರಾರು ವಿದ್ಯಾರ್ಥಿಗಳು ಮಾನವ ಸರಪಳಿ ರಚಿಸಿ, ರಸ್ತೆ ತಡೆದು ಬೃಹತ್ ಪ್ರತಿಭಟನೆ ನಡೆಸಿದರು.

ಗಜೇಂದ್ರಗಡ ಶೈಕ್ಷಣಿಕವಾಗಿ ಬೆಳೆಯುತ್ತಿರುವ ಪಟ್ಟಣವಾಗಿದ್ದು, ಇಲ್ಲಿ ಪದವಿ ಪೂರ್ವ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಅಂದಾಜು 1500ಕ್ಕೂ ಹೆಚ್ಚು ಇದೆ. ಜೊತೆಗೆ 4 ಪಿಯು ಕಾಲೇಜಗಳು, ಒಂದು ಡಿಪ್ಲೊಮಾ ಕಾಲೇಜು. 4 ಡಿಗ್ರಿ ಕಾಲೇಜುಗಳಿದ್ದು, 1200ಕ್ಕೂ ಅಧಿಕ ವಿದ್ಯಾರ್ಥಿಗಳು ಪದವಿ ಶಿಕ್ಷಣ ಪಡೆಯುತ್ತಿದ್ದಾರೆ. ಇದರಲ್ಲಿ ಅರ್ದಕ್ಕಿಂತ ಹೆಚ್ಚು ಜನ ಬಾಲಕರು ವಿದ್ಯಾಭ್ಯಾಸ ಮಾಡುತ್ತಿದ್ದು ಈವರೆಗೂ ವಿದ್ಯಾರ್ಥಿಗಳಿಗೆ ವಸತಿ ನಿಲಯ ಇಲ್ಲದಿರುವುದು ತೊಂದರೆ ಅನುಭವಿಸುವಂತಾಗಿದೆ.

ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ತೀರಾ ಅಗತ್ಯವಿದ್ದು, ಹಾಸ್ಟೆಲ್ ಪ್ರಾರಂಭಿಸಲು ಶಾಸಕರು ಮತ್ತು ಅಧಿಕಾರಿಗಳು ಇಚ್ಛಾಶಕ್ತಿ ಪ್ರದರ್ಶಿಸಬೇಕಿದೆ. ವಿದ್ಯಾರ್ಥಿಗಳ ಹೋರಾಟಕ್ಕೆ ಕೃಷಿ ಕೂಲಿಕಾರರ ಸಂಘಟನೆಯ ಸಂಪೂರ್ಣ ಬೆಂಬಲ ನೀಡುತ್ತದೆ. ಅಲ್ಲದೇ ವಿವಿಧ ಸಂಘಟನೆಗಳು ಸಹ ಬೆಂಬಲ ವ್ಯಕ್ತಪಡಿಸುತ್ತಿವೆ ಎಂದರು.

ಮೆಟ್ರಿಕ್ ನಂತರದ ಬಾಲಕರ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್ ಪ್ರಾರಂಭಿಸಬೇಕು, ಮೆಟ್ರಿಕ್ ನಂತರದ ಬಾಲಕರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್ ಪ್ರಾರಂಭಿಸಬೇಕು, ಅಲ್ಪಸಂಖ್ಯಾತ ಇಲಾಖೆಯ ಬಾಲಕರ ಬಾಲಕಿಯರ ಹಾಸ್ಟೆಲ್ ಪ್ರಾರಂಭಿಸಬೇಕು, ಸ್ವಂತ ಕಟ್ಟಡ ಇಲ್ಲದ ಬಾಲಕಿಯರ ಮತ್ತು ಬಾಲಕರ ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ಮುಂದಾಗಬೇಕು, ಹಾಸ್ಟೆಲ್ ಗಳಲ್ಲಿ ಲೈಂಗಿಕ ಕಿರುಕುಳ ವಿರೋಧಿ ನಿಯಂತ್ರಣ ಸಮಿತಿ ರಚಿಸಬೇಕು, ಅರ್ಜಿ ಹಾಕಿದ ಎಲ್ಲಾ ವಿದ್ಯಾರ್ಥಿಗಳಿಗೂ ಹಾಸ್ಟೆಲ್ ನೀಡಬೇಕಿದೆ ಎಂದು ಒತ್ತಾಯಿಸಿದರು.

ಪಟ್ಟಣದ ವಿವಿಧ ಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳು ಗಂಟೆಗಟ್ಟಲೇ ಶ್ರೀ ಕಾಲಕಾಲೇಶ್ವರ ವೃತ್ತದಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಶಿರಸ್ತೆದಾರ ಪಿ.ಬಿ. ಶಿಂಗ್ರಿ, ಪಿಎಸ್‌ಐ ಸೋಮನಗೌಡ ಗೌಡರ ಆಗಮಿಸಿ, ಸಂಚಾರಕ್ಕೆ ಅವಕಾಶ ಕಲ್ಪಿಸಿ ಎಂದು ಕೇಳುತ್ತಿದ್ದಂತೆ, ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ಮಾತಿನ ಚಕುಮಕಿ ಏರ್ಪಟ್ಟಿತು. ಬಳಿಕ ತಹಸೀಲ್ದಾರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಗಣೇಶ ರಾಠೋಡ, ಚಂದ್ರು ರಾಠೋಡ, ಬಾಲು ರಾಠೋಡ, ಪ್ರದೀಪ್ ಎಂ, ಅನೀಲ್, ಸುನೀಲ್, ಬಸವರಾಜ, ಮಂಜು ಸೇರಿದಂತೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಅದಾಲತ್, ಮಧ್ಯಸ್ಥಿಕೆ ಅರಿವು ಅಗತ್ಯ

ಧಾರವಾಡ: ನ್ಯಾಯಾದಾನದ ವಿಳಂಬತೆಯನ್ನು ತಪ್ಪಿಸಲು ಮತ್ತು ನ್ಯಾಯಾಲಯಗಳ ಕಾರ್ಯ ಒತ್ತಡ ಕಡಿಮೆ ಮಾಡುವಲ್ಲಿ ಮಧ್ಯಸ್ಥಿಕೆ ಕೇಂದ್ರಗಳು ಪರಿಣಾಮಕಾರಿಯಾದ ಪಾತ್ರ ನಿರ್ವಹಿಸುತ್ತವೆ. ನ್ಯಾಯಾಧೀಶರು, ನ್ಯಾಯವಾದಿಗಳು ಕಕ್ಷಿದಾರರಿಗೆ ತ್ವರಿತ ನ್ಯಾಯಾಲಯ, ಲೋಕ ಅದಾಲತ ಮತ್ತು ಮಧ್ಯಸ್ಥಿಕೆ ಕೇಂದ್ರಗಳ ಬಗ್ಗೆ ಅರಿವು ಮೂಡಿಸಬೇಕೆಂದು ಧಾರವಾಡ ಜಿಲ್ಲಾ ಪ್ರಧಾನ ಹಾಗೂ ಸತ್ರ ನ್ಯಾಯಾಧೀಶೆ ಬಿ.ಜಿ.ರಮಾ ಅವರು ಹೇಳಿದರು.

ಧಾರವಾಡ ಜಿಲ್ಲಾ ಪಂಚಾಯತ ಸಭಾಗಂಣದಲ್ಲಿ ಕರ್ನಾಟಕ ಮಧ್ಯಸ್ಥಿಕೆ ಕೇಂದ್ರ, ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ, ಉಚ್ಚ ನ್ಯಾಯಾಲಯ ಕಾನೂನು ಸೇವಾ ಸಮಿತಿ, ಧಾರವಾಡ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಧಾರವಾಡ ವಕೀಲರ ಸಂಘದ ಆಶ್ರಯದಲ್ಲಿ ಗದಗ ಮತ್ತು ಧಾರವಾಡ ಜಿಲ್ಲೆಗಳ ನ್ಯಾಯವಾದಿಗಳಿಗೆ ಮಧ್ಯಸ್ಥಿಗಾರಿಕೆ ಕುರಿತು ಪುನರ್ ಮನನದ ಎರಡು ದಿನಗಳ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದ ಅವರು, ಮಧ್ಯಸ್ಥಿಗಾರಿಕೆ ಒಂದು ಕೌಶಲ. ಕಾನೂನು ಚೌಕಟ್ಟಿನಲ್ಲಿ ಪ್ರಕರಣಗಳನ್ನು ಸುಗಮವಾಗಿ ಪರಿಹರಿಸಬೇಕು. ಜನರ ಮಧ್ಯದಲ್ಲಿರುವ ವಿವಾದಗಳನ್ನು ಸೌಹಾರ್ದಯುತವಾಗಿ ಬಗೆ ಹರಿಸಬೇಕು ಈ ನಿಟ್ಟಿನಲ್ಲಿ ಮಧ್ಯಸ್ಥ ನ್ಯಾಯವಾದಿಗಳ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ನ್ಯಾಯದಾನದಲ್ಲಿ ವಿಳಂಬವಾಗದಂತೆ ಗಮನ ಹರಿಸಲು ಜನತಾ ನ್ಯಾಯಾಲಯ, ತ್ವರಿತ ನ್ಯಾಯಾಲಯ ಮತ್ತು ಮಧ್ಯಸ್ಥಗಾರಿಕೆ ಕೇಂದ್ರಗಳನ್ನು ಕಾನೂನು ಚೌಕಟ್ಟಿನಲ್ಲಿ ನ್ಯಾಯದಾನ ವ್ಯವಸ್ಥೆ ಮಾಡಿದೆ ಎಂದರು. ಅತಿಥಿಗಳಾಗಿದ್ದ ಕರ್ನಾಟಕ ಬಾರ್ ಕೌನ್ಸಿಲ್ ಸದಸ್ಯ ವಿ.ಡಿ.ಕಾಮರಡ್ಡಿ ಹಾಗೂ ಧಾರವಾಡ ವಕೀಲರ ಸಂಘದ ಅಧ್ಯಕ್ಷ ಅಶೋಕ ಏಣಗಿ ಅವರು ಮಾತನಾಡಿದರು. ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಮಾಜಿ ಅಧ್ಯಕ್ಷ ಆನಂದಕುಮಾರ ಮಗದುಮ್ ಅವರು ಕಾರ್ಯಾಗಾರ ಉದ್ಘಾಟನೆ ಸಮಾರಂಭದ ಅಧ್ಯಕ್ಷತೆ ವಹಿಸಿ, ಮಾತನಾಡಿದರು

ಕಾರ್ಯಗಾರ ಸಂಪನ್ಮೂಲ ವ್ಯಕ್ತಿಗಳಾದ ಬೆಂಗಳೂರು ಮಧ್ಯಸ್ಥಿಕೆಗಾರ ಕೇಂದ್ರದ ಲಕ್ಷ್ಮೀಶರಾವ್ ಮತ್ತು ಬಿನಾ ದೇವರಾಜ್ ವೇದಿಕೆಯಲ್ಲಿದ್ದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪರಶುರಾಮ ದೊಡ್ಡಮನಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಮಧ್ಯಸ್ಥಿಕೆ ಕೇಂದ್ರದ ದೀಪಕ ವಾಳದ ಕಾರ್ಯಕ್ರಮ ನಿರೂಪಿಸಿದರು. ಹಿರಿಯ ನ್ಯಾಯವಾದಿ ವೈ.ಪಿ.ಮದ್ನೂರ ವಂದಿಸಿದರು.

ಸಮಾಜದ ಒಳಿತಿಗಾಗಿ ಹೋರಾಟ ಅನಿವಾರ್ಯ

ಪಂಚಸೇನಾ ಘಟಕದ ಪದಾಧಿಕಾರಿಗಳಿಂದ ಧಾರವಾಡದಲ್ಲಿ ಸುದ್ದಿಗೋಷ್ಠಿ | ಪ್ರತಿಭಟನೆಯ ಮಾಹಿತಿ

ಧಾರವಾಡ: 2024 ಮಳೆಗಾಲ ಅಧಿವೇಶನದಲ್ಲಿ ಮೀಸಲಾತಿಗಾಗಿ ಅವಕಾಶ ಕೊಡದ ಸ್ಪೀಕರ್ ಹಾಗೂ ಸರಕಾರದ ಧೋರಣೆ ಖಂಡಿಸಿ ಪಂಚಮಸಾಲಿ ಸಮಾಜದ ಪಂಚಸೇನಾ ಘಟಕದ ಪದಾಧಿಕಾರಿಗಳು, ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಒಟ್ಟು 20 ಲಕ್ಷ ಜನರು ಸೇರಿ ಸಮಾಜದ ಒಳಿತಿಗಾಗಿ ಹೋರಾಟ ಮಾಡಲು ನಿರ್ಧಾರ ಮಾಡಲು ತಿರ್ಮಾನಿಸಿದ್ದೇವೆ ಎಂದು ತಿಳಿಸಿದರು. ಧಾರವಾಡದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಂಚಸೇನಾ ಘಟಕದ ಮಹಿಳಾ ರಾಜ್ಯ ಉಪಾಧ್ಯಕ್ಷರಾದ ವಿದ್ಯಾ ಪಾಟೀಲ, ಸ್ಪೀಕರ್ ಅವರು ಪಂಚಮಸಾಲಿ ಸಮಾಜದಕ್ಕೆ 2ಅ ಮಿಸಲಾತಿ ಬಗ್ಗೆ ಚರ್ಚೆ ಮಾಡಲು ಶಾಸಕರಿಗೆ ಅವಕಾಶ ಕೊಡದೇ ಇರುವುದು ಖಂಡನೀಯವಾಗಿದೆ. ಈ ಬಗ್ಗೆ ನಾವೆಲ್ಲರೂ ಸೇರಿ ಸಿಎಂ ಸಿದ್ಧರಾಮಯ್ಯಾ ಅವರನ್ನು ಭೇಟಿಯಾಗಿ 2 ಎ ಮೀಸಲಾತಿಯನ್ನು ಮಾಡಲು ನಿರ್ಣಯ ಕೈಗೊಳ್ಳುವಂತೆ ಮನವಿ ಮಾಡುತ್ತೇವೆ ಎಂದರು.

ನಮ್ಮ ಪಂಚಮಸಾಲಿ ಸಮಾಜದ ಶಾಸಕರು ಪಂಚಮಸಾಲಿ 2ಅ ಮೀಸಲಾತಿಯ ವಿಷಯಕ್ಕಾಗಿ, ಸ್ಪೀಕರವರಿಗೆ ಸದನದಲ್ಲಿ ಚರ್ಚೆಗಾಗಿ ಅವಕಾಶ ಕೋರಿ ಪತ್ರ ಬರೆದಿದ್ದರು. ಆದರೆ ನಿಯಮ 69ರ ಕೆಳಗೆ ಸ್ಪೀಕರವರು ನಮ್ಮ ಸಮಾಜದ ಶಾಸಕರಿಗೆ ಅವಕಾಶ ಕೊಡದೇ ಸಮಾಜದ ಸಾಮಾಜಿಕ ನ್ಯಾಯದ ನೆಲೆಗಟ್ಟಿನ ಮೇಲೆ ನಮ್ಮ ಸಮಾಜದ ಶಾಸಕರ ಹಕ್ಕನ್ನು ಮೊಟಕು ಗೊಳಿಸಿದ್ದಾರೆ. ನಮ್ಮ ಪಂಚಮಸಾಲಿ ಸಮಾಜದ 2ಅಮೀಸಲಾತಿ ಹೋರಾಟವನ್ನು ಪರೋಕ್ಷವಾಗಿ ನಿರ್ಲಕ್ಷಿಸಿದ್ದಾರೆ. ಸಮಾಜದ ಶಾಸಕರಿಗೆ ಮತ್ತು ನಮ್ಮ ಸಮಾಜ ಜನತೆಗೆ ಈ ರೀತಿಯಾಗಿ ಅವಮಾನಿಸಿದ್ದಾರೆ. ಸಿ ಎಂ. ಮುಖ್ಯ ಮಂತ್ರಿ ಸಿದ್ದರಾಮಯ್ಯನವರು 2ಅ ಪಂಚಮಸಾಲಿ ಮೀಸಲಾತಿ ವಿಷಯಕ್ಕಾಗಿ ಹಿರಿಯ ಕಾನೂನು ತಜ್ಞರ ಜೊತೆಗೆ ಚರ್ಚೆಯನ್ನು ಮಾಡುವದಾಗಿ ಈ ಹಿಂದೆ ಸುವರ್ಣ ಸೌಧದಲ್ಲಿ ದಿನಾಂಕ 12 ಡಿಸೆಂಬರ್ 2023ರಲ್ಲಿ ನಮ್ಮ ಶಾಸಕರಿಗೆ ಮತ್ತು ನಮ್ಮ ಬಸವ ಜಯಮೃತ್ಯುಂಜಯ ಸ್ವಾಮೀಜಿಯವರಿಗೆ ಮಾತು ಕೊಟ್ಟಿದ್ದರು. ಅದರ ಪ್ರಕಾರ ಇನ್ನೂವರೆಗೂ ಯಾವದೇ ಚರ್ಚೆಯನ್ನು ಮಾಡದೇ ನಮ್ಮ ಪಂಚಮಸಾಲಿ ಸಮಾಜದ 2ಅ ಮೀಸಲಾತಿ ವಿಷಯದ ಪ್ರಾಮುಖ್ಯತೆಯನ್ನು ನಿರ್ಲಕ್ಷಿಸಿದ್ದಾರೆ.. ಇದು ನಮ್ಮ ಪಂಚಮಸಾಲಿ ಸಮಾಜದ ಜನರ ಸಹನೆಯನ್ನು ಕೆರಳಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಂದಿನ ಸರಕಾರದ ಸಮಯದಲ್ಲಿ ಪಂಚಮಸಾಲಿ 2ಅ ಮೀಸಲಾತಿ ಹೋರಾಟದ ವಿಷಯವಾಗಿ ಅಂದಿನ ಮುಖ್ಯ ಮಂತ್ರಿಗಳಾದ ಬಿ ಎಸ್ ಯಡಿಯೂರಪ್ಪನವರು ಹಾಗೂ ಬಸವರಾಜ ಬೊಮ್ಮಾಯಿಯವರು ಕನಿಷ್ಠ ಪಕ್ಷ ನಮ್ಮ ಸಮಾಜದ ಶಾಸಕರ ಜೊತೆಗೆ ಚರ್ಚೆಯನ್ನಾದರೂ ಮಾಡಿದ್ದರು. ಸದ್ಯ ನಮ್ಮ ಸಮಾಜದ 12 ಆಡಳಿತಾರೂಢ ಶಾಸಕರು ಇದ್ದರೂ ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ಕನಿಷ್ಠ ಪಕ್ಷ ಶಾಸಕರ ಜೊತೆಗೂ ಚರ್ಚಿಸಲು ಪ್ರಯತ್ನಿಸಲಿಲ್ಲ,

ಇದು ನಮ್ಮ ಸಮಾಜದ ಸಾಮಾಜಿಕ ನ್ಯಾಯವನ್ನು ನೀಡುವಲ್ಲಿ ನಿರ್ಲಕ್ಷಿಸಿದ್ದಾರೆ. ಶಾಸಕರು ಆಡಳಿತಾರೂಢ ಸರಕಾರದಲ್ಲಿ ನಮ್ಮ ಪಂಚಮಸಾಲಿ ಸಮಾಜದ 12ಶಾಸಕರು ಇದ್ದಾರೆ. ನಮ್ಮ ಸಮಾಜದ ಮತದಾರರ ಆಶೀರ್ವಾದಿಂದ ಈ ಸರಕಾರದಲ್ಲಿ ಮಂತ್ರಿ, ಮತ್ತು ಸದನದ ಪ್ರಾಧಿಕಾರಗಳಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ. ಶಾಸಕರು ತಮ್ಮ ಮನಸ್ಸನ್ನು ಪರೀವರ್ತನೆ ಮಾಡಿಕೊಳ್ಳಲು ಪಕ್ಷಾತೀತವಾಗಿ ನಮ್ಮ ಬಸವ ಜಯ ಮೃತ್ಯುಂಜಯ ಗುರುಗಳು ಇವರ ಮನೆಗಳಿಗೆ ಹೋಗಿ ಈ ಬಾರಿಯ ಮಳೆಗಾಲದ ಅಧಿವೇಶನದಲ್ಲಿ 2ಅ ಮೀಸಲಾತಿಯ ಬಗ್ಗೆ ಧ್ವನಿ ಎತ್ತಲು ಮನವಿ ಮಾಡಿಕೊಂಡರೂ, ನಮ್ಮ ಸಮಾಜದ ಶಾಸಕರ ಮನವಿಯನ್ನು ಮಾನ್ಯ ಸ್ಪೀಕರವರು, ಶಾಸಕರ ಮನವಿಯನ್ನು ಪುರಸ್ಕರಿಸಲಿಲ್ಲ, ಹಾಗೂ ನಮ್ಮ ಸಮಾಜದ ಶಾಸಕರು ಪಕ್ಷಾತೀತವಾಗಿ ತಮ್ಮ ಗಟ್ಟಿ ನಿರ್ಧಾರದ ನಿರ್ಧಿಷ್ಟವಾದ ಪ್ರಯತ್ನ ಮಾಡಲಿಲ್ಲ, ಹಾಗೂ ಸಮಾಜದ ಶಾಸಕರು ಚುನಾವಣೆಯ ಮೊದಲು ಸಮಾಜದ ಜನರಿಗೆ ಮೀಸಲಾತಿಯ ಬಗ್ಗೆ ಕೊಟ್ಟಂತ ಮಾತನ್ನು ಮರೆತಿದ್ದಾರೆ. ಆದ್ದರಿಂದ ಜನರು ಕೂಡ ಇವರ ಈ ನಡೆಯಿಂದ ಆಕ್ರೋಶಗೊಂಡಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯಾಧ್ಯಕ್ಷರಾದ ರುದ್ರಗೌಡ ಸೋಲಬಗೌಡ್ರ, ಉಪಾಧ್ಯಕ್ಷರಾದ ಈರಣ್ಣ ಕಡಗನ್ನವರ, ಮಹಿಳಾ ರಾಜ್ಯ ಉಪಾಧ್ಯಕ್ಷರಾದ ವಿದ್ಯಾ ಪಾಟೀಲ ಪಂಚಸೇನಾ ರಾಜ್ಯ ಸಂಘಟನಾ ಕಾರ್ಯದರ್ಶಿ ಸಂಗನಗೌಡ ಹೂವನ್ನವರ, ರಾಜ್ಯ ಕಾರ್ಯಕಾರಣಿ ಸಮಿತಿ ಸದಸ್ಯ ನಾಗಪ್ಪ ಮುಮ್ಮಿಗಟ್ಟಿ ಕಿತ್ತೂರು ಕರ್ನಾಟಕ ವಿಭಾಗದ ಸಾಮಾಜಿಕ ಜಾಲತಾಣದ ಅಧ್ಯಕ್ಷರು ಅಡಿವೆಪ್ಪ ಸಲಕಿ, ಕಿತ್ತೂರು ಕರ್ನಾಟಕ ವಿಭಾಗದ ಕಾರ್ಯದರ್ಶಿ ರಾಘವೇಂದ್ರ ಘಟ್ಟದ ಕಿತ್ತೂರು ಕರ್ನಾಟಕ ವಿಭಾಗ ಪೂಜಾ ಸೌದತ್ತಿ ಈ ಸಂದರ್ಭದಲ್ಲಿದ್ದರು.

ಯೋಧರಿಗೆ ನಾವು ಋಣಿಯಾಗಿರಬೇಕು

ಗಜೇಂದ್ರಗಢ: ತ್ಯಾಗ ಬಲಿದಾನಕ್ಕೆ ಇನ್ನೊಂದು ಹೆಸರು ಸೈನಿಕರು. ಪ್ರಾಣದ ಹಂಗು ತೊರೆದು ಮಾತೃಭೂಮಿ, ಸಾರ್ವಭೌಮತ್ವಕ್ಕೆ ಹೋರಾಡಿದ ಯೋಧರಿಗೆ ಋಣಿಯಾಗಿರಬೇಕು ಎಂದು ಮುಖ್ಯ ಶಿಕ್ಷಕ ಸತೀಶ ಡಿ ಹೇಳಿದರು.

ಪಟ್ಟಣದ ಸಾರಿಗೆ ಘಟಕ ಬಳಿಯ ಓಂ ಶ್ರೀ ಸಾಯಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ 25ನೇ ಕಾರ್ಗಿಲ್ ವಿಜಯೋತ್ಸವ ಪ್ರಯುಕ್ತ ವೀರ ಯೋಧರಿಗೆ ನಮನ ಸಲ್ಲಿಸಿ ಮಾತನಾಡಿದ ಅವರು, ಕಷ್ಟದ ಪರಿಸ್ಥಿತಿಯಲ್ಲಿ ದೇಶದ ಗಡಿಯನ್ನು ಹಗಲಿರುಳು ರಕ್ಷಿಸುತ್ತಿರುವ ಸೈನಿಕರೊಂದಿಗೆ ಇಡೀ ದೇಶವೆ ಇದೆ. ಸೈನಿಕರ ಸಾವಿನಿಂದ ಅವರ ಕುಟುಂಬಕ್ಕೆ ಆದ ನಷ್ಟವನ್ನು ಭರಿಸುವ ಧೈರ್ಯ ಬರಲಿ.

ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ದೇಶದ ಸಾರ್ವಭೌಮತೆಯ ರಕ್ಷಣೆಗಾಗಿ ಮತ್ತು ಜನರ ಸುರಕ್ಷತೆಗಾಗಿ ಕೆಚ್ಚೆಯಿಂದ ಹೋರಾಡಿದ ವೀರ ಸೈನಿಕರಿಗೆ ಗೌರವ ನೀಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ.

ನಿರ್ಭಯ ಜೀವನ ನಡೆಸಲು ಗಡಿಭಾಗದಲ್ಲಿ ಹಗಲು ರಾತ್ರಿ ಶತ್ರುಗಳ ಗುಂಡಿಗೆ ಎದೆಯೊಡ್ಡಿ ನಿಲ್ಲುವ ಸೈನಿಕರ ದೇಶ ಸೇವೆಗೆ ಕೈ ಜೋಡಿಸುವುದು ಅಗತ್ಯವಿದೆ ಎಂದರು.

ಶಿಕ್ಷಕಿ ಫರ್ಜಾನಾ ಮುಧೋಳ ಮಾತನಾಡಿ, ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಸೈನಿಕರು ಯಾವುದೇ ಸಮಸ್ಯೆಗೆ ಧೃತಿಗೆಡದೇ ದೃಢ ಸಂಕಲ್ಪ, ನಿಶ್ಚಲ ಮನಸ್ಸಿನ ಜತೆಯಲ್ಲಿ ದೇಶದ ಜನರ ಅಭಿಮಾನದಿಂದ ವಿಜಯ ಸಾಧಿಸಿದರು.

ಆದರೆ ಅಮರತ್ವದ ಗಾಯ ಇಂದಿಗೂ ನಮ್ಮ ಕಣ್ಮುಂದಿದೆ. ವಿದ್ಯಾರ್ಥಿ, ಯುವ ಜನಾಂಗ ಶಿಕ್ಷಣದ ಜತೆ ದೇಶಭಕ್ತಿಯನ್ನು ಮೈಗೂಡಿಸಿಕೊಂಡಲ್ಲಿ, ಭಾರತ ಬಲಿಷ್ಠವಾಗಿ ವಿಶ್ವಕ್ಕೆ ಮಾದರಿಯಾಗುತ್ತದೆ. ಶಿಕ್ಷಣ ಜೀವನಕ್ಕಾಗಿ, ಜನ್ಮ ಭೂಮಿಗಾಗಿ ಎಂದು ತಿಳಿದು ರಾಷ್ಟ್ರ ಕಟ್ಟುವ ಕಾಯಕ್ಕೆ ಮುಂದಾಗಬೇಕು ಎಂದರು.

ದೇಶ ಸೇವೆ ಈಶ ಸೇವೆ ಎಂದು ಭಾರತಾಂಬೆಯ ರಕ್ಷಣೆಯಲ್ಲಿ ನಿಂತಿರುವ ಸೈನಿಕರ ದೇಶ ಭಕ್ತಿಯ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಪಡಿಸುವ ಕಾರ್ಯವಾಗಬೇಕಿದೆ. ಅಲ್ಲದೆ ದೇಶ ಪ್ರೇಮ ಮೆರೆಯುವ ನಿಟ್ಟಿನಲ್ಲಿ ಪ್ರತಿಯೊಬ್ಬ ಭಾರತೀಯನು ಕಂಕಣ ಭದ್ದರಾಗಬೇಕು ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಶಾಲಾ ಸಂಸತ್ ರಚನೆ ಮಾಡಲಾಯಿತು. ಕವಿತಾ ಹಾದಿಮನಿ, ಸಿದ್ದು. ವಿ.ಜಿ, ಹೀನಾಕೌಸರ ಅರಳಿಕಟ್ಟಿ, ಮಲ್ಲಪ್ಪ ಮಾಟರಂಗಿ, ವಾಣಿಶ್ರೀ ಗೊಂಧಳೆ, ತುಳಸಿ ಜೋಶಿ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

ಮದ್ದು, ಗುಂಡಿಗಿಂತ ಸೈನಿಕರ ವಿಶ್ವಾಸ ಮುಖ್ಯ

ಗಜೇಂದ್ರಗಢ: ಭಾರತೀಯ ವೀರ ಪುತ್ರರು ಕೆಚ್ಚೆದೆಯಿಂದ ಹೋರಾಡಿ ಕಾರ್ಗಿಲ್‌ನಲ್ಲಿ ವಿಜಯ ಪತಾಕೆಯನ್ನು ಹಾರಿಸಿದ ಅವಿಸ್ಮರಣೀಯ ದಿನ. ಭಾರತಾಂಬೆಯ ರಕ್ಷಣೆಗಾಗಿ ಯುದ್ಧದಲ್ಲಿ ಹುತಾತ್ಮರಾದ ಸೈನಿಕರ ಶೌರ್ಯ, ಸಾಹಸ, ತ್ಯಾಗ, ಬಲಿದಾನ ಎಂದಿಗೂ ಅಜರಾಮರ ಎಂದು ಬಿಜೆಪಿ ರೋಣ ಮಂಡಲದ ಯುವ ಮೋರ್ಚಾ ಅಧ್ಯಕ್ಷ ಉಮೇಶ ಚನ್ನುಪಾಟೀಲ ಹೇಳಿದರು.

ತಾಲೂಕಿನ ನರೇಗಲ್ಲ ಪಟ್ಟಣದ ಬಸ್ ನಿಲ್ದಾಣ ಹತ್ತಿರ ಆಂಜನೇಯ ದೇವಸ್ಥಾನ ಮುಂಭಾಗದಲ್ಲಿ ಕಾರ್ಗಿಲ್ ವಿಜಯೋತ್ಸವದ ನಿಮಿತ್ತ ರೋಣ ಮಂಡಲ ಬಿಜೆಪಿ ಯುವ ಮೋರ್ಚಾ ವತಿಯಿಂದ ನಡೆದ ಪಂಜಿನ ಮೆರವಣಿಗೆಯಲ್ಲಿ ಮಾತನಾಡಿದರು.

ಯುದ್ಧ ಗೆಲ್ಲುವುದಕ್ಕೆ ಮದ್ದು ಗುಂಡುಗಳಿಗಿಂತಲೂ ಸೈನಿಕರ ಶೌರ್ಯ, ಆತ್ಮವಿಶ್ವಾಸ ಮುಖ್ಯ. ಕಾರ್ಗಿಲ್ ಯುದ್ಧದಲ್ಲಿ ಸೈನಿಕರು ತೋರಿದ ಶೌರ್ಯ, ಸಾಹಸಗಳನ್ನು ದೇಶ ಎಂದಿಗೂ ಅವರನ್ನು ಸ್ಮರಿಸುತ್ತದೆ. ಕಾರ್ಗಿಲ್ ಯುದ್ಧದಲ್ಲಿ ತಾಯ್ನಾಡಿಗಾಗಿ ತಮ್ಮ ಪ್ರಾಣವನ್ನು ತೆತ್ತ ಸೈನಿಕರನ್ನು ನಾವು ಸ್ಮರಿಸಿಕೊಳ್ಳಬೇಕು. ವೀರಯೋಧರ ದಿಟ್ಟ ಹೋರಾಟ ನಮಗೆಲ್ಲ ಸ್ಫೂರ್ತಿಯಾಗಬೇಕು. ಅನ್ನ ಕೊಡುವ ರೈತರನ್ನು ಹಾಗೂ ಭಾರತೀಯ ಯೋಧರನ್ನು ಪತ್ರಿನಿತ್ಯ ನಾವು ನೆನಪಿಕೊಳ್ಳಬೇಕು ಎಂದರು.

ನಿವೃತ್ತ ಯೋಧ ಶಿವಪುತ್ರಪ್ಪ ಸಂಗನಾಳ ಮಾತನಾಡಿ, 1999ನೇ ಜುಲೈ 26ರಂದು ಭಾರತೀಯ ಸೈನಿಕರು ಅಪರೇಶನ್ ವಿಜಯ್ ಮೂಲಕ ಕಾರ್ಗಿಲ್–ಡ್ರಾಸ್ ವಲಯದಲ್ಲಿ ಪ್ರದರ್ಶಿಸಿದ ಶೌರ್ಯದ ನೆನಪಿಗಾಗಿ ಕಾರ್ಗಿಲ್ ವಿಜಯ ದಿವಸ್ ಆಚರಿಸಲಾಗುತ್ತದೆ. ಕಾರ್ಗಿಲ್ ಯುದ್ಧದಲ್ಲಿ ಭಾರತ ವಿಜಯ ಪತಾಕೆಯನ್ನು ಹಾರಿಸಿ 25 ವರ್ಷವಾಗಿದೆ ಎಂದರು.

ಕಾರ್ಗಿಲ್ ವಿಜಯೋತ್ಸವ ನಿಮಿತ್ಯ ಪಂಜಿನ ಮೆರವಣಿಗೆಯು ಹಳೆ ಬಸ್ ನಿಲ್ದಾಣದಿಂದ ಜಕ್ಕಲಿ ಕ್ರಾಸ್ ಮಾರ್ಗವಾಗಿ ಸಂಚರಿಸಿ, ಹೊಸ ಬಸ್ ನಿಲ್ದಾಣ ಹತ್ತಿರ ಇರುವ ಆಂಜನೇಯ ದೇವಸ್ಥಾನದ ಹತ್ತಿರ ಸಮಾಪ್ತಿಗೊಂಡಿತು.

ಈ ವೇಳೆ ನಿವೃತ್ತ ಯೋಧರಿಗೆ ಬಿಜೆಪಿ ರೋಣ ಮಂಡಲ ಹಾಗೂ ನರೇಗಲ್ಲ ಶಹರ ಘಟಕದ ವತಿಯಿಂದ ಸನ್ಮಾನಿಸಲಾಯಿತು. ಕುಮಾರಸ್ವಾಮಿ ಕೋರಧಾನ್ಯಮಠ, ರೇವಣಸಿದ್ದಪ್ಪ ನರಗುಂದ, ಮಲ್ಲಿಕಾರ್ಜುನ ಮಲ್ಲನಗೌಡ್ರ, ವೀರಪ್ಪ ಕುಂಬಾರ, ಉಮೇಶ್ ಕರಮುಡಿ, ಶಶಿಕಾಂತ ಕರಡಿ, ಪ್ರಭು ಮುಕ್ಕನಗೌಡ್ರ, ಬಸವರಾಜ ಯಕ್ಕುಂಡಿ, ಶಶಿಧರ ಸಂಕನಗೌಡ್ರ, ಬಿ.ಕೆ ಪೊಲೀಸ್‌ಪಾಟೀಲ, ಬಸವರಾಜ ಕೊಟಗಿ, ನಿಂಗಪ್ಪ ಕಣವಿ, ಮುತ್ತಣ್ಣ ಪಲ್ಲೇದ, ಯಲ್ಲಪ್ಪ ಮಣ್ಣೊಡ್ಡರ, ಮಲ್ಲಿಕಾರ್ಜುನ ಗಂಗರಗೊಂಡ, ಶಿವಕುಮಾರ ದದ್ದುರು, ಮಹೇಶ ಶಿವಶಿಂಪರ, ಚಂದ್ರು ಕುರಿ, ಅರುಣ ಮಠದ, ಎಸ್.ಬಿ ಪಾಟೀಲ, ಶಿವು ಮುಳಗುಂದ, ಮಂಜುನಾಥ ಕಮಲಾಪೂರ, ಈರಣ್ಣ ಗುಜಮಾಗಡಿ, ವೀರೇಶ ಮಣ್ಣೊಡ್ಡರ, ಪ್ರವೀಣ ಮಡಿವಾಳರ, ಮಂಜುನಾಥ ಹಡಪದ ಇತರರಿದ್ದರು.

ರಾಜ್ಯದ ಜಲಾಶಯಗಳ ಮಟ್ಟ

	ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
1.	ಕೆಆರ್‌ಎಸ್	124.80	124.22	1,11,599
2.	ಕಬಿನಿ	2284	2282.36	30,769
3.	ಹಾರಂಗಿ	2859	2855	13,877
4.	ಹೇಮಾವತಿ	2922	2918.75	63,162
5.	ತುಂಗಭದ್ರಾ	1633	1631.68	1,03,676
6.	ಆಲಮಟ್ಟಿ	1704.81	1694.04	2,18,230
7.	ನಾರಾಯಣಪುರ	1615	1609.04	2,90,042

ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಮದ್ಯ ಆಫರ್

ರೆಸ್ಟೋರೆಂಟ್ ಮೇಲೆ ಎಫ್‌ಐಆರ್ ದಾಖಲು

ಮಂಗಳೂರು: ನಗರದ ದೇರೆಬೈಲ್‌ನಲ್ಲಿ ನೂತನವಾಗಿ ಆರಂಭಗೊಂಡಿದ್ದ ರೆಸ್ಟೋರೆಂಟ್‌ವೊಂದು ವಿದ್ಯಾರ್ಥಿಗಳಿಗೆ ಮದ್ಯದ ದರದಲ್ಲಿ ಆಫರ್ ನೀಡಿದೆ ಎಂಬ ಪೋಸ್ಟ್‌ವೊಂದು ವೈರಲ್ ಆಗಿದ್ದು, ಇದು ವಿವಾದಕ್ಕೆ ಗುರಿಯಾಗಿದೆ.

ಈ ಸಂಬಂಧ ರೆಸ್ಟೋರೆಂಟ್ ವಿರುದ್ಧ ಅಬಕಾರಿ ಇಲಾಖೆ ಎಫ್‌ಐಆರ್ ದಾಖಲಿಸಿದೆ.

ವಿದ್ಯಾರ್ಥಿಗಳಿಗೆ ಸ್ಟೂಡೆಂಟ್ ನೈಟ್ ಹೆಸರಿನಲ್ಲಿ ಮದ್ಯದ ದರದಲ್ಲಿ ಲಾಲ್‌ಬಾಗ್ ಇನ್ (ಲಿಕ್ಕರ್ ಲಾಂಜ್ ಬಾರ್) ಆಫರ್ ನೀಡಿದೆ. ಶಾಲೆಯ ಐಡಿ ತಂದರೆ ವಿದ್ಯಾರ್ಥಿಗಳಿಗೆ 15 ಪರ್ಸೆಂಟ್ ಆಫರ್ ನೀಡಲಾಗುತ್ತದೆ. ಅಲ್ಲದೆ, ವಿದ್ಯಾರ್ಥಿನಿಯರಿಗೆ ಐಡಿ ತೋರಿಸಿದರೆ ಫ್ರೀ ಶೂಟರ್ ವ್ಯವಸ್ಥೆ ಇದೆ ಎಂಬ ಆಫರ್ ಹೊಂದಿರುವ ಪೋಸ್ಟ್‌ವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು.

ಲಿಕ್ಕರ್ ಲಾಂಜ್ ನೈಟ್ ಪಾರ್ಟಿ ಆಯೋಜಿಸಿದೆ ಎಂಬ ಸ್ಟಿಕ್ಕರ್ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗಿದೆ. ಜಾಲತಾಣದಲ್ಲಿ ಆಕ್ರೋಶ ವ್ಯಕ್ತವಾದ ಹಿನ್ನೆಲೆಯಲ್ಲಿ ಅಬಕಾರಿ ಅಧಿಕಾರಿಗಳು ಬಾರ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಬೆಳಗಾವಿಯಲ್ಲಿ 40 ಸೇತುವೆ ಮುಳುಗಡೆ

ಕೃಷ್ಣಾ ನದಿ ಪಾತ್ರದ ಗ್ರಾಮಗಳು ಜಲಾವೃತ | ಕಾಳಜಿ ಕೇಂದ್ರದಲ್ಲಿ ನಿರಾಶ್ರಿತರ ಪರದಾಟ

ವಿನಾಯಕ ಮಠಪತಿ ಬೆಳಗಾವಿ

ಬೆಳಗಾವಿ ಜಿಲ್ಲೆಯಾದ್ಯಂತ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದ್ದು ಪ್ರಮುಖ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಮಹಾಮಳೆಗೆ ಬೆಳಗಾವಿ ಜಿಲ್ಲೆಯಲ್ಲಿ ಶನಿವಾರ ಸಂಜೆಯವರೆಗೆ ಒಟ್ಟು 40 ಸೇತುವೆಗಳು ಜಲಾವೃತಗೊಂಡಿದ್ದು ಕೃಷ್ಣಾ ಹಾಗೂ ಘಟಪ್ರಭಾ ನದಿ ಪಾತ್ರದಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗಿದೆ.

ಮಹಾರಾಷ್ಟ್ರ ಹಾಗೂ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಮಳೆಯ ಅಬ್ಬರ ಮುಂದುವರಿದ್ದು, ಕೃಷ್ಣಾ, ಘಟಪ್ರಭಾ, ಹಿರಣ್ಯಕೇಶಿ, ಮಲಪ್ರಭಾ, ವೇದಗಂಗಾ ಹಾಗೂ ಧೂದಗಂಗಾ ನದಿಗಳು ತುಂಬಿ ಹರಿಯುತ್ತಿರುವ ಹಿನ್ನೆಲೆಯಲ್ಲಿ 232 ಗ್ರಾಮಗಳಿಗೆ ಪ್ರವಾಹದ ಆತಂಕ ಶುರುವಾಗಿದೆ. 427 ಕಡೆಗಳಲ್ಲಿ ಕಾಳಜಿ ಕೇಂದ್ರಗಳನ್ನು ಜಿಲ್ಲಾಡಳಿತ ಗುರುತಿಸಿದೆ. ಕೃಷ್ಣಾ ಪಾತ್ರದ ನಡುಗಡ್ಡೆಯಲ್ಲಿ ಸಿಲುಕಿದ ಜನರನ್ನು ದೋಣಿ ಮೂಲಕ ಸುರಕ್ಷಿತ ಸ್ಥಳಕ್ಕೆ ತರುವ ಪ್ರಯತ್ನ ನಡೆದಿದೆ.

ಜಲಾವೃತಗೊಂಡ ಗೋಕಾಕ್

ಪ್ರಸಿದ್ಧ ಜಲಪಾತ ಹೊಂದಿರುವ ಗೋಕಾಕ್ ನಗರ ಸದ್ಯ ಪ್ರವಾಹದ ಹೊಡೆತಕ್ಕೆ ಸಿಲುಕಿ ನಲುಗುತ್ತಿದೆ. ಘಟಪ್ರಭಾ ನದಿಯಿಂದ ಅಪಾರ ಪ್ರಮಾಣ ನೀರು ಬಿಡುಗಡೆ ಹಿನ್ನೆಲೆ ಪಟ್ಟಣದ ಹತ್ತು ಬಡಾವಣೆಗಳು ಜಲಾವೃತಗೊಂಡಿವೆ. ಮಟನ್ ಮಾರ್ಕೆಟ್, ಕುಂಬಾರ ಗಲ್ಲಿ, ಉಪ್ಪಾರ ಓಣಿಯ 200 ಕ್ಕೂ ಅಧಿಕ ಮನೆಗಳನ್ನು ತೊರೆದು ಸುರಕ್ಷಿತ ಸ್ಥಳಕ್ಕೆ ತೆರಳುತ್ತಿದ್ದಾರೆ. ಗೋಕಾಕ್ ತಾಲೂಕಿನ ಅಡಿಬಟ್ಟಿ, ಚಿಗಡೊಳ್ಳಿ ಗ್ರಾಮಗಳಿಗೆ ಘಟಪ್ರಭಾ ಪ್ರವಾಹ ಸುತ್ತುವರಿದಿದ್ದು ಮೆಳವಂಕಿಯ ಕಾಳಜಿ ಕೇಂದ್ರದಲ್ಲಿ ನಿರಾಶ್ರಿತರು ತಂಗಿದ್ದಾರೆ. ಜೊತೆಗೆ ಕಲಾರಕೊಪ್ಪ, ಮುದಗಟ್ಟಿ, ಸುಣದೊಳಿ ಗ್ರಾಮಗಳಿಗೂ ಪ್ರವಾಹ ಪರಿಸ್ಥಿತಿ ಎದುರಾಗಿದೆ.

ಕಾಳಜಿ ಕೇಂದ್ರದಲ್ಲಿ ಜನರ ಪರದಾಟ

ಪ್ರವಾಹದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ನದಿ ಪಾತ್ರದ ಜನರಿಗೆ ಉಳಿದುಕೊಳ್ಳಲು ಕಾಳಜಿ ಕೇಂದ್ರ ಸ್ಥಾಪಿಸಿದ್ದರು ನಿರಾಶ್ರಿತರಿಗೆ ತೊಂದರೆ ತಪ್ಪಿಲ್ಲ. ನಿರಂತರ ಮಳೆ ಹಿನ್ನೆಲೆಯಲ್ಲಿ ಜಾನುವಾರುಗಳಿಗೆ ಮೇವಿನ ತೊಂದರೆ ಎದುರಾಗಿದೆ. ಮೆಳವಂಕಿ ಕಾಳಜಿ ಕೇಂದ್ರದಲ್ಲಿ ಮೂರು ಗ್ರಾಮಗಳ ಸಂತ್ರಸ್ತರು ಆಶ್ರಯ ಪಡೆದಿದ್ದಾರೆ. ನಿರಂತರ ಮಳೆಯಿಂದ ಕಾಳಜಿ ಕೇಂದ್ರಗಳಲ್ಲಿ ಮಳೆ ನೀರು ನಿಲ್ಲುತ್ತಿದ್ದು ಡೆಂಘೀ ಜ್ವರದ ಭೀತಿಯಲ್ಲಿ ನಿರಾಶ್ರಿತರು ಕಾಲ ಕಳೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಜತೆಗೆ ದನ, ಕರುಗಳ ಸಮೇತ ಸುರಕ್ಷಿತ ಸ್ಥಳಕ್ಕೆ ತೆರಳಿರುವ ರೈತರಿಗೆ ಆದಷ್ಟು ಬೇಗ ಜಿಲ್ಲಾಡಳಿತದಿಂದ ಮೇವು ಒದಗಿಸುವ ಕಾರ್ಯ ಆಗಬೇಕು ಎನ್ನುತ್ತಾರೆ ನಿರಾಶ್ರಿತರು.

ಗೋಕಾಕ್ ಜಲಪಾತದ ರುದ್ರರಮಣೀಯ ದೃಶ್ಯ

ಮೆಳವಂಕಿಯ ಕಾಳಜಿ ಕೇಂದ್ರದಲ್ಲಿ ನಿರಾಶ್ರಿತರು ಪ್ರವಾಹ ಹಿನ್ನೆಲೆ ಮನೆ ತೊರೆದು ಸುರಕ್ಷಿತ ಸ್ಥಳಕ್ಕೆ ಹೊರಟ ಜನರು

ಕಣ್ಣೀರಲ್ಲಿ ಕೈತೊಳೆಯುತ್ತಿರುವ ಬೆಳಗಾವಿ ಜನ

ಒಂದು ಕಡೆ ಜಿಲ್ಲೆಯಾದ್ಯಂತ ಮಳೆಯಿಂದ ನದಿಗಳು ತುಂಬಿ ಹರಿಯುತ್ತಿದ್ದರೆ ,ಮತ್ತೊಂದೆಡೆ ಬೆಳಗಾವಿ ನಗರದಲ್ಲಿ ಮಳೆಯ ಅಬ್ಬರ ಮುಂದುವರಿದಿದ್ದು ಅನೇಕ ಮನೆಗಳಿಗೆ ಮಳೆ ನೀರು ನುಗ್ಗಿದೆ. ಇತ್ತ ಬೆಳಗಾವಿ ಹೊರವಲಯದ ಬಸವನ ಕುಡಚಿ, ಯಡಿಯೂರಪ್ಪ ಮಾರ್ಗ ಸೇರಿದಂತೆ ಅನೇಕ ಭಾಗ ಜಲಾವೃತಗೊಂಡಿದ್ದು ಬಳ್ಳಾರಿ ನಾಲೆ ತುಂಬಿ ಹರಿಯುತ್ತಿದೆ. ಸ್ಮಾರ್ಟ್ ಸಿಟಿ ಕಾಮಗಾರಿ ಹೆಸರಿನಲ್ಲಿ ಕಳಪೆ ಕಾಮಗಾರಿ ಬಣ್ಣ ಮಳೆಯಿಂದ ಬಯಲಾಗುತ್ತಿದೆ. ನಗರದ ಅನೇಕ ಭಾಗದಲ್ಲಿ ರಸ್ತೆಗಳು ನದಿಯಂತಾಗಿದ್ದು ವಾಹನ ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ಒಂದು ವಾರದಿಂದ ಶಾಲಾ ಕಾಲೇಜುಗಳಿಗೆ ಜಿಲ್ಲೆಯಾದ್ಯಂತ ರಜೆ ಘೋಷಣೆ ಮಾಡಲಾಗಿದ್ದು, ಸೋಮವಾರ ಮಳೆ ಪರಿಸ್ಥಿತಿ ನೋಡಿಕೊಂಡು ಜಿಲ್ಲಾಡಳಿತ ನಿರ್ಧಾರ ಕೈಗೊಳ್ಳಲಿದೆ.

ಜಲಾವೃತಗೊಂಡ ಪ್ರಮುಖ ಸೇತುವೆಗಳು, ದೇವಸ್ಥಾನಗಳು

ಕೃಷ್ಣಾ ನದಿಗೆ ಇರುವ ಕುಡಚಿ - ಉಗಾರ ಸಂಪರ್ಕಿಸುವ ಸೇತುವೆ, ಮಾರ್ಕಂಡೇಯ ನದಿಗೆ ಇರುವ ಗೋಕಾಕ್ - ಕೊಣ್ಣೂರು ಸೇತುವೆ , ಘಟಪ್ರಭಾ ನದಿಗೆ ಇರುವ ಘೋಡಗೇರಿ - ನೋಗಿನಹಾಳ ಸೇತುವೆ, ಹುಕ್ಕೇರಿ ತಾಲೂಕಿನ ಹೊಳೆಮ್ಮ ದೇವಿ ದೇವಸ್ಥಾನ, ಚಿಕ್ಕೋಡಿ ತಾಲೂಕಿನ ಯಡೂರು ವಿರಭದ್ರೇಶ್ವರ ದೇವಸ್ಥಾನ, ಹುಕ್ಕೇರಿ ತಾಲೂಕಿನ ಶಂಕರಲಿಂಗ ದೇವಸ್ಥಾನಗಳು ಜಲಾವೃತವಾಗಿವೆ.

ಘಟಪ್ರಭಾ ನದಿ ನೀರಿನ ಮಟ್ಟ ಹೆಚ್ಚಾದ ಹಿನ್ನಲೆಯಲ್ಲಿ ಕುಟುಂಬ ಸಮೇತ ಮೆಳವಂಕಿ ಗ್ರಾಮದ ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆಯುತ್ತಿದ್ದೇವೆ. ಪ್ರತಿವರ್ಷವೂ ಪ್ರವಾಹದಿಂದ ಬದುಕು ಹೈರಾಣಾಗಿದ್ದು ಸರ್ಕಾರ ಶಾಶ್ವತ ಪರಿಹಾರ ನೀಡಬೇಕು.

- ಮಲ್ಲಪ್ಪ ಯಮನಾಳ
ಅಡಿಬಟ್ಟಿ ನಿರಾಶ್ರಿತ ರೈತ

ಸಮಾಚಾರ ಸಣ್ಣದಲ್ಲ

ನೂರಾರು ಸಾಹಿತ್ಯಾಭಿಮಾನಿಗಳ ಸಮಾಗಮ

← ಮೊದಲಪುಟದಿಂದ

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾಜಿ ಸಂಸದ ಪ್ರತಾಪ್ ಸಿಂಹ, ಸುವರ್ಣನ್ಯೂಸ್ ಸಂಪಾದಕ ಅಜಿತ್ ಹನುಮಕ್ಕನವರ್, ಉಲ್ಲಾಸ ಕಾರಂತರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಿಕ್ಷಣ ತಜ್ಞ ಡಾ.ಗುರುರಾಜ್ ಕರ್ಜಗಿ ಅವರು ವಹಿಸಿದ್ದರು. ಈ ವೇಳೆ ವಿಜಯ ಕರ್ನಾಟಕ ಪ್ರಧಾನ ಸಂಪಾದಕ ಸುದರ್ಶನ್ ಚೆನ್ನಂಗಿಹಳ್ಳಿ, ಹೊಸದಿಗಂತ ಸಂಪಾದಕ ವಿನಾಯಕ್ ಭಟ್ ಮುರೂರು, ಕನ್ನಡಪ್ರಭ ಪುರವಣಿ ಸಂಪಾದಕ ಜೋಗಿ, ಹಿರಿಯ ಪತ್ರಕರ್ತ ಪ್ರಶಾಂತ್ ನಾತು ಸೇರಿದಂತೆ ಅಂಕಣಕಾರ ಷಡಾಕ್ಷರಿ, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಮನು ಬಳಿಗಾರ್, ಹಿರಿಯ ಕಲಾವಿದ ಮುದ್ದುಕೃಷ್ಣ, ಹಿರಿಯ ವಕೀಲ ಚಂದ್ರಮೌಳಿ, ಉದ್ಯಮಿ ಕಿರಣ್ ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರು ಭಾಗವಹಿಸಿದ್ದರು.

ಜಲದಿಗ್ಬಂಧನ

← ಮೊದಲಪುಟದಿಂದ

ಎರಡು ಕಡೆ ರೈಲ್ವೆ ಹಳಿ ಮೇಲೆ ಭೂ ಕುಸಿತ

ಹಾಸನ ಜಿಲ್ಲೆಯಲ್ಲಿ ಮಳೆ ಕಡಿಮೆಯಾಗಿದ್ದರೂ ಭೂಕುಸಿತ ಮುಂದುವರಿದ ಪರಿಣಾಮ ರಸ್ತೆ ಸಂಪರ್ಕ ಕಡಿತ ಗೊಂಡಿದೆ. ಹೇಮಾವತಿ ಜಲಾಶಯದಿಂದ ಹೆಚ್ಚಿನ ಹೊರಹರಿವು ಹೆಚ್ಚಿಸಿರುವುದರಿಂದ ಹೊಳೆನರಸೀಪುರ ರದ ಬೆಂಗಳೂರು ರಾಜ್ಯ ಹೆದ್ದಾರಿ ಜಲಾವೃತ ವಾಗಿದೆ. ನದಿ ಪ್ರವಾಹದ ನೀರಿನಲ್ಲಿ ಹೆದ್ದಾರಿ ಮುಳುಗಿದೆ.

ಶಿರಾಡಿಘಾಟ್: ಮತ್ತೆ ಭೂಕುಸಿತ

ಶಿರಾಡಿಘಾಟ್‌ನಲ್ಲಿ ಮತ್ತೆ ಗುಡ್ಡ ಕುಸಿತ ಉಂಟಾಗಿದೆ. ಸಕಲೇಶಪುರ ತಾಲೂಕಿನ ಎತ್ತಿನಹಳ್ಳದ ಬಳಿ ಭಾರಿ ಪ್ರಮಾಣದ ಮಣ್ಣಿನ ರಾಶಿ ರಸ್ತೆಗೆ ಜಾರಿದೆ. ಇದರಿಂದಾಗಿ ಕೆಲ ಗಂಟೆಗಳ ಕಾಲ ರಾಷ್ಟ್ರೀಯ ಹೆದ್ದಾರಿ-75ರಲ್ಲಿ ಸಂಚಾರ ಸ್ಥಗಿತಗೊಂಡಿತ್ತು. ಕಿಲೋಮೀಟರ್‌ಗಟ್ಟಲೇ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಧಾರಕಾರ ಮಳೆಗೆ ಎಲ್ಲೆಡೆ ಜನ ಜೀವನ ಅಸ್ತವ್ಯಸ್ತ

ವೀಕೆಂಡ್ ಮೋಜಿಗೆ ಮಳೆರಾಯ ಅಡ್ಡಿ | ಹಲವೆಡೆ ಪ್ರವಾಹ ಸೃಷ್ಟಿ | ದೇಗುಲಗಳಿಗೆ ಜಲದಿಗ್ಬಂಧನ

ಬೆಂಗಳೂರು: ಶನಿವಾರ ಹಲವಡೆ ಸುರಿದ ಮಳೆಯು ಸಾವು-ನೋವಿಗೆ ಕಾರಣವಾಗಿದೆ. ಇಂದು ಧಾರಾಕಾರ ಮಳೆಯಾಗುವ ಸಾಧ್ಯತೆ ಇದ್ದು, ಹವಾಮಾನ ಇಲಾಖೆ ಎಚ್ಚರಿಕೆಯನ್ನು ನೀಡಿದೆ.ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ವ್ಯಾಪಕ ಮಳೆಯಾಗುತ್ತಿದೆ. ಮುಂದಿನ 24 ಗಂಟೆಯಲ್ಲಿ ಭರ್ಜರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆಯನ್ನು ನೀಡಿದೆ.

ಮುತ್ತತ್ತಿಗೆ ಪ್ರವಾಸಿಗರ ನಿಷೇಧ

ಭಾರಿ ಮಳೆಯಿಂದಾಗಿ ಕಾವೇರಿ ನದಿಯಲ್ಲಿ ನಿರೀಕ್ಷೆಗೂ ಮೀರಿ ನೀರಿನ ಪ್ರಮಾಣ ಹರಿಯುತ್ತಿದೆ. ಹೀಗಾಗಿ ಮುನ್ನೆಚ್ಚರಿಕಾ ಕ್ರಮವಾಗಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಹಲಗೂರು ಸಮೀಪದ ಮುತ್ತತ್ತಿಗೆ ಪ್ರವಾಸಿಗರು, ಭಕ್ತರ ಪ್ರವೇಶಕ್ಕೆ ನಿಷೇಧ ಹೇರಲಾಗಿದೆ.

ಕೆಆರ್‌ಎಸ್‌ನಿಂದ 1.22 ಲಕ್ಷ ಕ್ಯೂಸೆಕ್ ನೀರನ್ನು ಕಾವೇರಿ ನದಿಗೆ ಬಿಡುಗಡೆ ಮಾಡಲಾಗುತ್ತಿದೆ. ಪ್ರವಾಹ ಮುನ್ನೆಚ್ಚರಿಕೆ ಕ್ರಮವಾಗಿ ಮುತ್ತತ್ತಿಗೆ ಪ್ರವಾಸಿಗರಿಗೆ ನಿಷೇಧಾಜ್ಞೆ ಜಾರಿ ಮಾಡಿ ಮಳವಳ್ಳಿ ತಹಸೀಲ್ದಾರ್ ಕೆ.ಎನ್ ಲೋಕೇಶ್ ಆದೇಶ ಹೊರಡಿಸಿದ್ದಾರೆ. ಪ್ರವಾಹ ಕಡಿಮೆಯಾಗುವವರೆಗೂ ನಿಷೇಧ ಜಾರಿಯಲ್ಲಿ ಇರಲಿದೆ. ಹೀಗಾಗಿ ಪೊಲೀಸರು ಕಾವೇರಿ ನದಿ ದಡದಲ್ಲಿ ಅಪಾಯದ ಸೂಚನಾ ಫಲಕ ಹಾಕಿದ್ದಾರೆ.

ನಿಮಿಷಾಂಭ ದೇಗುಲದ ಸ್ನಾನ ಘಟ್ಟಕ್ಕೆ ಭಕ್ತರಿಗೆ ನಿರ್ಬಂಧ

ನಿಮಿಷಾಂಭ ದೇಗುಲದ ಭಕ್ತರಿಗೂ ಕಾವೇರಿ ಪ್ರವಾಹ ಬಿಸಿ ತಟ್ಟಿದೆ. ಕೆಆರ್‌ಎಸ್‌ನಿಂದ ನದಿಗೆ ಅಧಿಕ ನೀರು ಬಿಡುಗಡೆ ಮಾಡುತ್ತಿರುವುದರಿಂದ ಪ್ರಸಿದ್ಧ ನಿಮಿಷಾಂಭ ದೇವಾಲಯದ ಬಳಿ ಪ್ರವಾಹದ ಆತಂಕ ಎದುರಾಗಿದೆ. ಪ್ರವಾಹ ಹಿನ್ನೆಲೆಯಲ್ಲಿ ಕಾವೇರಿ ನದಿಗೆ ಇಳಿಯದಂತೆ ಭಕ್ತರಿಗೆ ಸೂಚನೆ ನೀಡಲಾಗಿದೆ. ದೇವಸ್ಥಾನದ ಬಳಿಯ ಸ್ನಾನ ಘಟ್ಟಕ್ಕೆ ಭಕ್ತರಿಗೆ ನಿರ್ಬಂಧ ಹೇರಲಾಗಿದೆ.

ರಂಗನತಿಟ್ಟು ಪಕ್ಷಿಧಾಮ ವಾಕಿಂಗ್ ಪಾಥ್ ಮುಳುಗಡೆ

ಮಂಡ್ಯ ಜಿಲ್ಲೆಯ ಪ್ರವಾಸಿ ತಾಣಗಳಿಗೆ ಪ್ರವಾಹ ಭೀತಿ ಎದುರಾಗಿದೆ. ಅಪಾಯದ ಮಟ್ಟ ಮೀರಿ ಹರಿಯುತ್ತಿರು ಕಾವೇರಿ ನದಿಯಿಂದಾಗಿ ರಂಗನತಿಟ್ಟು ಪಕ್ಷಿಧಾಮಕ್ಕೆ ಜಲ ದಿಗ್ಬಂದನ ಹಾಕಲಾಗಿದೆ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮಕ್ಕೆ ಕಾವೇರಿ ನೀರು ನುಗ್ಗಿದೆ. ಇದರಿಂದಾಗಿ ವಾಕಿಂಗ್ ಪಾಥ್, ಅರಣ್ಯ ಇಲಾಖೆ ಕಚೇರಿ ಜಲಾವೃತಗೊಂಡಿದೆ. ಈಗಾಗಲೇ ಪಕ್ಷಿಧಾಮಕ್ಕೆ ಪ್ರವಾಸಿಗರ ನಿರ್ಬಂಧ ಹೇರಲಾಗಿದೆ. ಜತೆಗೆ ಬೋಟಿಂಗ್ ವ್ಯವಸ್ಥೆ ಕೂಡ ಸ್ಥಗಿತ ಮಾಡಲಾಗಿದೆ.

ತುಂಗಭದ್ರಾದಿಂದ 1.50 ಲಕ್ಷ ಕ್ಯೂಸೆಕ್ ನೀರು ಬಿಡುಗಡೆ

ತುಂಗಭದ್ರಾ ಜಲಾಶಯದ 33 ಗೇಟ್‌ಗಳ ಮೂಲಕ ಶನಿವಾರ ಮತ್ತೆ 1.50 ಲಕ್ಷ ಕ್ಯೂಸೆಕ್ ನೀರು ನದಿಪಾತ್ರಕ್ಕೆ ಬಿಡುಗಡೆ ಮಾಡಲಾಗಿದೆ. ಮುನಿರಾಬಾದ್ ನೀರಾವರಿ ವೃತ್ತ ಹಾಗೂ ಕೊಪ್ಪಳ ಜಿಲ್ಲಾಡಳಿತವು ನದಿಪಾತ್ರದ ಹಳ್ಳಿಗಳ ಜನತೆಗೆ ನದಿಯ ಸ್ಥಳಕ್ಕೆ ತೆರಳುವುದನ್ನು ನಿಷೇಧಿಸಿದೆ. ಕಳೆದ ಕೆಲವು ದಿನಗಳಿಂದಲೂ ಒಳಹರಿವಿನ ಪ್ರಮಾಣ ಒಂದು ಲಕ್ಷ ಕ್ಯೂಸೆಕ್ ನಷ್ಟಿದೆ. ಶುಕ್ರವಾರ ಡ್ಯಾಂನ ಒಳ ಹರಿವು 1,00,871 ಕ್ಯೂಸೆಕ್ ನಷ್ಟಿದ್ದರೆ, ಶನಿವಾರದ ವೇಳೆಗೆ ಡ್ಯಾಂನ ಒಳ ಹರಿವು 1,17,950 ಕ್ಯೂಸೆಕ್ ನಷ್ಟು ಹೆಚ್ಚಾಗಿದೆ. ತುಂಗಭದ್ರಾ ಡ್ಯಾಂನಿಂದ ನದಿಗೆ ನೀರು ಬಿಟ್ಟ ಹಿನ್ನೆಲೆಯಲ್ಲಿ ಗಂಗಾವತಿ ತಾಲೂಕಿನ ಕಂಪ್ಲಿ ಸೇತುವೆ ಸಂಪೂರ್ಣ ಮುಳುಗಡೆಯಾಗಿವೆ.

ಮತ್ತೆ ಜಲಾವೃತಗೊಂಡ ಪತ್ತೆಪುರ ರಸ್ತೆ

ಶಿವಮೊಗ್ಗ ಜಿಲ್ಲೆಯ ಗಾಜನೂರಿನ ತುಂಗಾ ಜಲಾಶಯಕ್ಕೆ 70 ಸಾವಿರ ಕ್ಯೂಸೆಕ್ ಗಿಂತಲೂ ಅಧಿಕ ನೀರು ಬರುತ್ತಿದ್ದು ಅಷ್ಟೇ ಪ್ರಮಾಣದ ನೀರು ನದಿಗೆ ಬಿಡಲಾಗುತ್ತಿರುವುದರಿಂದ ಈ ಭಾಗದ ರಸ್ತೆಗಳು ಜಲಾವೃತವಾಗುತ್ತದೆ. ಇದರಿಂದ ಗದ್ದೆ ತೋಟಗಳು ಮುಳುಗಿ ತುಂಬಾ ನಷ್ಟವಾಗುತ್ತಿದೆ. ಪ್ರತಿವರ್ಷದ ಮಳೆಗಾಲದಲ್ಲಿ ಈ ಪರಿಸ್ಥಿತಿ ಉಂಟಾಗುತ್ತಿದ್ದು ಇದಕ್ಕೊಂದು ಶಾಶ್ವತ ಪರಿಹಾರವನ್ನು ಸರಕಾರ ಕೈಗೊಳ್ಳಬೇಕಿದೆ ಎಂಬುದು ಈ ಭಾಗದ ರೈತರ, ಗ್ರಾಮಸ್ಥರ ಮತ್ತು ಭಕ್ತರ ಆಗ್ರಹವಾಗಿದೆ.

ಶ್ರೀರಂಗಪಟ್ಟಣದಲ್ಲಿ ಪಿಂಡ ಪ್ರದಾನಕ್ಕೆ ಬ್ರೇಕ್

ಕಾವೇರಿ ನದಿ ಉಕ್ಕಿ ಹರಿಯುತ್ತಿದ್ದು, ಪ್ರವಾಹ ಸೃಷ್ಟಿಯಾಗಿದೆ. ಹೀಗಾಗಿ ಶ್ರೀರಂಗಪಟ್ಟಣದಲ್ಲಿ ಪಿಂಡ ಪ್ರದಾನಕ್ಕೆ ಬ್ರೇಕ್ ಹಾಕಲಾಗಿದೆ. ನದಿಗೆ ಇಳಿಯದಂತೆ ಜಿಲ್ಲಾಡಳಿತ ಕಬ್ಬಿಣದ ರಾಡ್‌ಗಳನ್ನು ಬಳಸಿ ತಡೆಗೋಡೆ ನಿರ್ಮಿಸಿದೆ. ನಿತ್ಯ ನೂರಾರು ಸಂಖ್ಯೆಯಲ್ಲಿ ಬಂದು ತಮ್ಮಪೂರ್ವಿಕರು, ಸಂಬಂಧಿಕರ ಅಸ್ತಿ ವಿಸರ್ಜನೆ ಜತೆಗೆ ಪಿಂಡ ಪ್ರಧಾನ ಮಾಡುತ್ತಿದ್ದರು. ಈಗ ಕಾವೇರಿ ನದಿಯಲ್ಲಿ ಪ್ರವಾಹ ಹಿನ್ನೆಲೆ ನದಿ ದಂಡೆಯಲ್ಲಿ ಕುಳಿತು ಪೂಜೆ ಮಾಡುವ ಅವಕಾಶ ಇಲ್ಲ. ಜನರು ಪಿಂಡ ಪ್ರದಾನಕ್ಕೆ ಬಂದು ವಾಪಸ್ ಹೋಗುತ್ತಿದ್ದಾರೆ.

ತೆಪ್ಪದಲ್ಲಿ ತೆರಳಿ ಪರಿಸ್ಥಿತಿ ಅವಲೋಕಿಸಿದ ಡಿಸಿ

ವಿಜಯಪುರ ಜಿಲ್ಲೆಯ ಉತ್ತರ-ದಕ್ಷಿಣದ ಗಡಿಯಲ್ಲಿ ನಾಡಿನ ಜೀವನದಿ ಕೃಷ್ಣಾ ಹಾಗೂ ಉಪ ನದಿ ಭೀಮೆಯ ಮಡಿಲಲ್ಲಿ ಪ್ರವಾಹ ಭೀತಿ ಎದುರಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾಡಳಿತದ ವಿವಿಧ ಅಧಿಕಾರಿಗಳ ತಂಡ ನದಿಗಳ ತೀರ ಪ್ರದೇಶದ ಹಳ್ಳಿಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕನ ನಡೆಸಿದ್ದಾರೆ. ಶನಿವಾರ ಕೃಷ್ಣಾ ನದಿ ತೀರದ ಮುದ್ದೇಬಿಹಾಳ, ನಿಡಗುಂದಿ ತಾಲೂಕಿನ ವಿವಿಧ ಹಳ್ಳಿಗಳಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಭೂಬಾಲನ್ ತುಂಬಿ ಹರಿಯುತ್ತಿರುವ ಕೃಷ್ಣಾ ನದಿಯಲ್ಲಿ ತೆಪ್ಪದಲ್ಲಿ ತೆರಳಿ ಪ್ರವಾಹದ ಪರಿಸ್ಥಿತಿಯನ್ನು ಖುದ್ದು ಪರಿಶೀಲಿಸಿದರು.

ವಾರದಿಂದ ವಿದ್ಯುತ್, ನೆಟ್ ವರ್ಕ್ ಇಲ್ಲ

ಚಿಕ್ಕಮಗಳೂರಿನಲ್ಲಿ ಮಳೆಯ ಅಬ್ಬರಕ್ಕೆ ಮಲೆನಾಡು ಹೊರಗಿನ ಜಗತ್ತಿನ ಕೊಂಡಿಯನ್ನೇ ಕಳೆದುಕೊಳ್ಳುತ್ತಿದೆ. ಜನರು ವಿದ್ಯುತ್ ಸಂಪರ್ಕವಿಲ್ಲದೆ ಕತ್ತಲೆಯಲ್ಲಿ ದಿನದೂಡುವಂತಾಗಿದೆ. ವಾರಗಟ್ಟಲೇ ವಿದ್ಯುತ್ ಇಲ್ಲದೆ ನೆಟ್ ವರ್ಕ್‌ಗಳು ಕಾರ್ಯ ನಿರ್ವಹಿಸುತ್ತಿಲ್ಲ. ಮೊಬೈಲ್‌ಗಳು ಸ್ವಿಚ್ ಆಫ್ ಆಗಿದ್ದು ಮೊಬೈಲ್ ಚಾರ್ಜ್ ಮಾಡಲು ಜನರೇಟರ್ ಮೊರೆಹೋಗುತ್ತಿದ್ದಾರೆ. ಜಿಲ್ಲೆಯ ಕಳಸ, ಮೂಡಿಗೆರೆ, ಶೃಂಗೇರಿ, ಕೊಪ್ಪ, ಚಿಕ್ಕಮಗಳೂರು ಹಲವೆಡೆ ನೆಟ್‌ವರ್ಕ್ ಸಮಸ್ಯೆ ಎದುರಾಗಿದೆ. ಜನರೇಟರ್ ಮೂಲಕ ಮೊಬೈಲ್ ಚಾರ್ಜ್ ಆದರೂ ಬಿಎಸ್‌ಎನ್‌ಎಲ್ ಸೇರಿದಂತೆ ಯಾವುದೇ ಖಾಸಗಿ ಕಂಪನಿಗಳ ನೆಟ್ ವರ್ಕ್ ಇಲ್ಲವಾಗಿದೆ.

ಫಿಟ್ಸ್ ಬಂದು ನದಿಗೆ ಬಿದ್ದ ಮೀನುಗಾರ

ಬಳ್ಳಾರಿಯ ಕಂಪ್ಲಿಯಲ್ಲಿ ಮೀನು ಹಿಡಿಯುವಾಗ ಫಿಟ್ಸ್ ಬಂದು ಮೀನುಗಾರ ನದಿಗೆ ಬಿದ್ದ ಘಟನೆ ನಡೆದಿದೆ. ಕಂಪ್ಲಿ ಕೋಟೆಯ ಬಳಿ ತುಂಗಭದ್ರಾ ನದಿ ತಟದಲ್ಲಿ ಮೀನುಗಾರ ಕರ್ಪಣ್ಣ ಮೀನು ಹಿಡಿಯುವಾಗ ಫಿಟ್ಸ್ ಬಂದಿದೆ. ಈ ವೇಳೆ ಏಕಾಏಕಿ ನದಿಗೆ ಬಿದ್ದಿದ್ದಾರೆ. ಕೂಡಲೇ ಸ್ಥಳೀಯರು ನದಿಯಲ್ಲಿ ಮುಳುಗಿದ್ದ ಕರ್ಪಣ್ಣರನ್ನು ಕಂಡು ರಕ್ಷಿಸಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ.

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಚಿಕ್ಕಮಗಳೂರು-577101.
(Autonomous Medical Institution of Govt. of Karnataka)
E-mail: directorcims2020@gmail.com Ph:08262-295347
ಸಂಖ್ಯೆ: ಸಿಮ್ಸ್/ಸರಬ/ಟೆಂಡರ್/ಪತ್ರಿಕಾ ಪ್ರಕಟಣೆ/01/2023-24 ದಿ: 24.07.2024

ಇ-ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು, ಮೈಕ್ರೋಬಯಾಲಜಿ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳು, ಇನ್ಸ್ಟ್ರುಮೆಂಟ್ಸ್‌ಗಳು ಹಾಗೂ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಸರಬರಾಜು ಮಾಡಲು ಉತ್ಪಾದಕರವರಿಂದ/ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಮತ್ತಿತ್ತರ ವಿವರಗಳನ್ನು ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು.

ಕ್ರ.ಸಂ. 1. ವಿವರಗಳು: ಲ್ಯಾಪ್‌ಟಾಪ್‌ಗಳು (ಎಸ್‌ಸಿಪಿ/ಟಿಎಸ್‌ಪಿ) **ಟೆಂಡರ್‌ನ ಅಂದಾಜು ಮೊತ್ತ :** 48.50 ಲಕ್ಷಗಳು (ಇ.ಎಂ.ಡಿ ರೂ.1,21,500) **ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ:** 25.07.2024 **ಅರ್ಜಿ ಸಲ್ಲಿಕೆ ಅಂತಿಮ ದಿನಾಂಕ:** 12.08.2024

ಕ್ರ.ಸಂ. 2. ವಿವರಗಳು: ಮೈಕ್ರೋಬಯಾಲಜಿ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳು, ಇನ್ಸ್ಟ್ರುಮೆಂಟ್ಸ್‌ಗಳು ಹಾಗೂ ಇತರೆ ಐಟಂಗಳು **ಟೆಂಡರ್‌ನ ಅಂದಾಜು ಮೊತ್ತ :** 108.00 ಲಕ್ಷಗಳು (ಇ.ಎಂ.ಡಿ ರೂ.1,62,000) **ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ:** 26.07.2024 **ಅರ್ಜಿ ಸಲ್ಲಿಕೆ ಅಂತಿಮ ದಿನಾಂಕ:** 14.08.2024

ಸಹಿ/- ನಿರ್ದೇಶಕರು, ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಚಿ/34/24-25/360

ಪರಿಹಾರ ಜತೆಗೆ ಹೊಸ ಮನೆಗೆ ಕ್ರಮ

ನೆರೆ ಪೀಡಿತ ಪ್ರದೇಶಗಳಿಗೆ ಸಚಿವ ಕೃಷ್ಣ ಬೈರೇಗೌಡ ಭೇಟಿ

ಹೊಳೆನರಸೀಪುರದ ನೆರೆ ಪೀಡಿತ ಪ್ರದೇಶಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಶನಿವಾರ ಭೇಟಿ ನೀಡಿ ಪರಿಶೀಲಿಸಿದರು

ಕಳಸಾ- ಬಂಡೂರಿಗೆ ಅನುಮತಿ ಕೊಡಿಸಿ

ದೊಡ್ಡ ಯಜಮಾನರು, ಚಿಕ್ಕ ಯಜಮಾನರು ಪ್ರಧಾನಿಯನ್ನು ಭೇಟಿ ಮಾಡಿದ್ದಾರೆ. ಭೇಟಿ ವೇಳೆ ಪ್ರಧಾನಿ ಕೈ ಹಿಡಿದು, ಮೇಕೆದಾಟು, ಕಳಸಾ- ಬಂಡೂರಿ ಯೋಜನೆಗೆ ಸಹಿ ಹಾಕಿಸಿದ್ದರೆ ನಾವು ಧನ್ಯವಾದ ಹೇಳಿ ಕೈ ಮುಗಿಯುತ್ತಿದ್ದೆವು ಎಂದು ಎಚ್.ಡಿ. ದೇವೇಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರನ್ನು ಕಂದಾಯ ಸಚಿವ ಕೃಷ್ಣ ಬೈರೇಗೌಡ ಪರೋಕ್ಷವಾಗಿ ಟೀಕಿಸಿದರು.

ಹೊಳೆನರಸೀಪುರ: ರಾಜ್ಯದಲ್ಲಿ ನೆರೆ ಪರಿಹಾರ ಹಾಗೂ ಇತರೆ ಕಾರ್ಯಕ್ರಮಗಳಿಗೆ ಒಟ್ಟು 777 ಕೋಟಿ ಬಿಡುಗಡೆ ಮಾಡಲಾಗಿದೆ. ಹಾಸನ ಜಿಲ್ಲೆಗೆ 23 ಕೋಟಿ ನೀಡಲಾಗಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಶನಿವಾರ ತಿಳಿಸಿದರು.

ಪಟ್ಟಣದಲ್ಲಿ ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ನೆರೆ ಹಾವಳಿಗೆ ತುತ್ತಾದವರಿಗೆ ತಕ್ಷಣ ನೆರವು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಮನೆಗೆ ಭಾಗಶಃ ಹಾನಿಯಾದರೆ 50 ಸಾವಿರ ಕೊಡಲು ಮುಖ್ಯಮಂತ್ರಿಯೊಂದಿಗೆ ಚರ್ಚಿಸಲಾಗಿದೆ. ಪೂರ್ಣ ಹಾನಿಯಾದರೆ 1.25 ಲಕ್ಷ ಪರಿಹಾರದ ಜತೆ ಹೊಸ ಮನೆ ನೀಡುತ್ತೇವೆ. ಈ ಬಗ್ಗೆ ಸರಕಾರ ಕ್ರಮ ಕೈಗೊಂಡಿದೆ' ಎಂದರು.

ರಾಜ್ಯದಲ್ಲಿ ವಾಡಿಕೆ ಪ್ರಕಾರ 41.9 ಸೆಂ.ಮೀ. ಮಳೆಯಾಗಬೇಕಿತ್ತು. ಈಗಾಗಲೇ 54 ಸೆಂ.ಮೀ.ಗಿಂತ ಹೆಚ್ಚು ಮಳೆಯಾಗಿದೆ. 600 ಮನೆಗಳು ಬಿದ್ದಿವೆ. ಸಾವುಗಳು ಸಂಭವಿಸಿವೆ. 114 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. ಕಾಲಕಾಲಕ್ಕೆ ಪರಿಹಾರ ನೀಡಲಾಗುತ್ತಿದೆ' ಎಂದರು.

ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಅನ್ಯಾಯ ಮಾಡಲಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ಘೋಷಿಸಿರುವ 5 ಸಾವಿರ ಕೋಟಿಯನ್ನು ಬಿಡುಗಡೆ ಮಾಡಿಸಿ ಎಂದು ಒತ್ತಾಯಿಸಿದರು.

ಬ್ರ್ಯಾಂಡ್ ಬೆಂಗಳೂರಿಗೆ ಮಾಸ್ಟರ್ ಪ್ಲಾನ್

← ಮೊದಲಪುಟದಿಂದ

ನೀವು ಚರ್ಚೆ ಮಾಡಿ, ನಿಮ್ಮ ಸಲಹೆ ಸೂಚನೆ ಪರಿಗಣಿಸುತ್ತೇವೆ. ನಿಮ್ಮೆಲ್ಲರ ಒತ್ತಾಯದಂತೆ ಗ್ರೇಟರ್ ಬೆಂಗಳೂರು ವಿಚಾರವಾಗಿ ಸದನ ಸಮಿತಿ ರಚಿಸಲು ತೀರ್ಮಾನಿಸಿದ್ದೇವೆ ಎಂದು ಹೇಳಿದರು.

ಬೆಂಗಳೂರು ನಗರಾಭಿವೃದ್ಧಿ ಇಲಾಖೆ ಬಹಳ ಸವಾಲಿನ ಇಲಾಖೆ. ಬೆಂಗಳೂರಿನ ಸಮಸ್ಯೆಗಳಿಗೆ ಹೊಸ ರೂಪ ನೀಡುವ ಪ್ರಯತ್ನ ಮಾಡುತ್ತಿದ್ದೇನೆ. ಕೆಂಪೇಗೌಡರು ಬೆಂಗಳೂರನ್ನು ಕಟ್ಟಿದರು. ಕೆಂಗಲ್ ಹನುಮಂತಯ್ಯನವರು ಇಲ್ಲಿ ವಿಧಾನಸೌಧ ಕಟ್ಟಿಸಿದರು. ಎಸ್.ಎಂ ಕೃಷ್ಣ ಅವರು ಇದನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದರು. ಬೆಂಗಳೂರು ಯೋಜಿತ ನಗರವಲ್ಲ. ನಾನು ಈ ಹಿಂದೆ ನಗರಾಭಿವೃದ್ಧಿ ಸಚಿವನಾಗಿದ್ದಾಗ ಬೆಂಗಳೂರಿನ ಜನಸಂಖ್ಯೆ 70 ಲಕ್ಷ ಇತ್ತು. ಈಗ ಅದು 1.40 ಕೋಟಿಗೆ ಏರಿಕೆಯಾಗಿದೆ. 1.04 ಕೋಟಿ ವಾಹನಗಳಿವೆ. ಪ್ರತಿನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ಬೆಂಗಳೂರಿಗೆ ಆಗಮಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಇಲ್ಲಿರುವ ತಂತ್ರಜ್ಞಾನ, , ಮಾನವ ಸಂಪನ್ಮೂಲ, ಹವಾಮಾನ, ಸಂಸ್ಕೃತಿ ನೋಡಿ ಇಲ್ಲಿಗೆ ಬಂದವರು ಮತ್ತೆ ವಾಪಸ್ ಹೋಗುತ್ತಿಲ್ಲ. ಮಕ್ಕಳ ಶಿಕ್ಷಣ, ಉದ್ಯೋಗಕ್ಕಾಗಿ ಬಂದವರು ಕೂಡ ಇಲ್ಲೇ ಉಳಿದುಕೊಂಡಿದ್ದಾರೆ. ಹೀಗೆ ಬೆಂಗಳೂರು ಅನಿಯಂತ್ರಿತವಾಗಿ ಬೆಳೆಯುತ್ತಿದೆ. ಬಿಜೆಪಿ ಸರಕಾರ 110 ಹಳ್ಳಿಗಳನ್ನು ಬೆಂಗಳೂರಿನ ವ್ಯಾಪ್ತಿಗೆ ಸೇರಿಸಿದ್ದು, ಇಲ್ಲಿಯವರೆಗೂ ಆ ಭಾಗಕ್ಕೆ ಮೂಲಸೌಕರ್ಯ ಒದಗಿಸಿಕೊಡಲು ಸಾಧ್ಯವಾಗಿಲ್ಲ. ಇದರ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ಕಾವೇರಿ ನೀರಿನ ಸಮಸ್ಯೆ ಒಂದೆಡೆಯಾದರೆ, ಕಳೆದ ಬೇಸಿಗೆಯಲ್ಲಿ ನಗರದ 7 ಸಾವಿರ ಕೊಳವೆಬಾವಿ ಬರಿದಾಗಿ ಸಮಸ್ಯೆ ಉದ್ಭವಿಸಿತ್ತು. ಕೆರೆಗಳನ್ನು ಉಳಿಸಿ ಜೀವಂತವಾಗಿರಿಸಿಕೊಳ್ಳಬೇಕು. ಇದಕ್ಕಾಗಿ ಏನು ಮಾಡಬೇಕು ಚರ್ಚೆ ಮಾಡಲಾಗುತ್ತಿದೆ. ಅಂತರ್ಜಲ ಹೆಚ್ಚಿಸದಿದ್ದರೆ ಪರ್ಯಾಯ ಅವಕಾಶವಿಲ್ಲ ಎಂದರು.

ಸಭೆಯಲ್ಲಿ ಚರ್ಚಿತ ವಿಷಯಗಳು

- ಬೆಂಗಳೂರಿನಲ್ಲಿ ಸ್ಕೈಡೆಕ್ ನಿರ್ಮಿಸಲು ಯೋಜನೆ ರೂಪಿಸಲಾಗಿದೆ.
- ಎಸ್ಟೀಮ್ ಮಾಲ್ ಟು ಸಿಲ್ಕ್ ಬೋರ್ಡ್‌ವರೆಗೆ ಸುರಂಗ ಮಾರ್ಗ ಮಾಡುವ ಬಗ್ಗೆ ಚರ್ಚೆ
- 12 ಕೋಟಿ ರು. ವೆಚ್ಚದಲ್ಲಿ 100 ಕಿಮೀ ಸಿಗ್ನಲ್ ಫ್ರೀ ಕಾರಿಡಾರ್ ಮಾಡುವ ತೀರ್ಮಾನ
- ತಂತ್ರಜ್ಞಾನ, ಮಾನವ ಸಂಪನ್ಮೂಲ, ಹವಾಮಾನ, ಸಂಸ್ಕೃತಿ ನೋಡಿ ಇಲ್ಲಿಗೆ ಬಂದವರು ಮತ್ತೆ ವಾಪಸ್ ಹೋಗುತ್ತಿಲ್ಲ.
- ಬಿಜೆಪಿ ಸರಕಾರ 110 ಹಳ್ಳಿಗಳನ್ನು ಬೆಂಗಳೂರಿನ ವ್ಯಾಪ್ತಿಗೆ ಸೇರಿಸಿದ್ದು, ಆ ಭಾಗಕ್ಕೆ ಸೌಕರ್ಯ ಒದಗಿಸಿಕೊಡಲು ಸಾಧ್ಯವಾಗಿಲ್ಲ.
- ಕಾವೇರಿ ನೀರಿನ ಸಮಸ್ಯೆ ಒಂದೆಡೆಯಾದರೆ, ಬೇಸಿಗೆಯಲ್ಲಿ ನಗರದ 7 ಸಾವಿರ ಕೊಳವೆಬಾವಿ ಬರಿದಾಗಿ ಸಮಸ್ಯೆ ಉದ್ಭವಿಸಿತ್ತು.
- ಕೆರೆಗಳನ್ನು ಉಳಿಸಿ ಜೀವಂತವಾಗಿರಿಸಿಕೊಳ್ಳಬೇಕು.
- ಕಸದ ವಿಚಾರ, ಸಂಚಾರಿ ದಟ್ಟಣೆ ಸಮಸ್ಯೆ ಹೆಚ್ಚಾಗಿದೆ.
- ಕಸ ಹಾಗೂ ಸಂಚಾರಿ ದಟ್ಟಣೆ ಸಮಸ್ಯೆ ವಿಚಾರವಾಗಿ ಸುಮಾರು 70 ಸಾವಿರ ಸಲಹೆಗಳು ಬಂದಿವೆ.

ಟ್ವೀಟೂ-ಖಾರಾ

ಮಲ್ಲಿಕಾರ್ಜುನ ಖರ್ಗೆ
ಎಐಸಿಸಿ ಅಧ್ಯಕ್ಷರು

ಕಾರ್ಗಿಲ್ ಹುತಾತ್ಮರಿಗೆ ಗೌರವ ಅರ್ಪಣೆ ವೇಳೆಯೂ ಪ್ರಧಾನಿ ಮೋದಿ ಕ್ಷುಲ್ಲಕ ರಾಜಕೀಯ ಮಾಡಿದ್ದಾರೆ.ಸೇನೆಯ ಅಪೇಕ್ಷೆಯಂತೆ ತಮ್ಮ ಸರಕಾರ ಅಗ್ನಿಪಥ ಯೋಜನೆ ಜಾರಿಗೊಳಿಸಿದೆ ಎಂದು ಸುಳ್ಳು ಹೇಳಿದ್ದಾರೆ. ಇದು ನಮ್ಮ ಸಶಸ್ತ್ರ ಪಡೆಗಳಿಗೆ ಮಾಡಿದ ಅಪಮಾನವಾಗಿದೆ. ಯಾವ ಪ್ರಧಾನಿಯೂ ಈ ರೀತಿ ಮಾತನಾಡಿರಲಿಲ್ಲ.

ಜೈಪಾಲ್ ಜೈನಿವಾಲ್
ಹರ್ಯಾಣ

ಈ ಹಿಂದೆ ಮೋದಿ ಸರಕಾರ ಜಾರಿಗೊಳಿಸಿದ್ದ ಮೂರು ಕರಾಳ ಕೃಷಿ ಕಾಯಿದೆಗಳು ಒಳ್ಳೆಯದೆಂದು ಬಣ್ಣಿಸಲಾಗಿತ್ತು. ಆದರೆ ಚುನಾವಣೆ ಸಮೀಪಿಸಿದಂತೆ ಅವುಗಳನ್ನು ವಾಪಸ್ ತೆಗೆದುಕೊಳ್ಳಲಾಯಿತು. ಹಾಗೆಯೇ ಅಗ್ನಿವೀರ್ ಯೋಜನೆಯನ್ನು ಹಿಂತೆಗೆದುಕೊಳ್ಳುವುದು ಖಚಿತ

ನಮ್ಮನ್ನು ನಾಶಮಾಡಲು ಕುಮಾರಸ್ವಾಮಿ ಪ್ರತಿನಿತ್ಯ ರಾಜಕಾರಣ: ಡಿಕೆಶಿ

2028ರಲ್ಲೂ ನಮ್ಮ ಸರಕಾರ ಅಧಿಕಾರಕ್ಕೆ

ಬೆಂಗಳೂರು: 2028ರಲ್ಲೂ ಕಾಂಗ್ರೆಸ್ ಸರಕಾರವೇ ಅಧಿಕಾರಕ್ಕೆ ಬರಲಿದೆ. ಬೇಕಿದ್ದರೆ ಈ ಮಾತನ್ನು ಬರೆದಿಟ್ಟುಕೊಳ್ಳಿ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ರಾಮನಗರ ಹೆಸರು ಬದಲಾವಣೆ ಮಾಡಲು ಹೊರಟಿರುವವರು ಸರ್ವನಾಶವಾಗುತ್ತಾರೆ ಎಂಬ ಕುಮಾರಸ್ವಾಮಿ ಅವರ ಹೇಳಿಕೆ ಬಗ್ಗೆ ಅವರು ಪ್ರತಿಕ್ರಿಯಿಸಿ, ಕುಮಾರಸ್ವಾಮಿ ನಮ್ಮನ್ನು ಸರ್ವನಾಶ ಮಾಡಲು ಪ್ರತಿನಿತ್ಯ ರಾಜಕಾರಣ ಮಾಡುತ್ತಿದ್ದಾರೆ. ಅವರ ನಡೆ, ಹೆಜ್ಜೆ, ಭಾವನೆ, ಚಿಂತನೆ, ಅವರ ಆಚಾರ, ವಿಚಾರ ಎಲ್ಲವೂ ನಮಗೆ ಗೊತ್ತಿದೆ. ನಾವು ರಾಮನಗರದ ಹೆಸರನ್ನು ಬದಲಿಸುತ್ತಿಲ್ಲ, ಇದು ನಮ್ಮ ಜಿಲ್ಲೆ, ಇವರು ಬಂದು ಅಕ್ರಮವಾಗಿ ಜಿಲ್ಲೆಯ ಗುರುತನ್ನು ಬದಲಿಸಿದ್ದಾರೆ. ರಾಜಕೀಯವಾಗಿ ಇದಕ್ಕೆ ಅವಕಾಶವಿದೆ ಮಾಡಿದ್ದಾರೆ. ರಾಮನಗರ, ಚನ್ನಪಟ್ಟಣ, ಕನಕಪುರ, ಮಾಗಡಿ ತಾಲೂಕಿನ ಜನ ನಮ್ಮವರು, ಬೆಂಗಳೂರಿನವರು ಎಂದು ವಾಗ್ದಾಳಿ ನಡೆಸಿದರು.

ನಾನು ಬೆಂಗಳೂರು ಜಿಲ್ಲಾ ಪಂಚಾಯಿತಿ ಸದಸ್ಯನಾಗಿದ್ದೆ. ಕುಮಾರಸ್ವಾಮಿ ಹಾಗೂ ದೇವೇಗೌಡರು ಹಾಸನದಿಂದ ಬಂದಿದ್ದಾರೆ. ದೇವೇಗೌಡರು, ಕುಮಾರಸ್ವಾಮಿ ಇಲ್ಲಿಗೆ ಬಂದಾಗ ಇದು ಬೆಂಗಳೂರಾಗಿಯೇ ಇತ್ತು. ಅವರು ಪ್ರಧಾನಮಂತ್ರಿ, ಮುಖ್ಯಮಂತ್ರಿಯಾದಾಗಲೂ ಇದು ಬೆಂಗಳೂರಾಗಿಯೇ ಇತ್ತು. ಇದು ನಮ್ಮ ಜಿಲ್ಲೆ. ನಾವು ಭಾರತೀಯರು ಎಂದು ಹೇಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೋ, ಅದೇ ರೀತಿ ನಾವು ಬೆಂಗಳೂರಿನವರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಕುಮಾರಸ್ವಾಮಿ ಅವರು ಅಧಿಕಾರಕ್ಕೆ ಬಂದಾಗ ಜಿಲ್ಲೆಯನ್ನು ಒಡೆದು ಬೇರೆ ಹೆಸರು ಕೊಟ್ಟರು ಎಂದು ತಿಳಿಸಿದರು.

ಕೆಂಗಲ್ ಹನುಮಂತಯ್ಯ ಅವರು ವಿಧಾನಸೌಧ ಕಟ್ಟಿದ್ದು ಬೆಂಗಳೂರಿನಲ್ಲಿ, ರಾಮಕೃಷ್ಣ ಹೆಗಡೆ ಅವರು ಬಂದು ನಿಂತಿದ್ದು ಬೆಂಗಳೂರಿನಲ್ಲಿ. ಈ ಬೆಂಗಳೂರು ನಾಲ್ಕೈದು ಮುಖ್ಯಮಂತ್ರಿಗಳನ್ನು ಮಾಡಿದೆ. ನಮ್ಮ ಜಿಲ್ಲೆಯನ್ನು ಪ್ರತ್ಯೇಕ ಜಿಲ್ಲೆಯಾಗಿ ಮಾಡುವಾಗ ಬೆಂಗಳೂರು ಹೆಸರು ಉಳಿಸಿಕೊಳ್ಳುವಂತೆ ನಾವು ಸಲಹೆ ನೀಡಿದ್ದೆವು. ಬೆಂಗಳೂರು ಇಂದು ವಿಶ್ವಮಟ್ಟದಲ್ಲಿ ಹೆಸರು ಮಾಡಿದೆ. ನಮ್ಮ ಪೂರ್ವಜರು ಕೊಟ್ಟಿರುವ ಈ ಹೆಸರನ್ನು ನಾವು ಯಾಕೆ ಕಳೆದುಕೊಳ್ಳಬೇಕು. ಈ ಜಿಲ್ಲೆಯ ಆಡಳಿತ ಕೇಂದ್ರ ರಾಮನಗರದಲ್ಲೇ ಇರುತ್ತದೆ. ಈ ಜಿಲ್ಲೆಯ ಜನಕ್ಕೆ ಹೊಸ ದಿಕ್ಕನ್ನು ನೀಡಬೇಕು, ಹೊಸ ಆಲೋಚನೆ, ಅಭಿವೃದ್ಧಿ ನೀಡಬೇಕು, ಮುಂದಿನ ಪೀಳಿಗೆ ದೃಷ್ಟಿಯಿಂದ ನಾವು ಆಲೋಚನೆ ಮಾಡಿ ಈ ತೀರ್ಮಾನ ಮಾಡಿದ್ದೇವೆ. ನಮ್ಮ ಈ ತೀರ್ಮಾನಕ್ಕೆ ಪಕ್ಷಾತೀತವಾಗಿ ಜನರು ಸಂತೋಷವಾಗಿದ್ದಾರೆ ಎಂದು ತಿಳಿಸಿದರು.

ಎಚ್‌ಡಿಕೆ ಹೇಳಿದ್ದೇನು?

ಭೂಮಿ ಇರುವ ತನಕ ರಾಮನಗರ ಹೆಸರು ತೆಗೆಯಲು ಆಗಲ್ಲ. ಭೂಮಿ ಬೆಲೆ ಏರಿಸಿಕೊಳ್ಳೋಕಾ ಇದು ಮಾಡುತ್ತಿರುವುದು. ಸ್ವಲ್ಪ ದಿನ ಖುಷಿಯಾಗಿರಲಿ 2028ಕ್ಕೆ ಮತ್ತೆ ಮರುನಾಮಕರಣ ಮಾಡುತ್ತೇವೆ. ಇನ್ನು ರಾಮನಗರ ಎಲ್ಲಿದೆಯೋ ಅಲ್ಲೇ ಇರುತ್ತದೆ. ಜಿಲ್ಲಾಡಳಿತವೂ ರಾಮನಗರ ಪಟ್ಟಣದಲ್ಲೇ ಇರುತ್ತದೆ. ಆದರೆ, ಇನ್ನು ಮುಂದೆ ರಾಮನಗರಕ್ಕಿರುವ ಜಿಲ್ಲೆ ಎಂಬ ಬಿರುದು ಕಳಚಿಕೊಳ್ಳಲಿದೆ. ರಾಮನಗರ ಎನ್ನುವ ಬದಲು, ಸರಕಾರಿ ದಾಖಲೆಗಳಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆ ಅಂತಾ ನಮೂದಾಗಲಿದೆ. ಉತ್ತರ ಕನ್ನಡಕ್ಕೆ ಹೇಗೆ ಕಾರವಾರ ಇದೆಯೋ ಅದೇ ರೀತಿ ರಾಮನಗರ ಜಿಲ್ಲಾ ಕೇಂದ್ರವಾಗಷ್ಟೇ ಉಳಿಯಲಿದೆ. ಇದು ಗ್ರೇಟರ್ ಬೆಂಗಳೂರಿಗೆ ಅನುಕೂಲವಾಗಲಿದೆ. ರಾಮನಗರ ಅಭಿವೃದ್ಧಿಯಾಗಲಿದೆ ಎನ್ನುವುದು ಕಾಂಗ್ರೆಸ್ ನಾಯಕರ ವಾದ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದರು.

ಬೃಂದಾವನ ಮೇಲ್ದರ್ಜೆಗೆ ಏರಿಕೆ

ಕೆಆರ್‌ಎಸ್ ಬೃಂದಾವನ ಉದ್ಯಾನವನಕ್ಕೆ ಹೊಸ ರೂಪ ನೀಡಲು ಮುಂದಾಗಿರುವ ಯೋಜನೆಯಿಂದ ಸರಕಾರದ ಹಣ ವ್ಯರ್ಥವಾಗಲಿದೆ ಎಂಬ ವಿಪಕ್ಷ ಟೀಕೆಯ ಬಗ್ಗೆ ಅವರು ಪ್ರತಿಕ್ರಿಯಿಸಿದರು. ಅವರ ಆರೋಪ ಬೋಗಸ್ ಆಗಿದೆ. ಇದು ಸಿದ್ದರಾಮಯ್ಯ ಅವರ ಈ ಹಿಂದಿನ ಸರಕಾರದಲ್ಲಿ ಪ್ರಸ್ತಾವನೆಯಾದ ಯೋಜನೆ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾದಾಗ, ನಾನು ನೀರಾವರಿ ಸಚಿವನಾಗಿದ್ದಾಗ ಈ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಈಗ ಬೃಂದಾವನ ಉದ್ಯಾನವನವನ್ನು ವಿಶ್ವದರ್ಜೆ ಮಟ್ಟಕ್ಕೆ ಹೆಚ್ಚಿಸಲು ಮುಂದಾಗಿದ್ದೇವೆ. ಖಾಸಗಿ ಹಾಗೂ ಸಾರ್ವಜನಿಕ ಸಹಭಾಗಿತ್ವದಲ್ಲಿ ಈ ಯೋಜನೆ ಕೈಗೊಳ್ಳಲಾಗಿದೆ. ಇದರಿಂದ ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ಸಿಗಲಿದೆ. ಗಂಗಾ ಆರತಿ ಮಾದರಿಯಲ್ಲಿ ಕಾವೇರಿ ಆರತಿ ಕಾರ್ಯಕ್ರಮ ಮಾಡುತ್ತಿದ್ದು, ಪ್ರವಾಸೋದ್ಯಮ ಉದ್ದೇಶದಿಂದ ಈ ಯೋಜನೆಗಳನ್ನು ಮಾಡಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಡಿ.ಕೆ.ಶಿವಕುಮಾರ್ ಹೇಳಿಕೆಗೆ ಎಚ್‌ಡಿಕೆ ತಿರುಗೇಟು

ರಾಜ್ಯದಲ್ಲಿ ಈಗ ಚುನಾವಣೆ ನಡೆದರೆ ಕಾಂಗ್ರೆಸ್ ಸೋಲು

ಬೆಂಗಳೂರು: ರಾಮನಗರ ಜಿಲ್ಲೆಯ ಹೆಸರನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂಬುದಾಗಿ ಬದಲಾಯಿಸಲು ರಾಜ್ಯ ಸಚಿವ ಸಂಪುಟ ಸಭೆ ಒಪ್ಪಿಗೆ ಸೂಚಿಸಿದ ಬಳಿಕ ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ನಡುವಿನ ವಾಕ್ಸಮರ ತಾರಕಕ್ಕೇರಿದೆ.

ಇದಕ್ಕೆ ನಿದರ್ಶನ ಎಂಬಂತೆ, 10 ವರ್ಷ ಆದ ಮೇಲೂ ರಾಜ್ಯದಲ್ಲಿ ನಾವೇ ಸರಕಾರ ರಚಿಸುತ್ತೇವೆ ಎಂಬುದಾಗಿ ಡಿ.ಕೆ. ಶಿವಕುಮಾರ್ ನೀಡಿದ ಹೇಳಿಕೆಗೆ ಎಚ್.ಡಿ.ಕುಮಾರಸ್ವಾಮಿ ತಿರುಗೇಟು ನೀಡಿದ್ದು, ಕಾಂಗ್ರೆಸ್ ಎಸಗಿರುವ ಭ್ರಷ್ಟಾಚಾರ ನೋಡಿದರೆ, ನಾಳೆ ಚುನಾವಣೆ ನಡೆದರೂ, ಜನ ಕಾಂಗ್ರೆಸ್ ಅನ್ನು ಮನೆಗೆ ಕಳುಹಿಸುತ್ತಾರೆ ಎಂದಿದ್ದಾರೆ.

ನಾವೇ ಸರಕಾರ ರಚಿಸುತ್ತೇವೆ ಎಂಬುದಾಗಿ ಇದಕ್ಕೂ ಮೊದಲು ತುಂಬ ಜನ ಹೇಳಿದ್ದರು. ಹಾಗೆ ಹೇಳಿದವರು ಒಂದೇ ವರ್ಷಕ್ಕೆ ಹೋಗಿದ್ದಾರೆ. ಇವರು ಮಾಡಿರುವ ಘನಂದಾರಿ ಕೆಲಸ ಏನು ಎಂಬುದನ್ನು ನೋಡಿ ಜನ ಇವರಿಗೆ ಮತ ಹಾಕುತ್ತಾರೆ? ಇವರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಪಾಪ, ಇವರು ಗೂಟ ಹೊಡೆದುಕೊಂಡು ಅಧಿಕಾರದಲ್ಲಿ ಇರಲಿ. ಇಲ್ಲಿ ಗೂಟ ಹೊಡೆದುಕೊಂಡು ಇರುತ್ತಾರೋ, ಇನ್ನೆಲ್ಲಿ ಇರುತ್ತಾರೋ ಎಂಬುದರ ಬಗ್ಗೆ ಮುಂದೆ ಚರ್ಚೆ ಮಾಡೋಣ ಎಂದು ಕುಮಾರಸ್ವಾಮಿ ಹೇಳಿದರು.

ರಾಮನಗರ ಜಿಲ್ಲೆಯ ಹೆಸರು ಬದಲಾವಣೆ ಮಾಡಿದ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ, ಹೆಸರು ಬದಲಾವಣೆ ಮಾಡಿದ ಇವರು ದೊಡ್ಡಮಟ್ಟದಲ್ಲಿ ಪ್ರಾಯಶ್ಚಿತ್ತ ಪಡುತ್ತಾರೆ. ಇವರು ದೊಡ್ಡ ಬೆಲೆ ತೆರಬೇಕಾಗುತ್ತದೆ. ಇದಕ್ಕಾಗಿ ಸ್ವಲ್ಪ ದಿನ ಕಾಯಲಿ ಎಂದರು.

2006ರಲ್ಲಿಯೇ ನಾನು ಸಿಎಂ ಆಗಿದ್ದೆ. ಅಧಿಕಾರ ದುರುಪಯೋಗ ಮಾಡಿಕೊಳ್ಳಬೇಕು ಎಂದು ನನಗೆ ಅನ್ನಿಸಿದಿದ್ದರೆ ಆಗಲೇ ಆ ನಿವೇಶನವನ್ನು ನನ್ನ ಹೆಸರಿಗೆ ಬರೆಸಿಕೊಳ್ಳಬಹುದಾಗಿತ್ತು. ಆದರೆ, ಸಿದ್ದರಾಮಯ್ಯ ಅವರಂತೆ ನಾನು ಅಧಿಕಾರ ದುರುಪಯೋಗ ಮಾಡಿಕೊಳ್ಳಲಿಲ್ಲ. ಈ ನಿವೇಶನದ ಬಗ್ಗೆ ರಾಮಕೃಷ್ಣ ಹೆಗಡೆ ಅವರ ಕಾಲದಿಂದಲೂ ತನಿಖೆ ನಡೆಯುತ್ತಿದೆ. ಲೋಕಾಯುಕ್ತ, ಸಿಐಡಿ ತನಿಖೆಗಳು ನಡೆದು ಹೋಗಿವೆ. 500 ನಿವೇಶನಗಳನ್ನು ದೇವೇಗೌಡರು ಪಡೆದುಕೊಂಡಿದ್ದಾರೆ ಎಂದು ಅಪಪ್ರಚಾರ ಮಾಡಲಾಗಿತ್ತು. ಕೊನೆಗೆ ತನಿಖೆಯಲ್ಲಿ ಒಂದು ನಿವೇಶನವನ್ನಷ್ಟೇ ಪಡೆದುಕೊಂಡಿದ್ದಾರೆ ಎಂದು ಗೊತ್ತಾಯಿತು.

-**ಕುಮಾರಸ್ವಾಮಿ,** ಕೇಂದ್ರ ಸಚಿವ

ಸಮಾಚಾರ ಸಣ್ಣದಲ್ಲ

ಭೂಕುಸಿತ; ರೈಲು ಸಂಚಾರ ಸ್ಥಗಿತ

ಮಂಗಳೂರು: ಮಂಗಳೂರು - ಬೆಂಗಳೂರು ನಡುವಿನ ಸುಬ್ರಹ್ಮಣ್ಯ ರೋಡ್ ರೈಲು ನಿಲ್ದಾಣ ಸಮೀಪದ ಎಡಕುಮೇರಿ - ಕಡಗರವಳ್ಳಿ ನಡುವಿನ ದೋಣಿಗಲ್ ಎಂಬಲ್ಲಿ ರೈಲು ಮಾರ್ಗದ ಹಳಿಯಲ್ಲಿ

ಮಣ್ಣು ಕುಸಿತ ಪ್ರಕರಣದಿಂದಾಗಿ ಸೋಮವಾರ ದವರೆಗೆ ರೈಲು ಸಂಚಾರ ಸ್ಥಗಿತವಾಗಿದೆ.ದುರಸ್ತಿ ಕಾರ್ಯ ನಡೆಯುತ್ತಿದ್ದು, ಎರಡು ಮೂರು ದಿನಗಳು ಬೇಕಾಗಬಹುದು ಎಂದು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಸತತ ಮಳೆಗೆ ಶುಕ್ರವಾರ ಸಂಜೆ ರೈಲು ಹಳಿಯ ಕೆಳ ಭಾಗದಲ್ಲಿ ಮಣ್ಣು ಕುಸಿದು ಬೆಂಗಳೂರು - ಮಂಗಳೂರು ನಡುವೆ ರೈಲು ಸಂಚಾರ ಸ್ಥಗಿತ ಗೊಂಡಿದೆ. ಘಟನೆಯಿಂದಾಗಿ ಶುಕ್ರವಾರ ಸಂಜೆ 5.30ಕ್ಕೆ ಸುಬ್ರಹ್ಮಣ್ಯ ರೋಡ್ ರೈಲು ನಿಲ್ದಾಣದಿಂದ ಹೊರಟಿದ್ದ ವಿಜಯಪುರ ಎಕ್ಸ್‌ಪ್ರೆಸ್ ರೈಲು ಸುಬ್ರಹ್ಮಣ್ಯ ರೋಡ್ ನಿಲ್ದಾಣಕ್ಕೆ ಹಿಂದಿರುಗಿತ್ತು. ರೈಲು ರದ್ದಾದ ಹಿನ್ನೆಲೆಯಲ್ಲಿ ರೈಲ್ವೆ ಅಧಿಕಾರಿಗಳು ಪ್ರಯಾಣಿಕರಿಗೆ ಬಸ್ಸಿನ ವ್ಯವಸ್ಥೆ ಮಾಡದ ಕಾರಣ ಮಾತಿನ ಚಕಮಕಿ ನಡೆಯಿತು. ಪ್ರಯಾಣಿಕರಿಗೆ ರೈಲು ಬಳಕೆದಾರರ ವೇದಿಕೆ ಪದಾಧಿಕಾರಿಗಳು ಬಸ್ಸಿನ ವ್ಯವಸ್ಥೆ ಕಲ್ಪಿಸಿದರು.

ರೌಡಿಶೀಟರ್ ಕಾಲಿಗೆ ಗುಂಡೇಟು,ಬಂಧನ

ತುಮಕೂರು: ಪ್ರಕರಣವೊಂದಕ್ಕೆ ಸಂಬಂಧಪಟ್ಟಂತೆ ಸ್ಥಳ ಮಹಜರಿಗೆ ಕರೆದುಕೊಂಡು ಹೋಗಿದ್ದ ರೌಡಿಶೀಟರ್ ಪರಾರಿಯಾಗಲು ಯತ್ನಿಸಿದ ವೇಳೆ ಪೊಲೀಸರು ಆತನ ಮೇಲೆ ಗುಂಡಿನ ದಾಳಿ ನಡೆಸಿದ ಘಟನೆ ತುಮಕೂರು ನಗರದಲ್ಲಿ ನಡೆದಿದೆ. ರೌಡಿಶೀಟರ್ ಮನು ಕಾಲಿಗೆ ಗುಂಡೇಟು ತಗುಲಿದೆ. ತುಮಕೂರಿನ ದಿಬ್ಬೂರು ಬಳಿ ಘಟನೆ ನಡೆದಿದ್ದು, ನಗರ ಪೊಲೀಸ್ ಠಾಣೆ ಸಿಪಿಐ ದಿನೇಶ್ ರಿವಾಲ್ವಾರ್‌ನಿಂದ ರೌಡಿಶೀಟರ್‌ಗೆ ಗುಂಡು ಹೊಡೆದಿದ್ದಾರೆ. ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿ ತಪ್ಪಿಸಿಕೊಳ್ಳಲು ಯತ್ನಿಸಿದ ಸಂದರ್ಭದಲ್ಲಿ ಶರಣಾಗುವಂತೆ ಎರಡು ಬಾರಿ ಇನ್ಸ್‌ಪೆಕ್ಟರ್ ದಿನೇಶ್ ಗಾಳಿಯಲ್ಲಿ ಗುಂಡು ಹಾರಿಸಿದ್ದರು. ಪೊಲೀಸರಿಗೆ ಶರಣಾಗದೆ ಹಲ್ಲೆ ನಡೆಸಿ ಪರಾರಿಯಾಗಲು ಮನು ಯತ್ನಿಸಿದ. ಈ ವೇಳೆ ಆತ್ಮರಕ್ಷಣೆಗಾಗಿ ರೌಡಿಶೀಟರ್ ಮನು ಕಾಲಿಗೆ ಗುಂಡು ಹೊಡೆದು ಬಂಧಿಸಲಾಯಿತು. ಗಾಯಾಳು ಪೊಲೀಸ್ ಸಿಬ್ಬಂದಿ ಹಾಗೂ ರೌಡಿಶೀಟರ್ ಮನುಗೆ ತುಮಕೂರು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಡೆಂಘೀ ಜ್ವರಕ್ಕೆ ಬಾಲಕಿ ಸಾವು

ಬೆಳಗಾವಿ: ಬೆಳಗಾವಿಯಲ್ಲಿ ರಣ ಭೀಕರ ಮಳೆಯ ನಡುವೆ ಸಾಂಕ್ರಾಮಿಕ ರೋಗಗಳು ಹೆಚ್ಚಾಗಿದ್ದು ಶಂಕಿತ ಡೆಂಘೀಗೆ 14 ವರ್ಷದ ಬಾಲಕಿ ಚಿಕಿತ್ಸೆ ಫಲಿಸದೆ ಮೃತಪಟ್ಟ ಘಟನೆ ಶನಿವಾರ ಜಿಲ್ಲಾಸ್ಪತ್ರೆಯಲ್ಲಿ ನಡೆದಿದೆ. ಬೆಳಗಾವಿ ತಾಲೂಕಿನ ಹೊನಗಾ ಗ್ರಾಮದಲ್ಲಿನ ಬಾಲಕಿಗ ಪ್ರನಾಳಿ ಪರಶುರಾಮ ಉಂದ್ರೆಗೆ ಗುರುವಾರ ಜ್ವರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಶುಕ್ರವಾರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೆ ಬಾಲಕಿ ಮೃತಪಟ್ಟಿದ್ದಾಳೆ. ಬಾಲಕಿ ಕಳೆದುಕೊಂಡ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

{ಯು.ಟಿ. ಖಾದರ್} ಸ್ಪೀಕರ್

ಬಡತನದಿಂದ ದೂರವಾಗಲು ಶಿಕ್ಷಣದಿಂದ ಮಾತ್ರ ಸಾಧ್ಯ. ನೀವು ಉತ್ತಮ ಶಿಕ್ಷಣ ಪಡೆದರೆ ನೀವು ಮಾತ್ರವಲ್ಲ ನಿಮ್ಮ ಕುಟುಂಬವೂ ಉನ್ನತ ಸ್ಥಾನ ಪಡೆದುಕೊಳ್ಳುತ್ತದೆ. ಮಕ್ಕಳ ಶೈಕ್ಷಣಿಕ ಸಂತಸದಲ್ಲಿ ತಂದೆ - ತಾಯಿ ಕೂಡಾ ಉತ್ಸಾಹದಿಂದ ಭಾಗವಹಿಸಬೇಕು. ಭಾರತದಂತಹ ಸಂವಿಧಾನ ಬೇರೆ ಯಾವ ದೇಶಕ್ಕೆ ಹೋದರೂ ಸಿಗುವುದು ಸಾಧ್ಯವಿಲ್ಲ.

ಆರೋಪದ ಕುರಿತು ಏಳು ದಿನಗಳಲ್ಲಿ ಉತ್ತರ ನೀಡಲಿ: ಜಿಟಿಡಿ ಎಚ್ಚರಿಕೆ

ಸಚಿವ ಬೈರತಿ ವಿರುದ್ಧ ಕಾನೂನು ಸಮರ

ಮೈಸೂರು: ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮಾಡಿದ ಆರೋಪವನ್ನು ತೀವ್ರವಾಗಿ ಖಂಡಿಸಿರುವ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ, ಸಚಿವರು ಈ ಆರೋಪದ ಕುರಿತು ಏಳು ದಿನಗಳಲ್ಲಿ ಉತ್ತರ ನೀಡಬೇಕಿದ್ದು, ಇಲ್ಲವಾದಲ್ಲಿ ಸಚಿವರ ವಿರುದ್ಧ ಕಾನೂನು ಸಮರ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸಚಿವ ಬೈರತಿ ಸುರೇಶ್ ಅವರು ನನಗೆ ಮುಡಾದಿಂದ ಜಮೀನು ನೀಡಲಾಗಿದೆ ಎಂದು ಮುಖ್ಯಮಂತ್ರಿಗಳ ಪಕ್ಕದಲ್ಲಿ ಕುಳಿತು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದಾರೆ. ಆದರೆ ಸಚಿವ ಬೈರತಿ ಸುರೇಶ್ ಹೇಳಿರುವಂತೆ ನಾನು ಮುಡಾದಿಂದ ಎಲ್ಲಿಯೂ ನಿವೇಶನ ಪಡೆದಿಲ್ಲ. ನನ್ನ 50-60 ವರ್ಷಗಳ ರಾಜಕೀಯ ಜೀವನದಲ್ಲಿ ಪೆಟ್ರೋಲ್ ಬಂಕ್, ಶಿಕ್ಷಣ ಸಂಸ್ಥೆ ಅಥವಾ ಇನ್ನಿತರ ವಾಣಿಜ್ಯ ಕಟ್ಟಡವನ್ನು ನಿರ್ಮಿಸಿಲ್ಲ. ನನ್ನ ತಂದೆಯಿಂದ ಬಂದ ಜಮೀನಿನಲ್ಲಿ ಬೆಳೆ ಬೆಳೆದು ಬೆಳೆದಿದ್ದೇನೆ. ಬಂಗಾರದ ಮನುಷ್ಯ ಚಿತ್ರದಿಂದ ಪ್ರಭಾವಿತನಾಗಿ ಬೇಸಾಯ ಮಾಡಿ ಪ್ರಗತಿಪರ ರೈತ ಎನಿಸಿಕೊಂಡು ಬಂದಿದ್ದೆ. ಆ ನಂತರವೂ ಕಾನೂನುಬದ್ಧವಾಗಿ ಜಮೀನು ಖರೀದಿಸಿದ್ದೇನೆ ಎಂದು ಹೇಳಿದರು.ಸಚಿವರು ಎಲ್ಲವನ್ನೂ ಸಮರ್ಪಕವಾಗಿ ಪರಿಶೀಲನೆ ಮಾಡಿ, ತಪ್ಪಿತಸ್ಥರಿಗೆ ಶಿಕ್ಷೆ ನೀಡುವ ಕೆಲಸ ಮಾಡಬೇಕಿತ್ತು. ಆದರೆ ಇದ್ಯಾವುದನ್ನು ಮಾಡದ ನಗರಾಭಿವೃದ್ಧಿ ಸಚಿವರು, ನನ್ನ ವಿರುದ್ಧ ಹೇಳಿಕೆ ನೀಡಿರುವ ಬಗ್ಗೆ ಏಳು ದಿನಗಳಲ್ಲಿ ದಾಖಲೆ ಸಮೇತ ಸಾಬೀತುಪಡಿಸಬೇಕು. ಇಲ್ಲದಿದ್ದರೆ ನಾನೇ ಅವರಿಗೆ ನೋಟಿಸ್ ಜಾರಿ ಮಾಡುತ್ತೇನೆ. ನನ್ನ ವಿರುದ್ಧವಾಗಿ ಮಾಡಿರುವ ಆರೋಪ ಸಾಬೀತು ಮಾಡದಿದ್ದರೆ ಸಚಿವರ ವಿರುದ್ಧ ಕಾನೂನು ಸಮರ ನಡೆಸುತ್ತೇನೆ ಎಂದು ಎಚ್ಚರಿಕೆ ಕೊಟ್ಟರು.

ಕಲೆಕ್ಷನ್ ಮಾಡಲು ಇಟ್ಟುಕೊಂಡವರ ಮಾತುಕೇಳಿ ಈ ರೀತಿ ಹೇಳಿಕೆ ನೀಡಿದ್ದು, ಸಚಿವರ ತಪ್ಪಿನಿಂದ ಸಿಎಂ ತಲೆಗೆ ಬಂದಿದೆ.

-**ಜಿ.ಟಿ ದೇವೇಗೌಡ,** ಶಾಸಕ

50:50 ಇಲ್ಲದೇ ಪ್ರಾಧಿಕಾರ ನಡೆಯದು

ಪ್ರಸ್ತುತ ಸಂದರ್ಭದಲ್ಲಿ 50:50 ಯೋಜನೆ ಇಲ್ಲದೆ ಪ್ರಾಧಿಕಾರವನ್ನು ನಡೆಸಲು ಸಾಧ್ಯವಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಮೈಸೂರು ಸೇರಿದಂತೆ ಯಾವುದೇ ಪ್ರಾಧಿಕಾರಕ್ಕೆ ನೌಕರರಿಗೆ ಸಂಬಳ ನೀಡಲಾಗದ ಸ್ಥಿತಿಯಲ್ಲಿದೆ. ಜತೆಗೆ ರೈತರಿಂದ ವಶಕ್ಕೆ ಪಡೆದುಕೊಂಡಿರುವ ಜಮೀನು ವಾಪಸ್ ನೀಡಲು ಅಥವಾ ರೈತರಿಗೆ ಹಣವನ್ನು ನೀಡಲು ಸಾಧ್ಯವಾಗದಂತಿದೆ ಎಂದು ಜಿ.ಟಿ ದೇವೇಗೌಡ ಕಳವಳ ವ್ಯಕ್ತಪಡಿಸಿದರು.

- **ನಿವೇಶನ ಪಡದ ಬಗ್ಗೆ ಬೈರತಿ ಸುರೇಶ್ ಹೇಳಿಕೆಗೆ ಜೆಡಿಎಸ್ ಶಾಸಕರ ಕಿಡಿ**
- **ಮುಡಾದಿಂದ ನಾನು ನಿವೇಶನ ಪಡೆದೇ ಇಲ್ಲ**
- **ಬಂಗಾರದ ಮನುಷ್ಯ ಚಿತ್ರದಿಂದ ಪ್ರೇರಿತನಾಗಿ ಪ್ರಗತಿ ಪರ ರೈತನಾದೆ.**

ಆಗಸ್ಟ್ 2ನೇ ವಾರದಲ್ಲಿ ಕಲಬುರಗಿಯಲ್ಲಿ ಜನರ ಅಹವಾಲು ಸ್ವೀಕಾರ

ಸಿಎಂ ಸಿದ್ದರಾಮಯ್ಯರಿಂದ ಜನಸ್ಪಂದನ

ಕಲಬುರಗಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಸ್ಟ್ ಎರಡನೇ ವಾರ ಅಥವಾ ಸ್ವಾತಂತ್ರ್ಯ ದಿನಾಚರಣೆ ನಂತರ ಕಲಬುರಗಿಯಲ್ಲಿ ವಿಭಾಗ ಮಟ್ಟದ ಜನಸ್ಪಂದನ ಸಭೆ ನಡೆಸಲಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿ.ಎಂ. ಜನಸ್ಪಂದನಾ ಸಭೆ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ಗುಲಬರ್ಗಾ ವಿ.ವಿ.ಗೆ ಹೋಗಿ ಸ್ಥಳ ಪರಿಶೀಲಿಸಲಾಗಿದೆ. ಪೂರ್ವಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಸಭೆಯ ದಿನಾಂಕವನ್ನು ಸಿ.ಎಂ. ಅಂತಿಮಗೊಳಿಸಲಿದ್ದಾರೆ ಎಂದರು.

ಪ್ರಸಕ್ತ ಆಯವ್ಯಯದಲ್ಲಿ ಘೋಷಿಸಲಾದ ವಚನಮಂಟಪ, ಮ್ಯೂಸಿಯಂ, ಎಲೆಕ್ಟ್ರಾನಿಕ್ ಕ್ಲಸ್ಟರ್, ಕೌಶಲ್ಯ ಕೇಂದ್ರ ಸ್ಥಾಪನೆಗೆ ಸಂಬಂಧಿಸಿದಂತೆ ಗುಲಬರ್ಗಾ ವಿ.ವಿ., ಕುಸನೂರ, ಹಡಗಿಲ್ ಹಾರುತಿ, ಕೆರೆ ಭೋಸಗಾ ಕೆರೆ ಬಳಿ ಶನಿವಾರ ಜಮೀನು ಪರಿಶೀಲನೆ ಮಾಡಿದ್ದು, ಅಧಿಕಾರಿಗಳೊಂದಿಗೆ ಚರ್ಚಿಸಿ ಶೀಘ್ರವೇ ಯೋಜನೆ ಅನುಷ್ಠಾನಕ್ಕೆ ನೀಲಿ ನಕ್ಷೆ ಸಿದ್ಧಪಡಿಸಲಾಗುವುದು ಎಂದು ಸಚಿವ ಖರ್ಗೆ ತಿಳಿಸಿದರು.

ಸ್ಥಳ ಪರಿಶೀಲನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಸ್ಟ್ ಮಾಹೆಯಲ್ಲಿ ಕಲಬುರಗಿ ಜಿಲ್ಲಾಮಟ್ಟದ ಜನಸ್ಪಂದನಾ ನಡೆಸಲಿರುವ ಹಿನ್ನೆಲೆಯಲ್ಲಿ ಶನಿವಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರು ಕಾರ್ಯಕ್ರಮ ಆಯೋಜನೆಗೆ ಗುಲಬರ್ಗಾ ವಿ.ವಿ. ಆವರಣದ ಸ್ಥಳ ಪರಿಶೀಲನೆ ಮಾಡಿದರು. ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಪ್ರವೇಶಾವಕಾಶ, ಭದ್ರತೆ, ಪಾರ್ಕಿಂಗ್ ವ್ಯವಸ್ಥೆ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಕಲಬುರಗಿ ಜಿಲ್ಲಾಮಟ್ಟದ ಜನಸ್ಪಂದನಾ ನಡೆಸಲಿರುವ ಹಿನ್ನೆಲೆಯಲ್ಲಿ ಶನಿವಾರ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರು ಕಾರ್ಯಕ್ರಮ ಆಯೋಜನೆಗೆ ಗುಲಬರ್ಗಾ ವಿ.ವಿ. ಆವರಣದ ಸ್ಥಳ ಪರಿಶೀಲನೆ ನಡೆಸಿದರು.

ಪ್ರಸಕ್ತ ಸಾಲಿನ ಪ್ರಧಾನಮಂತ್ರಿ ಫಸಲ್-ಕರ್ನಾಟಕ ರೈತ ಸುರಕ್ಷಾ ಬೆಳೆವಿಮೆ ಯೋಜನೆಯಡಿ ನೋಂದಣಿ ಮಾಡಿಕೊಳ್ಳಲು ಇದೇ ಜುಲೈ 31 ಕೊನೆ ದಿನವಾಗಿದ್ದು, ಅಲ್ಪ ಪ್ರಮಾಣದ ಪ್ರೀಮಿಯಂ ಪಾವತಿಸಿ ನೋಂದಣಿ ಮಾಡಿಕೊಳ್ಳಿ.

-**ಪ್ರಿಯಾಂಕ್ ಖರ್ಗೆ,** ಸಚಿವ

2 ಜಡೆ ಹಾಕಿಲ್ಲವೆಂದು ಕೂದಲು ಕತ್ತರಿಸಿದ ಶಿಕ್ಷಕರು

ಮೂವರ ವಿದ್ಯಾರ್ಥಿಗಳ ಜಡೆಗೆ ಕತ್ತರಿ

ರಾಮನಗರ: ಸರಕಾರಿ ಶಾಲೆಯಲ್ಲಿ ಎರಡು ಜಡೆ ಹಾಕಿಲ್ಲವೆಂದು ಶಿಕ್ಷಕರಿಬ್ಬರು ವಿದ್ಯಾರ್ಥಿನಿಯರ ಕೂದಲು ಕತ್ತರಿಸಿದ್ದಾರೆ. ಶಿಕ್ಷಕರ ನಡೆಗೆ ಪೋಷಕರು ಆಕ್ರೋಶ ಹೊರಹಾಕಿದ್ದಾರೆ. ಚನ್ನಪಟ್ಟಣ ತಾಲೂಕಿನ ಅರಳಾಳುಸಂದ್ರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಘಟನೆ ನಡೆದಿದೆ.

ಶಾಲೆಗೆ ಬರುವಾಗ ಎರಡು ಜಡೆ ಹಾಕಿಲ್ಲವೆಂದು ಸಿಟ್ಟಾದ ಇಬ್ಬರು ಶಿಕ್ಷಕರು ಮೂವರು ವಿದ್ಯಾರ್ಥಿನಿಯರಿಗೆ ಕೂದಲು ಕತ್ತರಿಸಿದ್ದಾರೆ. ಹೆಣ್ಮಕ್ಕಳ ತಲೆಗೂದಲು ಕತ್ತರಿಸುವುದು ಯಾವ ಸಂಸ್ಕೃತಿ ಸ್ವಾಮಿ ಎಂದು ಪೋಷಕರು ತರಾಟೆ ತೆಗೆದುಕೊಂಡಿದ್ದಾರೆ.

ಪವಿತ್ರ ಹಾಗೂ ಶಿವಕುಮಾರ್ ಎಂಬ ಶಿಕ್ಷಕರು ವಿದ್ಯಾರ್ಥಿನಿಯರ ಮೇಲೆ ದರ್ಪ ತೋರಿದ್ದಾರೆ. ವಿದ್ಯಾರ್ಥಿನಿಯರು ಪ್ರತಿನಿತ್ಯ ಒಂದು ಜಡೆ ಹಾಕಿಕೊಂಡು ಬರುತ್ತಿದ್ದರು. ಹಾಗಾಗಿ ಕೂದಲು ಕಟ್ ಮಾಡಿದ್ದವಿ ಎಂದು ಸಮಜಾಯಿಷಿ ನೀಡಿದ್ದಾರೆ. ಪೋಷಕರ ಎದುರು ಘಟನೆ ಬಗ್ಗೆ ತಪ್ಪೊಪ್ಪಿಕೊಂಡಿದ್ದಾರೆ.

ಅತಿಥಿ ಶಿಕ್ಷಕರ ತಲೆದಂಡ: ವಿದ್ಯಾರ್ಥಿನಿಯರ ಕೂದಲು ಕತ್ತರಿಸಿದ್ದ ಅತಿಥಿ ಶಿಕ್ಷಕರಿಗೆ ತಲೆದಂಡವಾಗಿದೆ. ಇಬ್ಬರು ಶಿಕ್ಷಕರು ಅಮಾನತು ಮಾಡುವಂತೆ ಶಿಫಾರಸು ಮಾಡಿದ್ದಾರೆ. ಚನ್ನಪಟ್ಟಣ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಮರಿಗೌಡ ಕರ್ನಾಟಕ ಪಬ್ಲಿಕ್ ಶಾಲೆಗೆ ಭೇಟಿ ಕೊಟ್ಟು ಪರಿಶೀಲನೆ ನಡೆಸಿದರು.

ಘಟನೆ ಬಗ್ಗೆ ಮೇಲಾಧಿಕಾರಿಗೆ ಪತ್ರ ಬರೆದು, ಅತಿಥಿ ಶಿಕ್ಷಕರಾದ ಶಿವಕುಮಾರ್ ಹಾಗೂ ಪವಿತ್ರಾ ಅವರಿಗೆ ಅಮಾನತು ಆದೇಶಕ್ಕೆ ರಾಮನಗರ ಜಿಲ್ಲಾ ಡಿಡಿಪಿಐ ಬಸವರಾಜೇಗೌಡಗೆ ವರದಿ ಸಲ್ಲಿಸಿದ್ದಾರೆ. ಘಟನೆ ಬಗ್ಗೆ ಸಂಪೂರ್ಣ ವಿವರಣೆ ಮೂಲಕ ವರದಿ ಸಲ್ಲಿಸಿದ್ದು, ಕೂಡಲೇ ಇಬ್ಬರು ಅತಿಥಿ ಶಿಕ್ಷಕರನ್ನು ಅಮಾನತು ಮಾಡಲಾಗಿದೆ.

ಮೈಸೂರಿನಿಂದ ಬೆಂಗಳೂರಿಗೆ ಅಹಿಂದ ಸಮುದಾಯ ಪಾದಯಾತ್ರೆ

ಬಿಜೆಪಿ ರಾಜಕೀಯ ಲಾಭದ ಯಾತ್ರೆ

ತುಮಕೂರು: ಸಿಎಂ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುತ್ತಿರುವ ವಿಷಯವನ್ನು ರಾಜ್ಯದ ಅಹಿಂದ ಸಮುದಾಯ

ಗಂಭೀರವಾಗಿ ಪರಿಗಣಿಸಿದ್ದು ವಿಪಕ್ಷಗಳು ಪಾದಯಾತ್ರೆ ನಡೆಸಿದರೆ ನಾವೂ ಕೂಡ ಮೈಸೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸುತ್ತೇವೆ ಎಂದು ಸಚಿವ ರಾಜಣ್ಣ ಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಸರಕಾರ ಈಗಾಗಲೇ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಂಡಿದೆ, ಬಿಜೆಪಿ ರಾಜಕೀಯ ಲಾಭಕ್ಕಾಗಿ ಪಾದಯಾತ್ರೆ ಕೈಗೊಂಡಿದೆ, ನಾ ಕಳ್ಳ, ಪರರನ್ನು ನಂಬ ಎಂಬಂತೆ ವರ್ತಿಸುತ್ತಿದ್ದಾರೆ. 2011ರಲ್ಲಿ ವಿಧಾನ ಪರಿಷತ್‌ನಲ್ಲಿ ಅಂದಿನ ಸಿಎಂ ಯಡಿಯೂರಪ್ಪ ನೀಡಿದ ನಡಾವಳಿಯಲ್ಲಿ ವಿಪಕ್ಷಗಳ ಮುಖಂಡರ ಬಂಡವಾಳವಿದೆ, ಅದರಲ್ಲಿ ಯಾರೆಲ್ಲಾ ಸೈಟು ಪಡೆದಿದ್ದಾರೆ ಎಂಬುದು ಇದೆ ಎಂದರು.

ಪ್ರಸ್ತುತ ಆರೋಪ ಮಾಡುತ್ತಿರುವವರೇ ಮೂಡಾ ಸೈಟು ಪಡೆಯುವಲ್ಲಿ ಹೆಚ್ಚು ಫಲಾನುಭವಿಗಳಾಗಿದ್ದು ವಾಸಸ್ಥಳದ ನಕಲಿ ದಾಖಲೆಗಳನ್ನು ನೀಡಿ ಮೂಡಾದಲ್ಲಿ ನಿವೇಶನ ಪಡೆದಿದ್ದಾರೆ. ಈ ನಿವೇಶನಗಳನ್ನು ವಾಪಸ್ ನೀಡಿ ನಂತರ ಸಿಎಂ ಆರೋಪ ಮಾಡಲಿ ಎಂದು ವಿಪಕ್ಷಗಳಿಗೆ ಸವಾಲೆಸೆದರು.

ಸಿಎಂ ವಿರುದ್ಧ ಹುನ್ನಾರ

ಹಗರಣಗಳ ವಿರುದ್ಧ ಸರಕಾರ ಕಠಿಣ ಕ್ರಮತೆಗೆದುಕೊಂಡು ತನಿಖೆ ನಡೆಸುತ್ತಿದ್ದರೂ ಇಡಿ, ಪ್ರತಿಭಟನೆ ಹೆಸರಿನಲ್ಲಿ ಸಿಎಂ ಸಿದ್ದರಾಮಯ್ಯ ಅವರ ಕ್ಲೀನ್ ಇಮೇಜ್‌ಗೆ ಮಸಿ ಬಳಿಯಲು ಕೇಂದ್ರ ಸರಕಾರ ಪ್ರಯೋಜಿತ ಹುನ್ನಾರ ನಡೆಯುತ್ತಿದೆ. ಸಿದ್ದರಾಮಯ್ಯ ಅಹಿಂದ ವರ್ಗದ ನಾಯಕರಾಗಿದ್ದು ಬಂಗಾರಪ್ಪ ಅವರ ವಿರುದ್ಧ ಮಾಡಿದಂತೆ ಸಣ್ಣಪುಟ್ಟ ವಿಷಯಗಳನ್ನೇ ದೊಡ್ಡದು ಮಾಡಲು ಮುಂದುವರಿದ ವಿಪಕ್ಷಗಳು ಮಾಡುತ್ತಿವೆ ಎಂದು ಸಚಿವ ರಾಜಣ್ಣ ಗಂಭೀರ ಆರೋಪ ಮಾಡಿದರು.

ಚುನಾಯಿತ ಸರಕಾರ ಬೀಳಿಸಲು ಬಿಜೆಪಿ ಪ್ರಯತ್ನಿಸುತ್ತಿದೆ

ತಪ್ಪು ಮುಚ್ಚಿಕೊಳ್ಳಲು ಯತ್ನ: ಖರ್ಗೆ

ಕಲಬುರಗಿ: ಮೂಡಾ ಸೇರಿದಂತೆ ವಿರೋಧ ಪಕ್ಷದ ನಾಯಕರು ಎತ್ತಿರುವ ಎಲ್ಲ ವಿಚಾರಗಳು ತಮ್ಮ ಪಕ್ಷದ ವೈಫಲ್ಯತೆ ಮುಚ್ಚಿಕೊಳ್ಳುವ

ಪ್ರಯತ್ನವಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಬಿಜೆಪಿ ವಿರುದ್ಧ ವ್ಯಂಗ್ಯವಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸದನದಲ್ಲಿ ಚರ್ಚೆ ಮಾಡದ ವಿರೋಧ ಪಕ್ಷದ ನಾಯಕರು ಸದನದಿಂದ ವಾಕ್ ಔಟ್ ಮಾಡಿದ್ದಾರೆ. ಎಲ್ಲರೂ ಹೊರಗೆ ಹೋಗಿದ್ದರೆ ರಾಜ್ಯಾಧ್ಯಕ್ಷರು ಒಳಗಡೆ ಇದ್ದರು. ವಾಲ್ಮೀಕಿನಲ್ಲಿ ಅವ್ಯವಹಾರ ಆಗಿದೆ. ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂದು ನಾವೇ ಹೇಳಿದ್ದೇವೆ. ಎಸ್‌ಐಟಿ ರಚನೆಯಾಗಿದೆ ತನಿಖೆ ನಡೆಯುತ್ತಿದೆ. ಆದರೆ, ಇಡಿ ಅವರು ಈ ಪ್ರಕರಣದಲ್ಲಿ ಸಿಎಂ ಹಾಗೂ ಡಿಸಿಎಂ ಹಾಗೂ ನಾಗೇಂದ್ರ ಅವರನ್ನು ಸಿಕ್ಕಿಸ'ಲು ಪ್ರಯತ್ನಿಸುತ್ತಿದ್ದಾರೆ ಎಂದು ಹೇಳಿದರು.

ಚುನಾಯಿತ ಸರಕಾರ ಬೀಳಿಸಲು ಬಿಜೆಪಿ ಪ್ರಯತ್ನಿಸುತ್ತಿದೆ. ಕೇಂದ್ರದಲ್ಲಿ ಬಿಜೆಪಿ ಸರಕಾರ ಬಂದ ಮೇಲೆ 3000 ಐಟಿ ರೈಡ್ ಆಗಿವೆ. 121 ರಾಜಕಾರಣಿಗಳ ಮೇಲೆ ಅದರಲ್ಲೂ 115 ವಿರೋಧಪಕ್ಷದವರ ಮೇಲೆ ರೈಡ್ ಆಗಿವೆ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಬಿಎಸ್‌ವೈ ವಿರುದ್ಧ ಇಡಿ ತನಿಖೆ ಏಕಿಲ್ಲ?

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆರೋಪಿಸಿದಂತೆ ಯಡಿಯೂರಪ್ಪ ಅವರು ಪದೇ ಪದೇ ವಿದೇಶಕ್ಕೆ ಯಾಕೆ ಹೋಗುತ್ತಿದ್ದಾರೆ. ಈ ಬಗ್ಗೆ ಇಡಿ ಏಕೆ ತನಿಖೆ ಮಾಡುತ್ತಿಲ್ಲ.? ಬಿಟ್ ಕಾಯಿನ್ ಪ್ರಕರಣದ ಮೇಲೆ ತನಿಖೆ ಮಾಡುತ್ತಿಲ್ಲ. ಗಂಗಾ ಕಲ್ಯಾಣದಲ್ಲಿ ತನಿಖೆ ಯಾಕೆ ಆಗುತ್ತಿಲ್ಲ.? ದೇವರಾಜು ಅರಸ್ ಟ್ರಕ್ ಟರ್ಮಿನಲ್ ಹಗರಣವನ್ನು ಇಡಿ ಏಕೆ ತನಿಖೆ ನಡೆಸುತ್ತಿಲ್ಲ. ಬಿಎಸ.ವೈ ಅವರ ಪೋಕ್ಸೊ ಕೇಸ್ ಬಗ್ಗೆ ಯಾಕೆ ತನಿಖೆ ಮಾಡುತ್ತಿಲ್ಲ? ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಮೋದಿ ತಾರತಮ್ಯ ಧೋರಣೆ ಬಿಡಲಿ

ಬಾಗಲಕೋಟೆ: ಪ್ರಧಾನಿ ಪಕ್ಷದ ಧೋರಣೆಗಳಿಗೆ ಅಂಟಿಕೊಳ್ಳೋದನ್ನ ಬಿಟ್ಟು, ದೇಶದ ಆದ್ಯತೆಗೆ,ದೇಶಕ್ಕೆ ಗಂಡಾಂತರ ಬಂದಾಗ ತಾರತಮ್ಯ ಧೋರಣೆ ಮಾಡೋದು ಸರಿಯಿಲ್ಲ ಎಂದ ಸಚಿವ ಆರ್.ಬಿ.ತಿಮ್ಮಾಪುರ ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಜಿಲ್ಲೆಯ ಮುಧೋಳ ತಾಲೂಕಿನ ಮಿರ್ಜಿಯಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರ ವೀಕ್ಷಿಸಿ, ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಈ ದೇಶದ ಪ್ರಧಾನಿಗೆ ತಾಯಿ ಹೃದಯ ಇರಬೇಕು.

ಕೇಂದ್ರ ಸರಕಾರ ತಾರತಮ್ಯ ಬಿಟ್ಟು, ತಾಯಿ ಧೋರಣೆ ಅನುಸರಿ ಸಬೇಕು ಎಂದರು. ಬಿಹಾರ ಹಾಗೂ ಆಂಧ್ರಪ್ರದೇಶದಲ್ಲಿ ಸರಕಾರ ಉಳಿಸಿಕೊಳ್ಳಲು ಧಾರಳವಾಗಿ ಹಣ ನೀಡಿದ್ದಾರೆ. ಇದನ್ನು ನೋಡಿದರೆ ಕೇಂದ್ರ ಸರಕಾರ ಭಯದ ವಾತಾವರಣದಲ್ಲಿರುವುದು ಸ್ಪಷ್ಟವಾಗುತ್ತದೆ.
ಯಾರು ಹೆದರಿಸು ತ್ತಾರೋ ಅವರಿಗೆ ದುಡ್ಡು ಕೊಡುವುದು. ಮೋದಿ ಸಾಹೇಬ್ರು ದೇಶದ ಪ್ರಧಾನಿಗಳು. ಎಲ್ಲರನ್ನು ಸಮದೃಷ್ಟಿಯಿಂದ ಕಾಣುವಂ ತಹ ಪ್ರವೃತ್ತಿ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಳೆದ ಬಾರಿ ಬರ ಪರಿಹಾರ ವಿಷಯದಲ್ಲಿ ನಿಜಕ್ಕೂ ರಾಜ್ಯಕ್ಕೆ ನೀಡಬೇಕಾದ ಪರಿಹಾರ ಕೇಂದ್ರ ನೀಡಲಿಲ್ಲ. ಕೊನೆಗೆ ಸುಪ್ರೀಂ ಆದೇಶದಿಂದ ಪರಿಹಾರ ಪಡೆಯುವಂತಾಯಿತು ಎಂದರು.

ಕಾಂಗ್ರೆಸ್ ಪೂರ್ಣ ಬಜೆಟ್ ಓದಲಿ

ಹಾವೇರಿ: ಕಾಂಗ್ರೆಸ್‌ನವರು ಮೊದಲು ಪೂರ್ಣ ಬಜೆಟ್ ಓದಲಿ ನಂತರ ಆರೋಪ ಮಾಡಲಿ. ಯಾವ ಇಲಾಖೆಗೆ ಎಷ್ಟು ದುಡ್ಡು ಬಂದಿದೆ ಎಂಬುದನ್ನು ತಿಳಿದಕೊಳ್ಳಲಿ. ಅದೇ ಅಕೌಂಟ್‌ಗೆ ಹಿಂದೆ ಯುಪಿಎ ಸರಕಾರ ಇದ್ದಾಗ ಎಷ್ಟು ಬಂದಿತ್ತು? ಕಾಂಗ್ರೆಸ್‌ನವರು



ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡ್ತಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್‌ನವರು ಅನುದಾನ ಬಂದೇ ಇಲ್ಲ ಅಂತಾರೆ. 44,870 ಕೋಟಿ ಹಣವನ್ನು ಡೆವಲ್ಯೂಷನ್ ಆಫ್ ಫಂಡ್‌ನಲ್ಲಿ ಕರ್ನಾಟಕಕ್ಕೆ ಕೊಟ್ಟಿದಾರೆ. ಈ ಬಗ್ಗೆ ಸೋಮವಾರ ಎಲ್ಲಾ ಮಾಹಿತಿ ಬಿಡುಗಡೆ ಮಾಡುವೆ ಎಂದು ತಿಳಿಸಿದರು. ಕೇಂದ್ರ ಸರಕಾರದಿಂದ ಕರ್ನಾಟಕದ ಪ್ರಗತಿಗೆ ಎಲ್ಲ ರೀತಿಯ ನೆರವು ನೀಡಲಾಗಿದೆ. ಜತೆಗೆ ಇನ್ನಷ್ಟು ಅನುದಾನ ಕೊಡಬೇಕಿದೆ. ಭದ್ರಾ ಮೇಲ್ದಂಡೆ ಯೋಜನೆಗೆ 5,000 ಕೋಟಿ ಬಾಕಿ ಅನುದಾನ ಕೇಳಿದ್ದೇವೆ. ಕಾಂಗ್ರೆಸ್‌ನವರು ಸುಮ್ಮನೆ ಆರೋಪ ಮಾಡಿಕೊಂಡು ಕೂತಿದ್ದಾರೆ. ಅನುದಾನ ಹರಿಯಲು ಪ್ರಾರಂಭ ಆಗಿದೆ, ಇನ್ಮುಂದೆ ಹೆಚ್ಚಿನ ಅನುದಾನ ಹರಿಯುತ್ತಲೇ ಇರುತ್ತೆ ಎಂದರು. ಮುಡಾ ಹಗರಣದ ಕುರಿತು ಇಂದು ಬಿಜೆಪಿ- ಜೆಡಿಎಸ್ ಸಭೆ ಇದೆ. ಸಭೆಯಲ್ಲಿ ಹೋರಾಟದ ರೂಪುರೇಷೆ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ತಿಳಿಸಿದರು.

ಶಿರೂರು ದುರಂತಕ್ಕೆ ಕೇಂದ್ರವೇ ಹೊಣೆ

ಮಂಗಳೂರು: ಶಿರೂರು ದುರಂತಕ್ಕೆ ಐಆರ್‌ಬಿ ಹಾಗೂ ಕೇಂದ್ರದ ಬಿಜೆಪಿ ಸರಕಾರ ನೇರ ಹೊಣೆಯಾಗಿದೆ, ಇದು ಎಲ್ಲರಿಗೂ ಗೊತ್ತಿದೆ ಎಂದು ರಾಜ್ಯ ಮೀನುಗಾರಿಕಾ ಸಚಿವ ಮಂಕಾಳು ವೈದ್ಯ ಆರೋಪ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರಕಾರ

ಮಾನವೀಯತೆಯ ದೃಷ್ಟಿಯಿಂದ ಏನು ಮಾಡಬೇಕು ಅದನ್ನು ಮಾಡಿದೆ. ಮುಖ್ಯಮಂತ್ರಿ, ಕಂದಾಯ ಸಚಿವರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದ್ದಾರೆ. ಐಆರ್‌ಬಿಗೆ 11 ವರ್ಷಗಳಿಂದ ಈ ರಸ್ತೆಯನ್ನು ಪೂರ್ತಿ ಮಾಡಲಾಗಲಿಲ್ಲ. ಅವೈಜ್ಞಾನಿಕ ಕಾಮಗಾರಿಯಿಂದ ಈ ರೀತಿಯ ದುರಂತ ಸಂಭವಿಸಿದೆ ಎಂದು ಕಿಡಿಕಾರಿದರು. ಕೇಂದ್ರ ತಂಡ ಬಂದು ಇಲ್ಲಿಯೇ ಕುಸಿಯುತ್ತದೆ ಎಂದು ಹೇಳಿದರೂ ಐಆರ್‌ಬಿ ಏನೂ ಕ್ರಮ ಕೈಗೊಂಡಿಲ್ಲ. ಬೇರೆ ಬೇರೆ ರಾಜ್ಯದವರು ಸಾವನ್ನಪ್ಪಿದ್ದಾರೆ. ಅದರ ಬಗ್ಗೆ ಮಾತಾಡುವವರು ಯಾರೂ ಇಲ್ಲ. ಐಆರ್‌ಬಿ ಬಳಿ ಅವರ ಯೋಗ್ಯತೆಗೆ ಒಂದು ಹಿಟಾಚಿ ಕೂಡ ಇಲ್ಲ. ಅದನ್ನು ನಾವು ಬೇರೆ ಕಡೆಯಿಂದ ತರಿಸಿದ್ದೇವೆ. ಅವೈಜ್ಞಾನಿಕ ಕಾಮಗಾರಿ ಬಗ್ಗೆ ತನಿಖೆಗೆ ಒತ್ತಾಯಿಸಿದ್ದೇವೆ. ಐಆರ್‌ಬಿ ಕಂಪನಿಯ ಮೇಲೆ ಎಫ್‌ಐಆರ್ ದಾಖಲಿಸಿದ್ದೇವೆ. ಅರಣ್ಯ ಇಲಾಖೆಯಿಂದಲೂ ಎಫ್‌ಐಆರ್ ಆಗಿದೆ. ಏನೇ ಮಾಡಿದ್ರೂ ಐಆರ್‌ಬಿ ಮೂಲ ಬಿಜೆಪಿ. ಅವರು ಅದನ್ನು ಹೊರತುಪಡಿಸಿ ರಾಜಕಾರಣ ಮಾಡುತ್ತಿದ್ದಾರೆ ಎಂದರು.

ರಾಮನಗರ ಹೆಸರು ಬದಲಿಸಬೇಡಿ

ಗದಗ: ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ಬದಲಾವಣೆ ಮಾಡಿರುವುದು ಖಂಡನೀಯ. ರಾಮನಗರ ಹೆಸರು ಇದ್ದರೆ ನಿಮಗೆ ತೊಂದರೆ ಏನು ಎಂದು ಶ್ರೀರಾಮ ಸೇನೆ ಸ್ಥಾಪಕ ಪ್ರಮೋದ್ ಮುತಾಲಿಕ್ ಹರಿಹಾಯ್ದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮನಗರ ಜಿಲ್ಲೆ ಬದಲಾವಣೆ ಮಾಡುವುದಾದರೆ ಬೇರೆ ದಾರಿಗಳು, ಹೆಸರುಗಳಿವೆ. ರಾಮನಗರವನ್ನು ಬೆಂಗಳೂರು ಭಾಗ ಎಂದು ಕರೆಬಹುದಲ್ಲವೇ. ರಾಮನ ಹೆಸರಿನ ಜಿಲ್ಲೆ ಬದಲಾಯಿಸುತ್ತಿರುವುದು ಅತ್ಯಂತ ಖಂಡನೀಯ ಎಂದರು.

ಕಾಂಗ್ರೆಸ್ ನವರಿಗೆ, ಡಿಕೆ ಶಿವಕುಮಾರ್, ಸಿದ್ದರಾಮಯ್ಯನವರಿಗೆ ಹೇಳಲು ಬಯಸುತ್ತೇನೆ. ಸ್ವಾತಂತ್ರ್ಯ ಬಂದು 75 ವರ್ಷವಾಯಿತು. ಬದಲಾವಣೆ ಮಾಡುವುದಾದರೆ ವಿಕ್ಟೋರಿಯಾ ಆಸ್ಪತ್ರೆ, ಚರ್ಚ್ ರೋಡ್, ಕಬ್ಬನ್ ಪಾರ್ಕ್, ಕರ್ಜನ್ ರೋಡ್ ಸೇರಿದಂತೆ 32 ಕಡೆ ಹೆಸರು ಬದಲಾ ವಣೆ ಮಾಡಿ. ಕನ್ನಡ ಅಭಿಮಾನ, ದೇಶಾಭಿಮಾನ, ಸ್ವಾಭಿಮಾನ ಇದ್ದರೆ 32 ಕಡೆಯ ಹೆಸರು ಬದಲಾಯಿಸಿ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ರೆಸಾರ್ಟ್‌ನಲ್ಲೊಂದು ಮ್ಯಾನೇಜ್‌ಮೆಂಟ್ ಪಾಠ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಕೆಲವರ್ಷದ ಹಿಂದೆ ಮೂಡಿಗೆರೆಯಿಂದ ಬರುವಾಗ, ಹಾಸನ ಹೊರವಲಯದಲ್ಲಿರುವ ಹೊಯ್ಸಳ ವಿಲೇಜ್ ರೆಸಾರ್ಟ್‌ಗೆ ಉಪಾಹಾರಕ್ಕೆಂದು ಹೋಗಿದ್ದಾಗ, ಕಣ್ಣ ಮುಂದೇ ನಡೆದ ಪ್ರಸಂಗವಿದು. ನಮ್ಮ ಟೇಬಲ್ ಪಕ್ಕ ಮೂವರು ಬಂದು ಕುಳಿತರು. ವೇಟರ್ ಬಂದ. 'ಏನೇನಿದೆ ತಿಂಡಿ?' ಎಂದು ಅವರು ಕೇಳಿದರು. 'ಇಲ್ಲಿ ಮೂವತ್ತೆರಡು ವಿಧದ ತಿಂಡಿಗಳಿವೆ. ನೀವೇ ಆಯ್ದು (ಬಫೆ) ಸೇವಿಸಬಹುದು. ಒಬ್ಬರಿಗೆ 450 ರುಪಾಯಿ ಪ್ಲಸ್ ಟ್ಯಾಕ್ಸ್' ಎಂದ ವೇಟರ್.

ಅದಕ್ಕೆ ಅವರು ಹೇಳಿದರು – 'ಅಬ್ಬಬ್ಬಾ.. ಬೆಳಗ್ಗೆ ಬೆಳಗ್ಗೆ ಅಷ್ಟೆಲ್ಲ ತಿನ್ನಲು ಆಗುವುದಿಲ್ಲ. ನಾವು ಬರಗಾಲ ದೇಶದಿಂದ ಬಂದಿಲ್ಲ. ನಮಗೆ ಎರಡು ಇಡ್ಲಿ ಮತ್ತು ಒಂದು ವಡಾ ಸಾಕು. ಅಷ್ಟೇ ಕೊಡಿ.' 'ಸಾರಿ ಸರ್, ಇಲ್ಲಿ ಬಫೆ ಸರ್ವೀಸ್ ಮಾತ್ರ. ಬೇಕಾದ್ರೆ ಎರಡು ಇಡ್ಲಿ ಮತ್ತು ಒಂದು ವಡಾವನ್ನೇ ತಿನ್ನಿ. ಆದರೆ ಒಬ್ಬರಿಗೆ 450 ರುಪಾಯಿ ಪ್ಲಸ್ ಟ್ಯಾಕ್ಸ್' ಎಂದ.

ಅದಕ್ಕೆ ಅವರು ಹೇಳಿದರು – 'ಅಲ್ಲಾರಿ, ಎರಡು ಇಡ್ಲಿ ಒಂದು ವಡಾಕ್ಕೆ ಐನೂರು ರುಪಾಯಿ ಚಾರ್ಜ್ ಮಾಡೋದು ಸರೀನಾ? ಅದು ಯಾವ ನ್ಯಾಯ?' ಆದರೆ ಅದಕ್ಕೆ ವೇಟರ್, 'ಇದು ಇಲ್ಲಿನ

ನಿಯಮ. ತಿನ್ನೋದಾದ್ರೆ ತಿನ್ನಬಹುದು.. ಇಲ್ಲಾಂದ್ರೆ ...' ಎಂದು ಹೇಳಿದ. ಅಷ್ಟಕ್ಕೇ ಆ ಮೂವರು ಬೇಸರದಿಂದ ಎದ್ದು ಹೊರಟರು. ಈಗಷ್ಟೇ ಆಗಮಿಸಿದ ಕಸ್ಟಮರ್ಸ್ ಎದ್ದು ಹೋಗುತ್ತಿರುವುದನ್ನು ಗಮನಿಸಿದ ರೆಸಾರ್ಟಿನ ಮಾಲೀಕ ಧಾವಿಸಿದ. 'ಏನಾಯ್ತು?' ಎಂದು ಕೇಳಿದ. ಆ ಮೂವರು ನಡೆದುದನ್ನು ಹೇಳಿದರು. ಆಗ ಮಾಲೀಕ, ವೇಟರ್ ಹೇಳಿದ್ದನ್ನು ಸಮರ್ಥಿಸಿಕೊಂಡ.

ಅದಕ್ಕೆ ಆ ಮೂವರಲ್ಲಿ ಒಬ್ಬ ಖಡಾಖಡಿ ಹೇಳಿದ – 'ಬೆಳಗ್ಗೆ ಯಾರು ಮೂವತ್ತೆರಡು ಐಟಮ್ಮುಗಳನ್ನು ಸೇವಿಸುತ್ತಾರೆ? ಅಷ್ಟಕ್ಕೂ ಅವೆಲ್ಲವನ್ನೂ ಸೇವಿಸಬೇಕೆಂದು ನೀವೇಕೆ ಬಯಸುತ್ತೀರಿ? ಅಷ್ಟು ಐಟಮ್ ಸೇವಿಸದಿದ್ದರೆ, ಸೇವಿಸದ ಐಟಮ್ಮುಗಳಿಗೆ ಯಾಕೆ ಹಣ ಪೀಕಿಸುತ್ತೀರಿ? ಸರಿ, ತಿನ್ನುವವರು ತಿನ್ನಲಿ, ಆದರೆ ನಮಗೆ ಬೇಕಾಗಿದ್ದು ಕೇವಲ ಎರಡು ಇಡ್ಲಿ ಮತ್ತು ಒಂದು ವಡಾ. ಅದಕ್ಕಾಗಿ ಉಳಿದ ಮೂವತ್ತು ಐಟಮ್ಮುಗಳನ್ನು ನಾವ್ಯಾಕೆ ಸೇವಿಸಬೇಕು? ಸೇವಿಸದಿದ್ದರೂ ಒಬ್ಬರಿಗೆ 450 ರುಪಾಯಿ ಪ್ಲಸ್ ಟ್ಯಾಕ್ಸ್ ಕೊಡಿ ಅಂತೀರಾ. ಇದ್ಯಾವ ನ್ಯಾಯ? ಇದು ಗ್ರಾಹಕ ಸ್ನೇಹಿ ಅಲ್ಲ. ಅಲ್ಲದೇ ನಿಮ್ಮಲ್ಲಿ ಅಲಾ ಕಾರ್ಟ್ (ಟೇಬಲ್ಲಿಗೆ ವೇಟರ್ ಬಂದು ಸರ್ವ್ ಮಾಡುವುದು) ಸೇವೆ ಇಲ್ಲ ಎಂದು ಹೇಳುತ್ತೀರಿ. ನೀವು ಹೇಳಿದ್ದನ್ನು ಗ್ರಾಹಕ ಯಾಕೆ ಸೇವಿಸಬೇಕು? ಅವನಿಗೆ ಬೇಕಾಗಿದ್ದನ್ನು ನೀವೇಕೆ ಕೊಡುವುದಿಲ್ಲ? ನಿಮಗೆ ಗೊತ್ತು, ಯಾರೂ ಮೂವತ್ತೆರಡು ಐಟಮ್ ಸೇವಿಸುವುದಿಲ್ಲವೆಂದು. ಅದಕ್ಕಾಗಿಯೇ ಅಷ್ಟು ಹೆಚ್ಚು ಐಟಮ್ ಮತ್ತು ಹೆಚ್ಚಿನ ಬೆಲೆ ಇಟ್ಟಿದ್ದೀರಿ. ಇದು ಹಗಲು ದರೋಡೆ ಮತ್ತು ಗ್ರಾಹಕ ವಿರೋಧಿ ನಡೆ. ಇದು ನಿಮಗೆ ಶೋಭೆ ಅಲ್ಲ.'

ಮಾಲೀಕನ ಬಳಿ ಉತ್ತರವಿರಲಿಲ್ಲ. 'ಇದು ನಮ್ಮ ನಿಯಮ. ಬೇಕಾದವರು ಸೇವಿಸುತ್ತಾರೆ. ಇಷ್ಟವಿಲ್ಲದವರು ಹೋಗಲಿ. ನಮಗೆ ಬೇಸರವಿಲ್ಲ' ಎಂದು ಹೇಳಿದ.

ಇದು ವ್ಯಾಪಾರಕ್ಕೆ ಕುಳಿತವ ಹೇಳುವ ಮಾತಲ್ಲ. ಹೊಟ್ಟೆ ತುಂಬಿದವ ಅಥವಾ ದುಡ್ಡು ಹೊಡಕೊಂಡವ ('ಹುಡ್ಕೋ'ಅಲ್ಲ) ಹೇಳುವ ಮಾತು ಎಂದೆನಿಸಿತು. ಹಣ ಕೊಡುವವನಿಗೆ ಎಂದೂ ಬೇಸರವಾಗದಂತೆ ನೋಡಿಕೊಳ್ಳಬೇಕು. ಗ್ರಾಹಕ ನಗುಮೊಗದಿಂದ ಹಣ ಕೊಡಬೇಕು. ಬೇಸರಿಸಿಕೊಂಡು ಕೊಟ್ಟ ಹಣ ಕೈಗೆ ಹತ್ತುವುದಿಲ್ಲ. ಹೋಟೆಲ್ಲಿಗೆ ಹೊಟ್ಟೆದುಂಬಿದವ ಬರುವುದಿಲ್ಲ. ಹಸಿದು ಹೊಟ್ಟೆಯಲ್ಲಿ ಬಂದವರನ್ನು ಹಾಗೆ ಕಳಿಸಬಾರದು. ಗ್ರಾಹಕನನ್ನು ಸಂತೃಪ್ತಗೊಳಿಸದ ಯಾವ ಉದ್ಯಮವೂ ಬಹಳ ದಿನ ನಡೆಯುವುದಿಲ್ಲ.

ಲಾಭ ಮಾಡುವುದು ಉದ್ದೇಶವಾದರೂ, ಗ್ರಾಹಕನನ್ನು ಸಂತೃಪ್ತಗೊಳಿಸುವುದು ಪರಮೋದ್ದೇಶವಾಗಿರಬೇಕು. ಹಸಿವಿನಲ್ಲಿ ಬರುವ ಗ್ರಾಹಕ ಬೇರೆ ಉಪಾಯ ಕಾಣದೇ ತನಗಿಷ್ಟವಿಲ್ಲದಿದ್ದರೂ, ಹಣ ಕೊಟ್ಟ ಕಿಚ್ಚಿಗೆ ಹತ್ತಾರು ಐಟಮ್ಮುಗಳನ್ನು ಸೇವಿಸಿ, ಹೊಟ್ಟೆ ಭಾರ ಮಾಡಿಕೊಂಡು ನಂತರ ಪರಿತಪಿಸಬಹುದು. ಇನ್ನು ರೆಸಾರ್ಟಿನಲ್ಲಿ ವಾಸಿಸುವವರಿಗೆ ಅಷ್ಟೊಂದು ವೆರೈಟಿಗಳು ಇಷ್ಟವಾಗಬಹುದು. ಕಾರಣ ಅವರು ವಿಶ್ರಾಂತಿ ತೆಗೆದುಕೊಳ್ಳಲೆಂದೇ ಬಂದಿರುತ್ತಾರೆ. ಆದರೆ ಹೊರಗಿನಿಂದ ಬರುವವರಿಗೆ, ಅತಿಯಾದ ಸೇವನೆ ತೀವ್ರ ಕಿರಿಕಿರಿ ಯಾಗಬಹುದು. ಅದೇನೇ ಇರಲಿ, ಗ್ರಾಹಕನಿಗೆ ಆಯ್ಕೆಗಳನ್ನು ಕೊಡಬೇಕು. ಅವನಿಗೆ ಆಯ್ಕೆಗಳನ್ನು ಕೊಡದೇ, ಕೈ ಕಟ್ಟಿಹಾಕಬಾರದು. ಅದು ಒಳ್ಳೆಯ ಬಿಜಿನೆಸ್ ಮಾದರಿಯಲ್ಲ. ಇದನ್ನು ಅರ್ಥ ಮಾಡಿಕೊಳ್ಳದವರು ಎಲ್ಲಾ ಇದ್ದೂ ಸೋಲುತ್ತಾರೆ. ಒಮ್ಮೆ ವಾಪಸ್ ಹೋದ ಗ್ರಾಹಕನನ್ನು ಮರಳಿ ಬರುವಂತೆ ಮಾಡುವುದು ಕಷ್ಟ. ಅಷ್ಟೂ ಸಾಲದೆಂಬಂತೆ ಆತ ಸಂದರ್ಭ ಸಿಕ್ಕಾಗ ತನ್ನ ಅನುಭವವನ್ನು ಹತ್ತಾರು ಜನರ ಮುಂದೆ ಹೇಳಿ ಹಾನಿ ಮಾಡುತ್ತಾನೆ.

If you don't appreciate your customers, someone else will. ಎಂಬ ಮಾತನ್ನು ಬಿಜಿನೆಸ್ ಮಾಡುವ ಪ್ರತಿಯೊಬ್ಬರೂ ಅರಿತಿರಲೇಬೇಕಾದ ಮೂಲಮಂತ್ರ. ಗ್ರಾಹಕ ಸೇವೆ ಅಥವಾ ಸೇವೆಯಲ್ಲಿ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಒಂದು ಮಾತಿದೆ Quality in a service or product is not what you put into it. It is what the customer gets out of it.ಇದು ಪ್ರತಿ ವ್ಯವಹಾರದಲ್ಲೂ ಅಕ್ಷರಶಃ ಸತ್ಯ. ತಿಂಡಿ ತಿನ್ನದೇ ಎದ್ದು ಹೋದ ಆ ಮೂವರ ನಡೆ ಇಷ್ಟವಾಯಿತು. ಒಂದು ಒಳ್ಳೆಯ ಮ್ಯಾನೇಜ್‌ಮೆಂಟ್ ಪಾಠ ಕೇಳಿದಂತೆ ಭಾಸವಾಯಿತು.

ಬದುಕನ್ನು ಬದಲಿಸಿಕೊಳ್ಳೋದು ಹೇಗೆ?

ರಿಚರ್ಡ್ ಬ್ರಾನ್‌ಸನ್ ಅದ್ಯಾವ ಮೂಡಿನಲ್ಲಿದ್ದರೋ ಏನೋ? ಕೆಲ ವರ್ಷದ ಹಿಂದೆ ಅವರಿಗೊಂದು ಟ್ವಿಟರಿನಲ್ಲಿ (ಟ್ವೀಟ್ ಅಲ್ಲ) ಮೆಸೇಜ್ ಮಾಡಿದ್ದೆ. ಹತ್ತು ನಿಮಿಷಗಳಲ್ಲಿ ವಾಪಸ್ ಮೆಸೇಜ್ ಮಾಡಿದರು ನನಗೆ ಅಚ್ಚರಿಯಾಯಿತು. 'ನಮ್ಮ ಬದುಕನ್ನು ಒಂದು ವರ್ಷದಲ್ಲಿ ಬದಲಿಸಿಕೊಳ್ಳಬಹುದೇ? ಹೇಗೆ?' ಎಂದು ಕೇಳಿದ್ದೆ. ಅದಕ್ಕೆ ಬ್ರಾನ್‌ಸನ್ ಅವರು ಜಗತ್ತಿನ ಅತಿ ಶ್ರೀಮಂತ ವಾರೆನ್ ಬಫೆಟ್ ಹೇಳಿದ್ದನ್ನು ಪ್ರಸ್ತಾಪಿಸಿ ಬರೆದಿದ್ದರು.

- ಏನೇ ಮಾಡಿ ತಕ್ಷಣ ಫಲಿತಾಂಶ ಬರುವುದಿಲ್ಲ. ಎಲ್ಲದಕ್ಕೂ ಟೈಮು ಹಿಡಿಯುತ್ತದೆ.
- ನಿಮ್ಮ ಸಂತಸ, ನೆಮ್ಮದಿಗೆ ಬೇರೆಯವರನ್ನು ಅವಲಂಬಿಸುವುದನ್ನು ನಿಲ್ಲಿಸಬೇಕು.
- ಕಂಪ್ಲೇನ್ ಮಾಡೋದನ್ನು ನಿಲ್ಲಿಸಿ, ನನ್ನಂಥ ಅದೃಷ್ಟವಂತ ಯಾರೂ ಇಲ್ಲ ಎಂದು ಭಾವಿಸಿ.
- ಏನು ಅಂದುಕೊಂಡಿದ್ದೀರೋ ಅದನ್ನು ಮಾಡಿ, ಎಂದಿಗೂ ಕೈಚೆಲ್ಲಬೇಡಿ.
- ನೀವು ಮಾಡುವ ತಪ್ಪುಗಳಿಂದ ನಿಮ್ಮನ್ನು ಅಳೆಯುವುದನ್ನು ನಿಲ್ಲಿಸಿ.
- ಸಕಾರಾತ್ಮಕ ಯೋಚನೆಗಳಿರುವವರನ್ನು ಹತ್ತಿರಕ್ಕೆ ಇಟ್ಟುಕೊಳ್ಳಿ.
- ನಿಮ್ಮನ್ನು ಟೀಕಿಸುವವರನ್ನು ನಿರ್ಲಕ್ಷಿಸಿ.

ಇಷ್ಟು ಮಾಡಿ, ಒಂದು ವರ್ಷದಲ್ಲಿ ನೀವು ಹೊಸ ವ್ಯಕ್ತಿಯಾಗಿರುತ್ತೀರಿ. ಅಂದ ಹಾಗೆ ಈ ಏಳೂ ಸಂಗತಿಗಳನ್ನು ನಾನಂತೂ ಅಕ್ಷರಶಃ ಪಾಲಿಸುತ್ತಿದ್ದೇನೆ. ಹೀಗಾಗಿ ಪ್ರತಿದಿನವನ್ನೂ ಹೊಸದಾಗಿ, ಖುಷಿಯಾಗಿ ಕಳೆಯುತ್ತೇನೆ. ನೀವೂ ಪ್ರಯತ್ನಿಸಿ.

ಸ್ವಚ್ಛತೆ ಕಂಡು 'ಶಾಕ್'

ಇದು ಎಲ್ಲೂ ಸುದ್ದಿಯಾಗಲಿಲ್ಲ. ಅದೇನೆಂದರೆ, ಕೆಲ ವರ್ಷದ ಹಿಂದೆ ರವಾಂಡದಲ್ಲಿ ಎರಡು ದಿನ ಇದ್ದ ಪ್ರಧಾನಿ ನರೇಂದ್ರ ಮೋದಿಯವರು ಅಲ್ಲಿನ ಸ್ವಚ್ಛತೆ ನೋಡಿ ಅತೀವ ಸಂತಸ ವ್ಯಕ್ತಪಡಿಸಿದರಂತೆ. ಪ್ರಧಾನಿಯವರಿಗೆ ಹಿರಿಯ ರಾಜತಾಂತ್ರಿಕರೊಬ್ಬರು ಹೇಳಿದರಂತೆ– 'ರಾಜಧಾನಿ ಕಿಗಾಲಿ ಮಾತ್ರ ಅಲ್ಲ, ಇಡೀ ದೇಶವೇ ಇಷ್ಟು ಸ್ವಚ್ಛವಾಗಿದೆ. ವಿದೇಶಿ ಗಣ್ಯರಿಗಾಗಿ ಈ ಸ್ವಚ್ಛತೆ ಅಲ್ಲ. ವರ್ಷದ ಯಾವುದೇ ದಿನ ಬಂದರೂ ಇದೇ ಸ್ವಚ್ಛತೆ ಕಾಣಬಹುದು.'

ಮೊದಲ ಬಾರಿಗೆ ರವಾಂಡಕ್ಕೆ ಹೋದ ಯಾರಿಗೇ ಆದರೂ ಅಲ್ಲಿನ ಸ್ವಚ್ಛತೆ ಕಂಡು 'ಶಾಕ್' ಆಗುತ್ತದೆ. ಇಡೀ ದೇಶದಲ್ಲಿ ಒಂದೇ ಒಂದು ಕಸ, ಕಡ್ಡಿ, ಬಾಟಲಿ, ಸಿಗರೇಟ್ ಪ್ಯಾಕ್, ಪ್ಲಾಸ್ಟಿಕ್... ಹೀಗೆ ಯಾವ ಕಸ-ಕಲ್ಮಶಗಳನ್ನು ನೋಡಲು ಸಾಧ್ಯವಿಲ್ಲ. ದಾರಿಯಲ್ಲಿ ಯಾರೂ ಉಗುಳುವುದಿಲ್ಲ, ಎಲೆ-ಅಡಕೆ ಪಿಚಕಾರಿ ಸಿಂಪಡಿಸುವುದಿಲ್ಲ. ಕಳ್ಳೇಕಾಯಿ ತಿಂದು ಸಿಪ್ಪೆಯನ್ನು ಬೀದಿಗೆಸೆಯುವುದಿಲ್ಲ. ಯಾರೂ ಸಹ ರಸ್ತೆ ಬದಿಗೆ ಮೂತ್ರ ವಿಸರ್ಜನೆಗೆ ನಿಲ್ಲುವುದಿಲ್ಲ. ತಂಬಿಗೆ ತೆಗೆದುಕೊಂಡು ಹೋಗುವುದಿಲ್ಲ.

ದೇಶಕ್ಕೆ ದೇಶವೇ ಶುದ್ಧ, ಸ್ವಚ್ಛ, ಬಡತನಕ್ಕೂ, ಕೊಳಕಿಗೂ ಅವಿನಾಭಾವ ಸಂಬಂಧ. ಮೊದಲನೆಯದಿದ್ದರೆ ಎರಡನೆಯದೂ ಇರಲೇಬೇಕು. ಎರಡನೆಯದಕ್ಕೆ ಮೊದಲನೆಯದೇ ಕಾರಣ. ಆದರೆ ರವಾಂಡದಲ್ಲಿ ಮಾತ್ರ ಬಡತನವಿದ್ದರೂ ಅಸ್ವಚ್ಛತೆಯನ್ನು ಓಡಿಸಲಾಗಿದೆ. ಇದು ಪ್ರಧಾನಿಯೋ, ರಾಷ್ಟ್ರಾಧ್ಯಕ್ಷನೋ ಕರೆ ಕೊಡುವುದರಿಂದ ಆಗುವಂಥದ್ದಲ್ಲ. ಪ್ರತಿಯೊಬ್ಬ ದೇಶವಾಸಿಗೂ ಅನಿಸಬೇಕು. ತನ್ನ ದೇಶ, ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವ ಬಗ್ಗೆ ಅತೀವ ಕಾಳಜಿ ಇರಬೇಕು. ನೂರರಲ್ಲಿ ಒಬ್ಬ ಸ್ವಚ್ಛತೆ ಉಲ್ಲಂಘಿಸಿದರೆ, ಅಷ್ಟರಮಟ್ಟಿಗೆ ಹೊಲಸಾಗಿರುತ್ತದೆ. ನಂಬಿಕೆಯೆಂದರೆ ನೂರಕ್ಕೆ ನೂರು ಹೇಗೋ, ಸ್ವಚ್ಛತೆಯೆಂದರೂ ನೂರಕ್ಕೆ ನೂರೇ.

ರವಾಂಡದಲ್ಲಿ ಇದನ್ನು ಅಕ್ಷರಶಃ ಪಾಲಿಸಲಾಗುತ್ತಿದೆ. ನನ್ನ ಜತೆಗಿದ್ದ ಕನ್ನಡಿಗರೊಬ್ಬರು 'ನಾನೂ ನೋಡ್ತಾನೇ ಇದ್ದೇನೆ, ರವಾಂಡದಲ್ಲಿ ಒಂದೇ ಒಂದು ಕಸವನ್ನಾದರೂ ಹುಡುಕಲೇಬೇಕೆಂದು, ಆಗುತ್ತಿಲ್ಲ' ಎಂದು ಉದ್ಗಾರ ತೆಗೆದರು. ಇಡೀ ದೇಶಕ್ಕೆ ದೇಶವೇ ಯಾವುದೇ ಘೋಷಣೆಗಳಿಲ್ಲದೇ, ಅದೊಂದು ಜೀವನಕ್ರಮದಂತೆ, ತೀರಾ ಸಹಜವೆಂಬಂತೆ ಸ್ವಚ್ಛತೆಯನ್ನು ಆಚರಿಸಿಕೊಂಡು ಬರುತ್ತಿದೆ.

ಬೆಂಗಳೂರಿಗೆ ವಿದೇಶಿ ಗಣ್ಯರು ಬಂದಾಗ ವಿಮಾನ ನಿಲ್ದಾಣದಿಂದ ರಾಜಭವನ ಹಾಗೂ ಅವರು ಓಡಾಡುವ ಪ್ರಮುಖ ದಾರಿಗಳಿಗೆ ಮಾತ್ರ ಅಲಂಕಾರ ಮಾಡುತ್ತಿದ್ದುದು ಸಂಪ್ರದಾಯ. ಅವರು ಹೋಗುತ್ತಿದ್ದಂತೆ ಆ ಅಲಂಕಾರಕ್ಕೆ ತಿಲಾಂಜಲಿ. ಬೆಂಗಳೂರಿನಲ್ಲಿ ಸಾರ್ಕ್ ಸಮಾವೇಶವಾದಾಗ, ಇಡೀ ನಗರವನ್ನು ಸುಣ್ಣ ಬಣ್ಣ ಬಳಿದು ಸಿಂಗರಿಸಿದ್ದರು. ರಸ್ತೆಗಳಿಗೆಲ್ಲ ಡಾಂಬರು ಹಾಕಿ ಬಿಳಿ ಪಟ್ಟಿ ಬಳಿದು ಅಲಂಕರಿಸಿದ್ದರು. ಆನಂತರ ಒಂದೆರಡು ಸಂದರ್ಭಗಳಲ್ಲಿ ಹೀಗೆ ಮಾಡಿದ್ದುಂಟು. ಕಾರ್ಯಕ್ರಮ ಮುಗಿದ ನಂತರ ಈ ಅಲಂಕಾರ, ಸ್ವಚ್ಛತೆಗಳೆಲ್ಲ ಮಾಯ!

ಸಾರ್ವಜನಿಕವಾಗಿ ಸ್ವಚ್ಛತೆ ಕಾಪಾಡುವುದು ನಮಗೆ ಒಂದು ಸಾಂಘಿಕ ಗುಣವಾಗಿ ಬೆಳೆದು ಬಂದಿಲ್ಲ. ತಮ್ಮ ಮನೆಯನ್ನು ಸ್ವಚ್ಛವಾಗಿ ಇಟ್ಟುಕೊಂಡವರೂ, ಸಾರ್ವಜನಿಕ ಸ್ಥಳಗಳಲ್ಲಿ ಕಂಡಲ್ಲಿ ಕಸಗಳನ್ನು ಎಸೆಯುತ್ತಾರೆ. ಸ್ವತಃ ಪ್ರಧಾನಿಯವರೇ ಪೊರಕೆ ಹಿಡಿದರೂ, ಸ್ವಚ್ಛ ಭಾರತ ಎಂದು ಬೊಬ್ಬೆ ಹೊಡೆದುಕೊಂಡರೂ ನಮ್ಮ ಜನರಲ್ಲಿ ಇನ್ನೂ ಜಾಗೃತಿ ಮೂಡಿಲ್ಲ. ಸ್ವಚ್ಛ ಭಾರತ ಪ್ರಚಾರಕ್ಕೆಂದು, ಅರಿವು ಮೂಡಿಸಲೆಂದು ಸಾವಿರಾರು ಕೋಟಿ ರುಪಾಯಿ ಖರ್ಚು ಮಾಡಲಾಗಿದೆ. ನಿತ್ಯವೂ ಬಳಸುವ ನೋಟಿನ ಮೇಲೆ ಸ್ವಚ್ಛ ಭಾರತ ಲಾಂಛನವಿಟ್ಟು ಜಾಗೃತಿ ಮೂಡಿಸಲಾಗುತ್ತಿದ್ದರೂ ಸಮಾಧಾನವಾಗುವಂಥ ಪರಿವರ್ತನೆಯಾಗಿಲ್ಲ. ಮೋದಿಯವರಿಗೆ ಕೀರ್ತಿ ಬಂದು ಬಿಡಬಹುದೆಂದು ಭಾರತ ಸ್ವಚ್ಛವಾಗುವುದು ಪ್ರತಿಪಕ್ಷಗಳಿಗೂ ಬೇಕಿಲ್ಲ. ಇಂಥ ಮನಸ್ಥಿತಿಯಿದ್ದರೆ ಯಾವ ದೇಶ ಉದ್ಧಾರವಾದೀತು?

ಯಾರು ಬುದ್ಧಿವಂತರು?

ಸುಮಾರು ಐವತ್ತು ವರ್ಷಗಳ ಹಿಂದಿನ ರೀಡರ್ಸ್ ಡೈಜೆಸ್ಟ್ ಮಾಸಿಕದಲ್ಲಿ, ಬಹಳ ಹಿಂದೆ ಓದಿದ ಒಂದು ಪ್ರಸಂಗವಿದು.

ಮುಸ್ಸೋಲಿನಿ ಅಧಿಕಾರಕೆ ಬಂದ ಕೆಲ ದಿನಗಳಲ್ಲಿ ಅಮೆರಿಕದ ಶ್ರೀಮಂತ ಆರ್ಟ್ ಸಂಗ್ರಹಕಾರ ಇಟಲಿಗೆ ಬಂದು, ಹದಿನಾರನೇ ಶತಮಾನದ ಪ್ರಸಿದ್ಧ ಕಲಾವಿದ ಟಿಟಿಯನ್‌ನ ಬೃಹತ್ ವರ್ಣಚಿತ್ರವನ್ನು ಭಾರಿ ಬೆಲೆಗೆ ಖರೀದಿಸಿದ. ಅದನ್ನು ಅಮೆರಿಕಕ್ಕೆ ತೆಗೆದುಕೊಂಡು ಹೋಗುವುದು ಅವನ ಉದ್ದೇಶವಾಗಿತ್ತು. ಆದರೆ ಅದನ್ನು ಇಟಲಿಯಿಂದ ಹೊರಗೆ ತೆಗೆದುಕೊಂಡು ಹೋಗಲು ಮುಸ್ಸೋಲಿನಿ ಸರಕಾರ ಅನುಮತಿ ನೀಡಲಿಕ್ಕಿಲ್ಲ ಎಂದು ಅವನಿಗೆ ಕೆಲವರು ಹೇಳಿದರು.

ಆಗ ಆ ಅಮೆರಿಕನ್ ಕಲಾ ಸಂಗ್ರಹಕಾರನಿಗೆ ಅತೀವ ಬೇಸರವಾಯಿತು. ಇದನ್ನು ತನ್ನ ದೇಶಕ್ಕೆ ತೆಗೆದುಕೊಂಡು ಹೋಗುವುದು ಹೇಗೆ ಎಂದು ಆತ ಒಬ್ಬ ಸಲಹೆಗಾರನನ್ನು ಕೇಳಿದ.

ಅದಕ್ಕೆ ಆತ ಒಂದು ಸಲಹೆ ನೀಡಿದ – 'ಒಂದು ಕೆಲಸ ಮಾಡಿ, ಟಿಟಿಯನ್‌ನ ವರ್ಣಚಿತ್ರದ ಮೇಲೆ ಮುಸ್ಸೋಲಿನಿ ವರ್ಣಚಿತ್ರವನ್ನು ಬಿಡಿಸುವಂತೆ ಸ್ಥಳೀಯ ಕಲಾವಿದನಿಗೆ ಹೇಳಿ. ಆತ ಅದನ್ನು ಬಿಡಿಸಿಕೊಡುತ್ತಾನೆ. ಮುಸ್ಸೋಲಿನಿ ಆಡಳಿತದ ಅಧಿಕಾರಿಗಳು ತಮ್ಮ ನಾಯಕನ ಚಿತ್ರವನ್ನು ಅಮೆರಿಕಕ್ಕೆ ತೆಗೆದುಕೊಂಡು ಹೋಗುವವನು ಮುಸ್ಸೋಲಿನಿ ಅಭಿಮಾನಿಯಿರಬೇಕೆಂದು, ತಕ್ಷಣ ಸಂತೋಷದಿಂದ ಅನುಮತಿ ನೀಡುತ್ತಾರೆ. ಅಮೆರಿಕಕ್ಕೆ ಹೋದ ನಂತರ, ಮೇಲಿನ ಪೇಂಟಿಂಗ್‌ನ್ನು ತೆಗೆದುಹಾಕಿ.'

ಅಮೆರಿಕದ ಕಲಾ ಸಂಗ್ರಹಕಾರನಿಗೆ ಇದು ಅದ್ಭುತ ಐಡಿಯಾ ಎಂದೆನಿಸಿತು. ಆತ ತಕ್ಷಣ ಸ್ಥಳೀಯ ಕಲಾಕಾರನನ್ನು ಕರೆಯಿಸಿ, ಟಿಟಿಯನ್ ಪೇಂಟಿಂಗ್ ಮೇಲೆ ಮುಸ್ಸೋಲಿನಿ ಪೇಂಟಿಂಗ್ ಬಿಡಿಸಿಕೊಡುವಂತೆ ಹೇಳಿದ. ಆತ ಬಿಡಿಸಿಕೊಟ್ಟ. ಮುಂದೆ ಆತ ಅಂದುಕೊಂಡಂತೆ ಆಯಿತು. ಯಾವ ತೊಂದರೆಯೂ ಇಲ್ಲದೇ ಪೇಂಟಿಂಗ್‌ನ್ನು ಸುಲಭವಾಗಿ ಅಮೆರಿಕಕ್ಕೆ ತೆಗೆದುಕೊಂಡು ಬಂದ.

ಬಂದವನೇ ಆ ಪೇಂಟಿಂಗ್ ಮೇಲೆ ಬಿಡಿಸಿದ ಮುಸ್ಸೋಲಿನಿ ಚಿತ್ರವನ್ನು ಕೆರೆಸಿ ಹಾಕುವಂತೆ ನುರಿತ ಪೇಂಟರ್‌ಗೆ ಹೇಳಿದ. ಆತ ಹರಿತವಾದ ಚಾಕುವಿನಿಂದ ಬಹಳ ನಾಜೂಕಿನಿಂದ ಮೇಲಿನ ಪದರ ಕೆರೆಸಿ ಹಾಕಿದ. ಟಿಟಿಯನ್‌ನ ಅದ್ಭುತ ಪೇಂಟಿಂಗ್ ಎದ್ದು ಕಂಡಿತು. ಅಷ್ಟಕ್ಕೇ ಸುಮ್ಮನಾಗದ ಪೇಂಟರ್, 'ಸರ್, ಈ ಟಿಟಿಯನ್ ಪೇಂಟಿಂಗ್ ಕೆಳಗೆ ಬೇರೆ ಇನ್ನೊಂದು ಪೇಂಟಿಂಗ್ ಇರುವಂತಿದೆ' ಎಂದು ಹೇಳಿದ.

ಕಲಾ ಸಂಗ್ರಹಕಾರನಿಗೆ ದಿಗಿಲಾಯಿತು. ಆ ಪೇಂಟರ್, ಟಿಟಿಯನ್‌ನ ಪೇಂಟಿಂಗ್‌ನ್ನು ಕೆರೆಸುತ್ತಿದ್ದಂತೆ ಮತ್ತೊಂದು ಚಿತ್ರ ಎದ್ದು ಬಂದಿತು. ನೋಡಿದರೆ ಮುಸ್ಸೋಲಿನಿ ಪೇಂಟಿಂಗ್!

ಅದು ರಂಗಭೂಮಿ ಅಲ್ಲ, ಹುಚ್ಚಾಸ್ಪತ್ರೆ

ಒಮ್ಮೆ ಮಾಸ್ಟರ್ ಹಿರಣ್ಣಯ್ಯ ಅವರ ಜತೆಗೆ ವೇದಿಕೆ ಹಂಚಿಕೊಂಡಿದ್ದೆ. ಆ ದಿನ ಅವರು ಅದ್ಭುತವಾಗಿ ಮಾತಾಡಿದರು. ಕಾರ್ಯಕ್ರಮ ಮುಗಿದ ಬಳಿಕ ಹಲವರು ಅವರನ್ನು ಸುತ್ತುವರಿದು ಅಭಿನಂದಿಸಿದರು.

ಅವರಲ್ಲೊಬ್ಬ, 'ಹಿರಣ್ಣಯ್ಯನವರೇ, ನೀವು ರಂಗಭೂಮಿಯ ನಟರಾಗುವ ಬದಲು, ಲೋಕಸಭಾ ಸದಸ್ಯರಾಗಿದ್ದರೆ, ಎಷ್ಟು ಚೆನ್ನಾಗಿತ್ತು. ನಿಮ್ಮ ಮಾತಿನಿಂದ ಇಡೀ ಲೋಕಸಭೆ ತಲೆದೂಗುವಂತೆ ಮಾಡಬಹುದಾಗಿತ್ತು. ಲೋಕಸಭೆಗಿಂತ ದೊಡ್ಡ ರಂಗಭೂಮಿ ಯಾವುದಿದೆ? ಈಗಲೂ ಕಾಲ ಮಿಂಚಿಲ್ಲ, ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ' ಎಂದು ಹೇಳಿದ.

ಅದಕ್ಕೆ ತಟ್ಟನೆ ಹಿರಣ್ಣಯ್ಯನವರು ಹೇಳಿದರು – 'ಅಲ್ಲಯ್ಯಾ, ನಾನು ಲೋಕಸಭಾ ಸದಸ್ಯನಾಗಿದ್ದಿದ್ದರೆ ಮೂರ್ಖನ ಹಾಗೆ ಬಾಯಿಮುಚ್ಚಿ ಕುಳಿತು ಎದ್ದು ಬರಬೇಕಾಗುತ್ತಿತ್ತು. ನಮ್ಮ ರಾಜ್ಯದಿಂದ ಹೋದ ಒಬ್ಬನೇ ಒಬ್ಬ ಲೋಕಸಭಾ ಸದಸ್ಯ ಮಾತಾಡಿದ್ದನ್ನು ನೀವೆಲ್ಲ ಕೇಳಿದ್ದೀರಾ, ನೋಡಿದ್ದೀರಾ? ಇಲ್ಲಿ ನೀವೆಲ್ಲ ನನ್ನ ಮಾತನ್ನು ಕೇಳಿದಿರಿ ಎಂದು ಅಲ್ಲಿ ಯಾರು ಕೇಳುತ್ತಾರೆ? ಅಲ್ಲಿದ್ದವರಿಗೆ ಮಾತನ್ನು ಕೇಳುವ ವ್ಯವಧಾನ ಇಲ್ಲ. ಲೋಕಸಭಾ ಸದಸ್ಯನಾದರೆ ಪಕ್ಷದ ನಾಯಕರು ಹೇಳಿದಂತೆ ಮೂಕನಾಗಿ ಇರಬೇಕಾಗುತ್ತದೆ. ನಾನು ಹಾಗೆ ಇರುವುದುಂಟಾ? ಅಷ್ಟಕ್ಕೂ ಲೋಕಸಭೆ ಅನ್ನೋದು ರಂಗಭೂಮಿ ಅಲ್ಲ. ಅದೊಂದು ಹುಚ್ಚಾಸ್ಪತ್ರೆ. ಹೀಗಾಗಿ ನಾನು ನನ್ನ ಪಾಡಿಗೆ ನಾಟಕ ಮಾಡಿಕೊಂಡಿರುತ್ತೇನೆ. ಅದೇ ನನಗೆ ಇಷ್ಟ. ನನಗೆ ಮೂಕನ ಪಾತ್ರ ಮಾಡಿ ಗೊತ್ತಿಲ್ಲ.'

ಹೀಗೊಂದು ಫನ್ ಕ್ಲಬ್!

ನಾನು ಡೆನ್ವರ್‌ನ ಒಂದು ಹೋಟೆಲ್‌ಗೆ ಹೋಗಿದ್ದೆ. ಅದರ ಹೆಸರು ಫನ್ ಕ್ಲಬ್ ಅಂತ. ಹಾಗೆ ನೋಡಿದರೆ, ಅದೊಂದು ಪಬ್. ಅಲ್ಲಿ ಕುಳಿತಷ್ಟು ಹೊತ್ತು ಬೇಸರವಾಗುವುದಿಲ್ಲ. ಅಲ್ಲಿನ ಗೋಡೆಗಳ ಮೇಲೆ 'ವಕ್ರತುಂಡೋಕ್ತಿ' ಮಾದರಿಯ ಸಾಲುಗಳನ್ನು ಬರೆದು ಗೋಡೆಗೆ ತಗುಲಿ ಹಾಕಲಾಗಿದೆ. ಕೆಲವು ಸಾಲುಗಳನ್ನು ನೋಡಿ.

- Why do german love american? Because American are most hated people
- ಯಾರಾದರೂ ಎರಡೂ ಭಾಷೆ ಮಾತಾಡಿದರೆ bilingual ಅಂತಾರೆ. ಹಲವು ಭಾಷೆಗಳನ್ನು ಮಾತಾಡಿದರೆ multilingual ಅಂತಾರೆ. ಆದರೆ ಒಂದೇ ಭಾಷೆ ಮಾತಾಡುವವರನ್ನು ಏನಂತಾರೆ? –ಅಮೆರಿಕನ್!
- ಅಮೆರಿಕನ್‌ಗೂ ಯೋಗರ್ಟ್(ಮೊಸರು)ಗೂ ಏನು ವ್ಯತ್ಯಾಸ?

– ಒಂದು ತಿಂಗಳು ಬಿಟ್ಟರೆ ಯೋಗರ್ಟ್ ತನ್ನದೇ ಆದ ಗುಣ, ಸ್ವಭಾವವನ್ನು ಬೆಳೆಸಿಕೊಳ್ಳುತ್ತದೆ. ಈ ಮಾತನ್ನು ಅಮೆರಿಕನ್‌ಗೆ ಹೇಳಲಾಗದು!

- ಅಮೆರಿಕದಲ್ಲಿ ಮಾತ್ರ ಇದು ಸಾಧ್ಯ!

– ಗ್ರಾಹಕರು ಡಬಲ್ ಚೀಸ್ ಬರ್ಗರ್, ಲಾರ್ಜ್ ಫ್ರೆಂಚ್ ಫ್ರೈಸ್‌ಗಳ ಜತೆಗೆ ಡಯಟ್ ಕೋಕ್ ಆರ್ಡರ್ ಮಾಡುತ್ತಾರೆ!

- ಅಮೆರಿಕದಲ್ಲಿ ಮಾತ್ರ ಇದು ಸಾಧ್ಯ!

– ಸಾವಿರಾರು ಡಾಲರ್‌ನ ಕಾರನ್ನು ಮನೆಮುಂದೆ ರಸ್ತೆಯಲ್ಲಿ ನಿಲ್ಲಿಸುತ್ತಾರೆ. ಬೇಡದ ಸಾಮಾನುಗಳನ್ನು ಗ್ಯಾರೇಜ್‌ನಲ್ಲಿ ಜೋಪಾನವಾಗಿ ಇಟ್ಟಿರುತ್ತಾರೆ!

ನಳ ಮಹಾರಾಜ ಮಾಡಿದ ಬೆಳ್ಳುಳ್ಳಿ ಪಾಯಸದ ರೆಸಿಪಿ ಬೇಕೇ?

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

'ಅಮಿತಗುಣೋಪಿ ಪದಾರ್ಥೋ ದೋಷೇಣೈಕೇನ ನಿಂದಿತೋ ಭವತಿ। ನಿಖಿಲರಸಾಯನಮಹಿತೋ ಗಂಧೇನೋಗ್ರೇಣ ಲಶುನ ಇವ॥ ಅಂತೊಂದು ಸುಭಾಷಿತ ಇದೆ. ಯಾವುದೇ ವಸ್ತುವಿನಲ್ಲಿ ಅಥವಾ ವ್ಯಕ್ತಿಯಲ್ಲಿ ಅಪರಿಮಿತವಾದ ಒಳ್ಳೆಯ ಅಂಶಗಳಿದ್ದು, ಒಂದೇಒಂದು ದೋಷವಿದ್ದರೂ ಸಾಕು ನಿಂದನೆ ಬಂದೇಬರುತ್ತದೆ. ಔಷಧಗಳಿಗೆಲ್ಲ ರಾಜನೆನಿಸಿದರೂ ಕಟುವಾದ ವಾಸನೆಯಿಂದಾಗಿ ಬೆಳ್ಳುಳ್ಳಿಯು ಹೇಗೆ ತಿರಸ್ಕಾರಕ್ಕೆ ಒಳಗಾಗುತ್ತದೆಯೋ ಹಾಗೆ– ಎಂದು ಈ ಸುಭಾಷಿತದ ಅರ್ಥ. ಸಂಸ್ಕೃತದಲ್ಲಿ ಬೆಳ್ಳುಳ್ಳಿಯನ್ನು ಲಶುನ ಎನ್ನುತ್ತಾರೆ. ಲಶುನಂ ಗೃಂಜನಾರಿಷ್ಟ ಮಹಾಕಂದ ರಸೋನಕಾಃ ಎಂದು ಅಮರಕೋಶದಲ್ಲಿ ಕೊಟ್ಟಿರುವ ಇನ್ನಷ್ಟು ಪರ್ಯಾಯಪದಗಳು. ಬೆಳ್ಳುಳ್ಳಿಯ ವಾಸನೆಯನ್ನು ಕುರಿತಾದದ್ದೇ ಇನ್ನೊಂದು ಸುಭಾಷಿತವೂ ಇದೆ: 'ಅಲ್ಪತ್ವಗಾಕೃತೀನಾಂ ವಿಗರ್ಹಿತಾನಾಂ ಸದಾಗತಿಂ ನುದತಾಮ್। ಪಿಶುನಾನಾಂ ಲಶುನಾನಾಂ ನ ಸಹಂತೇ ಗಂಧಮಪಿ ಸಂತಃ॥ ಇದರ ಅರ್ಥ– ಬೆನ್ನ ಹಿಂದೆ ಆಡಿಕೊಳ್ಳುವವರನ್ನು ಮತ್ತು ಬೆಳ್ಳುಳ್ಳಿಯನ್ನು ಸಂತರು ಮೂಸಿಯೂ ನೋಡುವುದಿಲ್ಲ. ಏಕೆಂದರೆ ಎರಡೂ ಅಲ್ಪತನ ತೋರಿಸುವಂಥವು (ಬೆಳ್ಳುಳ್ಳಿಯ ತೆಳು ಸಿಪ್ಪೆಯನ್ನು ಅಲ್ಪತನಕ್ಕೆ ಹೋಲಿಸಿರುವುದು), ದೂಷಣೆಗೆ ಒಳಗಾಗುವಂಥವು, ಮತ್ತು ದುರ್ನಾತ ಬೀರುವಂಥವು. ಮತ್ತೆ ದ್ವಿಜರಂತೂ ಬೆಳ್ಳುಳ್ಳಿಯನ್ನು ತಿನ್ನಲೇಬಾರದೆನ್ನುವ ಶ್ಲೋಕವೊಂದು– 'ಲಶುನಂ ಗೃಂಜನಂ ಚೈವ ಪಲಾಂಡು ಕವಕಾನಿ ಚ। ಅಭಕ್ಷ್ಯಾಣಿ ದ್ವಿಜಾತೀನಾಮಮೇಧ್ಯಪ್ರಭವಾನಿ ಚ॥ ಅಂತ ಮನುಸ್ಮೃತಿಯಲ್ಲೂ ಇದೆಯಂತೆ.

ಕನ್ನಡದ ಕೆಲವು ಕವಿಗಳೂ ಲಶುನ ಎಂಬ ಪದವನ್ನೇ ಬಳಸಿದ್ದಿದೆ. ಎಸ್ ವಿ ಪರಮೇಶ್ವರ ಭಟ್ಟರು ಇಂದ್ರಚಾಪದ ಒಂದು ಚೌಪದಿಯಲ್ಲಿ ಹೀಗೆ ಬರೆದಿದ್ದಾರೆ: 'ಎಷ್ಟೆಷ್ಟು ಸಜ್ಜನರೊಡನಾಡಬಿಟ್ಟರು। ಖಳನಿಗೆ ಸದ್ಬುದ್ಧಿ ಬರದು। ಕಸ್ತೂರಿಯೊಡನಿಟ್ಟು ಕುಟ್ಟಿ ತೆಗೆದಿಟ್ಟರು। ಲಶುನಕೆ ಸೌರಭ ಬರದು। – ಇದರಲ್ಲಿ ಅವರು ಬೆಳ್ಳುಳ್ಳಿಯನ್ನು ಕೆಟ್ಟದೆಂದು ನಿಂದಿಸುವುದಕ್ಕಿಂತಲೂ ಹೆಚ್ಚಾಗಿ ತಮ್ಮ ಬದುಕಿನಲ್ಲಿ ವಕ್ಕರಿಸಿದ ಯಾವನೋ ದುಷ್ಟನ ವರ್ತನೆಯಿಂದ ಹತಾಶರಾಗಿ ಆ ನೋವನ್ನು ತೋಡಿಕೊಳ್ಳಲು ಬೆಳ್ಳುಳ್ಳಿಯ ಘಾಟನ್ನು ರೂಪಕವಾಗಿ ಬಳಸಿದ್ದಿರಬಹುದು. ಏಕೆಂದರೆ ಇಂದ್ರಚಾಪ ಕೃತಿಯನ್ನು ಪರಮೇಶ್ವರ ಭಟ್ಟರ ಆತ್ಮಕತೆ ಅಂತಲೂ ಪರಿಗಣಿಸಲಾಗುತ್ತದೆ. ಆದರೆ ದಾಸಸಾಹಿತ್ಯದಲ್ಲಿ ಜಗನ್ನಾಥದಾಸರು ಬೆಳ್ಳುಳ್ಳಿಯನ್ನು ನೇರವಾಗಿ ತಿರಸ್ಕರಿಸಿದ್ದಾರೆ. ಬೆಳ್ಳುಳ್ಳಿ ಭಕ್ಷಣವನ್ನು ಪಾಪಕೃತ್ಯವೆಂದೇ ಘೋಷಿಸಿದ್ದಾರೆ. ಸಾರಿದ ಡಂಗುರ ಯಮನು ಅಘ– ನಾರಿಯರೆಳೆದು ತಂದು ನರಕದೊಳಿಡು ಎಂದು... ಎಂಬ ಕೀರ್ತನೆಯಲ್ಲಿ ಯಾವ್ಯಾವ ಪಾಪಕೃತ್ಯಗಳನ್ನು ಮಾಡಿದವರನ್ನು ಯಮಕಿಂಕರರು ಎಳೆದೊಯ್ಯುತ್ತಾರೆ ಎಂದು ಪಟ್ಟಿ ಮಾಡುತ್ತ 'ಲಶುನ ವೃಂತಾಕಾದಿಗಳನು ಭಕ್ಷಿಸುವಳ। ಸೊಸೆಯರೊಡನೆ ಮತ್ಸರಿಸುತಿಹಳ। ಹಸಿದು ಬಂದವರಿಗೆ ಅಶನವಿಲ್ಲೆಂಬಳ। ಉಸಿರು ಬಿಡದ ಹಾಗೆ ಎಳೆದು ತನ್ನಿರೊ...' ಎಂದಿದ್ದಾರೆ. ವೃಂತಾಕ ಅಂದರೆ ಬದನೆ. ಬದನೆಯನ್ನು ಕೆಂಡದಲ್ಲಿ ಸುಟ್ಟು ಸಿಪ್ಪೆ ತೆಗೆದು ಕಿವುಚಿ ಹುಣಿಸೆರಸ ಮತ್ತು ಉಪ್ಪು ಮೆಣಸು ಮಸಾಲೆಗಳನ್ನೆಲ್ಲ ಸೇರಿಸಿ ಭರ್ತಾ ಮಾಡಿ ಅದಕ್ಕೆ ಲೈಟಾಗಿ ಬೆಳ್ಳುಳ್ಳಿಯ ಒಂದು ಒಗ್ಗರಣೆಯನ್ನೂ ಕೊಟ್ಟು ಚಪ್ಪರಿಸುವವರನ್ನು ದಾಸರು ಏನೆನ್ನುವರೋ!

ಬೆಳ್ಳುಳ್ಳಿಯ ಇಷ್ಟು ಘಾಟು ಮತ್ತು ಅದರಿಂದಾಗಿ ನಿಂದನೆ, ತಿರಸ್ಕಾರಗಳು ಇಂದುನಿನ್ನೆಯದಲ್ಲ. ಆದಿಕವಿ ಪಂಪನಿಂದಲೇ ಅದು ಆರಂಭವಾಗಿದೆ ಎಂದು ನಮಗೆ ತಿಳಿದುಬರುತ್ತದೆ. ಪಂಪಭಾರತದಲ್ಲಿ, ಯುದ್ಧದ ಕೊನೆಯ ದಿನ ದುರ್ಯೋಧನನು ರಣರಂಗದಲ್ಲಿ ಹೆಣಗಳ ರಾಶಿಯ ನಡುವೆ ನಡೆದುಕೊಂಡು ವೈಶಂಪಾಯನ ಸರೋವರದ ಕಡೆಗೆ ಹೋಗುವ ಸನ್ನಿವೇಶ. ಅದು ಹೇಗಿತ್ತೆಂದರೆ 'ನೋಡಿ ಕನಲ್ವ ಕೆಂಡದ ಮೇಲೆ ಪಟಿಯ ಬೇವಿನೆಣ್ಣೆಯೊಳ್ ತೊಯ್ದಿಕ್ಕಿದ ಬೆಳ್ಳುಳ್ಳಿಯ ಕಂಪಿನಂತೆ ಬಳ್ಳುವಿನ ಬಾಯೊಳಳುರ್ವ ಕೆಂಡಂಗಳೊಳ್ ಸುಟಿದು ಬೇವ ಪೆಣಂಗಳ ಕಂಪು ನಾಱುವುದರ್ಕೆ ಸೈರಿಸಲಾಱದೆ...' ಹೋದನಂತೆ ದುರ್ಯೋಧನ. ಹಳಗನ್ನಡದ ಈ ಪ್ರಸಿದ್ಧ ನುಡಿಯನ್ನು ನಮಗೀಗ ಅರ್ಥವಾಗುವ ಹೊಸಗನ್ನಡದಲ್ಲಿ, ವಿದ್ವಾಂಸರ ವಿಶ್ಲೇಷಣೆಯನ್ನು ಎರವಲು ಪಡೆದು ತಿಳಿದುಕೊಳ್ಳುವುದಾದರೆ– ಹಳೆಯ ಬೇವಿನೆಣ್ಣೆಯಲ್ಲಿ ನೆನೆಸಿಟ್ಟ ಬೆಳ್ಳುಳ್ಳಿಯನ್ನು ಹೊಳೆಯುತ್ತಿರುವ ಕೆಂಡದ ಮೇಲೆ ಸುಟ್ಟಾಗಿನ ವಾಸನೆಯ ಹಾಗೆ, ಗುಳ್ಳೆನರಿಯ ಬಾಯಿಯಲ್ಲಿ ಸುಡುತ್ತ ಅಥವಾ ಉರಿಯುವ ಕೆಂಡಗಳಲ್ಲಿ ಕಾಣಿಸಿಕೊಂಡು ಬೇಯುತ್ತಿರುವ ಹೆಣಗಳ ದುರ್ವಾಸನೆಯನ್ನು ಸಹಿಸಲಾರದೆ ದುರ್ಯೋಧನನು ದೂರದೂರ ಹೆಜ್ಜೆ ಇಟ್ಟು ನಡೆಯುತ್ತ ಯುದ್ಧಭೂಮಿಯನ್ನು ದಾಟಿ ವೈಶಂಪಾಯನ ಸರೋವರದ ಕಡೆಗೆ ಹೋದನು. ಹೇಗಿದ್ದಿರಬಹುದು ಆ ಕರಾಳ ದೃಶ್ಯ ಮತ್ತು ಅಲ್ಲಿ ಮೂಗಿಗೆ ಅಡರುತ್ತಿದ್ದ ಕಮಟು ವಾಸನೆ ಎನ್ನುವುದು ಓದುಗರ ಊಹೆಗೆ ಬಿಟ್ಟದ್ದು. ಅಂದಹಾಗೆ ಜೈನಕವಿ ಪಂಪನಿಗೆ ಬೆಳ್ಳುಳ್ಳಿ ವಾಸನೆಯ ಪರಿಚಯ ಹೇಗಾಯ್ತೋ! ಬಹುಶಃ ಪಂಪನ ಪಕ್ಕದಮನೆಯವರು ಬೆಳ್ಳುಳ್ಳಿಪ್ರಿಯರಿದ್ದಿರಬಹುದು.

ಆದರೂ ಪಾಪ, ಕಟುವಾದ ವಾಸನೆ ಇದೆಯೆಂಬ ಒಂದೇ ಕಾರಣಕ್ಕೆ ಬೆಳ್ಳುಳ್ಳಿಗೆ ಇಷ್ಟೆಲ್ಲ ನಿಂದನೆ. ತಿಂದಮೇಲೆ ಉಸಿರಿಗೆಲ್ಲ ವಾಸನೆ, ಮಾರನೆದಿನ ಬೆವರಿಗೂ ನಾತಲೀಲೆ– ಎಂಬುದು ಬೆಳ್ಳುಳ್ಳಿಯ ಮೇಲಿನ ಸಾರ್ವತ್ರಿಕ ಆರೋಪ. ಈರುಳ್ಳಿಯಾದರೂ ಓಕೆ ಬೆಳ್ಳುಳ್ಳಿ ಯಾಕೆ ಎನ್ನುವವರ ಸಂಖ್ಯೆ ದೊಡ್ಡದಿದೆ. ಆದರೆ ಇಂದಿನ ಅಂಕಣಬರಹದ ಇನ್ನುಳಿದ ಭಾಗದಲ್ಲಿ ಬೆಳ್ಳುಳ್ಳಿಯ ದೂಷಣೆಯಿಲ್ಲ, ಬದಲಿಗೆ ಒಂದಿಷ್ಟು ಗುಣಗಾನ. ಬೆಳ್ಳುಳ್ಳಿಯ ಬಗ್ಗೆ ನಿಮಗೆ ಗೊತ್ತಿರಲಾರದ (ನನಗಂತೂ ಇದುವರೆಗೆ ಗೊತ್ತಿರದ) ಕೆಲವು ಸ್ವಾರಸ್ಯಕರ ಸಂಗತಿಗಳ ಸಂಕಲನ. ಇಲ್ಲೊಂದು ಡಿಸ್‌ಕ್ಲೇಮರ್ ಸಹ ಅವಶ್ಯ. ನನಗೆ ಬೆಳ್ಳುಳ್ಳಿಯೆಂದರೆ ಅತಿಯಾದ ವ್ಯಾಮೋಹವೇನೂ ಇಲ್ಲದಿದ್ದರೂ ಮೂಗು ಮುರಿಯುವಷ್ಟು ವಾಕರಿಕೆಯಂತೂ ಇಲ್ಲ. ಆಯ್ದ ಕೆಲ ಪದಾರ್ಥಗಳಿಗೆ– ಉದಾಹರಣೆಗೆ ಬಸಳೆ ಸೊಪ್ಪಿನ ಹುಳಿ, ಎಳೆಹಲಸಿನಕಾಯಿಯ ಹುಳಿ ಇತ್ಯಾದಿ– ಹಿತಮಿತವಾಗಿ ಬೆಳ್ಳುಳ್ಳಿಯ ಪರಿಮಳ ಇದ್ದರೇನೇ ಹೆಚ್ಚು ರುಚಿ ಎನ್ನುವವನು ನಾನು. ಅಂತೆಯೇ ಪಾಸ್ತಾ, ನೂಡಲ್ಸ್ ಮುಂತಾದ ವಿದೇಶೀ ತಿಂಡಿಗಳೂ ಬೆಳ್ಳುಳ್ಳಿಯಿಲ್ಲದೆ ರುಚಿಕರವೆನಿಸವು ಎಂದು ನನ್ನ ಅಭಿಪ್ರಾಯ. ಹಾಗಂತ, ಇಲ್ಲಿ ಇಂಡಿಯನ್ ಸ್ಟೋರ್‌ನಿಂದ ಉಪ್ಪಿನಕಾಯಿ ಕೊಳ್ಳುವಾಗ ಮಾವಿನ ತೊಕ್ಕು, ಗೊಂಗುರಾ ಪಿಕಲ್ಸ್ ಜಾಡಿಗಳ ಮೇಲೆ ವಿದೌಟ್ ಗಾರ್ಲಿಕ್ ಅಂತ ಬರೆದಿರುವುದನ್ನು ಖಚಿತಪಡಿಸಿಕೊಂಡೇ ಕೊಳ್ಳುತ್ತೇನೆ. ಪಿಜ್ಜಾದಲ್ಲಿದ್ದಷ್ಟು ಬೆಳ್ಳುಳ್ಳಿ ಸಾಕು, ಜೊತೆಗೆ ಗಾರ್ಲಿಕ್ ಬ್ರೆಡ್ ಬೇಕಾಗಿಲ್ಲ ಎನ್ನುತ್ತೇನೆ. ಆರಕ್ಕೇರದ ಮೂರಕ್ಕಿಳಿಯದ ರೀತಿಯದು ನನ್ನ ಬೆಳ್ಳುಳ್ಳಿ ಪ್ರಿಫರೆನ್ಸ್.

ಹಿಂದೂಕುಷ್ ಪರ್ವತಾವಳಿಯ ಆಸುಪಾಸಿನಲ್ಲಿ, ಮಧ್ಯ ಏಷ್ಯದ ಪ್ರದೇಶದಲ್ಲಿ ಬೆಳ್ಳುಳ್ಳಿಯ ಉಗಮವಾದದ್ದಂತೆ. ಅಲ್ಲ, ಬೆಳ್ಳುಳ್ಳಿಯೆಂಬ ಕಾಡುತ್ಪತ್ತಿಯನ್ನು ತಿನ್ನಲಿಕ್ಕೆ ಯೋಗ್ಯವಾದುದು, ಔಷಧೀಯ ಗುಣಗಳಿರುವುದರಿಂದ ಆರೋಗ್ಯಕ್ಕೆ ಒಳ್ಳೆಯದು ಎಂದು ಶತಮಾನಗಳ ಹಿಂದೆ ಮನುಷ್ಯನು ಕಂಡುಕೊಂಡಿದ್ದು ಎಂದು ಹೇಳಿದರೆ ಹೆಚ್ಚು ಸೂಕ್ತ. ಏಕೆಂದರೆ ಮನುಕುಲವು ಬೆಳ್ಳುಳ್ಳಿಯನ್ನು ಪ್ರಕೃತಿದತ್ತ ಆಹಾರಪದಾರ್ಥ, ಬೆಳೆಸಿ ಬಳಸಬಹುದಾದ್ದು ಅಂತ ಗುರುತಿಸಿ ಸಹಸ್ರಾರು ವರ್ಷಗಳೇ ಸಂದಿವೆಯೆನ್ನುತ್ತಾರೆ ಇತಿಹಾಸಜ್ಞರು. ಹಿಮಾಲಯದ ತಪ್ಪಲಿನ ಅತಿಯಾದ ಥಂಡಿ ಪ್ರದೇಶಗಳಲ್ಲಿ ಬೆಳ್ಳುಳ್ಳಿ ಬೆಳೆ ಸಾಧ್ಯವಾಗುವುದೂ, ಅಂತಹ ಚಳಿಯಲ್ಲಿ ಖಾದ್ಯಪದಾರ್ಥವಾಗಿ ಅಗತ್ಯವಾಗಿರುವುದೂ ಇದಕ್ಕೆ ಕಾರಣ. ಆಮೇಲೆ ಕೃಷಿ ಮತ್ತು ವ್ಯಾಪಾರದಿಂದಾಗಿ ಪ್ರಪಂಚಕ್ಕೆಲ್ಲ ಬೆಳ್ಳುಳ್ಳಿಯ ಘಮ ಹಬ್ಬಿತು. ಈಜಿಪ್ಟ್‌ನ ಪಿರೇಮಿಡ್ಡುಗಳ ಮೇಲೆ ಬೆಳ್ಳುಳ್ಳಿಯ ಚಿತ್ರಗಳಿವೆಯಂತೆ. ಪಿರೇಮಿಡ್ ನಿರ್ಮಾಣದ ಕಾರ್ಮಿಕರ ಆಹಾರದಲ್ಲಿ ಬೆಳ್ಳುಳ್ಳಿ ಕಡ್ಡಾಯವಾಗಿ ಇರುತ್ತಿತ್ತಂತೆ. ಅಷ್ಟೇಅಲ್ಲ, ಆಗಿನ ಕಾಲದ ಈಜಿಪ್ಟ್‌ನಲ್ಲಿ ಬೆಳ್ಳುಳ್ಳಿಯೇ ಕರೆನ್ಸಿಯೂ ಆಗಿತ್ತಂತೆ. ಸತ್ತವರನ್ನು ಗೋರಿಗಳಲ್ಲಿ ಹೂಳುವಾಗ ಮಣ್ಣಿನಿಂದ ಮಾಡಿದ ಬೆಳ್ಳುಳ್ಳಿ ಆಕೃತಿಗಳನ್ನು ಜೊತೆಯಲ್ಲಿಡುತ್ತಿದ್ದರು, ಅಗಲಿದ ಆತ್ಮಕ್ಕೆ ದಾರಿಖರ್ಚಿಗೆ ದುಡ್ಡು ಎಂಬ ಭಾವನೆಯಿಂದ ಇರಬಹುದು! ದುಷ್ಟಶಕ್ತಿಗಳನ್ನು, ರೋಗರುಜಿನಗಳನ್ನು ಎದುರಿಸಲಿಕ್ಕೆ ಬೆಳ್ಳುಳ್ಳಿಯನ್ನು ತಾಯಿತದಂತೆ ಬಳಸುವ ಪದ್ಧತಿ ಪ್ರಪಂಚದ ಅನೇಕ ಕಡೆಗಳಲ್ಲಿ ಪ್ರಾಚೀನ ಕಾಲದಿಂದ ನಡೆದುಬಂದಿರುವುದು ಈಗಲೂ ಕಂಡುಬರುತ್ತದೆ. ಗ್ರೀಕ್ ಮಿಡ್‌ವೈಫ್‌ಗಳು ಪ್ರಸೂತಿಗೃಹದ ಬಾಗಿಲಿಗೆ ಬೆಳ್ಳುಳ್ಳಿ ತೋರಣ ಕಟ್ಟುತ್ತಿದ್ದರಂತೆ, ನವಜಾತ ಶಿಶುವನ್ನು ಕ್ಷುದ್ರಶಕ್ತಿಗಳಿಂದ ರಕ್ಷಿಸುವುದಕ್ಕಾಗಿ. ಪ್ರಾಚೀನ ಪ್ಯಾಲೆಸ್ಟೈನ್ ಸಂಪ್ರದಾಯದ ಮದುವೆಯಲ್ಲಿ ವರನು ತನ್ನ ಪೋಷಾಕಿನಲ್ಲಿ ಬೆಳ್ಳುಳ್ಳಿ ಎಸಳನ್ನು ಸಾಂಕೇತಿಕವಾಗಿ ಧರಿಸಿಕೊಂಡರೆ ಶೋಭನರಾತ್ರಿ ಯಶಸ್ವಿಯಾಗುತ್ತದೆಂದು ನಂಬಿಕೆ. ಎಷ್ಟೆಂದರೂ ಬೆಳ್ಳುಳ್ಳಿ ಕಾಮೋತ್ತೇಜಕ, ಹಾಗೂ ಅದೇ ಅದಕ್ಕೆ ವರ ಮತ್ತು ಶಾಪವೂ ತಾನೆ?

ಪ್ರಾಚೀನ ಭಾರತೀಯರು ಕಂಡುಕೊಂಡ ಬೆಳ್ಳುಳ್ಳಿಯ ಔಷಧೀಯ ಉಪಯೋಗಗಳನ್ನು ಚರಕಸಂಹಿತಾ, ಕಾಶ್ಯಪಸಂಹಿತಾ, ಅಷ್ಟಾಂಗಹೃದಯ ಮುಂತಾದ ಗ್ರಂಥಗಳಲ್ಲಿ ವಿವರಿಸಲಾಗಿದೆ. ಷಡ್ರಸಗಳ ಪೈಕಿ ಐದನ್ನು ಹೊಂದಿರುವ ಶ್ರೇಷ್ಠತೆ ಬೆಳ್ಳುಳ್ಳಿಯದು ಎನ್ನುತ್ತದೆ ಆಯುರ್ವೇದ. ಎಲ್ಲಕ್ಕಿಂತ ಇಂಟೆರೆಸ್ಟಿಂಗ್ ಅಂದರೆ ಯಶೋಮಿತ್ರ ಎಂಬ ಬೌದ್ಧಭಿಕ್ಕುವೊಬ್ಬ ಬರೆದಿದ್ದೆನ್ನಲಾದ, ಕ್ರಿಸ್ತಪೂರ್ವ ಕಾಲದ್ದೆಂದು ನಂಬಲಾದ, ಕ್ರಿ.ಶ 19ನೆಯ ಶತಮಾನದಲ್ಲಿ ತುರ್ಕಿಸ್ತಾನದ ಕುಛರ್ ಎಂಬಲ್ಲಿ ಉತ್ಖನನದ ವೇಳೆ ಲೆಫ್ಟಿನೆಂಟ್ ಎಚ್ ಬೋವರ್ ಎಂಬ ಬ್ರಿಟಿಷ್ ಅಧಿಕಾರಿಗೆ ದೊರೆತ ಪ್ರಾಚೀನ ಗ್ರಂಥ. ನಾವನೀತಕಮ್ ಎಂದು ಅದರ ಹೆಸರು. ಸಂಸ್ಕೃತ-ಪ್ರಾಕೃತ ಮಿಶ್ರಣದಂಥ ಭಾಷೆಯಲ್ಲಿರುವ ಆ ಗ್ರಂಥದ ಪ್ರಥಮ ಕಾಂಡದಲ್ಲೇ 43 ಶ್ಲೋಕಗಳಲ್ಲಿ ಬೆಳ್ಳುಳ್ಳಿಯ ಪೌರಾಣಿಕ ಹಿನ್ನೆಲೆ, ಮತ್ತು ಔಷಧೀಯ ಗುಣಗಳ ವಿವರಗಳಿವೆ. ಒಂದಾನೊಂದು ಕಾಲದಲ್ಲಿ ಆತ್ರೇಯ ಮುನಿಯ ನೇತೃತ್ವದಲ್ಲಿ ಸುಶ್ರುತ, ಹರಿತ, ಪರಾಶರ, ವಸಿಷ್ಠ, ಭೇಲ ಮುಂತಾದ ಋಷಿಗಳ ಗುಂಪೊಂದು ಕಾಶ್ಮೀರದ ಕಣಿವೆಗಳಲ್ಲಿ ಔಷಧೀಯ ಸಸ್ಯಗಳ ಹೆಸರು, ರುಚಿ, ಗುಣಲಕ್ಷಣಗಳ ಅಧ್ಯಯನಕ್ಕಾಗಿ ಅಲೆದಾಡುತ್ತಿತ್ತು. ಇಂದ್ರನೀಲಮಣಿಯಂತೆ ಕಡುನೀಲಿ ಬಣ್ಣದ ಎಲೆಗಳುಳ್ಳ, ಮಲ್ಲಿಗೆ, ಶ್ವೇತಕಮಲ, ಶಶಿಕಿರಣ, ಶಂಖಗಳಂತೆ ಬಿಳಿಬಣ್ಣದ ಗೆಡ್ಡೆಯಿರುವ ಸಸ್ಯವೊಂದು ಸುಶ್ರುತನಿಗೆ ಕಾಣಿಸಿತು. ಅದನ್ನವನು ಅಲ್ಲೇ ತಪಸ್ಸನ್ನಾಚರಿಸುತ್ತಿದ್ದ ಕಾಶಿರಾಜನ ಬಳಿಗೊಯ್ದು ಅದೇನೆಂದು ತಿಳಿಸುವಂತೆ ಕೇಳಿದನು. ಅದಕ್ಕೆ ಉತ್ತರವಾಗಿ ಕಾಶಿರಾಜನು 43 ಶ್ಲೋಕಗಳ ಸುಂದರ ಕಾವ್ಯರೂಪದಲ್ಲಿ ಬೆಳ್ಳುಳ್ಳಿಯ ಬಗ್ಗೆ ವಿವರಿಸಿದನು. ಅದೇ ಲಶುನ ಕಲ್ಪ.

ಅದರ ಪ್ರಕಾರ– ಸಮುದ್ರಮಥನದ ವೇಳೆ ಅಮೃತಕುಂಭ ಹಿಡಿದುಕೊಂಡು ಧನ್ವಂತರಿಯು ಉದ್ಭವಿಸುತ್ತಾನೆ. ಅದನ್ನು ಅಸುರರು ಮತ್ತು ಸುರರಿಗೆ ಹಂಚಲಿಕ್ಕೆ ಮೋಹಿನಿಯ ರೂಪದಲ್ಲಿ ವಿಷ್ಣು ಬರುತ್ತಾನೆ. ಬೇಕಂತಲೇ ಅಮೃತವು ಸುರರಿಗೆ ಮಾತ್ರ ಸಿಗಲೆಂದು ವಿಷ್ಣುವಿನ ಸಂಚು. ಅದು ಸ್ವರಭಾನು ಎಂಬ ಅಸುರನಿಗೆ ಗೊತ್ತಾಗಿ ಅವನು ವೇಷ ಮರೆಸಿಕೊಂಡು ದೇವತೆಗಳ ಸಾಲಲ್ಲಿ ಕುಳಿತುಕೊಳ್ಳುತ್ತಾನೆ. ಮೋಹಿನಿಯಿಂದ ಅಮೃತವನ್ನೂ ಪಡೆಯುತ್ತಾನೆ. ಅವನ ಕಪಟವು ಸೂರ್ಯ-ಚಂದ್ರರಿಗೆ ತತ್‌ಕ್ಷಣ ಗೊತ್ತಾಗಿ ಅವರು ಎಚ್ಚರಿಸುತ್ತಾರೆ. ಒಡನೆಯೇ ಮೋಹಿನೀ ರೂಪ ತೊರೆದ ವಿಷ್ಣು ಸುದರ್ಶನ ಚಕ್ರವನ್ನು ಕರೆದು ಆ ಅಸುರನ ಶಿರಚ್ಛೇದ ಮಾಡುವಂತೆ ಆಜ್ಞಾಪಿಸುತ್ತಾನೆ. ಅದಾಗಲೇ ಒಂದಿಷ್ಟು ಅಮೃತವನ್ನು ಕುಡಿದಿದ್ದರಿಂದ ಅಸುರ ಸಾಯುವುದಿಲ್ಲ. ರುಂಡ-ಮುಂಡಗಳದು ಪ್ರತ್ಯೇಕ ಅಸ್ತಿತ್ವವಾಗಿ ರಾಹು-ಕೇತುಗಳೆಂದು ಗುರುತಿಸಲ್ಪಡುತ್ತಾರೆ. ಸುದರ್ಶನ ಚಕ್ರದಿಂದ ಕತ್ತನ್ನು ಕೊಯ್ದಾಗ ಆಗಿನ್ನೂ ಅಲ್ಲಿದ್ದ ಅಮೃತದ ಒಂದೆರಡು ಬಿಂದುಗಳು ನೆಲಕ್ಕೆ ಬೀಳುತ್ತವೆ. ಅಲ್ಲಿ ಬೆಳ್ಳುಳ್ಳಿ ಹುಟ್ಟಿಕೊಳ್ಳುತ್ತದೆ! ಮುಂದೆ ಕಾಶಿರಾಜನು ಸುಶ್ರುತನಿಗೆ ಬೆಳ್ಳುಳ್ಳಿಯ ಗುಣಶ್ರೇಷ್ಠತೆಯನ್ನು ಬಣ್ಣಿಸುತ್ತಾನೆ. ಎಲ್ಲ ಥರದ ಕಾಯಿಲೆ-ಕಸಾಲೆಗಳನ್ನು

ಅದು ನಿವಾರಿಸುತ್ತದೆ; ಹಸಿವಿಲ್ಲದಿರುವಿಕೆ, ಹೊಟ್ಟೆಯಲ್ಲಿ ಗೆಡ್ಡೆ ಬೆಳೆಯುವುದು, ಕೆಮ್ಮು, ನಿತ್ರಾಣ, ಅಜೀರ್ಣ, ಕೈಕಾಲು ಊತ, ಹೊಟ್ಟೆನೋವು, ರಕ್ತನಾಳಗಳು ಬಾತುಕೊಳ್ಳುವುದು, ಹೊಟ್ಟೆಹುಳ ಕಾಣಿಸಿಕೊಳ್ಳುವುದು, ಮೂತ್ರಜನಕಾಂಗಕ್ಕೆ ಸಂಬಂಧಿಸಿದ ಕಾಯಿಲೆಗಳು, ಮಾನಸಿಕ ದೌರ್ಬಲ್ಯ ಮುಂತಾದುವೆಲ್ಲದಕ್ಕೂ ಅದು ರಾಮಬಾಣ ಎನ್ನುತ್ತಾನೆ. ಲಶುನ ಸೇವನೆಯಿಂದ ನಿನಗೆ ಕೊಳಲಿನಂತೆ ಇಂಪಾದ ಸ್ವರ, ಪುಟವಿಟ್ಟ ಚಿನ್ನದಂಥ ಮೈಕಾಂತಿ, ಶಕ್ತಿಯುತ ಸ್ಮೃತಿ ಮತ್ತು ಧೃತಿ, ಸುಕ್ಕುಗಳಿಲ್ಲದ ಶರೀರ, ಸುಸ್ಥಿತಿಯಲ್ಲಿರುವ ಪಂಚೇಂದ್ರಿಯಗಳು, ಸದಾ ವರ್ಧಿಸುತ್ತಿರುವ ಸ್ಥೈರ್ಯ-ವೀರ್ಯ ದಕ್ಕುವುದರಿಂದ ಶತವರ್ಷ ಬಾಳುತ್ತೀಯೆ ಎಂದು ಹರಸುತ್ತಾನೆ. ಅದಾದಮೇಲೆ ಸ್ವಲ್ಪೋವಮ ಎಂಬ ಹೆಸರಿನ ಉತ್ಸವದ ವಿವರಗಳು ಬರುತ್ತವೆ. ಅದು ಬೆಳ್ಳುಳ್ಳಿ ಉತ್ಸವ. ತುಪ್ಪ ಹಾಕಿ ಗೋಧಿ, ಬಾರ್ಲಿಯಿಂದ ಮಾಡಿದ ಭಕ್ಷ್ಯಗಳು, ಮದ್ಯ, ಮಾಂಸ ಸೇವನೆಯ ಮೋಜು ಮಸ್ತಿ. ಮಾಘದಲ್ಲಿ ಮತ್ತು ಮಾಧವ(ಚೈತ್ರ) ಮಾಸದಲ್ಲಿ ಆಚರಣೆ. ಪ್ರತಿಯೊಂದು ಮನೆಯ ಮುಂಬಾಗಿಲಿಗೆ, ಕಿಟಕಿಗಳಿಗೆ, ಮೇಲುಪ್ಪರಿಗೆಗೆ ಬೆಳ್ಳುಳ್ಳಿಯ ತೋರಣ. ಮನೆಮಂದಿಗೆಲ್ಲ ಬೆಳ್ಳುಳ್ಳಿ ಮಾಲೆಯ ಧಾರಣ. ಹಜಾರದಲ್ಲಿರುವ ಮಂಟಪದಲ್ಲಿ ಬೆಳ್ಳುಳ್ಳಿಗೆ ಪೂಜೆ. ಇವೆಲ್ಲದರ ವಿವರಣೆ ನಾವನೀತಕಮ್ ಗ್ರಂಥದಲ್ಲಿ ಸಂಸ್ಕೃತ ಶ್ಲೋಕಗಳಲ್ಲಿದೆ. ನನಗೆ ಅಂತರಜಾಲದಲ್ಲಿ ಅದರದೊಂದು ಪರಿಷ್ಕೃತ ಪಿಡಿಎಫ್ ಸಹ ಸಿಕ್ಕಿದೆ!

ಹಾಗೆ ಅಂತರಜಾಲದಲ್ಲಿ ಬೆಳ್ಳುಳ್ಳಿಶೋಧದ ವೇಳೆ ಸಿಕ್ಕ ಇನ್ನೊಂದು ನಿಧಿ– ಮಹಾಭಾರತ ಕಾಲದ ನಳ ಮಹಾರಾಜನಿಂದ ರಚಿತವಾದದ್ದೆನ್ನಲಾದ ಪಾಕದರ್ಪಣಮ್ ಕೃತಿ. ಮೂಲ ಸಂಸ್ಕೃತ ಶ್ಲೋಕಗಳೊಂದಿಗೆ ಡಾ. ಇಂದ್ರದೇವ ತ್ರಿಪಾಠಿಯವರ ಹಿಂದೀ ವ್ಯಾಖ್ಯಾನವುಳ್ಳ ಗ್ರಂಥದ ಪಿಡಿಎಫ್. ಪ್ರಾಚೀನತಮ ಆಯುರ್ವೇದೀಯ ಸ್ವಾಸ್ಥ್ಯವ್ರತ ಏವಂ ಪಾಕಶಾಸ್ತ್ರದ ವಿಶಿಷ್ಟ ಗ್ರಂಥವೆಂದು ಅದರ ಹೆಗ್ಗಳಿಕೆ. ವಾರಾಣಸೀ ಚೌಖಂಬಾ ಸಂಸ್ಕೃತ ಸಂಸ್ಥಾನದ ಪ್ರಕಟಣೆ. ನಳ ಮಹಾರಾಜನ ಪಾಕಶಾಸ್ತ್ರದ ಆಕರ್ಷಕ ರೆಸಿಪಿಗಳೆಲ್ಲ ಅದರಲ್ಲಿವೆ. ಬರೀ ರೆಸಿಪಿಗಳಷ್ಟೇ ಅಲ್ಲ, ಪ್ರತಿಯೊಂದರಿಂದಲೂ ನಮ್ಮ ಶರೀರಸ್ವಾಸ್ಥ್ಯಕ್ಕೆ ಏನು ಉಪಯೋಗ ಎಂಬ ಅಂಶಗಳೂ ಇವೆ. ಸಸ್ಯಾಹಾರವಷ್ಟೇ ಅಲ್ಲದೆ ಮಾಂಸಾಹಾರ ತಯಾರಿಯ ವಿವರಗಳೂ ಇವೆ. ಹಲಸಿನ ಕಾಯಿ ಮತ್ತು ಹಣ್ಣಿನಿಂದ ಮಾಡುವ ಪದಾರ್ಥಗಳ ಬಣ್ಣನೆಯನ್ನು ನೋಡಿಯಂತೂ ನನಗೆ ಬಹಳವೇ ಆಶ್ಚರ್ಯ ಆಯಿತು. ಪಾಕದರ್ಪಣಮ್‌ನ ಚತುರ್ಥ ಅಂಕದಲ್ಲಿ ಪಾಯಸ ಪ್ರಕಾರ ಇದೆ. ಅದರಲ್ಲಿ ಮೊದಲನೆಯದಾಗಿ 'ವಿಚಿತ್ರ ಲಶುನ ಪಾಯಸ ನಿರ್ಮಾಣ ವಿಧಿ' ಇದೆ. 'ಅಥ ಭೇದಾನ್ ಪ್ರವಕ್ಷ್ಯಾಮಿ ಪಾಯಸಸ್ಯ ವಿಚಿತ್ರಕಾನ್। ತ್ವಚಂ ಲಶುನಭಾಗಾನಾಂ ಸಮುತ್ಸೃಜ್ಯ ಪ್ರಯತ್ನತಃ...' ಎಂದು ಆರಂಭವಾಗಿ 'ನಿಕ್ಷಿಪೇತ್ತತ್ರ ಜಾತ್ಯಾದಿ ಕುಸುಮಾನ್ಯುಭಯತ್ರ ಚ। ಪಾಯಸಂ ಲಘುವಾತಘ್ನಂ ರಮ್ಯಂ ವ್ಯಾಧಿಹರಂ ಶುಭಮ್' ಎಂದು ಮುಗಿಯುವ, ಅನುಷ್ಟುಪ್ ಛಂದಸ್ಸಿನ ಶ್ಲೋಕಗಳಲ್ಲಿ ದೇವರ ಸ್ತೋತ್ರದಂತೆ ಪಾಕವಿಧಾನ ಓದುವುದೇ ಒಂದು ವಿಚಿತ್ರ ಅನುಭವ. ಒಟ್ಟು 12 ಶ್ಲೋಕಗಳಲ್ಲಿ ಬೆಳ್ಳುಳ್ಳಿ ಪಾಯಸ ಸಿದ್ಧವಾಗುತ್ತದೆ. ನನ್ನ ಅಲ್ಪಸ್ವಲ್ಪ ಸಂಸ್ಕೃತಜ್ಞಾನದಿಂದ ಶ್ಲೋಕಗಳನ್ನು ಅರ್ಥಮಾಡಿಕೊಂಡಿದ್ದಾಯಿತು. ಜೊತೆಯಲ್ಲಿ ಹಿಂದೀ ವ್ಯಾಖ್ಯಾನ ಇರುವುದರಿಂದ ನಿಖರ ವಿವರಗಳನ್ನು ತಿಳಿದುಕೊಳ್ಳುವುದು ಸುಲಭವಾಯಿತು. ಅದರ ಕನ್ನಡ ಅನುವಾದ ಇಲ್ಲಿ ನಿಮಗಾಗಿ:

ಬೆಳ್ಳುಳ್ಳಿಯ 10–12 ಎಸಳುಗಳನ್ನು ತೆಗೆದುಕೊಳ್ಳಿ. ಸಿಪ್ಪೆ ತೆಗೆದು ಎರಡೂ ತುದಿಗಳನ್ನು ಸ್ವಲ್ಪಸ್ವಲ್ಪ ಕತ್ತರಿಸಿ ಬಿಸಾಡಿ. ಪ್ರತಿಯೊಂದು ಎಸಳನ್ನೂ ಅಡ್ಡಡ್ಡಕ್ಕೆ ನಾಲ್ಕು ತುಂಡುಗಳಾಗಿ ಮಾಡಿ. ನಡುವಿನ ಗಟ್ಟಿ ಭಾಗವನ್ನು ತೆಗೆದು, ಆ ರಂಧ್ರಗಳ ಮೂಲಕ ಸೂಜಿ-ದಾರ ಉಪಯೋಗಿಸಿ ಪುಟ್ಟದೊಂದು ಮಾಲೆ ಅಥವಾ ಗುಚ್ಛದಂತೆ ಮಾಡಿಟ್ಟುಕೊಳ್ಳಿ. ಒಂದು ಪಾತ್ರೆಯಲ್ಲಿ ಸ್ವಲ್ಪ ಅನ್ನ ಮಾಡುವಂತೆ ಅಕ್ಕಿ ಬೇಯಲಿಕ್ಕಿಟ್ಟು, ಅದು ಬೇಯುತ್ತಿರುವಾಗ ಬೆಳ್ಳುಳ್ಳಿಗುಚ್ಛವನ್ನು ಅನ್ನದ ಪಾತ್ರೆಯಲ್ಲಿ ಮುಳುಗಿಸಿಡಿ. ಇದರಿಂದ ಬೆಳ್ಳುಳ್ಳಿಯ ತೀವ್ರ ಘಾಟು ಇಲ್ಲವಾಗುತ್ತದೆ. ಆ ಮೇಲೆ ಆ ಗುಚ್ಛವನ್ನು ಹೊರತೆಗೆದು ನೀರಿನಿಂದ ಚೆನ್ನಾಗಿ ತೊಳೆದು ಬೆಳ್ಳುಳ್ಳಿ ದಳಗಳನ್ನು ಮೆತ್ತಗೆ ಹಿಸುಕಿ ಹಾಲಿನಲ್ಲಿ ಬೇಯಿಸಿ. ಹಾಲು ಮುಕ್ಕಾಲುಭಾಗಕ್ಕೆ ಇಳಿಯುವವರೆಗೂ ಮಿಶ್ರಣವು ಕುದಿಯಲಿ. ಕೆನೆಗಟ್ಟದಂತೆ ಆಗಾಗ ಕಲಕುತ್ತಿರಿ. ನಿಮಗೆ ಸರಿಯೆನಿಸುವಷ್ಟು ಪ್ರಮಾಣದಲ್ಲಿ ಸಕ್ಕರೆ ಸೇರಿಸಿ. ಈಗ ಈ ಪಾಯಸವನ್ನು ಎರಡು ಪಾಲು ಮಾಡಿ ಚಿಕ್ಕಚಿಕ್ಕ ಬೋಗುಣಿಗಳಲ್ಲಿ ತುಂಬಿ. ಒಂದರ ಮೇಲೆ ಕತ್ತರಿಸಿದ ಬಾಳೆಹಣ್ಣನ್ನೂ, ಇನ್ನೊಂದರ ಮೇಲೆ ಕತ್ತರಿಸಿದ ಹಲಸಿನಹಣ್ಣಿನ ತೊಳೆಯನ್ನೂ ಉದುರಿಸಿ. ಹಾಗೆಯೇ ಒಂದೆರಡು ಮಲ್ಲಿಗೆ ಹೂವುಗಳನ್ನು ಎರಡೂ ಬೋಗುಣಿಗಳಲ್ಲಿ ಒಮ್ಮೆ ಅದ್ದಿತೆಗೆಯಿರಿ. ಚಿಟಿಕೆಯಷ್ಟು ಪಚ್ಚೆಕರ್ಪೂರವನ್ನು ಎರಡೂ ಬೋಗುಣಿಗಳಿಗೆ ಚಿಮುಕಿಸಿ. ಜಾಸ್ತಿ ಪರಿಮಳದ್ರವ್ಯಗಳು ಬೇಕಾಗಿಲ್ಲ. ಈ ಪಾಯಸವು ವಾತನಾಶಕವೂ ವ್ಯಾಧಿನಾಶಕವೂ ಆಗಿರುತ್ತದೆ.

ಭಾರತದ ತೆರಿಗೆ ವ್ಯವಸ್ಥೆಯ ಆಸಕ್ತಿದಾಯಕ ಇತಿಹಾಸ

ಮೌರ್ಯರ ಕಾಲದ ಅರ್ಥವ್ಯವಸ್ಥೆಯು ಆರನೇ ಒಂದು ಭಾಗದಷ್ಟು ಕೃಷಿ ಉತ್ಪನ್ನಗಳನ್ನು ಮಾತ್ರ ತೆರಿಗೆಯಾಗಿ ಸಂಗ್ರಹಿಸದೇ ನೀರಿನ ಶುಲ್ಕ, ಆಕ್ಟ್ರಾಯ್ ಸುಂಕಗಳು ಮತ್ತು ಕಸ್ಟಮ್ಸ್ ಸುಂಕಗಳನ್ನು ಸಹ ವಿಧಿಸುತ್ತಿತ್ತು. ಅರಣ್ಯ ಉತ್ಪನ್ನಗಳ ಮೇಲೆ ಮತ್ತು ಲೋಹಗಳ ಗಣಿಗಾರಿಕೆಯಿಂದಲೂ ತೆರಿಗೆಗಳನ್ನು ಸಂಗ್ರಹಿಸಲಾಗುತ್ತಿತ್ತು. ಉಪ್ಪಿನ ತೆರಿಗೆಯು ಆ ಕಾಲದಲ್ಲಿ ಆದಾಯದ ಪ್ರಮುಖ ಮೂಲವಾಗಿತ್ತು.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಸರಕಾರಗಳು ಜನರ ಆದಾಯ ಮತ್ತು ಸಂಪತ್ತಿನ ಮೇಲೆ ವಿಧಿಸುತ್ತಿರುವ ವಿವಿಧ ತೆರಿಗೆಗಳು ಇತ್ತೀಚಿನವು ಎಂಬುದು ಸಾಮಾನ್ಯರ ನಂಬಿಕೆಯಾಗಿದೆ. ಆದರೆ, ಪ್ರಾಚೀನ ಭಾರತೀಯ ರಾಜ ಪ್ರಭುತ್ವಗಳಲ್ಲಿಯೂ ಸಹ ಆದಾಯದ ಮೇಲಿನ ತೆರಿಗೆಗಳನ್ನು ಒಂದಲ್ಲ ಒಂದು ರೂಪದಲ್ಲಿ ವಿಧಿಸಲಾಗುತ್ತಿತ್ತು ಎಂದು ಹೇಳಲು ಸಾಕಷ್ಟು ಪುರಾವೆಗಳನ್ನು ನೀಡಬಹುದಾಗಿದೆ. ಮನು ಸ್ಮೃತಿ, ಕೌಟಿಲ್ಯನ ಅರ್ಥಶಾಸ್ತ್ರ ಕಾಳಿದಾಸನ ರಘುವಂಶಗಳಲ್ಲಿ ವಿವಿಧ ತೆರಿಗೆ ಕ್ರಮಗಳ ವಿಸ್ತ್ರತವಾದ ಉಲ್ಲೇಖಗಳು ಕಾಣಸಿಗುತ್ತವೆ. ತೆರಿಗೆಗಳನ್ನು ಪ್ರಜೆಗಳ ಆದಾಯ ಮತ್ತು ವೆಚ್ಚಗಳನ್ನು ಗಮನದಲ್ಲಿರಿಸಿ ನಿರ್ಧರಿಸಬೇಕಾಗುತ್ತದೆಯೇ ಹೊರತು ನಿರಂಕುಶವಾಗಿ ಅಲ್ಲ ಮತ್ತು ರಾಜ ಪ್ರಜೆಗಳ ಮೇಲೆ ತೆರಿಗೆ ವಿಧಿಸಬಹುದಾದರೂ ಅದು ವಿಪರೀತವಾಗಬಾರದು ಎಂದು ಎಂದು ಮಹರ್ಷಿ ಮನು ಸಲಹೆ ನೀಡುತ್ತಾನೆ. ಮನು ಮಹರ್ಷಿಯ ಪ್ರಕಾರ ತೆರಿಗೆಗಳ ಸಂಗ್ರಹದ ಸಂಪೂರ್ಣ ಅನುಪಸ್ಥಿತಿ ಅಥವಾ ಅತಿಯಾದ ತೆರಿಗೆ ಸಂಗ್ರಹಣೆ ಎರಡನ್ನೂ ತಪ್ಪಿಸಿ ರಾಜನಾದವನು ಸಮತ್ವವನ್ನು ಸಾಧಿಸಬೇಕಾಗುತ್ತದೆ ಮತ್ತು ಪ್ರಜೆಗಳ ದೈನಂದಿನ ಜೀವನದ ಮೇಲೆ ಯಾವುದೇ ಋಣಾತ್ಮಕ ಪ್ರಭಾವ ಬೀರದಂತೆ ತೆರಿಗೆ ಸಂಗ್ರಹವನ್ನು ವ್ಯವಸ್ಥೆಗೊಳಿಸಬೇಕು. ವ್ಯಾಪಾರಿಗಳು ಮತ್ತು ಕುಶಲಕರ್ಮಿಗಳು ತಮ್ಮ ಲಾಭದ ಐದರಲ್ಲಿ ಒಂದು ಭಾಗವನ್ನು ಬೆಳ್ಳಿ ಮತ್ತು ಚಿನ್ನದ ರೂಪದಲ್ಲಿ ಪಾವತಿಸಬೇಕು, ಆದರೆ ಕೃಷಿಕರು ತಮ್ಮ ಉತ್ಪನ್ನದ ಆರರಲ್ಲಿ ಒಂದು, ಎಂಟರಲ್ಲಿ ಒಂದು ಅಥವಾ ಹತ್ತರಲ್ಲಿ ಒಂದು ಭಾಗದಷ್ಟನ್ನು ಅವರವರ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಪಾವತಿಸಬಹುದು ಎಂದು ಅವರು ಹೇಳಿದ್ದರು. ಅಷ್ಟೇ ಅಲ್ಲ, ಕಲಾವಿದರೂ ಸೇರಿದಂತೆ ಸಮಾಜದ ವಿವಿಧ ವರ್ಗದ ಜನರ ಮೇಲೂ ತೆರಿಗೆಗಳನ್ನು ವಿಧಿಸಬಹುದು ಎನ್ನುವುದು ಅವರ ನಿರ್ಣಯವಾಗಿತ್ತು. ಆ ಕಾಲದಲ್ಲಿ ತೆರಿಗೆಯನ್ನು ಚಿನ್ನದ ನಾಣ್ಯಗಳು, ದನಕರುಗಳು, ಧಾನ್ಯಗಳ ರೂಪದಲ್ಲಿ ಮತ್ತು ವೈಯಕ್ತಿಕ ಸೇವೆಯನ್ನು ಸಲ್ಲಿಸುವ ಮೂಲಕ ಪಾವತಿಸಬಹುದಾಗಿತ್ತು. ಈ ವಿಷಯದ ಬಗ್ಗೆ ಮನು ತನ್ನ ಸ್ಮೃತಿ ಗ್ರಂಥದಲ್ಲಿ ನೀಡುವ ವಿವರವಾದ ವಿಶ್ಲೇಷಣೆಯನ್ನು ಗಮನಿಸಿದರೆ ಪ್ರಾಚೀನ ಕಾಲದಲ್ಲಿಯೂ ಸಹ ಭಾರತದಲ್ಲಿ ಯೋಜಿತ ತೆರಿಗೆ ವ್ಯವಸ್ಥೆ ಅಸ್ತಿತ್ವದಲ್ಲಿತ್ತು ಎನ್ನುವುದು ಮನದಟ್ಟಾಗುತ್ತದೆ.

ಮುಂದುವರೆದು, ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ರಚಿಸಿದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ತೆರಿಗೆ ವ್ಯವಸ್ಥೆಯನ್ನು ವಿಸ್ತಾರವಾಗಿ ವಿವರಿಸಲಾಗಿದೆ. ರಾಜನೀತಿಜ್ಞರ ಪ್ರಕಾರ, ಮೌರ್ಯರ ಕಾಲದ ಅರ್ಥವ್ಯವಸ್ಥೆಯು ಆರನೇ ಒಂದು ಭಾಗದಷ್ಟು ಕೃಷಿ ಉತ್ಪನ್ನಗಳನ್ನು ಮಾತ್ರ ತೆರಿಗೆಯಾಗಿ ಸಂಗ್ರಹಿಸದೇ ನೀರಿನ ಶುಲ್ಕ, ಆಕ್ಟ್ರಾಯ್ ಸುಂಕಗಳು ಮತ್ತು ಕಸ್ಟಮ್ಸ್ ಸುಂಕಗಳನ್ನು ಸಹ ವಿಧಿಸುತ್ತಿತ್ತು. ಅರಣ್ಯ ಉತ್ಪನ್ನಗಳ ಮೇಲೆ ಮತ್ತು ಲೋಹಗಳ ಗಣಿಗಾರಿಕೆಯಿಂದಲೂ ತೆರಿಗೆಗಳನ್ನು ಸಂಗ್ರಹಿಸಲಾಗುತ್ತಿತ್ತು. ಉಪ್ಪಿನ ತೆರಿಗೆಯು ಆ ಕಾಲದಲ್ಲಿ ಆದಾಯದ ಪ್ರಮುಖ ಮೂಲವಾಗಿತ್ತು. ಕೌಟಿಲ್ಯನು ವಿದೇಶಗಳೊಂದಿಗೆ ನಡೆಸಿದ ವ್ಯಾಪಾರ ಮತ್ತು ವಾಣಿಜ್ಯವನ್ನು ಮತ್ತು ಅಂತಹ ವ್ಯಾಪಾರವನ್ನು ಉತ್ತೇಜಿಸಲು ಮೌರ್ಯ ಸಾಮ್ರಾಜ್ಯದ ಕಾರ್ಯನೀತಿಗಳನ್ನು ಅದರಲ್ಲಿ ವಿವರವಾಗಿ ವಿವರಿಸಿದ್ದಾನೆ. ಆ ಕಾಲದಲ್ಲಿ ಚೀನಾ, ಸಿಲೋನ್ ಮತ್ತು ಇತರ ದೇಶಗಳಿಂದ ಸರಕುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು ಮತ್ತು ಆಮದು ಮಾಡಿಕೊಳ್ಳುವ ಎಲ್ಲ ವಿದೇಶಿ ಸರಕುಗಳ ಮೇಲೆ 'ವರ್ತನಂ' ಮತ್ತು 'ದ್ವಾರೋದಯ' ಎಂದು ಕರೆಯಲ್ಪಡುವ ಎರಡು ತರಹದ ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು. ಅಷ್ಟೇ ಅಲ್ಲದೇ ಮಾರಾಟ-ತೆರಿಗೆಯನ್ನು ವಿಧಿಸಲಾಗುತ್ತಿತ್ತು ಮತ್ತು ಕಟ್ಟಡಗಳ ಮಾರಾಟ ಮತ್ತು ಖರೀದಿಯು ಸಹ ತೆರಿಗೆಗೆ ವ್ಯಾಪ್ತಿಗೆ ಒಳಪಟ್ಟಿತ್ತು. ಜೂಜಿನ ಕಾರುಬಾರುಗಳನ್ನೂ ಸಹ ಕೇಂದ್ರೀಕೃತಗೊಳಿಸಿ ಅದರ ಮೇಲೆ ಸುಂಕ ವಸೂಲು ಮಾಡಲಾಗುತ್ತಿತ್ತು. ಯಾತ್ರಾರ್ಥಿಗಳ ಮೇಲೆ 'ಯಾತ್ರಾವೇತನ' ಎಂಬ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಅಂತೆಯೇ, ಟೋಲ್‌ಗಳು, ರಸ್ತೆ ಸೆಸ್, ದೋಣಿ ಶುಲ್ಕಗಳು ಮುಂತಾಗಿ ಎಲ್ಲವನ್ನೂ ವ್ಯವಸ್ಥಿತವಾಗಿ ನಿಗದಿಪಡಿಸಲಾಗಿತ್ತು. ಕೌಟಿಲ್ಯನ ತೆರಿಗೆಯ ಪರಿಕಲ್ಪನೆಯು ಹೆಚ್ಚು ಕಡಿಮೆ ಆಧುನಿಕ ತೆರಿಗೆ ವ್ಯವಸ್ಥೆಗೆ ಬಹಳವಾಗಿ ಹೋಲುತ್ತದೆ. ತೆರಿಗೆ ಸಂಗ್ರಹಣೆಯಲ್ಲಿ ಇಕ್ವಿಟಿ ಮತ್ತು ನ್ಯಾಯದ ಮೇಲೆ ಅವರ ಎಲ್ಲ ಒತ್ತು ಇರುತ್ತಿತ್ತು. ಆಗಲೂ ಮಧ್ಯಮ ವರ್ಗದವರಿಗೆ ಹೋಲಿಸಿದರೆ ಶ್ರೀಮಂತರು ಹೆಚ್ಚಿನ ತೆರಿಗೆಯನ್ನು ಪಾವತಿಸಬೇಕಾಗಿತ್ತು. ರೋಗಗಳಿಂದ ಬಳಲುತ್ತಿರುವ ಅಥವಾ ಅಪ್ರಾಪ್ತ ವಯಸ್ಕರು ಮತ್ತು ವಿದ್ಯಾರ್ಥಿಗಳಿಗೆ ತೆರಿಗೆಯಿಂದ ವಿನಾಯಿತಿ ನೀಡಲಾಗಿತ್ತು. ಸ್ಟ್ಯಾಂಡ್ ಲ್ಯಾಂಡ್ (ಸೀತಾ) ಧಾರ್ಮಿಕ ತೆರಿಗೆಗಳು (ಬಾಲಿ) ಮತ್ತು ನಗದು (ಕಾರಾ) ತೆರಿಗೆಗಳಂತಹ ಇತರ ಮೂಲಗಳು ಸಹ ಆಗ ಇದ್ದವು. 'ವಣಿಕ್ಪತ್' ಎನ್ನುವ ರಸ್ತೆಗಳು ಮತ್ತು ಟ್ರಾಫಿಕ್‌ನಿಂದ ಬರುವ ಆದಾಯವನ್ನು ಟೋಲ್‌ಗಳಾಗಿ ಪಾವತಿಸಲಾಗುತ್ತಿತ್ತು. ವಾರ್ಷಿಕ ಸ್ಥಿರ ತೆರಿಗೆಗಳು ಮತ್ತು ಭದ್ರಾ, ಪದಿಕಾ ಮತ್ತು ವಸಂತಿಕಾದಂತಹ ಅರ್ಧ ವಾರ್ಷಿಕ ತೆರಿಗೆ ಪಾವತಿಯ ಪದ್ಧತಿಯೂ ಆಗ ಇತ್ತು. ಬಿತ್ತಿದ ಭೂಮಿಯ ಉತ್ಪನ್ನಗಳು, ತೈಲ, ಕಬ್ಬು ಮತ್ತು ಪಾನೀಯಗಳ ತಯಾರಿಕೆಯಿಂದ ಬರುವ ಲಾಭಗಳು, ಮದುವೆಯ ಸಂದರ್ಭಗಳಲ್ಲಿ ಬಳಸುವ ಸರಕುಗಳು, ದಾನ ಅಥವಾ ತ್ಯಾಗದ ಕಾರ್ಯಗಳಿಗೆ ಅಗತ್ಯವಾದ ವಸ್ತುಗಳು ಮತ್ತು ವಿಶೇಷ ರೀತಿಯ ಉಡುಗೊರೆಗಳನ್ನು ತೆರಿಗೆಯಿಂದ ವಿನಾಯಿತಿ ನೀಡಲಾಗಿತ್ತು. ಕೌಟಿಲ್ಯನು ಯುದ್ಧದ ಸಮಯದಲ್ಲಿ ಅಥವಾ ಕ್ಷಾಮ ಅಥವಾ ಪ್ರವಾಹದಂತಹ ತುರ್ತು ಪರಿಸ್ಥಿತಿಗಳಲ್ಲಿ ತೆರಿಗೆ ವ್ಯವಸ್ಥೆಯನ್ನು ಹೆಚ್ಚು ಕಠಿಣಗೊಳಿಸಬೇಕು ಮತ್ತು ರಾಜನು ಯುದ್ಧ ಸಾಲಗಳನ್ನು ಸಹ ಸಂಗ್ರಹಿಸಬಹುದು ಎಂದು ಹೇಳಿದ್ದನು. ತುರ್ತು ಸಂದರ್ಭಗಳಲ್ಲಿ ಭೂ ಆದಾಯವನ್ನು ಆರರಲ್ಲಿ ಒಂದು ಭಾಗದಿಂದ ನಾಲ್ಕರಲ್ಲಿ ಒಂದುಭಾಗದಷ್ಟು ಹೆಚ್ಚಿಸಬಹುದಾಗಿತ್ತು. ಹಾಗಾಗಿ, ವ್ಯಾಪಾರದಲ್ಲಿ ತೊಡಗಿರುವ ಜನರು ಯುದ್ಧದ ಸಂದರ್ಭದಲ್ಲಿ ದೊಡ್ಡ ಪ್ರಮಾಣದ ದೇಣಿಗೆಗಳನ್ನು ಪಾವತಿಸಬೇಕಾಗಿತ್ತು. ಈ ಎಲ್ಲ ಸಂಭಾವ್ಯ ಮೂಲಗಳಿಂದ ರಾಜ್ಯದ ಬೊಕ್ಕಸಕ್ಕೆ ಆದಾಯವನ್ನು ಸಂಗ್ರಹಿಸಲಾಗುತ್ತಿತ್ತಾದರೂ, ಜನರನ್ನು ಶೋಷಿಸುವುದು ಅಥವಾ ಅತಿಯಾಗಿ ತೆರಿಗೆ ವಿಧಿಸುವುದು ಆ ಕಾಲದ ಅರ್ಥವ್ಯವಸ್ಥೆಯ ಆಧಾರ ತತ್ವವಾಗಿರಲಿಲ್ಲ. ಈ ರೀತಿ ಸಂಗ್ರಹವಾದ ಆದಾಯವನ್ನು ಸಮಾಜದ ಅಗತ್ಯಗಳಾದ ರಸ್ತೆಗಳ ನಿರ್ಮಾಣ, ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಹೊಸ ಗ್ರಾಮಗಳ ಸ್ಥಾಪನೆ ಮತ್ತು ಸಮುದಾಯಕ್ಕೆ ಪ್ರಯೋಜನಕಾರಿಯಾದ ಇತರ ಚಟುವಟಿಕೆಗಳಿಗೆ ಮಾತ್ರ ಖರ್ಚು ಮಾಡಲಾಗುತ್ತಿತ್ತು. ಒಟ್ಟಾರೆಯಾಗಿ ನೋಡುವುದಾದರೆ, ಕೌಟಿಲ್ಯನ ಅರ್ಥಶಾಸ್ತ್ರವು ಈ ದೇಶದ ಸಾರ್ವಜನಿಕ ಹಣಕಾಸು ಆಡಳಿತದ ಕುರಿತಾಗಿ ವಿವರಿಸುವ ಮೊದಲ ಅಧಿಕೃತ ಮತ್ತು ಆಕರ ಗ್ರಂಥವಾಗಿದೆ ಎಂದು ನಿರ್ವಿವಾದವಾಗಿ ಹೇಳಬಹುದು. ಕೌಟಿಲ್ಯನ ಅರ್ಥಶಾಸ್ತ್ರವು ತೆರಿಗೆ ಮೂಲದ ಆದಾಯಕ್ಕೆ ಸರಿಯಾದ ಪ್ರಾಮುಖ್ಯತೆಯನ್ನು ನೀಡಿ ಆ ಮೂಲಕ ಸಾಮ್ರಾಜ್ಯದ ಸಮೃದ್ಧಿ ಮತ್ತು ಸ್ಥಿರತೆಗೆ ದಿಗ್ದರ್ಶನ ನೀಡುವ ಒಂದು ವಿಶಿಷ್ಟ ಪ್ರಯತ್ನವಾಗಿದೆ. ಹಾಗಾಗಿ, ಭಾರತೀಯರಿಗೆ ಅರ್ಥಶಾಸ್ತ್ರ ಎಂದರೆ ಅದು ಕೌಟಿಲ್ಯನದು. ಅವನು ಸಾರ್ವಜನಿಕ ಹಣಕಾಸು ಮತ್ತು ತೆರಿಗೆ ವ್ಯವಸ್ಥೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ ಕಾರಣ ಕೌಟಿಲ್ಯ ಪ್ರತಿಪಾದಿಸಿದ ಅರ್ಥವ್ಯವಸ್ಥೆ ಇಂದಿಗೂ ಭಾರತದ ಆಧುನಿಕ ಅರ್ಥವ್ಯವಸ್ಥೆಗೆ ಮೂಲ ಶಿಲೆಯಾಗಿದೆ. ಚಾಣಕ್ಯನ ಪ್ರಕಾರ, ಸರಕಾರದ ಸಾಮರ್ಥ್ಯವು ನೇರವಾಗಿ ಅದರ ಖಜಾನೆಯ ಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ. ಖಜಾನೆ ಭರ್ತಿಯಾಗಿದ್ದಾಗಲೇ ಯಾವುದೇ ಸರಕಾರಕ್ಕೆ ಶಕ್ತಿ ಬರುವುದು ಎನ್ನುವುದು ಅವನ ಮತವಾಗಿತ್ತು. ರಾಜನ ಮತ್ತು ಪ್ರಜೆಗಳ ನಡುವಿನ ಸಂಬಂಧ ಕೇವಲ ತೆರಿಗೆಯಾಧಾರಿತವಾಗಬಾರದು, ಅವರೀರ್ವರ ಸಂಬಂಧವು ಧರ್ಮದ ಮೇಲೆ ಆಧಾರಿಸಿರಬೇಕು ಎಂದು ಆತ ಹೇಳಿದ್ದ. ಮುಂದುವರೆದು, ರಾಜನು ಪ್ರಜೆಗಳಿಂದ ತೆರಿಗೆಯನ್ನು ಸಂಗ್ರಹಿಸಿದ ಮೇಲೆ ತನ್ನ ಪ್ರಜೆಗಳನ್ನು ಸರ್ವತ್ರ ರಕ್ಷಿಸುವುದು ಅವನ ಕರ್ತವ್ಯವಾಗುತ್ತದೆ. ಹಾಗೊಮ್ಮೆ ರಾಜನು ತಮ್ಮನ್ನು ರಕ್ಷಣೆಮಾಡುವಲ್ಲಿ ವಿಫಲನಾದರೆ, ತೆರಿಗೆ ಪಾವತಿಮಾಡುವುದನ್ನು ನಿರಾಕರಿಸುವ ಅಥವಾ ಈಗಾಗಲೇ ಪಾವತಿಸಿದ ತೆರಿಗೆಗಳನ್ನು ಮರುಪಾವತಿಸುವಂತೆ ಪ್ರಭುತ್ವವನ್ನು ಒತ್ತಾಯಿಸುವ ಹಕ್ಕು ಪ್ರಜೆಗಳಿಗೆ ಇರಬೇಕು ಎನ್ನುವ ಚಿಂತನೆ ಕೌಟಿಲ್ಯನದಾಗಿತ್ತು.

ಸೌರಮಂಡಲದ ರಾಜ ಎನಿಸಿಕೊಳ್ಳುವ ಸೂರ್ಯ, ತಾನು ಭೂಮಿಯಿಂದ ತೆರಿಗೆ ರೂಪದಲ್ಲಿ ಹೀರುವ ತೇವಾಂಶವನ್ನು ಮಳೆಯರೂಪದಲ್ಲಿ ಸಾವಿರಪಟ್ಟು ಹೆಚ್ಚು ತಿರುಗಿ ಭೂಮಿಗೇ ನೀಡುವಂತೆ, ರಘುವಂಶದ ರಾಜನಾದ ದಿಲೀಪನು ಪ್ರಜಾ ಪರಿಪಾಲನೆಗೆ ಬೇಕಾದಷ್ಟು ತೆರಿಗೆಯನ್ನು ಮಾತ್ರ ಸಂಗ್ರಹಿಸುತ್ತಿದ್ದ ಮತ್ತು ಅದಕ್ಕೆ ಸಾವಿರಪಟ್ಟು ಹೆಚ್ಚು ಅನುಕೂಲಗಳನ್ನು ತಿರುಗಿ ಪ್ರಜೆಗಳಿಗೆ ನೀಡುತ್ತಿದ್ದ ಎಂದು ಕವಿ ಕಾಳಿದಾಸ ತನ್ನ ರಘುವಂಶ ಕಾವ್ಯದಲ್ಲಿ ರಾಜಾ ದಿಲೀಪನ ಆಡಳಿತದ ವರ್ಣನೆ ಮಾಡುತ್ತಾನೆ.

ಮೊಘಲ್ ಆಕ್ರಮಣಕಾರರು ಅವರ ಆಡಳಿತ ಕಾಲದಲ್ಲಿ ತಮ್ಮದೇ ಆದ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತಂದರು. ಕುಖ್ಯಾತ 'ಜೆಝಿಯಾ' ದೇಶದಲ್ಲಿರುವ ಇಸ್ಲಾಮ್ ಧರ್ಮವನ್ನು ಪಾಲನೆ ಮಾಡದ ಜನರ ಮೇಲೆ ವಿಧಿಸಲಾದ ತೆರಿಗೆಯಾಗಿತ್ತು. ಅನ್ಯಧರ್ಮಗಳ ಪ್ರಬಲ ವಿರೋಧದಿಂದಾಗಿ ನಂತರ ಇದನ್ನು ಅಕ್ಬರ್ ರದ್ದುಗೊಳಿಸಿದ್ದ. ಇಂದು ನಮಗೆ ತಿಳಿದಿರುವ ಆದಾಯ ತೆರಿಗೆಯ ಪರಿಕಲ್ಪನೆಯನ್ನು ಭಾರತದಲ್ಲಿ ಮೊದಲು 1860 ರಲ್ಲಿ ಬ್ರಿಟಿಷರು ಪರಿಚಯಿಸಿದರು. 1857 ರ ದಂಗೆಯಿಂದಾಗಿ ಸರಕಾರದಿಂದ ಉಂಟಾದ ನಷ್ಟವನ್ನು ಸರಿದೂಗಿಸಲು ಇದನ್ನು ಪರಿಚಯಿಸಲಾಯಿತು ಎಂದು ಹೇಳಲಾಗಿದೆ. ಭಾರತದಲ್ಲಿ ಆದಾಯ ತೆರಿಗೆ ಕಾಯಿದೆಯನ್ನು ಅಧಿಕೃತವಾಗಿ 1886 ರಲ್ಲಿ ಅಂಗೀಕರಿಸಲಾಗಿತ್ತು ಮತ್ತು ಪ್ರಸ್ತುತ ಇರುವ ಆದಾಯ ತೆರಿಗೆ ಕಾಯಿದೆಯನ್ನು 1961 ರಲ್ಲಿ ಅಂಗೀಕರಿಸಲಾಗಿದೆ. ರಾಷ್ಟ್ರವು ವಿಕಸನಗೊಳ್ಳುತ್ತಿದ್ದಂತೆ, ಅದರ ಅಗತ್ಯಗಳು ಬದಲಾಗುತ್ತಾ ಸಾಗುತ್ತವೆ. ಭಾರತವೂ ಇದಕ್ಕೆ ಹೊರತಾಗಿಲ್ಲ, ರಾಷ್ಟ್ರವು ಅಭಿವೃದ್ಧಿಹೊಂದಿದಂತೆ, ತೆರಿಗೆ ರಚನೆಯು ಅನೇಕ ಮಜಲುಗಳಲ್ಲಿ ಪರಿಷ್ಕರಣೆಗಳಿಗೆ ಒಳಗಾಗಿದೆ. ಉದಾಹರಣೆಗೆ, ವ್ಯಾಟ್, ಅಬಕಾರಿ ಸುಂಕ ಮತ್ತು ಸೇವಾ ತೆರಿಗೆಯಂತಹ ಕೇಂದ್ರ ಮತ್ತು ರಾಜ್ಯ ಪರೋಕ್ಷ ತೆರಿಗೆಗಳನ್ನು ಬದಲಿಸಿದ ಸರಕು ಮತ್ತು ಸೇವಾ ತೆರಿಗೆ (GST) ಗಳನ್ನು ಕಾಲಕ್ಕೆ ತಕ್ಕಂತೆ ಭಾರತದಲ್ಲಿ ಜಾರಿಗೆ ತರಲಾಯಿತು.

ಒಟ್ಟಾರೆಯಾಗಿ ಮಹರ್ಷಿ ಮನು, ಕವಿ ಕಾಳಿದಾಸ ಮತ್ತು ಶಾಸ್ತ್ರಜ್ಞ ಕೌಟಿಲ್ಯ ಮುಂತಾದವರು ಪ್ರತಿಪಾದಿಸಿರುವುದು, ಬಲಾತ್ಕಾರವಾಗಿ ಪ್ರಜೆಗಳಿಂದ ಹೆಚ್ಚಿನ ತೆರಿಗೆ ವಸೂಲಿ ಮಾಡಿ ಆ ಸಂಪತ್ತನ್ನು ಅಂದಾ-ದುಂದಿ ಮಾಡದೇ ಪ್ರಜೆಗಳ ಹಿತಕ್ಕಾಗಿ ಮಾತ್ರ ಬಳಸಬೇಕು ಎನ್ನುವುದಾಗಿತ್ತು. ಆದರೆ ಇಂದು, ಪೆಟ್ರೋಲ್‌ನಂತಹ ಒಂದೇ ವಸ್ತುವಿನಮೇಲೆ ರಾಜ್ಯ ಮತ್ತು ರಾಷ್ಟ್ರಗಳು ಪ್ರತ್ಯೇಕವಾಗಿ ಹೇರುವ ಮೂಲ ಬೆಲೆಗಿಂತ ಅನೇಕ ಪಟ್ಟು ಹೆಚ್ಚಾಗುವಷ್ಟು ತೆರಿಗೆ, ಆಸ್ತಿ, ಆದಾಯ, ಉಳಿತಾಯ ಮತ್ತು ಖರ್ಚು ಇವೆಲ್ಲದರ ಮೇಲೆಯೂ ಜನರ ಮೇಲೆ ವಿಧಿಸುವ ತೆರಿಗೆ, ಉಳ್ಳವರಿಂದ ತೆಗೆದು ಇಲ್ಲದವರಿಗೆ ನೀಡುವ ಭರದಲ್ಲಿ ನಡುವೆ ಇರುವ ಮಧ್ಯಮ ವರ್ಗದವರನ್ನು ಅಡಕತ್ತರಿಯ ನಡುವೆ ಇಡುವ ವ್ಯವಸ್ಥೆ, ಇನ್ನು ವಿನಿಯೋಜನೆಯನ್ನು ನೋದಿದರೆ, ಸರಕಾರದಲ್ಲಿ ಸದಾ ಅನಿಯಂತ್ರಿತವಾಗಿ ಬೆಳೆಯುತ್ತಿರುವ ಆಡಳಿತಾತ್ಮಕ ಮತ್ತು ಅನುತ್ಪಾದಕ ವೆಚ್ಚಗಳು, ಆದಾಯದ ಶೇ.20 ರಷ್ಟನ್ನು ಬಡ್ಡಿಯನ್ನೇ ತುಂಬುವಷ್ಟು ಅಭಿವೃದ್ಧಿಯ ಹೆಸರಿನಲ್ಲಿ ಮೈತುಂಬ ಮಾಡಿಕೊಂಡಿರುವ ಸಾಲ, ರಾಜಕೀಯ ಕಾರಣಕ್ಕಾಗಿ ಅಥವಾ ಮತ ಗಳಿಕೆಗಾಗಿ ತರ್ಕಬದ್ಧವಲ್ಲದ 'ಉಚಿತ ಗ್ಯಾರಂಟಿ' ಯೋಜನೆಗಳಿಗೆ ವ್ಯಯವಾಗುತ್ತಿರುವ ಸಾರ್ವಜನಿಕರಿಂದ ಸಂಗ್ರಹಿಸಿದ ತೆರಿಗೆ ಹಣ. ಈ ಎಲ್ಲ ಅಸಂಗತಗಳನ್ನು ಪರಿಭಾವಿಸಿ ನೋಡಿದರೆ ಇಂದು ನಮ್ಮ ಆರ್ಥಿಕ ಚಿಂತನೆಯ ಅಂತರ್ಗತವಾಗಿರುವ ತೆರಿಗೆ ವ್ಯವಸ್ಥೆ ಮತ್ತು ಅದರ ವಿನಿಯೋಜನೆ ಯಾವಕಡೆಗೆ ಸಾಗುತ್ತಿದೆ ಎನ್ನುವುದು ಸಾಮಾನ್ಯರಿಗೂ ಅರ್ಥವಾಗುತ್ತದೆ. ಹೇಗಿದ್ದರೂ ತಲೆ ತಗ್ಗಿಸಿ ತೆರಿಗೆಯನ್ನು ಪಾವತಿಸುತ್ತಾರೆ ಎಂದು ತೆರಿಗೆ ಪಾವತಿಸುವವರನ್ನು ಆಡಳಿತ ನಡೆಸುವವರು ಲಘುವಾಗಿ ಕಾಣದೇ ಅವರನ್ನು ಗೌರವಿಸುತ್ತಾ ಸಾಲದ ಆಧಾರದ ಮೇಲೆ ನಿಂತಿರುವ ಇಂದಿನ ಆರ್ಥಿಕತೆಯಿಂದ ಆರೋಗ್ಯಕರ ಅಭಿವೃದ್ಧಿ ಪರ ಮತ್ತು ಧಾರ್ಮಿಕವಾಗಿದ್ದ ಪ್ರಾಚೀನ ಆರ್ಥಿಕ ಚಿಂತನೆಗೆ ಮರಳುವ ಕುರಿತು ಸರಕಾರಗಳು ಚಿಂತಿಸಿ ನಡೆಯುವುದು ಒಳಿತು.

(ಲೇಖಕರು: ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಬಾಸ್ ಇಲ್ಲದಿದ್ದರೆ ಚಿತ್ರರಂಗ ಫುಲ್ ಲಾಸ್

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಚಿತ್ರರಂಗದಲ್ಲಿ ಈಗ ಒಂದು ತಮಾಷೆಯ ಮಾತು ತುಂಬಾ ಸದ್ದು ಮಾಡುತ್ತಿದೆ. ಆದರೆ ಈ ತಮಾಷೆಯ ಮಾತನ್ನು ಗಂಭೀರವಾಗಿ ಮಾತಾಡ್ತಾ ಇದ್ದಾರೆ ಅನ್ನೋದು ಇಲ್ಲಿ ಇಂಟರೆಸ್ಟಿಂಗ್ ವಿಷಯ. ಅದೇನಪ್ಪಾ ಅಂದ್ರೆ ಕನ್ನಡ ಸಿನಿಮಾಗಳು ಸೋಲ್ತಾ ಇರೋದಕ್ಕೆ ದರ್ಶನ್ ಜೈಲಿನಲ್ಲಿ ಇರೋದೇ ಕಾರಣ ಅಂತೆ. ನಮ್ಮ ಬಾಸ್ ಜೈಲಲ್ಲಿ ಇದ್ದಾರೆ. ಅವರು ಹೊರಬರುವ ತನಕ ನಾವು ಕನ್ನಡ ಸಿನಿಮಾ ನೋಡಲ್ಲ. ನಾವು ನೋಡ್ತಾ ಇಲ್ಲ ಅನ್ನೋ ಕಾರಣಕ್ಕೇ ಎಲ್ಲ ಸಿನಿಮಾಗಳೂ ಫ್ಲಾಪ್ ಆಗ್ತಾ ಇವೆ ಅಂತ ದರ್ಶನ್

ಅಭಿಮಾನಿಗಳು ಕಾಲರ್ ಏರಿಸಿಕೊಂಡು ಮಾತಾಡ್ತಾ ಇದ್ದಾರೆ. ಅವರು ಕಾಲರ್ ಏರಿಸಿಕೊಂಡು ಮಾತಾಡ್ತಾ ಇದ್ದಾರೋ ಅಥವಾ ಇನ್ನೇನೋ ಏರಿಸಿಕೊಂಡು ಮಾತಾಡ್ತಾ ಇದ್ದಾರೋ ಗೊತ್ತಿಲ್ಲ. ಒಟ್ಟಿನಲ್ಲಿ ಅವರ ಪ್ರಕಾರ ಬಾಕ್ಸ್ ಆಫೀಸ್ ಸುಲ್ತಾನ್ ಜೈಲಲ್ಲಿ ಇರೋದಕ್ಕೆ ಎಲ್ಲ ಸಿನಿಮಾಗಳೂ ಸೋಲ್ತಾ ಇವೆ. ಇವರ ಪ್ರಕಾರ ದರ್ಶನ್ ಹೊರಗೆ ಇದ್ದಾಗ ಎಲ್ಲ ಕನ್ನಡ ಸಿನಿಮಾಗಳೂ ಸೂಪರ್ ಹಿಟ್ ಆಗ್ತಾ ಇದ್ವು ಅನ್ಸುತ್ತೆ. ಮತ್ತು ದರ್ಶನ್ ಜೈಲಿಂದ ಶಿಫ್ಟ್ ಆಗಿ ಹೊರಬಂದಿದ್ದೇ ತಡ, ಇಡೀ ಕರ್ನಾಟಕದ ಜನ ಮನೆಗಳಿಂದ ಚಿತ್ರಮಂದಿರಗಳಿಗೆ ಶಿಫ್ಟ್ ಆಗಿ ಎಲ್ಲ ಸಿನಿಮಾಗಳೂ ಇಂಡಸ್ಟ್ರಿ ಆಗೋದು ಗ್ಯಾರಂಟಿ ಅನ್ಸುತ್ತೆ. ಚಿತ್ರಮಂದಿರಗಳಿಗೆ ಜನ ಬರ್ತಾ ಇಲ್ಲ ಅನ್ನೋದು ಹಳೇ ಮಾತು. ಮತ್ತು ಅದು ಈಗಲೂ ಮುಂದುವರಿಯುತ್ತಿದೆ. ನಿರ್ಮಾಪಕರು, ನಿರ್ದೇಶಕರು ಚಿತ್ರಮಂದಿರದ ಅಂಗಳದಲ್ಲಿ ನಿಂತು, ನಾವು ಇನ್ಮೇಲೆ ಕನ್ನಡ ಸಿನಿಮಾ ಮಾಡಲ್ಲ ಅಂತ ಕಣ್ಣೀರು ಹಾಕ್ತಾ ಇದ್ದಾರೆ. ಆದರೆ ಇದನ್ನ ನೆಪವಾಗಿಸಿಕೊಂಡು ಬಾಸ್ ಇಲ್ಲದಿದ್ರೆ, ಚಿತ್ರರಂಗ ಫುಲ್ ಲಾಸ್ ಅಂತ ದರ್ಶನ್ ಅಭಿಮಾನಿಗಳು ಬೇಳೆ ಬೇಯಿಸಿಕೊಳ್ತಾ ಇರೋದು ನೋಡಿದ್ರೆ, ನಗು ಬರೋದು ಗ್ಯಾರಂಟಿ.

ಲೂಸ್ ಟಾಕ್

ನಿರ್ಮಲಾ ಸೀತಾರಾಮನ್

- **ಏನ್ ಮೇಡಂ, ನಿಮ್ಮೀ ಬಜೆಟ್ ಬಗ್ಗೆ ಜನ ಏನಂತಿದ್ದಾರೆ?**

-ಏನ್ರೀ ಅದು? ನಿಮ್ಮ ಬಜೆಟ್ ಅಂತ ಕರೆಯೋದು, ನಾನೇನ್ ನಿಮ್ ಫ್ರೆಂಡಾ?

- **ಹಲೋ ಮೇಡಂ, ನಾನ್ ಹೇಳಿದ್ದು, ನಿಮ್ಮ 'ಪ್ಲಸ್ ಈ' ಬಜೆಟ್, ಎರಡೂ ಸೇರಿ 'ನಿಮ್ಮೀ' ಬಜೆಟ್ ಅಂತ..**

-ಓಕೆ, ಓಕೆ, ಜನ ಇನ್ನೇನಂತಾರ್ರೀ.. ನಿರ್ಮಲಾ ಟಾಯ್ಲೆಟ್ ಆಗ್ಲಿ, ನಿರ್ಮಲಾ ಬಜೆಟ್ ಆಗ್ಲಿ, ಟ್ಯಾಕ್ಸ್ ಕಟ್ಟೋದು ತಪ್ಪಲ್ಲ ಅಂತಾರೆ. ಹೋಗ್ಲಿ ಬಿಡ್ರೀ..

- **ಇದು 25 ವರ್ಷದ ದೂರದೃಷ್ಟಿ ಇರೋ ಬಜೆಟ್ ಅಂತ ಹೇಳ್ಕೊಂಡಿದ್ದೀರಲ್ಲ?**

-ಹೌದು. ಇದರ ಬಗ್ಗೆ ಇನ್ನು 25 ವರ್ಷ ಯಾರೂ ಏನೂ ಕೇಳಂಗಿಲ್ಲ ಅಂತ ಅದರ ಅರ್ಥ

- **ಆದ್ರೂ ಒಂದ್ ಸಣ್ಣ ಟ್ಯಾಬ್ಲೆಟ್ ಇಟ್ಕೊಂಡು ಅಷ್ಟು ದೊಡ್ಡ ಬಜೆಟ್ ಮಂಡನೆ ಮಾಡಿಬಿಡ್ತೀರಲ್ಲ.. ಹೆಂಗೆ ಅಂತ**

-ಏನ್ ಮಾಡೋದು ಬಜೆಟ್ ಕಮ್ಮಿ ಇತ್ತು, ನಮ್ದು ಲೋ ಬಜೆಟ್ ಬಜೆಟ್ಟು

- **ಮೇಡಂ, ತುಂಬಾ ಜನಕ್ಕೆ ಈ ಬಜೆಟ್‌ಗಳಲ್ಲಿ ಏನಿದೆ ಅಂತಾನೇ ಅರ್ಥ ಆಗಲ್ಲ ಅದ್ಯಾಕೆ ಹಂಗೆ?**

-ಅದ್ ಹಂಗೇ, ಅರ್ಥ ಸಚಿವರು ಮಂಡನೆ ಮಾಡಿದ್ರೂ ಯಾರಿಗೂ ಅರ್ಥ ಆಗಲ್ಲ. ಅದಕ್ಕೇ ಅದನ್ನ ಬಜೆಟ್ ಅನ್ನೋದು.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಮಧ್ಯರಾತ್ರಿ ಖೇಮು ಆಟೋ ಓಡಿಸಿಕೊಂಡು ಮನೆಗೆ ಹೋಗುತ್ತಿದ್ದ. ದಾರಿಯಲ್ಲಿ ಒಬ್ಬ ಹೆಂಗಸು ನಿಂತ್ಕೊಂಡು ಕೈ ತೋರಿಸಿ ಅಡ್ಡ ಹಾಕಿದಳು. ಹೆಣ್ಣುಮಗಳು ಅಂತ ಗಾಡಿ ನಿಲ್ಲಿಸಿದ ಖೇಮು. ಅವಳ ಮುಖ ಯಾಕೋ ತಚುಂಬಾ ಗಂಭೀರವಾಗಿತ್ತು. ಅಲ್ಲದೆ, ಕಂಪ್ಲೀಟ್ ವೈಟ್ ಸೀರೆ ಹಾಕಿಕೊಂಡಿದ್ದಳು. ಮೈಮೇಲೆ ಒಂದೂ ಆಭರಣ ಇರಲಿಲ್ಲ. ಈ ರೋಡಲ್ಲಿ ದೆವ್ವಗಳ ಕಾಟ ಅಂತ ಗೊತ್ತಿದ್ರೂ, ಯಾಕಪ್ಪಾ ನಿಲ್ಲಿಸಿದೆ ಅಂತ ಒಳಗೊಳಗೇ ಹೆದರಿಕೊಂಡ ಖೇಮು. ಆದರೆ ಆ ಹೆಣ್ಣು ಅಣ್ಣಾ ತುಂಬಾ ತಡ ಆಗಿದೆ ಕರ್ಕೊಂಡ್ ಹೋಗಿ ಅಂದಾಗ, ಇಲ್ಲ ಅನ್ನೋಕಾಗದೆ ಕೂರಿಸಿಕೊಂಡ. ಹಿಂದೆ ಕೂತಿರೋದು ದೆವ್ವ ಅನ್ನೋ ಭಯದಲ್ಲೇ ಗಾಡಿ ಓಡಿಸುತ್ತಿದ್ದ ಖೇಮು. ತಗ್ಗು ದಿನ್ನೆ, ಹಂಪ್‌ಗಳ ಮೇಲೂ ಅವನಿಗೆ ಗಮನ ಇರಲಿಲ್ಲ. ಬೇಗ ಮನೆಗೆ ತಲುಪಿದರೆ ಸಾಕು ಅಂತ ಸ್ಪೀಡಾಗಿ ಹೋಗುತ್ತಿದ್ದ ಖೇಮು. ಸ್ವಲ್ಪ ದೂರ ಹೋದ ಮೇಲೆ ಸುಮ್ಮನೆ ಅನುಮಾನದಿಂದ ಹಿಂದೆ ತಿರುಗಿ ನೋಡಿದರೆ, ಹುಡುಗಿಯ ಮುಖದಲ್ಲಿ ಒಂದಿಷ್ಟು ಕೆಂಪನೆ ಬಣ್ಣ ಕಾಣುತ್ತಿತ್ತು. ಅದು ರಕ್ತ ಅಂತ ಗೊತ್ತಾಯಿತು ಖೇಮುಗೆ. ಮತ್ತೆ ಮುಂದೆ ಹೋಗಿ, ಮತ್ತೆ ತಿರುಗಿ ನೋಡಿದ. ಹೀಗೆ ಪ್ರತಿ ಸಾರಿ ತಿರುಗಿ ನೋಡಿದಾಗಲೂ ಆಕೆಯ ಮುಖದ ಮೇಲಿನ ರಕ್ತ ಜಾಸ್ತಿ ಆಗ್ತಾ ಬಂತು. ಖೇಮುಗೆ ಹಾರ್ಟ್ ಅಟ್ಯಾಕ್ ಆಗೋದೊಂದ್ ಬಾಕಿ. ಕೊನೆಗೆ ಆಕೆಯ ಮುಖ ಸಂಪೂರ್ಣ ರಕ್ತ ಆಗಿದ್ದನ್ನು ನೋಡಿ, ಥಟ್ಟನೆ ಆಟೋ ನಿಲ್ಲಿಸಿ, 'ದಯವಿಟ್ಟು ನನ್ನ ಬಿಟ್ಟು ಬಿಡು, ನನಗೆ ಹೆಂಡ್ತಿ ಮಕ್ಳಿದ್ದಾರೆ' ಅಂದ. ಅದಕ್ಕೆ ಆಕೆ ಗಂಭೀರವಾಗಿ ಸ್ವಲ್ಪ ಸಿಟ್ಟಿನಿಂದಲೇ ಹೇಳಿದಳು, 'ಅಯ್ಯೋ, ನಿನ್ ಮುಖ ಮುಚ್ಚಾ, ಅವಾಗಿಂದ ಅಷ್ಟೊಂದ್ ಸ್ಪೀಡಾಗಿ ಓಡಿಸ್ತಾ ಇದೀಯಾ. ಹಂಪ್, ತಗ್ಗು ಬಂದಾಗ ಸಡನ್ ಆಗಿ ಬ್ರೇಕ್ ಹಾಕ್ತೀಯಾ, ಪ್ರತಿ ಸಾರಿ ನೀನು ಬ್ರೇಕ್ ಹಾಕಿದಾಗಲೂ ನನ್ನ ಮುಖ ಮುಂದಿನ ಮೆಟಲ್ ಬಾರ್‌ಗೆ ಹೊಡೆದುಕೊಂಡು ಹಿಂಗೆ ರಕ್ತ ಬರ್ತಾ ಇದೆ. ಬೇಗ ಆಸ್ಪತ್ರೆಗೆ ಕರ್ಕೊಂಡ್ ಹೋಗು'.

ಲೈನ್ ಮ್ಯಾನ್

- **'ಇಸ್ಪೀಟ್ ಕಾರ್ಡ್'ಗಳನ್ನು ರಾಶಿ ಹಾಕಿ, ಅದರಲ್ಲಿ ಒಂದನ್ನು ಎತ್ತಿಕೋ ಅಂತ ಹೇಳೋದು**

'ಎಲೆ'ಕ್ಷನ್

- **ವಯಸ್ಸಾದ ಸಕ್ಕೂಬಾಯಿಯನ್ನು ಏನಂತಾರೆ ?**

'ಸುಕ್ಕು' ಬಾಯಿ

- **ದೇವಸ್ಥಾನದಲ್ಲಿ ಉರುಳು ಸೇವೆ ಮಾಡುವವನು**

'ರೋಲ್' ಮಾಡೆಲ್

- **ಜೈಲಲ್ಲಿ ನೇಣಿಗೇರಿಸುವ ಕೆಲಸ ಮಾಡುವವನದು**

'ಉರುಳು' ಸೇವೆ

- **ಕುಡಿದು 'ಹೈ' ಆಗಿರುವವರ ಹಾಡು**

'ಇಳಿಸು' ಬಾ, ತಾಯಿ ಇಳಿಸು ಬಾ

- **ಕೆಲವರು ಕುಡಿದ ಮೇಲೆ ಫೇಸ್ ಬುಕ್‌ನಲ್ಲಿ ಪೋಸ್ಟ್ ಹಾಕ್ತಾರೆ, ಆದ್ರೆ ಟ್ವೀಟ್ ಮಾಡಲ್ಲ ಯಾಕೆ?**

-ಯಾಕಂದ್ರೆ, ಟ್ವಿಟ್ಟರ್‌ನಲ್ಲಿ ಹಾಕೋಕೆ ಇಷ್ಟ್ ಅಕ್ಷರ ಅಂತ 'ಲಿಮಿಟ್' ಇರುತ್ತೆ.

- **ಪಾರ್ಕಿನಲ್ಲಿ ಬೆಳೆದು ನಿಂತ ಹೂವುಗಳನ್ನು ಕೀಳುವವರದ್ದು**

-'ಕೀಳು' ಜಾತಿ

- **ಎಲ್ಲದಕ್ಕೂ ಅದೇನ್ ಕಿತ್ಕೊತೀಯಾ ಕಿತ್ಕೋ ಅನ್ನೋದು**

-'ಕೀಳು' ಅಭಿರುಚಿ

- **ಕವಿ ಆಗಿ 14 ವರ್ಷ ಅನುಭವ ಇರೋನ ಸಾಧನೆ**

-ಕ'ವನವಾಸ'

- **ಕೈ ನಡುಗುವ ಖಾಯಿಲೆ ಇರೋನ ಸಮಸ್ಯೆ**

-ಯಾರ ಜೊತೆಗಾದ್ರೂ ಹ್ಯಾಂಡ್ 'ಶೇಕ್' ಮಾಡೋದು ಕಷ್ಟ

- **ಅನುಮಾನದ ಆಧಾರದ ಮೇಲೆ ಮಾಡಿದ ವರದಿ**

-Whether ರಿಪೋರ್ಟ್

ರುಚಿಯ ಹೆಸರಿನಲ್ಲಿ ಸವಿಯುತ್ತಿರುವುದು ಏನನ್ನು?

ವಿಶ್ಲೇಷಣೆ
ಸುರೇಂದ್ರ ಪೈ, ಭಟ್ಕಳ
sprakashbjpgmail.com

ಹುಷಾರ್! ಹುಷಾರ್! ನಿಮ್ಮ ಟೂತ್ ಪೇಸ್ಟ್‌ನಲ್ಲಿ ಉಪ್ಪು ಇದೆಯೇ? ಎಂಬ ಜಾಹೀರಾತು ನಾವು ನೋಡಿದ್ದೇವೆ. ಹಾಗೆಯೇ ಮದ್ಯಪಾನ ಮತ್ತು ಧೂಮಪಾನ ಆರೋಗ್ಯಕ್ಕೆ ಹಾನಿಕರ ಹಾಗೂ ಕ್ಯಾನ್ಸರ್‌ಗೂ ಕಾರಕ ಎಂಬ ಜಾಹೀರಾತನ್ನು ನಾವು ನೋಡಿರುತ್ತೇವೆ. ಆದರೆ ನೀವು ದಿನನಿತ್ಯ ಬಳಸುವ ಮಸಾಲೆಯಲ್ಲಿ ಕ್ಯಾನ್ಸರ್ ಹರಡುವ ವಿಷಕಾರಿ ಕೀಟನಾಶವಿದೆಯೇ? ಎಂದು ಗ್ರಾಹಕರನ್ನು ಎಚ್ಚರಿಸುವ ಜಾಹೀರಾತುಗಳನ್ನು ಇದುವರೆಗೂ ನಾವು ನೋಡಿಲ್ಲ, ಕೇಳಿಲ್ಲ ಅಲ್ಲವೇ? ಈ ಮಾತನ್ನು ಪ್ರಸ್ತಾಪಿಸಲು ಬಹು ಮುಖ್ಯ ಕಾರಣವೊಂದಿದೆ. ಕೋಟ್ಯಾಂತರ ಭಾರತೀಯರು ದಿನನಿತ್ಯದ ಅಡುಗೆಯಲ್ಲಿ ಬಳಸುವ ಭಾರತದ ಪ್ರತಿಷ್ಠಿತ ಎಂಡಿಹೆಚ್ ಹಾಗೂ ಎವರೆಸ್ಟ್ ಮಸಾಲೆ ಕಂಪನಿಗಳ ಉತ್ಪನ್ನಗಳಲ್ಲಿ ಕ್ಯಾನ್ಸರ್ ಹರಡುವ ವಿಷಕಾರಿ 'ಇಟಿಓ ಮತ್ತು ಸಾಲ್ಮೊನೆಲ್ಲಾ' ಕೀಟನಾಶಗಳಿರುವುದು ಸಾಬೀತಾದ ಬಳಿಕ ಜಾಗತಿಕ ಮಟ್ಟದಲ್ಲಿ ಹಲವು ರಾಷ್ಟ್ರಗಳು ಭಾರತೀಯ ಮಸಾಲೆ ಪದಾರ್ಥಗಳ ಮೇಲೆ ನಿಷೇಧ ಹೇರಿದ್ದಾರೆ. ನಿಮಗಿದು ನಂಬಲಸಾಧ್ಯ ಎನಿಸುತ್ತಿದೆ ಅಲ್ಲವೇ?

ನಿಮಗೆಲ್ಲ ನೆನಪಿರಬಹುದು 2015 ರಲ್ಲಿ ಮ್ಯಾಗಿ ನೂಡಲ್ಸ್‌ನಲ್ಲಿ ಎಮ್ಎಸ್‌ಜಿ ಅಂಶ ಪತ್ತೆಯಾದ ಕಾರಣಕ್ಕಾಗಿ ಬ್ಯಾನ್ ಮಾಡಲಾಗಿತ್ತು. ಈಗ ಅದಕ್ಕಿಂತಲೂ ಅಘಾತಕಾರಿ ಅಂಶ ನಮ್ಮನ್ನೆಲ್ಲ ಬೆಚ್ಚಿಬೀಳಿಸಿದೆ. ಎಪ್ರಿಲ್ 5, 2024 ರಂದು ಹಾಂಕಾಂಗ್ ಸರಕಾರದ ಆಹಾರ ಮತ್ತು ಪರಿಸರ ನೈರ್ಮಲ್ಯ ಇಲಾಖೆಯ 'ಆಹಾರ ಸುರಕ್ಷತೆ ಕೇಂದ್ರ (ಸಿಎಫ್ಎಸ್)' ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಅದರಲ್ಲಿ ಭಾರತದ ಎಂಡಿಹೆಚ್ ಬ್ರಾಂಡ್‌ನ ಮೂರು ಮಸಾಲೆಗಳಾದ ಮದ್ರಾಸ್ ಕರಿ ಪೌಡರ್, ಸಾಂಬಾರ್ ಮಸಾಲಾ ಪೌಡರ್, ಮತ್ತು ಕರಿ ಪೌಡರ್ ಹಾಗೂ ಎವರೆಸ್ಟ್ ಬ್ರಾಂಡ್‌ನ ಫಿಶ್ ಕರಿ ಮಸಾಲಾದಲ್ಲಿ ನಿಗದಿತ ಪ್ರಮಾಣಕ್ಕಿಂತ ಅಧಿಕ ಪ್ರಮಾಣದ ಎಥಿಲೀನ್ ಆಕ್ಸೈಡ್ ಕಂಡುಬಂದಿರುವ ಕಾರಣ ಇವುಗಳ ಮೇಲೆ ನಿಷೇಧ ಹೇರಿದೆ. ಎಥಿಲೀನ್ ಆಕ್ಸೈಡ್ ಬಳಕೆಯು ನೇರವಾಗಿ ಕ್ಯಾನ್ಸರ್ ಸಂಬಂಧಿತ ಕಾಯಿಲೆಯೊಂದಿಗೆ ಸಂಪರ್ಕ ಹೊಂದಿರುವುದರಿಂದ ಬಹಳಷ್ಟು ದೇಶಗಳಲ್ಲಿ ಅದರ ಬಳಕೆಗೆ ನಿಷೇಧವಿದೆ. ಇದೇ ಕಾರಣಕ್ಕಾಗಿ ಸಿಂಗಾಪುರ್ ಫುಡ್ ಏಜೆನ್ಸಿ (ಎಸ್ಎಫ್ಎ)ಯು ಸಹ ಎವರೆಸ್ಟ್ ಫಿಶ್ ಕರಿ ಮಸಾಲಾವನ್ನು ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲೂ ಅನುಮತಿಸುವ ಮಿತಿಯನ್ನು ಮೀರಿದ ಮಟ್ಟದಲ್ಲಿ ಎಥಿಲೀನ್ ಆಕ್ಸೈಡ್ ಎಂಬ ಕೀಟನಾಶಕ ಪತ್ತೆಯಾಯಿತು.

ಇಂಟರ್‌ನ್ಯಾಷನಲ್ ಏಜೆನ್ಸಿ ಫಾರ್ ರಿಸರ್ಚ್ ಆನ್ ಕ್ಯಾನ್ಸರ್ ಸಂಸ್ಥೆ ಎಥಿಲೀನ್ ಆಕ್ಸೈಡ್ ಅನ್ನು ಗ್ರೂಪ್ 1 ಕಾರ್ಸಿನೋಜೆನ್ ಎಂದು ವರ್ಗೀಕರಿಸಿದೆ. ಆದ್ದರಿಂದ ಯೂರೋಪಿನ್ ದೇಶಗಳಲ್ಲಿ ಇದರ ಬಳಕೆಗೆ ಸಂಪೂರ್ಣ ನಿಷೇಧವಿದೆ. ಹಾಂಕಾಂಗ್‌ನಲ್ಲಿ ಆಹಾರ ಭದ್ರತಾ ನಿಯಮ ಪಾಲಿಸದಿದ್ದರೆ 50 ಸಾವಿರ ಡಾಲರ್ ದಂಡ ಹಾಗೂ 6 ತಿಂಗಳ ಸೆರೆಮನೆವಾಸವನ್ನು ವಿಧಿಸಲಾಗುತ್ತದೆ. ಸಿಂಗಾಪುರ್ ಫುಡ್ ಏಜೆನ್ಸಿ (ಎಸ್ಎಫ್ಎ) ಯು ಎಥಿಲೀನ್ ಆಕ್ಸೈಡ್ ಒಂದು ಕೀಟನಾಶಕವಾಗಿದ್ದು ಅದು ಆಹಾರದಲ್ಲಿ ಬಳಸಲು ಅನುಮತಿಯಿಲ್ಲ. ಸಿಂಗಾಪುರ್, ಹಾಂಗ್ ಕಾಂಗ್ ನಂತರ ಮಾಲ್ಡೀವ್ಸ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ನೇಪಾಳದ ಆಹಾರ ಸುರಕ್ಷತಾ ಏಜೆನ್ಸಿಗಳು ಈ ಬಗ್ಗೆ ತನಿಖೆ ನಡೆಸುತ್ತಿದ್ದು, ಅಲ್ಲೂ ನಿಷೇಧ ಹೇರುವ ಸಾಧ್ಯತೆಗಳು ಹೆಚ್ಚಾಗಿವೆ.

ಕಳೆದ ಆರು ತಿಂಗಳಲ್ಲಿ ಎಂಡಿಹೆಚ್ ರಫ್ತು ಮಾಡಿದ ಎಂಡಿಹೆಚ್ ಮಸಾಲೆ ಉತ್ಪನ್ನಗಳಲ್ಲಿ 'ಸಾಲ್ಮೊನೆಲ್ಲಾ' ಪತ್ತೆಯಾದ ಕಾರಣ 31 ಪ್ರತಿಶತದಷ್ಟು ಯುನೈಟೆಡ್ ಸ್ಟೇಟ್ಸ್‌ನ ಕಸ್ಟಮ್ಸ್ ಅಧಿಕಾರಿಗಳು ನಿರಾಕರಿಸಿದ್ದಾರೆ. ಸಾಲ್ಮೊನೆಲ್ಲಾ ಎಂಬುದು ಬ್ಯಾಕ್ಟೀರಿಯಾ ಆಗಿದ್ದು ಇದರಿಂದ ಫುಡ್ ಪಾಯಿಸನ್, ಜ್ವರ, ವಾಂತಿ, ಬೇಧಿ, ನರಮಂಡಲ ಸಂಬಂಧಿಸಿದ ಕಾಯಿಲೆಗಳು ಬರುವ ಸಾಧ್ಯತೆಗಳಿವೆ. ಭಾರತೀಯ ಮಸಾಲೆ ಉತ್ಪನ್ನಗಳ ಸಾಗಾಣಿಕೆಯ ನಿರಾಕರಣೆ ದರವು 2022 ಕ್ಕಿಂತ 2023ರಲ್ಲಿ ಶೇ.15 ಪ್ರತಿಶತ ದ್ವಿಗುಣವಾಗಿದೆ. 2020 ರಿಂದ 2023 ರ ಅವಧಿಯಲ್ಲಿ ಭಾರತದಿಂದ ಅಮೆರಿಕಕ್ಕೆ ಕಳುಹಿಸಲಾದ 3925 ಆಮದು ಸಾಗಾಣಿಕೆಯಲ್ಲಿ ಸಾಲ್ಮೊನೆಲ್ಲಾ ಪತ್ತೆಯಾದ ಬಳಿಕ 786 ಆಮದು ಸಾಗಾಣಿಕೆಯನ್ನು ಬಹಿಷ್ಕರಿಸಿದೆ. ಹಾಗೂ ಜನವರಿ 2022 ರಲ್ಲಿ ಎಂಡಿಹೆಚ್‌ನ ಉತ್ಪಾದನಾ ಘಟಕದ ತಪಾಸಣೆ ನಡೆಸಿದಾಗ ಘಟಕಗಳು ಸಾಕಷ್ಟು ನೈರ್ಮಲ್ಯ ಸೌಲಭ್ಯಗಳು ಮತ್ತು ಸಂಸ್ಕರಣಾ ವ್ಯವಸ್ಥೆ ಹೊಂದಿಲ್ಲ ಎಂದು ಎಫ್‌ಡಿಎ ವರದಿ ಮಾಡಿದೆ.

ಐರೋಪ್ಯ ಒಕ್ಕೂಟದ ಆಹಾರ ಸುರಕ್ಷತಾ ಅಧಿಕಾರಿಗಳು ಭಾರತಕ್ಕೆ ಸಂಬಂಧಿಸಿದ 527 ಉತ್ಪನ್ನಗಳಲ್ಲಿ ಕ್ಯಾನ್ಸರ್ ಉಂಟುಮಾಡುವ ಎಥಿಲೀನ್ ಆಕ್ಸೈಡ್ ಇರುವಿಕೆಯನ್ನು ಖಚಿತಪಡಿಸಿದ್ದಾರೆ. ಇವುಗಳಲ್ಲಿ ಬೀಜಗಳು ಮತ್ತು ಎಳ್ಳು, ಎಣ್ಣೆ ಕಾಳುಗಳು, ಗಿಡಮೂಲಿಕೆಗಳು ಮತ್ತು ಮಸಾಲೆಗಳು, ಧಾನ್ಯಗಳು, ಐಸ್ ಕ್ರೀಮ್, ಹಣ್ಣು, ತರಕಾರಿಗಳು, ಬೇಕರಿ ಉತ್ಪನ್ನಗಳು ಸೇರಿದಂತೆ 54 ಸಾವಯುವ ಉತ್ಪನ್ನಗಳು ಸೇರಿವೆ ಎಂದು ಯೂರೋಪಿನ ಫುಡ್ ಸೇಫ್ಟಿ ಇಲಾಖೆ ರಾಪಿಡ್ ಅಲರ್ಟ್ ಸಿಸ್ಟಮ್ ಫಾರ್ ಫುಡ್ ಅಂಡ್ ಫೀಡ್ (ಆರ್ಎಎಸ್ಎಸ್ಎಫ್) ವರದಿ ಮಾಡಿದೆ. ಯುರೋಪಿಯನ್ ಯೂನಿಯನ್ 1991 ರಲ್ಲಿ ಎಥಿಲೀನ್ ಆಕ್ಸೈಡ್ ಬಳಕೆಯ ಮೇಲಿನ ನಿರ್ಬಂಧವನ್ನು ಹೇರಿದೆ. 2020-21ರಲ್ಲಿ ಭಾರತ ಸೇರಿದಂತೆ ಹಲವಾರು ದೇಶಗಳಿಂದ ಆಮದು ಮಾಡಿಕೊಳ್ಳಲಾದ 468 ವಸ್ತುಗಳಲ್ಲಿ ಎಥಿಲೀನ್ ಆಕ್ಸೈಡ್ ಪ್ರಕರಣವನ್ನು ಅಧಿಕಾರಿಗಳು ವರದಿ ಮಾಡಿದ್ದಾರೆ. 2020 ರಲ್ಲಿ ಭಾರತದಿಂದ ಬೆಲ್ಜಿಯಂಗೆ ರವಾನಿಸಲಾದ ಎಳ್ಳಿನಲ್ಲಿ ಮೊದಲ ಬಾರಿಗೆ ಈ ಕೀಟನಾಶಕದ ಅಂಶ ಪತ್ತೆಯಾದಾಗಲೇ ಯೂರೋಪ್ ರಾಷ್ಟ್ರಗಳು ಭಾರತದ ಆಹಾರ ಭದ್ರತೆ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಮುಂದಾಗಿದ್ದು ಎನ್ನಬಹುದು. ಅದಕ್ಕಾಗಿ ಯೂರೋಪ್ ರಾಷ್ಟ್ರಗಳು ಆರ್ಎಎಸ್ಎಸ್ಎಫ್ ಎಂಬ ಸಂಸ್ಥೆಯ ಮೂಲಕ ನಿಗಾ ವಹಿಸುತ್ತಿದೆ. ಇದರ ವರದಿಯಂತೆ 2019 ರಿಂದ 2024 ರ ತನಕ ಭಾರತದಿಂದ ಆಮದು ಮಾಡಲಾದ ಒಟ್ಟು 985 ಉತ್ಪನ್ನಗಳನ್ನು ನಿಷೇಧಿಸಿದೆ.

ಎಂಡಿಹೆಚ್ ಮತ್ತು ಎವರೆಸ್ಟ್ ಭಾರತದ ಸಾಂಬಾರ ಪದಾರ್ಥಗಳ ಮಾರುಕಟ್ಟೆಯಲ್ಲಿ ಅತಿದೊಡ್ಡ ಕಂಪನಿಯಾಗಿದ್ದು, 2022 ರಲ್ಲಿ 10.44 ಶತಕೋಟಿ ಮೌಲ್ಯದ ವಹಿವಾಟು ನಡೆಸಿದೆ. 2022-23ರ ಅವಧಿಯಲ್ಲಿ ದಕ್ಷಿಣ ಏಷ್ಯಾ ರಾಷ್ಟ್ರವು 4 ಶತಕೋಟಿ ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡಿದೆ. ಈ ಪ್ರಕರಣದ ಕುರಿತಂತೆ ಭಾರತೀಯ ಮಸಾಲೆ ಮಂಡಳಿಯ ಪ್ರಯೋಗಾಲಯಗಳಿಂದ ಅಗತ್ಯ ಅನುಮತಿಗಳು ಮತ್ತು ಅನುಮೋದನೆಯನ್ನು ಪಡೆದ ನಂತರವೇ ರಫ್ತು ಮಾಡಲಾಗಿದೆ ಎಂದು ಎಂಡಿಹೆಚ್ ಅಧಿಕಾರಿಗಳು ಹೇಳಿದ್ದಾರೆ. ಭಾರತೀಯ ಮಸಾಲೆ ಮಂಡಳಿಯು ಭಾರತ ಸರಕಾರದ ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯದ ಅಡಿಯಲ್ಲಿ ಬರುತ್ತದೆ. ಹಾಗೂ ನಾವು ಬಳಸುವ ಆಹಾರದಲ್ಲಿ ವಿಷಕಾರ ಕೀಟನಾಶಕಗಳ ಅಂಶಗಳ ಪ್ರಮಾಣದ ಬಗ್ಗೆ ತನಿಖೆ ಮಾಡುವ ಜವಾಬ್ದಾರಿ ಎಫ್ಎಸ್ಎಸ್ಎಐ ಮೇಲಿದೆ. ಇದು ಭಾರತ ಸರಕಾರದ ಕುಟುಂಬ ಮತ್ತು ಆರೋಗ್ಯ ಕಲ್ಯಾಣ ಸಚಿವಾಲಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.

ಈ ಎಲ್ಲ ನಿಷೇಧಗಳ ನಡುವೆಯೇ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್ಎಸ್ಎಸ್ಎಐ) ಈ ಹಿಂದೆ ಅನುಮತಿಸಿದ್ದಕ್ಕಿಂತ ಈಗ ಹೆಚ್ಚಿನ ಪ್ರಮಾಣದ ಕೀಟನಾಶಕಗಳನ್ನು ಅನುಮತಿಸಿದೆ. ಗರಿಷ್ಠ ಶೇಷ ಮಿತಿ ಎಂದು ಕರೆಯಲ್ಪಡುವ ಎಮ್ಆರ್ಎಲ್ ಅನ್ನು ಪ್ರತಿ ಕಿಲೋಗ್ರಾಂಗೆ 0.01 ಮಿಲಿಗ್ರಾಂಗಳಿಂದ (ಇಜ/ಇಜ) 0.1 ಇಜ/ಇಜಗೆ ಹೆಚ್ಚಿಸಲಾಗಿದೆ. ಅಂದರೆ ನಿಗದಿತ ಪ್ರಮಾಣಕ್ಕಿಂತ ಹತ್ತರಷ್ಟು ಹೆಚ್ಚಳವಾಗಿದೆ.

ಇದರ ನಡುವೆ ಇವೆಲ್ಲವೂ ಬೇರೆ ದೇಶಗಳು ಭಾರತದ ಪ್ರಗತಿ ಹಾಗೂ ಕೇಂದ್ರ ಸರಕಾರದ ಸಾಧನೆಯನ್ನು ಸಹಿಸದೇ ಸುಳ್ಳು ಆರೋಪ ಮಾಡುತ್ತಿವೆ ಎಂಬ ವದಂತಿಗಳು ಬಂದವು. ಆದರೆ ಇದರ ಬಗ್ಗೆ ಎಫ್ಎಸ್ಎಸ್ಎಐ ಮೌನ ವಹಿಸಿತು. ಆದರೆ ಫುಡ್ ಹೈಜಿನ್ ಅಂಡ್ ಹೆಲ್ತ್ ಲ್ಯಾಬೋರೇಟರಿ ನಲ್ಲಿ ಭಾರತೀಯ ವ್ಯಕ್ತಿಯೊಬ್ಬ ಸತ್ಯಾಂಶ ತಿಳಿಯಲು ಫಿಶ್ ಕರಿಯ ಮಸಾಲೆಯನ್ನು ಪರೀಕ್ಷಿಸಿದಾಗ ಆ ವರದಿಯಲ್ಲಿ ಶೇಕಡಾ 70ರಷ್ಟು ವಿಷಕಾರಿ ಕೀಟನಾಶಕ ಅಂಶ ಇರುವುದು ಪತ್ತೆಯಾಯಿತು.

ಇನ್ನೂ ರೈತರು ಬೆಳೆಯುವ ಬೆಳೆಯಲ್ಲಿ ವಿಷಕಾರಿ ಕೀಟನಾಶಕ ಇರುವುದಿಲ್ಲ, ಬದಲಾಗಿ ಫ್ಯಾಕ್ಟರಿಗಳಲ್ಲಿ ಪ್ಯಾಕೇಜ್ ಮಾಡುವ ಸಮಯದಲ್ಲಿ ಇದನ್ನು ಸೇರಿಸಲಾಗುತ್ತದೆ. ಬಿಎಂಸಿಯ ವರದಿ ಪ್ರಕಾರ ಜಾಗತಿಕ ಮಟ್ಟದಲ್ಲಿ ವಾರ್ಷಿಕ 11,000 ರೈತರು ವಿಷಕಾರಿ ಕೀಟನಾಶಕದಿಂದ ಸಾವನ್ನಪ್ಪುತ್ತಿದ್ದಾರೆ. ಇವರಲ್ಲಿ 6500 ರೈತರು ಭಾರತದವರಾಗಿದ್ದಾರೆ. 2015 ರಲ್ಲಿ ಕೇಂದ್ರ ಸರಕಾರವು ಇವುಗಳ ಬಗ್ಗೆ ತನಿಖೆಗಾಗಿ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ (ಐಎಆರ್ಐ) ಮಾಜಿ ಪ್ರಾಧ್ಯಾಪಕ ಡಾ. ಅನುಪಮ್ ವರ್ಮಾ ನೇತೃತ್ವದ ಸಮಿತಿಯನ್ನು ರಚಿಸಿತ್ತು. ಒಂದು ಅಥವಾ ಹೆಚ್ಚಿನ ದೇಶಗಳಲ್ಲಿ ನಿಷೇಧಿತ, ನಿರ್ಬಂಧಿತ, ಹಿಂತೆಗೆದುಕೊಳ್ಳಲ್ಪಟ್ಟ ಆದರೆ ಭಾರತದಲ್ಲಿ ನೋಂದಾಯಿಸಲ್ಪಟ್ಟಿರುವ 66 ಕೀಟನಾಶಕಗಳ ತಾಂತ್ರಿಕ ಪರಿಶೀಲನೆಯನ್ನು ಕೈಗೊಂಡ ಬಳಿಕ 13 ಕೀಟನಾಶಕಗಳನ್ನು ನಿಷೇಧಿಸುವಂತೆ, 6 ಕೀಟನಾಶಕಗಳನ್ನು 2020 ರ ಅವಧಿಯ ಒಳಗೆ ಹಂತ ಹಂತವಾಗಿ ಸ್ಥಗಿತಗೊಳಿಸುವಂತೆಯೂ ಶಿಫಾರಾಸು ಮಾಡಿತ್ತು. ಇನ್ನೂಳಿದ 27 ಕೀಟನಾಶಗಳನ್ನು ತಾಂತ್ರಿಕ ಅಧ್ಯಯನಕ್ಕೆ ಒಳಪಡಿಸಿ, ಮೇ 14, 2020 ರಲ್ಲಿ ಅವುಗಳನ್ನು ನಿಷೇಧಿಸುವಂತೆ ಶಿಫಾರಸಿ ಮಾಡುತ್ತದೆ. ಆದರೆ ಫೆಬ್ರುವರಿ 2023 ರಲ್ಲಿ ಸರಕಾರ ಅವುಗಳಲ್ಲಿ ಕೇವಲ 3 ಕೀಟನಾಶಕ ಮಾತ್ರ ನಿಷೇಧಿಸುತ್ತವೆ.

ಒಂದು ವೇಳೆ ಇವುಗಳ ಬಗ್ಗೆ ಬೇರೆ ದೇಶಗಳು ವರದಿಯನ್ನು ಸಾರ್ವಜನಿಕವಾಗಿ ಪ್ರಕಟಿಸದಿದ್ದರೆ, ನಮಗೆ ಎಂದಿಗೂ ಇದರ ಬಗ್ಗೆ ತಿಳಿಯುತ್ತಿರಲಿಲ್ಲ. ಬೇರೆ ದೇಶಗಳಲ್ಲಿ ಸಂಪೂರ್ಣವಾಗಿ ನಿಷೇಧಿಸಲಾದ 24 ಕೀಟನಾಶವು ನಮ್ಮ ದೇಶದಲ್ಲಿ ಬಳಕೆಗೆ ಅನುಮತಿ ಇದೆ ಎಂದಾದರೆ ನಮ್ಮ ಸರಕಾರವು ನಾಗರಿಕರ ಆರೋಗ್ಯದ ದೃಷ್ಟಿಯಿಂದ ಎಷ್ಟರ ಮಟ್ಟಿಗೆ ಕಾಳಜಿ ಹೊಂದಿದೆ ಎಂದು ಯೋಚಿಸಿ. ಈ ಮೇಲಿನ ಎಲ್ಲ ಘಟನೆಗಳು ಬೆಳಕಿಗೆ ಬಂದ ನಂತರ ಇದೇ ಜುಲೈ 5, 2024 ರಂದು ಎಫ್ಎಸ್ಎಸ್ಎಐ ರಾಷ್ಟ್ರವ್ಯಾಪಿ 4,000 ಮಾದರಿಗಳನ್ನು ಸಂಗ್ರಹಿಸಿ, ಅವುಗಳಲ್ಲಿ 2200 ಮಾದರಿ ಪರೀಕ್ಷಿಸಿದ ಬಳಿಕ ಎವರೆಸ್ಟ್, ಎಂಡಿಹೆಚ್, ಮತ್ತು ಬಾದ್ಶಾಹ್ ಮುಂತಾದ ಪ್ರಸಿದ್ಧ ಬ್ರಾಂಡ್‌ಗಳ ಉತ್ಪನ್ನಗಳೊಂದಿಗೆ ಇತರೆ 111 ಮಸಾಲೆ ತಯಾರಕರ ಪರವಾನಗಿಯನ್ನು ರದ್ದುಗೊಳಿಸುವಂತೆ ಆದೇಶ ಜಾರಿಯಾಗಿದೆ. ಇದಕ್ಕೆ ತೆಗೆದುಕೊಂಡ ಸಮಯ ಬರೋಬ್ಬರಿ 9 ವರ್ಷ ಎಂಬುದೇ ಚರ್ಚೆಯ ಸಂಗತಿ.

ಕೊನೆಯದಾಗಿ ಇಂದು ನಾವು ಸೇವಿಸುವ ನೀರು, ಗಾಳಿ, ಆಹಾರ ಎಲ್ಲವೂ ಕಲುಷಿತಗೊಂಡಿದೆ, ಅದಕ್ಕೆ ಕಾರಣ ಬೇರಾರು ಅಲ್ಲ ನಾವೇ. ಆದರೆ ಅದರ ಬಗ್ಗೆ ಜಾಗೃತಿ ಮೂಡಿಸುವ ಹಾಗೂ ಕಠಿಣ ಕ್ರಮ ಕೈಗೊಳ್ಳುವ ಜವಾಬ್ದಾರಿ ಸರಕಾರದ್ದು. ಆದರೆ ಬೇರೆ ದೇಶಗಳಲ್ಲಿ ನಿಷೇಧಿಸಲ್ಪಟ್ಟ ಆಹಾರ, ಔಷಧಿಗಳು ಮಾತ್ರ ನಮ್ಮ ದೇಶದಲ್ಲಿ ಎಂದಿಗೂ ಎಕ್ಸ್‌ಪೈರಿ ಆಗುವುದಿಲ್ಲ. ರುಚಿಯ ಹೆಸರಿನಲ್ಲಿ ಇಷ್ಟು ವರ್ಷ ಪ್ರತಿನಿತ್ಯವು ವಿಷವನ್ನೇ ಎಂಜಾಯ್ ಮಾಡುತ್ತಾ ಸವಿದದ್ದಾಯಿತು, ಇನ್ನೂ ಮುಂದೆಯಾದರೂ ಮಸಾಲೆ ಪ್ಯಾಕೆಟ್ ಖರೀದಿಸುವಾಗ ತಪ್ಪದೇ ಮಾಹಿತಿ ಓದುವಿರಿ ತಾನೇ?

(ಲೇಖಕರು: ಶಿಕ್ಷಕರು, ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 82

ಹಂಪಿ ಸ್ಮಾರಕಗಳು ಸಂಪೂರ್ಣ ಮುಳುಗಡೆ

ಮೈತುಂಬಿ ಹರಿಯುತ್ತಿರುವ ನದಿ ವೀಕ್ಷಣೆಗೆ ಹಂಪಿಗೆ ಆಗಮಿಸುತ್ತಿರುವ ಜನರು। ನದಿ ಪಾತ್ರದಲ್ಲಿ ಭದ್ರತಾ ಸಿಬ್ಬಂದಿ ನಿಯೋಜನೆ

ಅನಂತ್ ಪದ್ಮನಾಭ ರಾವ್ ಹೊಸಪೇಟೆ

ಇಲ್ಲಿನ ತುಂಗಭದ್ರಾ ಜಲಾಶಯ ಸಂಪೂರ್ಣ ಭರ್ತಿಯಾಗಿದ್ದು ಶನಿವಾರ ಮಧ್ಯಾಹ್ನ 33 ಕ್ರಸ್ ಗೇಟ್‌ಗಳ ಮೂಲಕ ನದಿಗೆ 1ಲಕ್ಷ 50ಸಾವಿರಕ್ಕೂ ಅಧಿಕ ಪ್ರಮಾಣ ನೀರನ್ನು ನದಿಗೆ ಹರಿಸಲಾಗಿದ್ದು ಹಂಪಿ ಸ್ಮಾರಕಗಳು ಸಂಪೂರ್ಣ ಮುಳುಗಡೆಯಾಗಿವೆ.

ಕಳೆದ ಕೆಲ ದಿನಗಳಿಂದ ಜಲಾಶಯದ ಮೇಲ್ಭಾಗದಲ್ಲಿ ಭಾರಿ ಮಾಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕ್ಷಣ ಕ್ಷಣಕ್ಕೂ ಜಲಾಶಯದ ಒಳಹರಿವಿನಲ್ಲಿಯೂ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದ್ದು ಜಲಾಶಯದ ಎಲ್ಲಾ 33 ಕ್ರಸ್ ಗೇಟ್‌ಗಳನ್ನು ಓಪನ್‌ಮಾಡಿ 1ಲಕ್ಷ 50ಸಾವಿರ 500 ಕ್ಯೂಸೆಕ್ಸ್ ನೀರು ಹರಿಸಲಾಗಿದೆ. ಜಲಾಶಯಕ್ಕೆ 1ಲಕ್ಷ 17 ಸಾವಿರದ 950 ಕ್ಯೂಸೆಕ್ಸ್ ನೀರು ಒಳಹರಿವಿದ್ದು ನದಿಗೆ 1ಲಕ್ಷ 40 ಸಾವಿರಕ್ಕೂ ಅಧಿಕ ಪ್ರಮಾಣದ ನೀರು ಬಿಡುಗಡೆಮಾಡಲಾಗಿದ್ದು ಉಳಿದಂತೆ 8895 ಕ್ಯೂಸೆಕ್ಸ್ ನೀರು ಕಾಲುವೆಗಳ ಮೂಲಕ ಹರಿಸಲಾಗಿದೆ.

ಜಲಾಶಯದ ಮೇಲ್ಭಾಗದಲ್ಲಿ ನಿರಂತರವಾಗಿ ಮಳೆಯಾಗುತ್ತಿದ್ದು ಜಲಾಶಯಕ್ಕೆ ಮತಷ್ಟೋ ನೀರು ಹರಿದು ಬರುವ ಸಾಧ್ಯತೆ ಇದೆ ಎನ್ನಲಾಗಿದೆ. ನದಿಗೆ ನೀರು ಬಿಡುಗಡೆಯಾದ ಹಿನ್ನೆಲೆ ಹೊಸಪೇಟೆ ತಾಲೂಕಿನ ಹೂಸೂರು, ವೆಂಕಟಾಪುರ, ಬುಕ್ಕಸಾಗರ ಸೇರಿದಂತೆ ನದಿ ಪಾತ್ರ ಸ್ಮಾರಕಗಳು ಮುಳುಗಡೆಯಾಗಿದೆ.

ಐತಿಹಾಸಿಕ ಹಂಪಿಯ ಪುರಂದರ ಮಂಟಪ ಪೂರ್ಣ ಮುಳುಗಿದೆ. ಹಂಪಿ ವಿರೂಪಾಕ್ಷ ದೇವಸ್ಥಾನದ ಬಳಿಯ ಸ್ನಾನಘಟ್ಟವೂ ಸಂಪೂರ್ಣ ಮುಳುಗಿದೆ. ಚಕ್ರತೀರ್ಥ ಸಮೀಪದ ಕೋದಂಡರಾಮ, ಯಂತ್ರೋದ್ಧಾರಕ ಆಂಜನೇಯ ದೇವಸ್ಥಾನಕ್ಕೆ ಹೋಗುವ ಕಾಲುದಾರಿ ನೀರಲ್ಲಿ ಮುಳುಗಿದ್ದು ಕೋಟಿಲಿಂಗ, ಸೂರ್ಯನಾರಾಯಣ ದೇಗುಲ, ಶ್ರೀರಘುನಂದಿನ ತೀರ್ಥ ಮೂಲ ಬೃಂದಾವನ ಮಠಕ್ಕೆ ತೆರಳುವ ಮಾರ್ಗ ಸಹ ನೀರಿನಲ್ಲಿ ಮುಳುಗಿದೆ.

ನದಿಗೆ ಅಪಾರ ಪ್ರಮಾಣದಲ್ಲಿ ನೀರು ಬಿಡುಗಡೆಯಾದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಅಗತ್ಯ ಮುಂಜಾಗ್ರತ ಕ್ರಮಗಳನ್ನು ಕೈಗೊಂಡಿದೆ. ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಶುಕ್ರವಾರವೇ ಹಂಪಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹಂಪಿಯು ಪ್ರಸಿದ್ಧ ಪ್ರವಾಸಿ ತಾಣ. ಮಳೆಗಾಲ ಮತ್ತು ನದಿಗೆ ಹರಿಬಿಟ್ಟಾಗ ಈ ಪ್ರದೇಶವು ಮತ್ತಷ್ಟು ಆಕರ್ಷಕವಾಗಿರುತ್ತದೆ. ಈ ಸಮಯದಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗಬಹುದು. ಆದ್ದರಿಂದ ಅಧಿಕಾರಿಗಳು ಮುಂಜಾಗ್ರತ ಕ್ರಮಗಳನ್ನು ಮಾಡಿಕೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಸ್ಟ್ 6ರಂದು ತುಂಗಭದ್ರಾಕ್ಕೆ ಬಾಗಿನ ಅರ್ಪಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ. ಹಂಪಿಯಲ್ಲಿ ಸದ್ಯ ಯಾವುದೇ ಅಪಾಯದ ಸ್ಥಿತಿ ಇಲ್ಲ, ಪ್ರವಾಸಿಗರಿಗೆ ನಿರ್ಬಂಧ ಇಲ್ಲ. ನದಿಯ ಸಮೀಪಕ್ಕೆ ಹೋಗದೆ ದೂರದಿಂದಲೇ ಸೌಂದರ್ಯ ಸವಿಯಬೇಕು ಎಂದಿದ್ದಾರೆ.

33 ಕ್ರಸ್ಟ್ ಗೇಟ್‌ಗಳ ಮೂಲಕ ನದಿಗೆ 1ಲಕ್ಷ 50ಸಾವಿರಕ್ಕೂ ಅಧಿಕ ಪ್ರಮಾಣ ನೀರನ್ನು ನದಿಗೆ ಹರಿಸಲಾಗಿದ್ದು ಹಂಪಿ ಸ್ಮಾರಕಗಳು ಸಂಪೂರ್ಣ ಮುಳುಗಡೆಯಾಗಿವೆ.

ನದಿಗೆ ಇಳಿಯದಂತೆ ಸೂಚನೆ

ಸ್ನಾನ ಮಾಡಲು ನದಿಗೆ ಇಳಿಯದಂತೆ ಭಕ್ತರಿಗೆ ಸೂಚನೆ ನೀಡಲಾಗಿದೆ. ನದಿದಡದಲ್ಲಿ ಸದ್ಯ ಹೆಚ್ಚಿನ ಸಂಖ್ಯೆಯಲ್ಲಿ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ. ನೀರಿನ ಹರಿವು ಹೆಚ್ಚಿರುವ ಕಾರಣ ಪ್ರವಾಸಿಗರ ದಂಡು ನೀರಿನ ವೀಕ್ಷಣೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ನದಿಪಾತ್ರ ಎಲ್ಲಾ ಕಡೆಗಳಲ್ಲಿ ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸಲು ಡಿಸಿ ಸೂಚಿಸಿದ್ದಾರೆ.



ಜನಸಂಖ್ಯಾ ನಿಯಂತ್ರಣದ ಜಾಗೃತಿ ನೀಡಿ

ವಿಶ್ವ ಜನಸಂಖ್ಯಾ ದಿನಾಚರಣೆ: ಜಿಪಂ ಸಿಇಒ ಮೊಹಮ್ಮದ್ ಅಲಿ ಅಕ್ರಂಶಾ

ಹೊಸಪೇಟೆ: ಜನಸಂಖ್ಯೆಯನ್ನು ನಿಯಂತ್ರಣ ಮಾಡುವುದು ನಮ್ಮ ಜವಾಬ್ದಾರಿಯಾಗಿದ್ದು, ನಗರ, ಗ್ರಾಮೀಣ ಪ್ರದೇಶಗಳಲ್ಲಿ ಜನಸಂಖ್ಯೆ ನಿಯಂತ್ರಿಸಲು ಜನರಲ್ಲಿ ವ್ಯಾಪಕ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಂ ಶಾ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ತಾಲೂಕು ಪಂಚಾಯಿತಿ ವಿದ್ಯಾರಣ್ಯ ಸಭಾಂಗಣದಲ್ಲಿ ಸಸಿಗೆ ನೀರುಣಿಸುವ ಮೂಲಕ ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ವಿಶ್ವದ ಜನಸಂಖ್ಯೆಯಲ್ಲಿ ಭಾರತವು ಮೊದಲನೇ ಸ್ಥಾನದಲ್ಲಿದೆ. ಮೂಢನಂಬಿಕೆ, ಅಜ್ಞಾನ, ಅನಕ್ಷರತೆ, ಬಡತನ, ಮಾಹಿತಿ ಕೊರತೆದಿಂದ ಜನಸಂಖ್ಯೆ ಹೆಚ್ಚಳವಾಗುತ್ತಲೇ ಸಾಗಿದೆ. ಜನಸಂಖ್ಯೆ ಸ್ಫೋಟದಿಂದ ಶೈಕ್ಷಣಿಕ, ಆರ್ಥಿಕ, ಧಾರ್ಮಿಕ, ಸಮಾಜದ ಅಸಮಾನತೆ, ನಿರುದ್ಯೋಗ ಸಮಸ್ಯೆ ಉಂಟಾಗುತ್ತವೆ. ಜನರು ಮೂಲಸೌಕರ್ಯಗಳನ್ನು ಪಡೆದುಕೊಳ್ಳಲು ಕಷ್ಟವಾಗುತ್ತದೆ ಎಂದು ಎಚ್ಚರಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರ ಹೊಸಪೇಟೆಯ ಅಧ್ಯಕ್ಷ ಎಚ್.ಎನ್.ಮಹಮದ್ ಇಮಾಮ್ ನಿಯಾಜಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಹೆಣ್ಣಿರಲಿ-ಗಂಡಿರಲಿ ಒಂದು ಕುಟುಂಬಕ್ಕೆ ಎರಡೇ ಮಕ್ಕಳಿರಲಿ ಎನ್ನುವಂತಹ ಆರೋಗ್ಯಕರ ವಿಚಾರಗಳನ್ನು ಅರ್ಥೈಸಿಕೊಳ್ಳಬೇಕು. ಉತ್ತಮವಾದ ಕುಟುಂಬ ಯೋಜನೆಯಿಂದ ಜನಸಂಖ್ಯಾ ಸ್ಫೋಟವನ್ನು ನಿಯಂತ್ರಿಸಬಹುದು ಎಂದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶಂಕರ್ ನಾಯ್ಕ ಮಾತನಾಡಿ, ಜನಸಂಖ್ಯೆ ಹೆಚ್ಚಳದಿಂದ ದೇಶದ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ ಹಾಗೂ ನಾನಾ ರೀತಿಯ ಸಮಸ್ಯೆಗಳನ್ನು ಅನುಭವಿಸಬೇಕಾಗುತ್ತದೆ. ಈ ವರ್ಷದ ಘೋಷವಾಕ್ಯವು ''ಅಭಿವೃದ್ಧಿ ಹೊಂದಿದ ಭಾರತದ ಹೊಸ ಗುರುತಿಗಾಗಿ ಕುಟುಂಬ ಯೋಜನೆ ಅಳವಡಿಕೆ ಪ್ರತಿ ದಂಪತಿಗಳ ಹೆಮ್ಮೆ'' ಎಂಬುದಾಗಿದೆ. ಒಂದು ಮಗುವಿನಿಂದ ಇನ್ನೊಂದು ಮಗುವಿಗೆ ಕನಿಷ್ಠ 3 ವರ್ಷ ಅಂತರ ಕಾಪಾಡಲು ಕುಟುಂಬ ಕಲ್ಯಾಣ ಕಾರ್ಯಕ್ರಮದ ತಾತ್ಕಾಲಿಕ ನೂತನ ವಿಧಾನಗಳಾದ ಅಂತರ ಚುಚ್ಚುಮದ್ದು, ಛಾಯಾ ನುಂಗುವ ಮಾತ್ರೆ, ಮಾಲಾ-ಎನ್ ಮಾತ್ರೆ ಹಾಗೂ ಪಿಪಿಐ ಯು.ಸಿ.ಡಿ (ವಂಕಿದಾರಣೆ) ಇವುಗಳನ್ನು ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲಾಗುತ್ತದೆ. ಅರ್ಹ ದಂಪತಿಯು ಅವುಗಳನ್ನು ಅಳವಡಿಸಿಕೊಂಡು ತಮ್ಮ ಕುಟುಂಬವನ್ನು ಸುಖಿ ಕುಟುಂಬವನ್ನಾಗಿ ಮಾಡಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಆರ್.ಸಿ.ಎಚ್. ಅಧಿಕಾರಿ ಡಾ.ಜಂಬಯ್ಯ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಕಾರ್ಯಕ್ರಮ ಅಧಿಕಾರಿ ಡಾ.ಷಣ್ಮುಖ ನಾಯ್ಕ ಬಿ., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ವ್ಯವಸ್ಥಾಪಕರಾದ ಹನುಮಂತಪ್ಪ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ವಿನಯ್, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಜಗದೀಶ್ ಪಾಟ್ನೆ, ವೈದ್ಯಾಧಿಕಾರಿ ಡಾ. ಭರಮನಗೌಡ, ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ. ದೊಡ್ಡಮನಿ, ಅಫೀಜ್ ಖಾನ್ ಸೇರಿದಂತೆ ಆರೋಗ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಮತ್ತು ಮಲ್ಲಿಗೆ ಕಾಲೇಜಿನ ಪ್ಯಾರಾಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಇದ್ದರು.

ತಾಲೂಕು ಪಂಚಾಯಿತಿ ವಿದ್ಯಾರಣ್ಯ ಸಭಾಂಗಣದಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮವನ್ನು ಮೊಹಮ್ಮದ್ ಅಲಿ ಅಕ್ರಂ ಶಾ ಉದ್ಘಾಟಿಸಿದರು.

ವಿಶ್ವ ಜನಸಂಖ್ಯಾ ದಿನಾಚರಣೆ ಅಂಗವಾಗಿ ಜಿಲ್ಲಾ ಆರೋಗ್ಯ ಇಲಾಖೆಯಿಂದ ಎರಡು ಹಂತಗಳಲ್ಲಿ ಅಭಿಯಾನ ಕೈಗೊಳ್ಳಲಾಗುತ್ತಿದೆ. ಆರೋಗ್ಯ ಇಲಾಖೆ ಸಿಬ್ಬಂದಿ ಅಭಿಯಾನದಲ್ಲಿ ಭಾಗಿಯಾಗಬೇಕು. ಸರಿಯಾದ ಸಮಯದಲ್ಲಿ ಗರ್ಭಧಾರಣೆ ಹಾಗೂ ಅಂತರ ಕಾಪಾಡುವುದರಿಂದ ತಾಯಿ ಮತ್ತು ಮಗುವಿನ ಆರೋಗ್ಯ ಉತ್ತಮಗೊಳಿಸುವುದು, ಜನಸಂಖ್ಯೆ ನಿಯಂತ್ರಣದ ಜೊತೆಗೆ ಲಿಂಗಾನುಪಾತ ವ್ಯತ್ಯಾಸವಾಗದಂತೆ ಜಾಗೃತಿ ವಹಿಸುವುದು ಅವಶ್ಯವಾಗಿದೆ.

– **ಡಾ.ಬಸವರಾಜ್** ತಾಲೂಕು ಆರೋಗ್ಯಾಧಿಕಾರಿ

ಹೊಸಪೇಟೆ ಸ್ಥಳೀಯ ರಾಣ ಪೇಟೆ ಶ್ರೀರಾಘವೇಂದ್ರ ಸ್ವಾಮಿ ಮಠದಲ್ಲಿ ಚಾತುರ್ಮಾಸ್ಯ ನಿಮಿತ್ತ ಮಂತ್ರಾಲಯ ಮಠದ ಶ್ರೀಸುಬುಧೇಂದ್ರ ತೀರ್ಥ ಸ್ವಾಮೀಜಿ ಮುದ್ರಾಧಾರಣೆ ನೆರವೇರಿಸಿದರು. ಶ್ರೀಮಠಕ್ಕೆ ಬೆಳಿಗ್ಗೆ ಆಗಮಿಸಿದ ಶ್ರೀಗಳು ರಾಯರ ವೃಂದಾವನಕ್ಕೆ ಆರತಿ ಬೆಳಗಿದರು. ಶ್ರೀಮಠದ ಶಿಷ್ಯ ಸಂಪರ್ಕಧಿಕಾರಿ ಡಾ.ವಾದಿರಾಜ್ ಆಚಾರ್ಯ, ಡಿವಿಜಿನಲ್ ಮ್ಯಾನೇಜರ್ ಗುರುರಾಜ್ ದಿಗ್ಗಾವಿ, ವ್ಯವಸ್ಥಾಪಕರಾದ ಟೀಕಾಚಾರ್ಯ ಗುಂಜಳ್ಳಿ, ಕೃಷ್ಣಮೂರ್ತಿ, ವಿಚಾರಣಕರ್ತ ನರಸಿಂಹಮೂರ್ತಿ, ಮಠಾಧಿಕಾರಿ ಭೀಮಸೇನಾಚಾರ್ಯ, ಪವನ್ ಆಚಾರ್ಯ, ತಿರುಮಲೇಶ್, ದಾಸಸಾಹಿತ್ಯ ಪ್ರಾಜೆಕ್ಟ್ ಕೋ-ಆರ್ಡಿನೇಟರ್ ಅನಂತ ಪದ್ಮನಾಭ ಇತರರಿದ್ದರು.

ಹಂಪಿಯ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಪಕ್ಕದಲ್ಲಿ ಹರಿಯುತ್ತಿರುವ ತುಂಗಭದ್ರಾ ನದಿಯ ಸ್ನಾನಘಟ್ಟ ಬಳಿ ರೈತ ಮುಖಂಡರು, ಚುನಾಯಿತ ಪ್ರತಿನಿಧಿಗಳು, ಬಿಜೆಪಿ ಪಕ್ಷದ ಕಾರ್ಯಕರ್ತರು ಮಹಿಳೆಯರು 108 ಬಾಗಿನ ಅರ್ಪಣೆಮಾಡಿದರು. ರಾಜ್ಯ ಬಿಜೆಪಿ ಯುವಮೋರ್ಚಾ ಕೋಶಾಧ್ಯಕ್ಷ ಸಿದ್ಧಾರ್ಥ್ ಸಿಂಗ್ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಹುಡಾ ಮಾಜಿ ಅಧ್ಯಕ್ಷ ಅಶೋಕ್ ಜೀರೆ, ಮುಖಂಡರಾದ ಶಂಕರ್ ಮೇಟಿ, ಬಸವರಾಜ್ ನಲತ್ವಾಡ್, ರೇವಣ್ಣಸಿದ್ಧಪ್ಪ, ಸಂದೀಪ್ ಸಿಂಗ್ ಇತರರಿದ್ದರು.

ತುಂಗಭದ್ರಾದಿಂದ ನದಿಗೆ ನೀರು ಬಿಡುಗಡೆ

ನದಿಪಾತ್ರದ ಜನರು ಎಚ್ಚರವಹಿಸುವಂತೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ

ಬಳ್ಳಾರಿ: ತುಂಗಭದ್ರಾ ಜಲಾಶಯವು ಬಹುತೇಕ ಭರ್ತಿಯಾಗಿದ್ದು, ಜಲಾಶಯಕ್ಕೆ ಹೆಚ್ಚಿನ ಒಳಹರಿವು ಇದೆ. ಈಗಾಗಲೇ ತುಂಗಭದ್ರಾ ನದಿಗೆ ನೀರು ಹರಿಸಲಾಗುತ್ತಿದ್ದು, ನದಿ ಪಾತ್ರದ ಜನರು ಎಚ್ಚರವಹಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿದರು.

ಕಂಪ್ಲಿಯ ಕೋಟೆ ಪ್ರದೇಶದ ಬಳಿಯ ಪ್ರವಾಹ ಹಿನ್ನಲೆ ಭೇಟಿ ನೀಡಿ, ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದರು.

ತುಂಗಭದ್ರಾ ಜಲಾಶಯಕ್ಕೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ ಗುರುವಾರ ಸಂಜೆ ಸಾಕಷ್ಟು ಪ್ರಮಾಣದ ನೀರನ್ನು ಹೊರಬಿಡಲಾಗಿದೆ. ಜಿಲ್ಲೆಯ ಕಂಪ್ಲಿ ಮತ್ತು ಸಿರುಗುಪ್ಪ ತಾಲೂಕು ನದಿಭಾಗ ಗ್ರಾಮದ ಜನರು ನದಿಪಾತ್ರಕ್ಕೆ ತೆರಳಬಾರದು ಎಂದು ಹೇಳಿದರು.

ಹೆಚ್ಚಿನ ಪ್ರಮಾಣದಲ್ಲಿ ಜಲಾಶಯಕ್ಕೆ ನೀರು ಹರಿದು ಬರುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ ನೀರು ಬಿಡುಗಡೆ ಪ್ರಮಾಣ ಇನ್ನಷ್ಟು ಹೆಚ್ಚಾಗಬಹುದು. ಕಂಪ್ಲಿ ಮತ್ತು ಗಂಗಾವತಿ ಸಂಪರ್ಕ ಸಂಚಾರ ನಿರ್ಬಂಧಿಸಿದ್ದು, ಪರ್ಯಾಯವಾಗಿ ಬುಕ್ಕಸಾಗರ ಸೇತುವೆ ಮೂಲಕ ಸಂಚರಿಸಬಹುದು ಎಂದರು.

ನೂತನ ಸೇತುವೆ ನಿರ್ಮಾಣದ ಕುರಿತು ಸ್ಥಳೀಯ ಶಾಸಕರ ಜತೆ ಚರ್ಚಿಸಿ ಸರಕಾರದ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

ಕಂಪ್ಲಿಯಲ್ಲಿ ಈಗಾಗಲೇ ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದ್ದು, ಊಟ, ವಸತಿ ಸೇರಿದಂತೆ ಮೂಲಭೂತ ವ್ಯವಸ್ಥೆ ಕಲ್ಪಿಸಲಾಗಿದೆ. ಗ್ರಾಪಂ ವಾರು ನೋಡೆಲ್ ಅಧಿಕಾರಿಗಳನ್ನು ನೇಮಿಸಿ, ಮುಂಜಾಗ್ರತಾ ಕ್ರಮ ಕೈಗೊಳ್ಳಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ನದಿಪಾತ್ರದ ಬಳಿ ಪೊಲೀಸರನ್ನು ನಿಯೋಜಿಸಿದೆ. ಯಾರೂ ನದಿಪಾತ್ರಕ್ಕೆ ತೆರಳಬಾರದು. ತುರ್ತು ಸಂದರ್ಭಕ್ಕೆ ತಾಲೂಕು ಆಡಳಿತ ಅಥವಾ ಪೊಲೀಸ್ ಠಾಣೆಗೆ ಸಂಪರ್ಕಿಸಬಹುದು ಎಂದು ತಿಳಿಸಿದರು.

ಈ ವೇಳೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ, ಡಿವೈಎಸ್ಪಿ ಗೋಖಲೆ, ತಹಸೀಲ್ದಾರ್ ಶಿವರಾಜ್, ಕಂಪ್ಲಿ ಪುರಸಭೆ ಮುಖ್ಯಾಧಿಕಾರಿ ದುರುಗಣ್ಣ ಸೇರಿದಂತೆ ಇತರರು ಇದ್ದರು.

ತುಂಗಭದ್ರಾ ಜಲಾಶಯದಿಂದ ನದಿಗೆ ನೀರು ಬಿಡುಗಡೆ ಮಾಡಲಾಯಿತು.

ಸುರಕ್ಷಿತ ಸ್ಥಳಕ್ಕೆ ತೆರಳಲು ಮನವಿ

ನದಿ ಪಾತ್ರ, ದಂಡೆ ಮತ್ತು ನದಿಯ ಅಸುಪಾಸಿನಲ್ಲಿ ವಾಸಿಸುವ ಗ್ರಾಮಗಳ ಗ್ರಾಮಸ್ಥರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಹಾಗೂ ಜಾನುವಾರುಗಳನ್ನು ಜತನು ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿದರು.

ಕಳ್ಳತನ: ದಂಪತಿ ಪೊಲೀಸರ ವಶಕ್ಕೆ

ವಿಶೇಷ ತಂಡ ಈ ಪ್ರಕರಣವನ್ನು ಪತ್ತೆ ಹಚ್ಚಿ ಗಂಡ ಹೆಂಡತಿ ಇಬ್ಬರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಹರಪನಹಳ್ಳಿ: ನಕಲಿ ಗನ್ ತೋರಿಸಿ ಮಾಂಗಲ್ಯ ಸರ ಕಿತ್ತುಕೊಂಡು ಸೈಕಲ್ ನಲ್ಲಿ ಪರಾರಿಯಾಗಿದ್ದ ಗಂಡ ಹೆಂಡತಿಯನ್ನು ಇಲ್ಲಿಯ ಪೊಲೀಸರು ಬೆನ್ನು ಹತ್ತಿ ಸಿನಿಮೀಯ ರೀತಿಯಲ್ಲಿ ಬಂಧಿಸಿದ ಘಟನೆ ಹೂವಿನ ಹಡಗಲಿ ತಾಲೂಕಿನ ಅಡವಿಮಲ್ಲನಕೇರಿ ಬಳಿ ಜರುಗಿದೆ.

ಅಡವಿಮಲ್ಲನಕೇರಿಯ ತಾಂಡದ ಚೈತ್ರ(31) ಈಕೆಯ ಗಂಡ ಕೇಶವನಾಯ್ಕ(38) ಬಂಧಿತ ಆರೋಪಿಗಳು.

ಜು.25 ರಂದು ಬೆಳಗ್ಗೆ 9.45ಕ್ಕೆ ಹರಪನಹಳ್ಳಿ ತಾಲೂಕಿನ ಕಣವಿಹಳ್ಳಿ ಗ್ರಾಮದ ಹತ್ತಿರ ಇರುವ ನಂದಿ ರೇಸಾರ್ಟ್‌ನ ಕಾಫಿ ಸ್ಟಾಲ್ ನಲ್ಲಿ ಇದ್ದ ಶ್ರೀದೇವಿ ಎನ್ನುವವರನ್ನು ಚಾಕ್ ಲೇಟ್ ಕೇಳುವ ನೆಪದಲ್ಲಿ ಬಂದ ಆರೋಪಿತ ಪತಿ ಪತ್ನಿಯವರಲ್ಲಿ ಪತ್ನಿ ಚೈತ್ರಳು ಶ್ರೀದೇವಿ ಕೊರಳಲ್ಲಿ ಇದ್ದ ಮಾಂಗಲ್ಯವನ್ನು ಕಿತ್ತು ಕೊಂಡು ಓಡಿ ಹೋಗಿ ಮೋಟಾರು ಸೈಕಲ್ ನಲ್ಲಿ ಕುಳಿತಳು. ಆಗ ಮೋಟಾರ್ ಬೈಕ್ ಬಳಿ ಕೂಗುತ್ತಾ ಶ್ರೀದೇವಿ ಹೋದಾಗ ಆರೋಪಿ ಮಹಿಳೆ ಜರ್ಕಿನ್ ನಲ್ಲಿದ್ದ ನಕಲಿ ಗನ್ ತೋರಿಸಿ ಪರಾರಿಯಾಗಿದ್ದರು.

ಮಾಹಿತಿ ತಿಳಿದ ಹರಪನಹಳ್ಳಿ ತಾಲೂಕು ಪೊಲೀಸ್ ವೃತ್ತ ನಿರೀಕ್ಷಕ ನಾಗರಾಜ ಎಂ.ಕಮ್ಮಾರ್ ಕಾರ್ಯ ಪ್ರವೃತ್ತರಾಗಿ ತಮ್ಮ ತಂಡ ಒಳಗೊಂಡಂತೆ ಪ್ರತ್ಯೇಕ ಮೂರು ತಂಡಗಳನ್ನು ರಚಿಸಿ ಆರೋಪಿತರಿಗೆ ಬಲೆ ಬೀಸಿದರು.

ಆರೋಪಿತರನ್ನು ಪತ್ತೆ ಮಾಡಿ ಬಂಧಿಸಲು ವಿಜಯನಗರ ಜಿಲ್ಲಾ ಎಸ್ಪಿ ಶ್ರೀಹರಿಬಾಬು ರವರ ಸೂಚನೆಯಂತೆ ಹೆಚ್ಚವರಿ ಪೊಲೀಸ್ ಅಧೀಕ್ಷಕ ಸಲೀಂಭಾಷ. ಡಿವೈಎಸ್ಪಿ ವೆಂಕಟಪ್ಪ ನಾಯಕ, ಪ್ರಕರಣದ ತನಿಖಾಧಿಕಾರಿಯಾದ ಸಿಪಿಐ ನಾಗರಾಜ ಕಮ್ಮಾರ ರವರ ನೇತೃತ್ವದಲ್ಲಿ ಪಟ್ಟಣದ ಪಿಎಸ್ ಐ ಗಳಾದ ಶಂಭುಲಿಂಗಹಿರೇಮಠ, ಹಾಗೂ ವಸಂತಪ್ಪ, ಹಾಗೂ ಸಿಬ್ಬಂದಿ ಕೊಟ್ಟೂರುರೇಶ, ಮುಭಾರಕ್, ರವಿದಾದಾಪೀರ, ಆನಂದ, ಮಾಲತೇಶ, ಮಲ್ಲಿಕಾರ್ಜುನ, ನಾಗರಾಜ, ವಾಸುದೇವನಾಯ್ಕ, ಇಮಾಮ್ ಸಾಹೇಬ್, ನಾರನಗೌಡ, ಮಾಬುಸಾಹೇಬ್, ಕುಮಾರ್, ರವರ ವಿಶೇಷ ತಂಡ ಈ ಪ್ರಕರಣವನ್ನು ಪತ್ತೆ ಹಚ್ಚಿ ಗಂಡ ಹೆಂಡತಿ ಇಬ್ಬರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ತನಿಖಾಧಿಕಾರಿಯಾಗಿರುವ ನಾಗರಾಜ ಕಮ್ಮಾರ ನೇತೃತ್ವದ ಅವರ ತಂಡದ ಕಾರ್ಯವನ್ನು ಎಸ್ಪಿ ಹರಿಬಾಬು ಶ್ಲಾಘಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ವಿವಿಧ ಹುದ್ದೆಗಳ ಅರ್ಜಿ ಆಹ್ವಾನ

ಹೊಸಪೇಟೆ: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ವಿವಿಧ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಡಿಯಲ್ಲಿ ಜಿಲ್ಲೆಯಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಭೌತಚಿಕಿತ್ಸಕರು 1 ಹುದ್ದೆ, ಬ್ಲಾಕ್ ಎಪಿಡೆಮಿಯೋಲೊಜಿಸ್ಟ್ (ಬಿಪಿಎಚ್‌ಯು) 1 ಹುದ್ದೆ, ಜಿಲ್ಲಾ ಆರೋಗ್ಯ ಮತ್ತು ಕ್ಷೇಮಕೇಂದ್ರ ಕಾರ್ಯಕ್ರಮ ಸಂಯೋಜಕರು 1 ಹುದ್ದೆ, ಕಿರಿಯ ಆರೋಗ್ಯ ಸಹಾಯಕರು (ನಮ್ಮ ಕ್ಲಿನಿಕ್) 6 ಹುದ್ದೆಗಳು, ಆಪ್ತ ಸಮಾಲೋಚಕರು 1 ಹುದ್ದೆ ಖಾಲಿ ಇದ್ದು ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ಅನ್ನು ಸಂಪರ್ಕಿಸಬಹುದು. ಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚುಗೊಳಿಸುವುದು ಅಥವಾ ಕಡಿಮೆಗೊಳಿಸುವುದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ನಿರ್ಧಾರದಂತಿರುತ್ತದೆ. ಅರ್ಜಿಗಳನ್ನು ಸ್ವೀಕರಿಸಲು ಆ. 3 ರವರೆಗೆ ಅವಕಾಶ ವಿರಲಿದೆ. ಅರ್ಜಿಗಳನ್ನು ಕಚೇರಿಯ ಸಮಯದಲ್ಲಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ 60 ಹಾಸಿಗೆಯ ಎಮ್.ಸಿ.ಹೆಚ್ ಆಸ್ಪತ್ರೆ ಹಿಂಭಾಗ ಮಸೀದಿ ಹತ್ತಿರ ಹೊಸಪೇಟೆ ವಿಳಾಸದಲ್ಲಿ ಆ. 3ರ ಸಂಜೆ 5.30 ರೊಳಗೆ ಸ್ವೀಕರಿಸಲಾಗುವುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸಂಘದ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಶಾ ಸಿಬ್ಬಂದಿ ಸಮಸ್ಯೆ ಬಗೆಹರಿಸಲು ಒತ್ತಾಯ

ಕೊಟ್ಟೂರು: ಗ್ರಾಮೀಣ ಭಾಗದ ಬಡಹೆಣ್ಣುಮಕ್ಕಳ ಆರೋಗ್ಯದ ಬಗ್ಗೆ ಕಾಳಜಿವಹಿಸುತ್ತಿರುವ ಆಶಾ ಕಾರ್ಯಕರ್ತೆಯರ ಸಮಸ್ಯೆಗಳನ್ನು ಬಗೆಹರಿಸಲು ರಾಜ್ಯ ಸರಕಾರ ಮುಂದಾಗಬೇಕು ಎಂದು ಎನ್‌ಎಫ್ ಐಡಬ್ಲ್ಯೂ ರಾಜ್ಯಾಧ್ಯಕ್ಷೆ ಎ. ಜ್ಯೋತಿ ಒತ್ತಾಯಿಸಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿದ್ದಾರೆ. ಆಶಾ ಕಾರ್ಯಕರ್ತೆಯರು ತಮ್ಮ ವೈಯಕ್ತಿಕ ಸಂಗತಿಗಳನ್ನು ದೂರವಿಟ್ಟು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಆದರೆ ಆಶಾ ಕಾರ್ಯಕರ್ತೆಯರ ಸಮಸ್ಯೆಗೆ ಸರಕಾರ ಸಮರ್ಪಕವಾಗಿ ಸ್ಪಂದಿಸದೆ ನಿರ್ಲಕ್ಷ್ಯಿಸುತ್ತಿದೆ. ಕಾರ್ಯಕರ್ತೆಯರಿಗೆ ತಿಂಗಳಿಗೆ ಸರಿಯಾದ ವೇತನ ದೊರೆಯುತ್ತಿಲ್ಲ. ಕಳೆದ ಹಲವು ವರ್ಷಗಳಿಂದ ಕನಿಷ್ಠ ವೇತನ ಜಾರಿಗೊಳಿಸಲು ನಿರಂತರ ಹೋರಾಟ ನಡೆಸುತ್ತಿದ್ದರೂ ಸರಕಾರ ಸ್ಪಂದಿಸದೆ ಕಡೆಗಣಿಸಿದೆ ಎಂದು ದೂರಿದರು. ಆಶಾ ಕಾರ್ಯಕರ್ತೆಯರಿಗೆ ವಿವಿಧ ಸೌಲಭ್ಯಗಳನ್ನು ನೀಡಬೇಕು. ಬದುಕಿನ ಭದ್ರತೆ ಕಲ್ಪಿಸಬೇಕು. ಕನಿಷ್ಠ ವೇತನ ನಿಗದಿಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಮಹಿಳೆ ಕಾಣೆ: ಪ್ರಕರಣ ದಾಖಲು

ಹೊಸಪೇಟೆ: ಸಂಗೀತ ಕಲಿಯಲು ಹೋಗುತ್ತೇನೆಂದು ಹೊರ ಹೋದ ಹೊಸಪೇಟೆ ತಾಲೂಕಿನ ಬುಕ್ಕಸಾಗರ ಗ್ರಾಮದ ಮಹಿಳೆ ಅಕ್ಕಮ್ಮ ಕೆ.(24)ಜೂ. 20 ರಂದು ಕಾಣೆಯಾದ ಬಗ್ಗೆ ಕಮಲಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದ ಅಕ್ಕಮ್ಮ ಕೆ. 142 ಅಡಿ ಎತ್ತರ, ಕಪ್ಪು ತಲೆ ಕೂದಲು, ಗೋಧಿ ಮೈಬಣ್ಣ, ಕೋಲು ಮುಖ, ಸಾಧಾರಣ ಮೈಕಟ್ಟು, ಬಲಗೈ ಮೇಲೆ ಪರಶ ಎಂದು ಕನ್ನಡದಲ್ಲಿ ಅಚ್ಚೆ ಗುರುತು ಇರುತ್ತದೆ. ಯುವತಿ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಕಮಲಾಪುರ ಪಿ.ಎಸ್ ದೂ: 08394-241240 ಗೆ ಕರೆ ಮಾಡಿ ಅಥವಾ ಪೊಲೀಸ್ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡುವಂತೆ ಕಮಲಾಪುರ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉತ್ತಮ ಮಳೆ, ರೈತರ ಸಂಭ್ರಮ

ಸಂಡೂರು: ತಾಲೂಕಿನ ವಿವಿಧ ಗ್ರಾಮಗಳಲ್ಲಿ ಉತ್ತಮ ಮಳೆಯಾಗಿದ್ದು ರೈತಾಪತಿ ವರ್ಗದಲ್ಲಿ ಸಂತಸ ಮೂಡಿದೆ. ತಾಲೂಕಿನ ಸಂಡೂರು, ತೋರಣಗಲ್ಲು, ಚೋರನೂರು ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ, ಸಂಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕುಡುತಿನಿ, ಎಳುಬೆಂಚಿ ಗ್ರಾಮಗಳಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಮೋಡಕವಿದ ವಾತಾವರಣವಿದ್ದು ಸಂಜೆಯಾಗುತ್ತಿದ್ದಂತೆ ಜಿಟಿ ಜಿಟಿ ಮಳೆ ನಿರಂತರವಾಗಿ ಸುರಿದು ರೈತಾಪಿ ಜನತೆಗೆ ಸಂತಸ ತಂದಿದೆ. ಉತ್ತಮ ಮಳೆಯಿಂದ ರೈತರು ಹೊಲಗಳಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

{ ಡಾ. ಜಿ. ಪರಮೇಶ್ವರ್ } ಗೃಹ ಸಚಿವ

ರಾಮನ ಹೆಸರು ನಾವು ತೆಗೆಯುತ್ತಿಲ್ಲ. ರಾಮ ಅಲ್ಲೇ ಇರುತ್ತಾನೆ. ರಾಮನಗರವೂ ಅಲ್ಲೇ ಇರಲಿದೆ. ಕುಮಾರಸ್ವಾಮಿಯವರು ಹೇಳಿಕೆ ಕೊಟ್ಟಿದ್ದಾರೆ. ಏನು ಮಾಡುವುದಕ್ಕೆ ಆಗುವುದಿಲ್ಲ. ಇದನ್ನೆಲ್ಲ ಸರಕಾರ ಎದುರಿಸಬೇಕು, ಎದುರಿಸುತ್ತೇವೆ.

ಪೆಟ್ರೋಲಿಯಂ ರಿಟೇಲ್ ಔಟ್‌ಲೆಟ್ ಸ್ಥಾಪನೆ

ಹೊಸಪೇಟೆ: ಬಳ್ಳಾರಿಯ ಡಿವಿಜನಲ್ ರಿಟೇಲ್ ಸೇಲ್ಸ್ ಹೆಡ್ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿಯ ಡಣಾಯಕನಕೆರೆ ಗ್ರಾಮದಲ್ಲಿ ಪೆಟ್ರೋಲಿಯಂ ರಿಟೈಲ್ ಜೌಟಲೇಟ್ ಸ್ಥಾಪನೆ ಮಾಡಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಕಂಪನಿಯನವರು ಅರ್ಜಿದಾರರಾದ ಮಂಜುನಾಥ್ ತಾಳೂರು ತಂದೆ ಮಲ್ಲಯ್ಯ, 21ನೇ ವಾರ್ಡ್, ಆಯುರ್ವೇದಿಕ್ ಕಾಲೇಜ್ ಹತ್ತಿರ, ಸಂಕ್ಲಾಪುರ ರಸ್ತೆ, ಹೊಸಪೇಟೆ ಇವರನ್ನು ಫ್ರಾಂಚೈಸ್ಸಿಯನ್ನಾಗಿ ನೇಮಕ ಮಾಡಿಕೊಂಡಿರುತ್ತಾರೆ. ಪ್ರಯುಕ್ತ ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿ, ಡಣಾಯಕನಕೆರೆ ಗ್ರಾಮದಲ್ಲಿ ಪೆಟ್ರೋಲಿಯಂ ರಿಟೈಲ್ ಜೌಟಲೇಟ್ ಸ್ಥಾಪನೆ ಮಾಡಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಕುರಿತಂತೆ ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ ಹತ್ತು ದಿನದೊಳಗಾಗಿ ಆಕ್ಷೇಪಣೆಯನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಇಮೇಲ್ ಐಡಿ, ವಿಜಯನಗರ ಜಿಲ್ಲೆ, ಹೊಸಪೇಟೆ ಹಾಗೂ ನೇರವಾಗಿ ಈ ಕಾರ್ಯಾಲಯದ ಎಂಎಜಿ-2 ಶಾಖೆಗೆ ಸಲ್ಲಿಸಲು ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸಲಾಗಿದೆ ಎಂದು ವಿಜಯನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಬೆಳೆವಿಮೆ ನೋಂದಣಿಗೆ ರೈತರಲ್ಲಿ ಮನವಿ

ಬಳ್ಳಾರಿ: ಜಿಲ್ಲೆಯಲ್ಲಿ ಎಲ್ಲಾ ರೈತರು ಬೆಳೆವಿಮೆ ಯೋಜನೆಯಡಿ ತಮ್ಮ ಬೆಳೆಗಳನ್ನು ನೋಂದಾಯಿಸಿಕೊಂಡು ಯೋಜನೆಯ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ. ಪ್ರಸ್ತಕ ಸಾಲಿನ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಬೆಳೆ ವಿಮೆಗೆ ನೋಂದಾಯಿಸಲು ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ತಮ್ಮ ಬೆಳೆಗಳಿಗೆ ಬ್ಯಾಂಕುಗಳಲ್ಲಿ ವಿಮೆ ಮಾಡಿಸಿಕೊಳ್ಳಬೇಕು. ಮುಸುಕಿನ ಜೋಳ, ಜೋಳ, ಸೂರ್ಯಕಾಂತಿ, ತೊಗರಿ, ಹತ್ತಿ, ಕೆಂಪು ಮೆಣಸಿನ ಕಾಯಿ ಹಾಗೂ ಈರುಳ್ಳಿ ಬೆಳೆಗಳಿಗೆ ಜು. 31 ಕೊನೆಯ ದಿನವಾಗಿದೆ. ಮಳೆಯಾಶ್ರಿತ ಬೆಳೆಗಳಾದ ರಾಗಿ, ನವಣೆ, ಹುರುಳಿ, ನೆಲಗಡಲೆ ಮತ್ತು ನೀರಾವರಿ ಬೆಳೆಗಳಾದ ಸಜ್ಜೆ, ತೊಗರಿ, ಭತ್ತ ಬೆಳೆಗಳಿಗೆ ಆ. 16 ಕೊನೆಯ ದಿನವಾಗಿದೆ. ಈ ಯೋಜನೆಯ ಲಾಭ ಪಡೆಯಲು ರೈತರು ನೋಂದಣಿಗಾಗಿ ಫ್ರೂಟ್ಸ್ ತಂತ್ರಾಂಶದಲ್ಲಿ ಹೊಂದಿದ ಎಫ್‌ಐಡಿ ಸಂಖ್ಯೆ ಹಾಗೂ ತಮ್ಮ ಬ್ಯಾಂಕ್ ಖಾತೆಯನ್ನು ಆಧಾರ್ ಜತೆಗೆ ಎನ್‌ಪಿಸಿಐ ಸೀಡಿಂಗ್ ಮಾಡಿಸಿರಬೇಕು. ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿ, ಸಾಮಾನ್ಯ ಸೇವಾ ಕೇಂದ್ರ ಹಾಗೂ ಗ್ರಾಮ ಪಂಚಾಯತಿಗಳಲ್ಲಿ ಹೊಸದಾಗಿ ಕಾರ್ಯನಿರ್ವಹಿ ಸುತ್ತಿರುವ ಗ್ರಾಮಒನ್ ಸೇವಾ ಕೇಂದ್ರಗಳಿಗೆ ಭೇಟಿ ನೀಡಿ ನೋಂದಣಿ ಮಾಡಿಸಿಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಪ್ರೌಢಶಾಲೆ ಸಂಸತ್ ಅಸ್ತಿತ್ವಕ್ಕೆ

ಹೂವಿನಹಡಗಲಿ : ಶಾಲೆಯ ಶೈಕ್ಷಣಿಕ ಪ್ರಗತಿಗೆ ನೂತನ ಮಂತ್ರಿ ಮಂಡಲ ಶ್ರಮಿಸಬೇಕು ಎಂದು ಸಂಚಾಲಕ ಆನಂದ್.ಜಿ ಹೇಳಿದರು. ಪಟ್ಟಣದ ತುಂಗಭದ್ರಾ ಪ್ರೌಢಶಾಲೆಯಲ್ಲಿ 2024-25 ನೇ ಸಾಲಿನ ಡಾ.ಬಿ.ಆರ್.ಅಂಬೇಡ್ಕರ್ ಮತದಾರರ ಸಾಕ್ಷರತಾ ಕ್ಲಬ್‌ನ ಶಾಲಾ ಸಂಸತ್ ನೂತನ ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಅವರು ಮಾತನಾಡಿದರು. ವಿವಿಧ ಇಲಾಖೆಗಳ ಸಚಿವರು ತಮಗೆ ನೀಡಿರುವ ಜವಾಬ್ದಾರಿ ಹೊತ್ತು ಕಾರ್ಯ ನಿರ್ವಹಿಸಿರಿ ಎಂದು ಹೇಳಿದರು. ನೂತನ ಮಂತ್ರಿ ಮಂಡಲ ಪ್ರಧಾನಿ ಎನ್.ಭೂಮಿಕಾ, ಉಪ ಪ್ರಧಾನಿ ಜಿ.ತಸ್ಮಿಯಾ, ಶಿಕ್ಷಣ ಮಂತ್ರಿ ಎಸ್.ಲಾವಣ್ಯ, ಆರೋಗ್ಯ ಮಂತ್ರಿ ಎಂ.ರವಿಕುಮಾರ್, ಕನ್ನಡ ಸಂಸ್ಕೃತಿ ಮಂತ್ರಿ ಬಿ.ಎಂ.ಅನುಷ್ಕಾ, ಆಹಾರ ಖಾತೆ ಮಂತ್ರಿ ಎಂ.ಆರ್.ಸಾಗರ್, ಕ್ರೀಡೆ ಸಚಿವೆ ಅಶ್ವಿನಿ ಕಟಗಿ, ಗ್ರಂಥಾಲಯ ಸಚಿವರಾದ ನಾಗರಾಜ ಹರಪನಹಳ್ಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆಯ ಎಸ್.ಮಾನಸ, ವಾರ್ತಾ ಸಚಿವೆ ಎಂ.ಆಯಿಷಾ, ತೋಟಗಾರಿಕೆ ಮಂತ್ರಿ ಎನ್.ರಾಜು, ಪ್ರವಾಸೋದ್ಯಮ ಮಂತ್ರಿ ಪೂಜಾರ ಪ್ರದೀಪ, ಪರಿಸರ ಸಚಿವೆ ಸೊಪ್ಪಿನ ಪೂರ್ವಿ, ಶಿಸ್ತು ಖಾತೆಯ ಮಂತ್ರಿ ಕಮಾಟಿ ಗೌತಮ್ ಪ್ರಮಾಣ ವಚನ ಸ್ವೀಕರಿಸಿದರು. ಸುರೇಶ , ಸ್ವಾಮಿನಾಥ ರಾಮಸ್ವಾಮಿ, ಬಸಪ್ಪ.ಕೆ, ಲಂಬಾಣ ಗಿಡ್ಡಾನಾಯ್ಕ್, ಗೀತಾ.ಪಿ.ಎಂ, ವೈ.ಜಯಮ್ಮ, ಪ್ರತಿಮಾ.ಎನ್, ರೇಖಾ.ಎಸ್, ಸಂಗಮೇಶ ಸುಂಕದ, ಪ್ರಸಾದ್, ರೇಖಾ.ಎಸ್, ಚಂದನಾ ಉಪಸ್ಥಿತರಿದ್ದರು.

75ನೇ ಅಮೃತ ಮಹೋತ್ಸವ

ಬಳ್ಳಾರಿ: ಸುಮಾರು 50 ವರ್ಷಗಳಿಂದ ಬಳ್ಳಾರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಸಂಸ್ಥೆಯು ನಿಜವಾಗಿಯೂ ಅಭಿನಂದನೆಗೆ ಅರ್ಹವಾಗಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಮೊಹಮ್ಮದ್ ಜುಬೇರ್ ತಿಳಿಸಿದರು. ನಗರದ ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾದ 75 ನೇ ಸಂಸ್ಥಾಪನ ದಿನಾಚರಣೆಯಾದ ಅಮೃತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಆರೋಗ್ಯ ಸೇವೆಯನ್ನು ಇಂದಿಗೂ ಸೇವೆಯಾಗಿ ಕಡಿಮೆ ಖರ್ಚಿನಲ್ಲಿ ಕೊಡುತ್ತಿರುವ ಎಫ್‌ಪಿಎಐ ಸಂಸ್ಥೆಯನ್ನು ನೋಡಿ ಸಾಕಷ್ಟು ಖುಷಿಯಾಯಿತು, ಈ ಸಂಸ್ಥೆಯ ಸ್ವಚ್ಛತೆ ಹಾಗೂ ಆರೋಗ್ಯಕರವಾದ ವಾತಾವರಣವನ್ನು ನೋಡಿದರೆ ಈ ಆಸ್ಪತ್ರೆ ಎಷ್ಟು ಚೆನ್ನಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಯುತ್ತದೆ ಎಂದು ಹೇಳಿದರು. ಸ್ತ್ರೀರೋಗ ತಜ್ಞ ಡಾ.ರುಕ್ಸಾರ್ ಸುಮಾರು 75 ಕ್ಕೂ ಹೆಚ್ಚಿನ ಮಹಿಳೆಯರಿಗೆ ಗರ್ಭಕಂಠದ ಕ್ಯಾನ್ಸರ್ ತಪಾಸಣೆಯನ್ನು ಮಾಡಿದರು. ಫ್ಯಾಮಿಲಿ ಪ್ಲಾನಿಂಗ್ ಬಳ್ಳಾರಿ ಶಾಖೆಯ ಅಧ್ಯಕ್ಷ ಟಿ.ಜಿ.ವಿಠ್ಠಲ್ ಮಾತನಾಡಿ, ಎಚ್ ಪಿ ವಿ ಲಸಿಕೆಯನ್ನು ಆಧುನಿಕ ತಂತ್ರಜ್ಞಾನವಾದ ಸ್ಮಾರ್ಟ್ ಸ್ಕೋಪನ್ನು ಬಳಸಿ ಗರ್ಭಕಂಠದ ಕ್ಯಾನ್ಸರ್ ಪತ್ತೆ ಮಾಡುವ ವೈದ್ಯಕೀಯ ಸೌಲಭ್ಯವು ಎಫ್ ಪಿ ಎ ಐ ನಲ್ಲಿ ಲಭ್ಯವಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ಅಶೋಕ್‌ಗೆ ಪಿಎಚ್.ಡಿ ಪದವಿ

ರಾಯಚೂರು: ನಗರದ ಪ್ರತಿಷ್ಠಿತ ಎಸ್.ಆರ್.ಪಿ.ಎಸ್ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕರಾದ ಅಶೋಕ್ ಉಮಚಗಿರವರಿಗೆ ದಾವಣಗೆರೆ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರ ವಿಷಯದಲ್ಲಿ ಗೌರವ ಡಾಕ್ಟರೇಟ್ ಪದವಿ ಪಡೆದುಕೊಂಡಿದ್ದಾರೆ. ದಾವಣಗೆರೆ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಆರ್.ಸೆಲ್ವಿರವರ ಮಾರ್ಗದರ್ಶನದಲ್ಲಿ ಮಂಡಿಸಿದ 'ಸೋಶಿಯೋ ಎಕನಾಮಿಕ್ ಸ್ಟೇಟಸ್ ಆಫ್ ಫಾರ್ಮರಸ್ ಇನ್ ಕಲ್ಯಾಣ ಕರ್ನಾಟಕ ರೀಜನ್ ಎ ಸ್ಟಡಿ' ಎಂಬ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪ್ರದಾನ ಮಾಡಲಾಗಿದೆ. ಅವರು ಮೂಲತಃ ಕೊಪ್ಪಳ ಜಿಲ್ಲೆಯ ಗುನ್ನಳ್ಳಿ ಗ್ರಾಮದ ಸಿದ್ದಮ್ಮ ಮತ್ತು ಈರಪ್ಪ ಉಮಚಗಿ ದಂಪತಿಗಳ ಪುತ್ರರಾಗಿದ್ದು ಕಳೆದ 1 ವರ್ಷದಿಂದ ಎಸ್.ಆರ್.ಪಿ.ಎಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆಸಲ್ಲಿಸುತ್ತಿದ್ದು ಇವರ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ ಸಿಬ್ಬಂದಿ ವರ್ಗ ಹರ್ಷವ್ಯಕ್ತಪಡಿಸಿದೆ.

ಇಂದು ದಲಿತ ಸಾಹಿತ್ಯ ಪರಿಷತ್ ಪದಗ್ರಹಣ

ಮಸ್ಕಿ: ಜು.28ರಂದು ಪಟ್ಟಣದ ಗಚ್ಚಿನಮಠದಲ್ಲಿ ದಲಿತ ಸಾಹಿತ್ಯ ಪರಿಷತ್ ತಾಲೂಕ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಲಿದೆ ಎಂದು ಪರಿಷತ್ತಿನ ಅಧ್ಯಕ್ಷ ನಾಗೇಶ ಜಂಗಮರಹಳ್ಳಿ ತಿಳಿಸಿದರು. ಪಟ್ಟಣದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕು ದಲಿತ ಸಾಹಿತ್ಯ ಪರಿಷತ್ತಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಭಾನುವಾರ ಸಂಜೆ 4 ಗಂಟೆಗೆ ನಡೆಯಲಿದೆ. ಕಾರ್ಯಕ್ರಮವನ್ನು ಶಾಸಕ ಆರ್.ಬಸನಗೌಡ ತುರ್ವಿಹಾಳ ಉದ್ಘಾಟಿಸಲಿದ್ದಾರೆ. ಗಚ್ಚಿನ ಹಿರೇಮಠದ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸುವರು. ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯ ಅಧ್ಯಕ್ಷ ಗದಗಿನ ಡಾ.ಅರ್ಜುನ ಗೊಳಸಂಗಿ ಪದಗ್ರಹಣ ಬೋಧನೆ ಮಾಡಲಿದ್ದಾರೆ. ಮಾಜಿ ಶಾಸಕ ಪ್ರತಾಪಗೌಡ ಪಾಟೀಲ, ದಲಿತ ಸಾಹಿತಿ ಸಿ.ದಾನಪ್ಪ ಮಸ್ಕಿ, ದಲಿತ ಸಾಹಿತ್ಯ ಪರಿಷತ್ತಿನ ರಾಯಚೂರು ಜಿಲ್ಲಾ ಘಟಕದ ಅಧ್ಯಕ್ಷ ತಾಯರಾಜ್ ಮರ್ಚಟ್ಹಾಳ ಪಾರ್ಥ ಸಿರವಾರ ಆಗಮಿಸುವರು ಎಂದು ತಿಳಿಸಿದರು.

ಇಂದು ಹಲವಡೆ ವಿದ್ಯುತ್ ವ್ಯತ್ಯಯ

ರಾಯಚೂರು: 110/33ಕೆವಿ ಎಪಿಎಮ್ ಸಿ ಯಾರ್ಡ್ ವಿದ್ಯುತ್ ಉಪ ಕೇಂದ್ರದಲ್ಲಿ ಪರಿವರ್ತಕ ಕಾಮಗಾರಿ ಕೈಗೊಳ್ಳಲಾಗಿದೆ. ಈ ಪ್ರಯುಕ್ತ 2024ರ ಜು.28ರ ಬೆಳಗ್ಗೆ 10ರಿಂದ ಸಂಜೆ 5ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಇಂಡಸ್ಟ್ರೀಯಲ್ ಫೀಡರ್-1, ಇಂಡಸ್ಟ್ರೀಯಲ್ ಫೀಡರ್-2, ಇಂಡಸ್ಟ್ರೀಯಲ್ ಫೀಡರ್-3, ಮಂಚಲಾಪುರ ರಸ್ತೆ, ಬೈಪಾಸ್ ರಸ್ತೆಯಲ್ಲಿರುವ ಇಂಡಸ್ಟ್ರೀಯಲ್ ಏರಿಯಾ, ಶಾಂತಿ ಫೀಡರ್: ಯರಮರಸ್ ಇಂಡಸ್ಟ್ರೀಯಲ್ ಏರಿಯಾ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ರಾಯಚೂರು ನಗರ ಉಪ ವಿಭಾಗ-2ರ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ

ಕೊಪ್ಪಳ: ನಗರದ ದಿಡ್ಡಿಕೇರಿಯಲ್ಲಿನ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಪದವಿ ಪೂರ್ವ ಕಾಲೇಜಿನಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ ಖಾಲಿ ಇರುವ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ, ಕನ್ನಡ, ಆಂಗ್ಲ ಹಾಗೂ ಉರ್ದು ವಿಷಯ ಉಪನ್ಯಾಸಕರ ಹುದ್ದೆ ಖಾಲಿ ಇವೆ. ಅರ್ಜಿ ಸಲ್ಲಿಸಲು ಆ. 1 ಕೊನೆ ದಿನ. ಮಾಹಿತಿಗಾಗಿ ಮೊ.ಸಂ. 9900617290ಕ್ಕೆ ಸಂಪರ್ಕಿಸಬಹುದು.

ವಿ+ ಸೋಮವಾರ

ರಾಜ್ಯಕ್ಕೆ ವಿಶೇಷ ಅನುದಾನ ನೀಡದ ಎನ್‌ಡಿಎ ಸರಕಾರ | ಕೊಪ್ಪಳದಲ್ಲಿ ಚೆಂಬು ಹಿಡಿದು ಆಕ್ರೋಶ

ಕೇಂದ್ರ ಸರಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಕೊಪ್ಪಳ: ಕೇಂದ್ರ ಸರಕಾರ ತನ್ನ ಬಜೆಟ್ ನಲ್ಲಿ ರಾಜ್ಯಕ್ಕೆ ಯಾವುದೇ ವಿಶೇಷ ಅನುದಾನ ನೀಡಿಲ್ಲ. ಬದಲಾಗಿ ಹೆಚ್ಚಿನ ತೆರಿಗೆ ಹೊರೆ ಹಾಕಿದೆ ಎಂದು ಆರೋಪಿಸಿ, ನಗರದ ಅಶೋಕ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ಪ್ರತಿಭಟಿಸಿದರು.

> ಕೇಂದ್ರಕ್ಕೆ ರಾಜ್ಯದಿಂದ ಹೆಚ್ಚು ತೆರಿಗೆ ಹೋಗುತ್ತದೆ. ಹಾಗಾಗಿ ನ್ಯಾಯಯುತವಾಗಿ ರಾಜ್ಯದ ಅಭಿವೃದ್ಧಿಗೆ ಅನುದಾನ ಕೊಡಬೇಕು ಎಂದು ರಾಜ್ಯದ ಸಂಸದರು, ಸಿಎಂ ಸಿದ್ದರಾಮಯ್ಯ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಗೆ ಬಜೆಟಿಗೂ ಮೊದಲೇ ಮನವಿ ಮಾಡಿದ್ದೆವು.. ಆದರೂ ರಾಜ್ಯವನ್ನು ಕಡೆಗಣಿಸಿ, ತಮ್ಮ ಕುರ್ಚಿಗಾಗಿ ಆಂಧ್ರಕ್ಕೆ ಹೆಚ್ಚು ಅನುದಾನ ನೀಡುತ್ತಿದ್ದಾರೆ. ಇದು ಖಂಡನೀಯ. ಲೋಕಸಭೆಯ ಒಳಗಡೆ ಮತ್ತು ಹೊರಗಡೆ ಹೋರಾಟ ಮಾಡುತ್ತೇವೆ.
> – ರಾಜಶೇಖರ ಹಿಟ್ನಾಳ, ಸಂಸದ

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಮರೇಗೌಡ ಬಯ್ಯಾಪುರ, ಸಂಸದ ರಾಜಶೇಖರ ಹಿಟ್ನಾಳ ನೇತೃತ್ವದಲ್ಲಿ ಅಶೋಕ ವೃತ್ತದಲ್ಲಿ ಜಮಾಯಿಸಿದ ಕಾಂಗ್ರೆಸ್ ಪಡೆ ಕೇಂದ್ರದ ವಿರುದ್ಧ ಘೋಷಣೆ ಕೂಗಿತು. ಕೈಯಲ್ಲಿ ಚೊಂಬು ಹಿಡಿದು ಪ್ರದರ್ಶಿಸಿದ ಕಾಂಗ್ರೆಸ್ ಕಾರ್ಯಕರ್ತರು, ಕೇಂದ್ರ ರಾಜ್ಯಕ್ಕೆ ಚೊಂಬು ಮಾತ್ರ ನೀಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರದ ಬಿಜೆಪಿ ಸರಕಾರ ಮತ್ತು ಬಿಜೆಪಿ ನಾಯಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಸರಕಾರದ ಧೋರಣೆಯನ್ನು ಖಂಡಸದ ರಾಜ್ಯದ ಸಂಸದರ ವಿರುದ್ಧವೂ ಪ್ರತಿಭಟನಾಕಾರರು ಅಸಮಾಧಾನ ಹೊರ ಹಾಕಿದರು.

ಕೇಂದ್ರ ಸರಕಾರ ತನ್ನ ಬಜೆಟ್ ನಲ್ಲಿ ರಾಜ್ಯಕ್ಕೆ ಅನ್ಯಾಯ ಮಾಡಿದೆ ಎಂದು ಆರೋಪಿಸಿ, ಕೊಪ್ಪಳದ ಅಶೋಕ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ಪ್ರತಿಭಟಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಅಮರೇಗೌಡ ಭಯ್ಯಾಪೂರ ಮಾತಮಾಡಿ, ಬಜೆಟ್ ಮಂಡನೆಗೂ ಮೊದಲು ಪ್ರಧಾನಿ ಮೋದಿ ಮೇಲೆ ಹೆಚ್ಚು ನಿರೀಕ್ಷೆ ಇಟ್ಟುಕೊಂಡಿದ್ದೆವು. ಏಕೆಂದರೆ ರಾಜ್ಯದಲ್ಲಿ ಕಾಂಗ್ರೆಸ್ ಇದ್ದರೂ, ಬಿಜೆಪಿಗೆ ಹೆಚ್ಚು ಸ್ಥಾನ ಬಂದಿವೆ. ಭದ್ರಾ ಯೋಜನೆ ಅನುದಾನ ಮುಂದುವರೆಸಬೇಕಿತ್ತು. ಕೃಷ್ಣ ಮೇಲ್ದಂಡೆ ಯೋಜನೆಗೂ ಅನುದಾನ ನೀಡಬೇಕಿತ್ತು ಎಲ್ಲವೂ ಹುಸಿಯಾಗಿವೆ. ಸಂಸದ ಕೆ.ರಾಜಶೇಖರ ಹಿಟ್ನಾಳ್ ಮಾತನಾಡಿ, ಒಟ್ಟು 32 ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿ ಮಾಡಬೇಕು ಎಂದು ಪ್ರಸ್ತಾವನೆ ಇತ್ತು. ಈವರೆಗೂ ಕೇಂದ್ರ ಸರಕಾರ ಲಕ್ಷ್ಯ ವಹಿಸಿಲ್ಲ. ಇದರಿಂದ ಸಂಚಾರ ದಟ್ಟಣೆ ಹೆಚ್ಚಾಗಿದೆ. ಅಪಘಾತಗಳು ಹೆಚ್ಚುತ್ತಿವೆ. ಸಾರ್ವಭೌಮ ತ್ವದ ನಡುವಳಿಕೆಯಿಂದ ಕೇಂದ್ರದಲ್ಲಿ ಸೀಟುಗಳು ಕಡಿಮೆ ಆಗಿವೆ. ಸಾರ್ವಭೌಮತ್ವದ ಹಿನ್ನಲೆಯಲ್ಲಿ ಜನರು ತಿರಸ್ಕರಿಸಿದ್ದು, ಇದಕ್ಕೆ ಬೆಂಬಲ ನೀಡಿದ ಬಿಹಾರ ಮತ್ತು ಆಂಧ್ರಪ್ರದೇಶಕ್ಕೆ ಹೆಚ್ಚು ಅನುದಾನ ನೀಡಿದ್ದಾರೆ. ಮಹಾರಾಷ್ಟ್ರ ಬಿಟ್ಟರೆ ಹೆಚ್ಚು ಜಿಎಸ್ಟಿ ನೀಡಿದ ನಮಗೆ ಅನ್ಯಾಯವಾಗಿದೆ ಎಂದರು. ಭದ್ರಾ ಯೋಜನೆ ಘೋಷಿಸಿದ್ದಕ್ಕೆ ಅನುದಾನವಿಲ್ಲ. ಏಮ್ಸ್ ಬಗ್ಗೆ ವರ್ಷಗಟ್ಟಲೇ ಹೋರಾಟ ಮಾಡಿದರೂ ನೀಡುತ್ತಿಲ್ಲ. ಬಿಜೆಪಿಯ 19 ಜನ ಆಯ್ಕೆಯಾಗಿದ್ದಾರೆ. 5 ಜನ ಮಂತ್ರಿಗಳಿದ್ದು, ಈ ಪೈಕಿ ನಿರ್ಮಲಾ ಸೀತಾರಾಮನ್ ಇದ್ದರೂ, ರಾಜ್ಯವನ್ನು ಕಡೆಗಣಿಸಲಾಗಿದೆ. ಈ ತಾರತಮ್ಯ ಧೋರಣೆ ಖಂಡನೀಯ ಎಂದು ಮಾಜಿ ಸಂಸದ ಸಂಗಣ್ಣ ಕರಡಿ ಆಗ್ರಹಿಸಿದರು. ಶಾಸಕ ಕೆ.ರಾಘವೇಂದ್ರ ಹಿಟ್ನಾಳ್, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಮಾಲತಿ ನಾಯಕ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಾರಡ್ಡಿ ಗಲಿಬಿ, ಕಾಟನ್ ಪಾಷಾ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ಬಾಲಚಂದ್ರನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೃಷ್ಣ ಇಟ್ಟಂಗಿ, ಎಸ್ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಗಾಳೆಪ್ಪ ಪೂಜಾರ, ಮಲ್ಲು ಪೂಜಾರ, ಕಿಶೋರಿ ಬೂದನೂರು, ಜ್ಯೋತಿ ಗೊಂಡಬಾಳ, ಸವಿತಾ ಗೋರಂಟ್ಲಿ ಇದ್ದರು.

ಕಾಂಗ್ರೆಸ್ ಸರಕಾರ ಸುಭದ್ರ: ಸಂಸದ ರಾಘವೇಂದ್ರ ಹಿಟ್ನಾಳ್

ಕೊಪ್ಪಳ: ಬಿಜೆಪಿಯವರಿಗೆ ಮಾತನಾಡಲು ವಿಷಯಗಳಿಲ್ಲ. ಹಾಗಾಗಿ ಮುಡಾದಲ್ಲಿ ಹಗರಣ ಆಗಿದೆ ಎಂದು ಮೈಸೂರಿಗೆ ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ಸಂಸದ ಕೆ.ರಾಜಶೇಖರ ಹಿಟ್ನಾಳ್ ಲೇವಡಿ ಮಾಡಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿ, ಬಿಜೆಪಿಯವರು ರಾಜ್ಯ ಸರಕಾರ ಬದಲಾಗುತ್ತದೆ ಎಂದು ಪದೇ ಪದೇ ಹೇಳುತ್ತಿರುತ್ತಾರೆ. ಈ ಮೂಲಕ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ಆದರೆ ಕಾಂಗ್ರೆಸ್ ಸರಕಾರ ಸುಭದ್ರವಾಗಿದೆ. ತನ್ನ 5 ವರ್ಷದ ಆಡಳಿತ ಅವಧಿ ಮುಗಿಸುತ್ತದೆ ಎಂದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಮರೇಗೌಡ ಬಯ್ಯಾಪುರ ಮಾತನಾಡಿ, ಬಿಜೆಪಿಯವರು ನಮ್ಮನ್ನೇ ನಕಲು ಮಾಡುತ್ತಿದ್ದಾರೆ. ಬೆಂಗಳೂರಿನಿಂದ ಬಳ್ಳಾರಿವರೆಗೆ ಪಾದಯಾತ್ರೆ ಮಾಡಿ, ಬಿಜೆಪಿ ಸರಕಾರ ತೆಗೆಯುವುದರ ಜತೆಗೆ ಅವರನ್ನೆಲ್ಲ ಜೈಲಿಗೆ ಕಳುಹಿಸಿದ್ದೇವೆ. ಅದನ್ನು ಬಿಜೆಪಿಯವರು ಮಾಡಲು ಹೊರಟಿದ್ದಾರೆ. ಇದರಲ್ಲಿ ಬಿಜೆಪಿಗರು ಯಶಸ್ವಿಯಾಗುವುದಿಲ್ಲ. ಬಿಜೆಪಿಯವರು ಸರಕಾರ ಬಿದ್ದು ಹೋಗುತ್ತದೆ ಎಂದು ಕನಸು ಕಾಣಬೇಕಷ್ಟೇ. ವಿಜಯೇಂದ್ರ ಕೇಂದ್ರ ಸರಕಾರದ ದುಡ್ಡು ತಂದು ಖರೀದಿ ಮಾಡಬೇಕು ಎಂದುಕೊಂಡಿದ್ದಾರೆ. ಹಿಂದೆ ಓರ್ವ ಶಾಸಕ ಖರೀದಿ ಮಾಡಿದ್ದ. ಆತ ಎದ್ದು ಬರಲಾಗಿಲ್ಲ. ಎರಡು ಬಾರಿ ಸೋತು, ಮನೆ ಸೇರಿದ್ದಾನೆ. ಅದೇ ರೀತಿಯಾಗುತ್ತದೆ ಎಂದರು. ಮಾಜಿ ಸಂಸದ ಸಂಗಣ್ಣ ಕರಡಿ ಮಾತನಾಡಿ, ಮುಡಾ ಹಗರಣ ಕುರಿತು ತನಿಖಾ ಆಯೋಗ ರಚಿಸಲಾಗಿದೆ. ತನಿಖಾ ವರದಿ ಹೊರಬಂದ ಮೇಲೆ, ಅದರಲ್ಲಿ ಅನ್ಯಾಯ ಆಗಿದ್ದರೇ, ಆ ವರದಿ ಹಿಡಿದು ಹೋರಾಟ ಮಾಡಲಿ. ಆದರೆ ತನಿಖೆ ನಡೆಯುತ್ತಿರುವಾಗ ಹೋರಾಟ ಮಾಡಿದರೆ ಏನು ಅರ್ಥ. ವಾಲ್ಮೀಕಿ ಹಗರಣದಲ್ಲಿ ಅಧಿಕಾರಗಳು ಶಾಮೀಲಾಗಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯನವರು ಹೇಳುತ್ತಿದ್ದಾರೆ. ಇದರ ತನಿಖೆ ಪ್ರಗತಿಯಲ್ಲಿದೆ. ಈ ವರದಿ ಬಂದ ಮೇಲೆ ಮಾತನಾಡಬೇಕು ಎಂದರು.

ಕೇಂದ್ರ ಬಜೆಟ್ ತಾರತಮ್ಯದಿಂದ ಕೂಡಿದೆ

ರಾಯಚೂರು: ಕೇಂದ್ರ ಸರಕಾರ ಬಜೆಟ್ ರೈತ ಕೃಷಿ ಕಾರ್ಮಿಕರನ್ನು ಕಡೆಗಣಿಸುವ ಜತೆಗೆ ತಾರತಮ್ಯದಿಂದ ಕೂಡಿದೆ ಎಂದು ಸರ್ವೋದಯ ಪಕ್ಷದ ರಾಜ್ಯಾಧ್ಯಕ್ಷ ಚಾಮರಸ ಮಾಲಿ ಪಾಟೀಲ್ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್ ದೇಶದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿಲ್ಲ, ಕರ್ನಾಟಕ ರಾಜ್ಯವನ್ನು ನಿರ್ಲಕ್ಷಿಸಿದಂತೆ ಜಿಲ್ಲೆಗೂ ನಿರೀಕ್ಷಿತ ಏಮ್ಸ್ ಮಂಜೂರಾತಿಗೂ ಸ್ಪಂದಿಸದೆ ಹೋಗಿದೆ.

ವಿಶಾಲವಾದ ಕೃಷಿ ವಲಯವನ್ನು ಉತ್ತೇಜಿಸದೇ ಕೇವಲ ಕಾರ್ಪೊರೇಟ ವ್ಯವಸ್ಥೆ ಬಲಪಡಿಸಲು ಮುಂದಾಗಿರುವ ಸರಕಾರದ ಸರ್ವತೋಮುಖ ಅಭಿವೃದ್ಧಿಯನ್ನು ನಿರೀಕ್ಷಿಸಲಾಗುವುದಿಲ್ಲ ಹಾಗೇಯೆ ರೈತರು ಸಾಲು ಸಾಲು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ಎರಡು ಸರಕಾರಗಳು ಕಾರಣ ಹುಡುಕುವ ಪ್ರಯತ್ನ ಮಾಡಿಲ್ಲ. ಕಾಂಗ್ರೆಸ್ ಸರಕಾರ ಅಧಿಕಾರ ಬಂದು ವರ್ಷದ ನಂತರ ಬಿಜೆಪಿ ಹಗರಣದ ತನಿಖೆ ಮಾಡುವುದಾಗಿ ಹೇಳುತ್ತಿದೆ. ತಮ್ಮ ಅಕ್ರಮ ಬಯಲಾಗಿದ್ದರಿಂದ ತನಿಖೆ ನಡೆಸುವುದಾಗಿ ಹೇಳುತ್ತಿದೆ.

ರಾಜಕೀಯ ದ್ವೇಷಕ್ಕಾಗಿ ಕಾಂಗ್ರೆಸ್, ಬಿಜೆಪಿ ಪಕ್ಷದವರು ಪರವಿರೋಧ ಆರೋಪಗಳಿಗೆ ಸೀಮಿತವಾಗಿ ಅಭಿವದ್ಧಿಯನ್ನೇ ಮರೆತಿದ್ದಾರೆ ಎಂದರು. ಸಂಯುಕ್ತ ಕಿಸಾನ್ ಮೋರ್ಚಾ ನೇತೃತ್ವದಲ್ಲಿ 540 ಸಂಘಟನೆಗಳು ಚರ್ಚೆ ನಡೆಸಿದ್ದು ಘಟಪ್ರಭಾದಲ್ಲಿ ನಡೆದಿರುವ ಎರಡು ದಿನ ಚರ್ಚೆಯಲ್ಲಿ ಪರ್ಯಾಯ ರಾಜಕಾರಣ ಕುರಿತು ನಿರ್ಧಾರಕ್ಕೆ ಬರಲಾಗುತ್ತಿದೆ ಎಂದರು.

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸರ್ವೋದಯ ಪಕ್ಷದ ರಾಜ್ಯಾಧ್ಯಕ್ಷ ಚಾಮರಸ ಮಾಲಿ ಪಾಟೀಲ್ ಮಾತನಾಡಿದರು

> ಸಂಸದರುಗಳಿಗೆ ರೈತರು, ಕಾರ್ಮಿಕರು, ಮಹಿಳೆಯರ ಬಗೆಗೆ ಕಾಳಜಿಯೇ ಇಲ್ಲ.ಸರಕಾರಗಳ ಮೇಲೆ ಒತ್ತಡ ಹಾಕುವ ಪ್ರಯತ್ನಗಳೇ ಮಾಡುವುದಿಲ್ಲ ಎಂದು ದೂರಿದರು. ರಾಜ್ಯ ಸರಕಾರವೂ ಸಹ ರೈತರ ಪರ ಕಾಳಜಿ ಹೊಂದಿಲ್ಲ. ವಿಧಾನ ಮಂಡಲದ ಅಧಿವೇಶನ 8 ದಿನ ನಡೆಸಿದರೂ ಹಗರಣಗಳ ಕುರಿತು ಪರ ವಿರೋಧ ಹೇಳಿಕೆಗಳಲ್ಲಿ ಕಾಲ ಕಳೆದಿದ್ದಾರೆ.
> -ಚಾಮರಸ ಮಾಲಿ ಪಾಟೀಲ್, ಸರ್ವೋದಯ ಪಕ್ಷದ ರಾಜ್ಯಾಧ್ಯಕ್ಷ

ಈ ಸಂದರ್ಭದಲ್ಲಿ ಸರ್ವೋದಯ ಪಕ್ಷದ ನೂತನ ಜಿಲ್ಲಾಧ್ಯಕ್ಷ ಜಾನವೆಸ್ಲಿ, ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಪ್ರಭಾಕರ ಪಾಟೀಲ್ ಇಂಗಳದಾಳ ಉಪಸ್ಥಿತರಿದ್ದರು.

ಕುಡಿವ ನೀರಿನ ಲ್ಯಾಬ್‌ಗೆ ಕೇಂದ್ರ ತಂಡ

ರಾಯಚೂರು: ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಿಲ್ಲಾ ಕುಡಿಯುವ ನೀರಿನ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಕ್ಕೆ ಕೇಂದ್ರ ಸರಕಾರದ ಒಎಎಂ ಕೇಂದ್ರ ತಂಡದ ಜಗಜಿತ್ ಸಿಂಗ್ ಸೌದಿ, ದೇವೇಶ್ ಕುಮಾರ್ ಭಾರಧ್ವಾಜ್ ಅವರು ಭೇಟಿ ನೀಡಿ, ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಪರೀಕ್ಷೆ ಮಾಡುತ್ತಿರುವ ಕುರಿತು ಪರಿಶೀಲನೆ ಮಾಡಿದರು.

ಪ್ರಸ್ತುತ ದಿನಗಳಲ್ಲಿ ಕಲುಷಿತ ನೀರಿನ ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಕುರಿತು ಗ್ರಾಮೀಣ ಪ್ರದೇಶದ ಜನರಲ್ಲಿ ಜಾಗೃತಿ ಮೂಡಿಸುವ ಬಗ್ಗೆ ಕೈಗೊಂಡಿರುವ ಕ್ರಮಗಳ ಮಾಹಿತಿ ಪಡೆದರು. ಅಲ್ಲದೆ ಗ್ರಾಮ ನೀರು ನೈರ್ಮಲ್ಯ ಸಮಿತಿಯ ರಚನೆ ಮತ್ತು ಕಾರ್ಯ ಚಟುವಟಿಕೆಗಳ ಪ್ರಗತಿ ಮಾಹಿತಿ ಪಡೆದರು.

ಕುಡಿಯುವ ನೀರಿನ ಗುಣಮಟ್ಟದ ಕುರಿತು ಎಫ್.ಟಿ.ಕೆ ಬಳಕೆ ಕುರಿತು ಪ್ರಾಯೋಗಿಕವಾಗಿ ಪರೀಕ್ಷೆ ಮಾಡಿದರು. ಮನೆ ಮನೆಗೆ ಕಾರ್ಯಾತ್ಮಕ ನಳ, ವೈಯಕ್ತಿಕ ಶೌಚಾಲಯ, ಶಾಲಾ, ಅಂಗನವಾಡಿ - ಶೌಚಾಲಯ ಶುಚಿತ್ವದ ಅವಶ್ಯಕತೆ ಕುರಿತು ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯ ಪಾಲಕ ಅಭಿಯಂತರರಾದ ವಿನೋದ್ ಕುಮಾರ್ ಗುಪ್ತಾ, ಜಿಲ್ಲಾ ಯೋಜನಾ ವ್ಯವಸ್ಥಾಪಕರಾದ ಬಸವರಾಜ ಗಲಗಿನ್ , ಗುಣಮಟ್ಟ ವ್ಯವಸ್ಥಾಪಕ ಸಾದಿಕ್, ಜಿಲ್ಲಾ ಎಮ್.ಐ.ಎಸ್ ಮಹಮ್ಮದ್ ಖಾನ್, ಐ.ಎಸ್.ಆರ್.ಎ ತಂಡದವರು, ಹಿರಿಯ ವಿಶ್ಲೇಷಕಿ ಸುಮಿತ್ರಾ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಅಧಿಕಾರಿಗಳು ಉಪಸ್ಥಿತರಿದ್ದರು.

ಸಹಕಾರಿ ಸಂಘ ಏಳ್ಗೆಗೆ ಸಹಕಾರ ಅಗತ್ಯ

ಮಸ್ಕಿ: ಸಹಕಾರಿ ಸೌಹಾರ್ದ ಪತ್ತಿನ ಸಂಘದ ಪ್ರಗತಿಗೆ ಸರ್ವ ಸದಸ್ಯರು ಸಹಕರಿಸಬೇಕೆಂದು ತುಳಸಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಭರತಶೇಠ್ ಅವರು ಹೇಳಿದರು. ಪಟ್ಟಣದ ತುಳಸಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಸಭಾಂಗಣದಲ್ಲಿ ನಡೆದ ದ್ವಿತೀಯ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘದ ಸದಸ್ಯರಿಗೆ ಅಗತ್ಯ ಸಮಯದಲ್ಲಿ ಸಾಲ ಸೌಲಭ್ಯ ನೀಡಲಾಗವುದು, ಸಂಘದ ಏಳ್ಗೆಗೆ ಎಲ್ಲಾರು ಕೈ ಜೋಡಿಸಬೇಕು, ಈ ವರ್ಷದಲ್ಲಿ ಸಂಘವು 2,71,299 ರು.ಲಾಭಗಳಿಸಿದೆ ಎಂದರು. ನಂತರ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಕೋರಿ ಅವರು ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರಗಳನ್ನು ಮಂಡಿಸಿದರು.

2023-24 ನೇ ಸಾಲಿನಲ್ಲಿ ಬ್ಯಾಂಕ್‌ನಲ್ಲಿ ಉತ್ತಮ ವ್ಯವಹಾರ ನಡೆಸಿದ ಸದಸ್ಯರಿಗೆ ಸಭೆಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಉಪಾಧ್ಯಕ್ಷ ಬಸವರಾಜ ಬುಕ್ಕಣ್ಣ, ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

ಮೂಲ ಸೌಕರ್ಯ ಕಲ್ಪಿಸಲು ರಾಜ್ಯ ಸರಕಾರದ ನಿರ್ಲಕ್ಷ್ಯ

ಮಂತ್ರಾಲಯದಲ್ಲಿ ಕರ್ನಾಟಕದ ಛತ್ರ ಬಂದ್

ರಾಯಚೂರು: ಕರ್ನಾಟಕ ಸರಕಾರದ ಮಂತ್ರಾಲಯದಲ್ಲಿ ನಿರ್ಮಿಸಿರುವ ಛತ್ರಕ್ಕೆ (ವಸತಿ ಗೃಹ) ಸರಕಾರದ ಅನುದಾನದ ಕುಂಠಿತ ಹಿನ್ನೆಲೆಯಲ್ಲಿ ಕುಡಿವ ನೀರು ಸೇರಿ ಇತರ ಮೂಲ ಸೌಲಭ್ಯಗಳನ್ನು ಕಲ್ಪಿಸಲು ನಿರ್ಲಕ್ಷ್ಯವಹಿಸಿದ ಹಿನ್ನೆಲೆ ಕಳೆದ ಮೂರು ತಿಂಗಳಿಂದ ಛತ್ರದ ಬಾಗಿಲು ಮುಚ್ಚಿದೆ.

> ಮುಜರಾಯಿ ಇಲಾಖೆಯ ಎರಡು ಛತ್ರಗಳಲ್ಲಿ ಒಂದು ಛತ್ರವನ್ನು ನೀರಿನ ಕೊರತೆ, ಬಾಗಿಲು ಕಿಟಕಿಗಳ ಸ್ಥಿತಿಲತೆ ವ್ಯವಸ್ಥೆ, ಹಳೆಯ ಕಟ್ಟಡ ಸೇರಿದಂತೆ ಮೂಲ ಸೌಕರ್ಯದ ಕೊರತೆಯಿಂದಾಗಿ ಈಗಾಗಲೇ ಮುಚ್ಚಲಾಗಿದ್ದು. ಇನ್ನೊಂದು ಐವತ್ತು ಕೊಠಡಿಗಳನ್ನು ಒಳಗೊಂಡ ಕಟ್ಟಡದಲ್ಲಿ ಕೇವಲ 40 ಕೊಠಡಿಗಳು ಮಾತ್ರ ಉಪಯೋಗಕ್ಕೆ ಯೋಗ್ಯವಾಗಿದ್ದು, ಇನ್ನುಳಿದ 10 ಕೋಣೆಗಳಲ್ಲಿ ಶೌಚಾಲಯ ತುಂಬಿ ದುರ್ವಾಸನೆ, ಬಾಗಿಲು ಕಿಟಕಿಗಳ ಸ್ಥಿತಿಲತೆ ವ್ಯವಸ್ಥೆ ಇದ್ದು ಕೇವಲ 40 ಕೋಣೆಯಲ್ಲಿ ಬರುವ ಲಕ್ಷಾಧಿ ಶ್ರೀ ರಾಘವೇಂದ್ರ ಸ್ವಾಮಿಯ ಭಕ್ತರನ್ನು ಸರಕಾರ ನಿರ್ಲಕ್ಷಿಸುತಿದೆ.
> -ಕ್ಷೇತ್ರಕ್ಕೆ ಬಂದ ಭಕ್ತರ ಮಾತು

ನೆರೆಯ ಆಂಧ್ರ ಪ್ರದೇಶದಲ್ಲಿರುವ ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠಕ್ಕೆ ಕರ್ನಾಟಕದಿಂದ ಪ್ರತಿ ವರ್ಷ ಲಕ್ಷಾಂತರ ಭಕ್ತರು ಭೇಟಿ ನೀಡುತ್ತಾರೆ. ಆದರೆ ಕರ್ನಾಟಕ ಸರಕಾರದ ವತಿಯಿಂದ ಈ ಹಿಂದೆ ನಿರ್ಮಿಸಲಾಗಿದ್ದ ಛತ್ರದ ಸ್ಥಿತಿ ಶೋಚನೀಯವಾಗಿದೆ. ಇಲ್ಲಿ ಮೂಲ ಸೌಕರ್ಯಗಳ ಕೊರತೆಯಿಂದಾಗಿ ಮೂರು ತಿಂಗಳಿನಿಂದ ವಸತಿ ಗೃಹ ಬಂದ್ ಆಗಿದೆ.

ಛತ್ರದ ಹಳೆಯ ಕಟ್ಟಡದಲ್ಲಿ 40 ಹಾಗೂ ಹೊಸ ಕಟ್ಟಡದಲ್ಲಿ 50 ಸುಸ್ಥಿತಿಯಲ್ಲಿರುವ ಕೊಠಡಿಗಳಿವೆ. ಭಕ್ತರ ಬೇಡಿಕೆಗೆ ತಕ್ಕಂತೆ ಎಸಿ, ಸಾಮಾನ್ಯ ಮಾದರಿಯ ಕೊಠಡಿಗಳಿವೆ. ಆದರೆ, ಛತ್ರಕ್ಕೆ ಕಳೆದ ಬೇಸಿಗೆ ವೇಳೆ ಎದುರಾದ ನೀರಿನ ಸಮಸ್ಯೆ ಈಗಲೂ ಮುಂದುವರಿದಿದೆ. ಮಂತ್ರಾಲಯಕ್ಕೆ ತೆರಳುವ ರಾಜ್ಯದ ಭಕ್ತರು, ಸದ್ಯ ಶ್ರೀಮಠದ ಒಡೆತನದಲ್ಲಿರುವ ವಸತಿ ಗೃಹಗಳು ಹಾಗೂ ಖಾಸಗಿ ಲಾಡ್ಜ್‌ಗಳನ್ನೆ ವಸತಿಗಾಗಿ ನೆಚ್ಚಬೇಕಿದೆ.

ಸಮಸ್ಯೆ ಬಗೆಹರಿಸಿ ಭಕ್ತರಿಗೆ ವ್ಯವಸ್ಥೆ ಕಲ್ಪಿಸಿ

ನೂತನ (50)ಐವತ್ತು ಕೊಠಡಿಯ ಕಟ್ಟಡದ ಕಾಮಗಾರಿಯ ಆರೋಪ ಹಿನ್ನೆಲೆಯಲ್ಲಿ ಮುಜರಾಯಿ ಇಲಾಖೆಯ ಸಚಿವರು ನೂತನ ಕಟ್ಟಡದ ಕಾಮಗಾರಿಯನ್ನು ಲೋಕಾಯುಕ್ತಗೆ ದೂರು ನೀಡಿದ ಹಿನ್ನೆಲೆಯಲ್ಲಿ ಅನುದಾನ ವಿಳಂಬವಾಗುತ್ತಿದೆ. ಸರಕಾರ ಅನುದಾನ ನೀಡಿದ ತಕ್ಷಣವೇ ಕ್ಷೇತ್ರದ ಎರಡು ಛತ್ರಗಳ ಸಮಸ್ಯೆಗಳನ್ನು ಬಗೆಹರಿಸಿ ಭಕ್ತರಿಗೆ ವ್ಯವಸ್ಥೆ ಕಲ್ಪಿಸಲಾಗುವುದಾಗಿ ಛತ್ರದ ವ್ಯವಸ್ಥಾಪಕಿ ತ್ರಿವೇಣಿ ತಿಳಿಸಿದ್ದಾರೆ.

ಕೇಂದ್ರ ತಂಡದಿಂದ ಜೆಜೆಎಂ ಪರಿಶೀಲನೆ

ಮುದಗಲ್: ಪಟ್ಟಣ ಸಮೀಪದ ಆಮದಿಹಾಳ ಗ್ರಾಮ ಪಂಚಾಯತ್ ಕಚೇರಿಗೆ ಕೇಂದ್ರ ತಂಡದ ಅಧಿಕಾರಿಗಳಾದ ಜಗತ್ ಸಿಂಗ್ ಸೌದಿ, ದೇವೇಶ್ ಕುಮಾರ್ ಭಾರದ್ವಾಜ್ ಭೇಟಿ ನೀಡಿ ಜಲಜೀವನ್ ಮಿಷನ್ ಹಾಗೂ ಶೌಚಾಲಯ, ಘನ ತ್ಯಾಜ್ಯ ವಿಲೇವಾರಿ ಘಟಕವನ್ನು ಪರಿಶೀಲನೆ ಮಾಡಿದರು.

ಆಮದಿಹಾಳ, ಮರಿಯಮ್ಮನಹಳ್ಳಿ, ಕೋಮಲಾಪುರ ಗ್ರಾಮಕ್ಕೆ ಭೇಟಿ ನೀಡಿದರು. ಸ್ವಚ್ಛ ಭಾರತ ಮಿಷನ್ ಅನುಷ್ಠಾನ, ನೀರು ನೈರ್ಮಲ್ಯ ಸಮಿತಿ ರಚನೆ ಮತ್ತು ಕಾರ್ಯ ಚಟುವಟಿಕೆ ಮಾಹಿತಿ, ಕುಡಿಯುವ ನೀರಿನ ಗುಣಮಟ್ಟ, ಸ್ಥಳೀಯ ನೀರು ನಿರ್ವಹಣೆ ಸಮಿತಿಯಿಂದ ಕಿಟ್ ಮೂಲಕ ನೀರು ಪರಿಶೀಲಿಸಿದರು. ಮನೆ ಮನೆಗೆ ಕಾರ್ಯಾತ್ಮಕ ನಳ, ವೈಯಕ್ತಿಕ ಶೌಚಾಲಯ, ಅಂಗನವಾಡಿ ಶೌಚಾಲಯ ರಚನೆ ಕುರಿತು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬಳಿ ಮಾಹಿತಿ ಪಡೆದರು.

ಈ ವೇಳೆ ಜಿಲ್ಲಾ ಪಂಚಾಯತಿ ಯೋಜನಾಧಿಕಾರಿ ಪ್ರಕಾಶ ವಡ್ಡರ ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ ಯಾದವ್, ಸಹಾಯಕ ನಿರ್ದೇಶಕರಾದ ಮಂಜುನಾಥ್ ಜಾವೂರ್, ವೆಂಕಟೇಶ ದೇಸಾಯಿ.

ಆಮದಿಹಾಳ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶಾರದಾ ಪತ್ತಾರ, ಕಾರ್ಯದರ್ಶಿ ಮಹಾದೇವಪ್ಪ, ಅಧ್ಯಕ್ಷ ಶಶಿಧರ, ಉಪಾಧ್ಯಕ್ಷೆ ಸಂಗಮ್ಮ ಅಂದಪ್ಪ, ಸರ್ವ ಸದಸ್ಯರು ಉಪಸ್ಥಿತರಿದ್ದರು.

ಇಂದು ಜಿಲ್ಲೆಗೆ ಸಚಿವ ಡಾ.ಶರಣ್ ಪ್ರಕಾಶ್

ರಾಯಚೂರು: ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ ಹಾಗೂ ಜೀವನೋಪಾಯ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣ್ ಪ್ರಕಾಶ್ ಪಾಟೀಲ್ ಅವರು ಜು.28ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಜು.28ರ ಬೆಳಿಗ್ಗೆ 9ಗಂಟೆಗೆ ಕಲಬುರಗಿಯಿಂದ ನಿರ್ಗಮಿಸಿ ಬೆಳಗ್ಗೆ 11ಗಂಟೆಗೆ ರಾಯಚೂರು ಜಿಲ್ಲೆಗೆ ಆಗಮಿಸಿ, ನಗರದ ಸಮಾಜ ಕಲ್ಯಾಣ ಇಲಾಖೆ ಕಚೇರಿಯ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನ್ ರಾಮ್ ಸಮುದಾಯ ಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಜಿಲ್ಲಾ ಘಟಕದ ವತಿಯಿಂದ ಹಮಿಕೊಳ್ಳಲಾದ ಜಿಲ್ಲಾ ಮಟ್ಟದ ಪತ್ರಿಕಾ ದಿನಾಚರಣೆ ಮತ್ತು ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಾರ್ಯಕ್ರಮದ ನಂತರ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಗರಸಭೆಯ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ 03ಗಂಟೆಗೆ ರಾಯಚೂರಿನಿಂದ ರಸ್ತೆ ಮೂಲಕ ಕಲಬುರಗಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಉಮಾಶ್ರೀ} ವಿಪ ಸದಸ್ಯೆ

ಬಿಹಾರ್ ಮತ್ತು ಆಂಧ್ರಪ್ರದೇಶಕ್ಕೆ ಹೆಚ್ಚಿನ ಅನುದಾನವನ್ನು ನೀಡಿ ಇತರ ರಾಜ್ಯಗಳಿಗೆ ಕೇಂದ್ರ ಸರಕಾರ ಚೊಂಬು ನೀಡಿದೆ. ರಾಜ್ಯದಿಂದ ಆಯ್ಕೆಯಾಗಿರುವ ಬಿಜೆಪಿಯ 17 ಸಂಸದರು, ಸಚಿವರಾದವರು ತಮ್ಮ ಸ್ಥಾನವನ್ನು ರಾಜ್ಯದ ಅಭಿವೃದ್ಧಿಗೆ ಬಳಸದೆ ಕೇವಲ ರಾಜಕಾರಣ ಮಾಡುವುದಕ್ಕಾಗಿ ಬಳಸುತ್ತಿದ್ದಾರೆ. ರಾಜ್ಯದಿಂದ ಆಯ್ಕೆಯಾಗಿರುವ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ರಾಜ್ಯದ ಋಣ ತೀರಿಸುವ ಕೆಲಸ ಮಾಡದೆ ಜನತೆಗೆ ವಂಚನೆ ಮಾಡಿದ್ದಾರೆ.

ಯುಕೆಪಿ ಯೋಜನೆ ಕಾಲುವೆಗಳಿಗೆ ನೀರು

ರಾಯಚೂರು: ಕೃಷ್ಣ ಮೇಲ್ದಂಡೆ ಯೋಜನೆಯ ಅಚ್ಚುಕಟ್ಟು ಪ್ರದೇಶದ 2024 – 25ನೇ ಸಾಲಿನ ಮುಂಗಾರು ಹಂಗಾಮಿಗಾಗಿ ಅಬಕಾರಿ ಸಚಿವರು, ಬಾಗಲಕೋಟೆ ಜಿಲ್ಲಾಉಸ್ತುವಾರಿ ಸಚಿವರು ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆ ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷ ಆರ್.ಬಿ.ತಿಮ್ಮಾಪುರ, ಅವರು 2024ರ ಜು.16ರಂದು ಬೆಂಗಳೂರಿನ ವಿಕಾಸ ಸೌಧದಲ್ಲಿ ಜರುಗಿದ ಸಭೆಯಲ್ಲಿ ಎಲ್ಲಾ ಅಧಿಕಾರಿ ಸದಸ್ಯರು ಹಾಗೂ ವಿಶೇಷ ಆಹ್ವಾನಿತರೊಂದಿಗೆ ಸುಧೀರ್ಘವಾಗಿ ಚರ್ಚಿಸಿದ ನಂತರ ಎರಡು ಜಲಾಶಯಗಳಲ್ಲಿ ಮುಂಗಾರು ಹಂಗಾಮಿಗೆ ಅಗತ್ಯವಿರುವ ನೀರು ಸಂಗ್ರಹವಾಗಿರುವುದರಿಂದ ಕೃಷ್ಣಾ ಮೇಲ್ದಂಡೆ ಯೋಜನೆ ಎಲ್ಲಾ ಕಾಲುವೆಗಳಲ್ಲಿ ಜು.17ರ ಬೆಳಗ್ಗೆಯಿಂದಲೇ ನೀರು ಹರಿಸಲು ಸರ್ವಾನುಮತದಿಂದ ನಿರ್ಧಾರಿಸಲಾಗಿದೆ ಎಂದು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಅಧೀಕ್ಷಕ ಅಭಿಯಂತರರಾದ ಲಕ್ಷಣ ಎಂ.ನಾಯಕ ತಿಳಿಸಿದ್ದಾರೆ. ಈ ವೃತ್ತದಡಿಯ ಅಚ್ಚುಕಟ್ಟು ಪ್ರದೇಶದ ಕಾಲುವೆ ಜಾಲದ ಗೇಟುಗಳಿಗೆ ಹಾನಿ ಮಾಡುವುದು, ಎಸ್ಕೇಪ್ ಗಳ ಮೂಲಕ ಹಳ್ಳಕ್ಕೆ ನೀರು ಹರಿಸುವುದು, ಸೈಫನ್‌ಗಳ ಮೂಲಕ ಮಣ್ಣಿನ ಏರಿಯಲ್ಲಿ ನೀರನ್ನು ಎತ್ತಿಕೊಳ್ಳುವುದು. ಕಾಲುವೆ ಜಾಲದಲ್ಲಿ ಪಂಪ್ ಗಳ ಮೂಲಕ ನೀರನ್ನು ಎತ್ತುವುದನ್ನು ನಿರ್ಭಂದಿಸಲಾಗಿದೆ. ಈ ರೀತಿ ಅನಧೀಕೃತವಾಗಿ ನೀರು ಹರಿಸಿಕೊಂಡರೆ ಸಂಬಂಧಿಸಿದವರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.

ಕುಷ್ಟರೋಗ ನಿರ್ಮೂಲನೆಗೆ ಸಹಕಾರ ಅಗತ್ಯ

ಕೊಪ್ಪಳ: ಜಿಲ್ಲೆಯಲ್ಲಿ ಜು.29 ರಿಂದ ಆ.14 ರವರೆಗೆ ನಡೆಯಲಿರುವ ಕುಷ್ಠರೋಗ ಪತ್ತೆ ಅಭಿಯಾನ.2024ದಲ್ಲಿ ಅಧಿಕಾರಿಗಳು ಹಾಗೂ ಸಾರ್ವಜನಿಕರು ಸಕ್ರಿಯವಾಗಿ ಪಾಲ್ಗೊಂಡು ಉದ್ದೇಶ ಸಾಕಾರಗೊಳಿಸಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

> ಕುಷ್ಠರೋಗದ ಲಕ್ಷಣಗಳು ಹಾಗೂ ಸರಕಾರದಿಂದ ಸಿಗುವ ಉಚಿತ ಚಿಕಿತ್ಸೆಯ ಕುರಿತು ಜಿಲ್ಲಾದ್ಯಂತ ಜಾಗೃತಿ ಮೂಡಿಸಬೇಕು. ರೋಗ ಬಂದ ಮೇಲೆ ಚಿಕಿತ್ಸೆ ಪಡೆಯುವುದಕ್ಕಿಂತ ಮುನ್ನೆಚ್ಚರಿಕೆಯಾಗಿ ಆರಂಭಿಕ ಲಕ್ಷಣಗಳಿಗೆ ಸೂಕ್ತ ತಪಾಸಣೆ ಮೂಲಕ ಅಗತ್ಯ ಚಿಕಿತ್ಸೆ ಮಾಡಿಸಿಕೊಳ್ಳುವಂತೆ ತಿಳುವಳಿಕೆ ಮೂಡಿಸಬೇಕು ಎಂದು ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.
> -ನಲಿನ್ ಅತುಲ್, ಜಿಲ್ಲಾಧಿಕಾರಿ

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕುಷ್ಠರೋಗ ಪತ್ತೆ ಅಭಿಯಾನದ ಪೂರ್ವ ಸಿದ್ದತೆ ಸಭೆಯ ಅಧ್ಯಕ್ಷತೆ ಮಾತನಾಡಿದರು.

ಅಭಿಯಾನ ಆರಂಭಕ್ಕೆ ಒಂದೆರಡು ದಿನದ ಮುನ್ನ ಕಾರ್ಯಕ್ರಮದ ಕುರಿತು ಗ್ರಾಮಗಳಲ್ಲಿ ಧ್ವನಿವರ್ಧಕಗಳ ಮೂಲಕ, ತ್ಯಾಜ್ಯ ಸಂಗ್ರಹ ಮತ್ತು ವಿಲೇವಾರಿ ವಾಹನಗಳ ಮೂಲಕ ಗ್ರಾಮಗಳಲ್ಲಿ ಜಾಗೃತಿ ಮೂಡಿಸಬೇಕು. ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರು, ಮುಖಂಡರು ಭಾಗವಹಿಸುವಂತೆ ಕ್ರಮ ವಹಿಸಬೇಕು. ನಗರ ಪ್ರದೇಶಗಳಲ್ಲಿ ವಾರ್ಡ್ ಸದಸ್ಯರಿಗೆ ಮುಂಚಿತವಾಗಿ ಮಾಹಿತಿ ನೀಡಿ,

ಕೊಪ್ಪಳದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕುಷ್ಠರೋಗ ಪತ್ತೆ ಅಭಿಯಾನದ ಪೂರ್ವ ಸಿದ್ಧತೆ ಸಭೆ ಜಿಲ್ಲಾಧಿಕಾರಿ ನಲಿನ್ ಅತುಲ್ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕ್ರಮ ವಹಿಸಬೇಕು. ಶಾಲೆಗಳಲ್ಲಿ ಪ್ರಾರ್ಥನೆ ಸಮಯದಲ್ಲಿ ಕುಷ್ಠರೋಗದ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕು.

ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ ಅಧಿಕಾರಿ ಡಾ.ಎಚ್.ಪ್ರಕಾಶ ಮಾತನಾಡಿ, ಕುಷ್ಠರೋಗ ಪತ್ತೆ ಹಚ್ಚುವ ಅಭಿಯಾನದಲ್ಲಿ ಕ್ಷೇತ್ರ ಭೇಟಿ ಸಂದರ್ಭದಲ್ಲಿ ಶಂಕಿತ ಕುಷ್ಠರೋಗ ಪ್ರಕರಣಗಳ ಗುರುತಿಸಲು ಆಶಾ ಕಾರ್ಯಕರ್ತೆಯರಿಗೆ ಸಲಹೆ ನೀಡಲಾಗಿದೆ. 2023-24 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 161 ಪ್ರಕರಣ ಪತ್ತೆಯಾಗಿವೆ. ಪ್ರಕರಣಗಳನ್ನು ಪತ್ತೆ ಹಚ್ಚಿ, ಮುಂದೆ ಉಂಟಾಗಬಹುದಾದ ವೈಪಲ್ಯತೆ, ಗಂಭೀರ ಸಮಸ್ಯೆ ತಡೆಯುವುದು, ಸಮುದಾಯಗಳಿಗೆ ರೋಗ ಹರಡದಂತೆ ತಡೆಯುವುದು ಅಭಿಯಾನದ ಮುಖ್ಯ ಉದ್ದೇಶ.

ಕೋಲಾಟ ತಂಡದಿಂದ ಗೆಜ್ಜೆ ಪೂಜೆ ಪ್ರದರ್ಶನ

ಮಾನ್ವಿ: ತಾಲೂಕಿನ ಬಸವಣ್ಣ ಕ್ಯಾಂಪಿನ ಶ್ರೀ ಬಸವೇಶ್ವರ ದೇವಸ್ಥಾನದ ಅವರಣದಲ್ಲಿ ಶ್ರೀ ಬಸವೇಶ್ವರ ಕೋಲಾಟ ತಂಡದ ವತಿಯಿಂದ ನಡೆದ ಗೆಜ್ಜೆ ಪೂಜೆ ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣನ ವಿಗ್ರಹಕ್ಕೆ ಪೂಜೆ ಸಲ್ಲಿಸಿದರು. ನೃತ್ಯ ಗುರು ಸತಿಷ ರಾಮಾನುಜನ್ ಮಾತನಾಡಿ, ನಮ್ಮ ಜನಪದ ನೃತ್ಯ ಪ್ರಕರಗಳಲ್ಲಿ ಸಾಮೂಹಿಕವಾಗಿ ಪ್ರದರ್ಶಿಸುವ ಜನಪದ ಕಲೆ ಕೋಲಾಟ ಪ್ರಮುಖವಾಗಿದ್ದು ಗ್ರಾಮಗಳಲ್ಲಿನ ಆಸಕ್ತರಿಗೆ ಹಾಗೂ ತಂಡಗಳಿಗೆ ನೃತ್ಯ ಹಾಗೂ ಕೋಲಾಟ ಕಲೆಯಲ್ಲಿ ತರಬೇತಿ ನೀಡಲಾಗುತ್ತದೆ ತರಬೇತಿ ಪಡೆದ ತಂಡಗಳು ತಮ್ಮ ಗ್ರಾಮಗಳಲ್ಲಿ ಗೆಜ್ಜೆ ಪೂಜೆ ನಡೆಸಿ ತಮ್ಮ ಕಲೆಯನ್ನು ಪ್ರದರ್ಶಿಸುತ್ತಾರೆ ನಂತರದ ದಿನಗಳಲ್ಲಿ ತಿರುಪತಿ ಹಾಗೂ ಮಂತ್ರಾಲಯಗಳಲ್ಲಿ ನಡೆಯುವ ಮಾಹೋತ್ಸವಗಳಲ್ಲಿ ಈ ತಂಡಗಳು ಪ್ರದರ್ಶನ ನೀಡುವ ಅವಕಾಶ ಪಡೆಯಲಿದ್ದಾರೆ ಎಂದು ತಿಳಿಸಿದರು. ತರಬೇತಿ ಪಡೆದ 30 ಕ್ಕೂ ಹೆಚ್ಚು ಕಲಾವಿದರು ಸಾಮೂಹಿಕವಾಗಿ ವಿವಿಧ ಭಕ್ತಿಗೀತೆಗಳಿಗೆ ಕೋಲಾಟ ನೃತ್ಯ ಪ್ರದರ್ಶನ ನೀಡಿದರು. ಮಂಡ್ಯದ ಭರತನಾಟ್ಯ ಕಲಾವಿದೆ ಭಾವನ ಭಾರತ ನಾಟ್ಯ ಪ್ರಕಾರದಲ್ಲಿ ನೃತ್ಯ ಪ್ರದರ್ಶನ ನೀಡಿದರು. ನೃತ್ಯ ಗುರು ಸತೀಶ ರಾಮಾನುಜನ್ ಹಾಗೂ ಮಂಡ್ಯದ ಭರತನಾಟ್ಯ ಕಲಾವಿದೆ ಭಾವನರನ್ನು ಗ್ರಾಮದ ಮುಖಂಡರು ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರಾದ ದೇವಳ್ಳ ರಾಮಕೃಷ್ಣ, ಮೇಕ ಸತ್ಯನಾರಾಯಣ, ದೇವಳ್ಳ ಅದಿನಾರಾಯಣ,ಸೂರ್ಯನಾರಾಯಣ,ನರೇಂದ್ರ,ರಾವ್, ಬಿ.ವಿ.ವಿ.ಸತ್ಯನಾರಾಯಣ,ರುದ್ರಮುರ್ತಿ ಭಾಗವಹಿಸಿದರು.

ಪದಕ ಪಟ್ಟಿ

	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	2	0	0	2
ಬೆಲ್ಜಿಯಂ	1	0	1	2
ಜಪಾನ್	1	0	1	2
ಕಜಕಸ್ತಾನ	1	0	1	2
ಆಸ್ಟ್ರೇಲಿಯಾ	1	0	0	1
ಭಾರತ	0	0	0	0

ಮೈಕ್ರೋ ಮಾಹಿತಿ



ಸಮಾಚಾರ ಸಣ್ಣದಲ್ಲ

ತಪ್ಪಾಯಿತು ಕ್ಷಮಿಸಿ

ಪ್ಯಾರಿಸ್: ಶುಕ್ರವಾರ ನಡೆದ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದ ಉದ್ಘಾಟನಾ ಕಾರ್ಯಕ್ರಮದಲ್ಲಿ ನಡೆದ ಅಚಾತುರ್ಯಕ್ಕೆ ವಿಶ್ವಕ್ರೀಡೆಯ ನಿರ್ವಾಹಕರು ಕ್ಷಮೆಯಾಚಿಸಿದ್ದಾರೆ. ಸೆನ್ ನದಿ ಮೇಲೆ ವಿವಿಧ ದೇಶಗಳ ವರ್ಣರಂಜಿತ ಕವಾಯತು ನಡೆದ ವೇಳೆ ಫ್ರೆಂಚ್ ವರ್ಣಮಾಲೆಯ ಕ್ರಮದಂತೆ ಆಯಾ ದೇಶಗಳು ಪಾಲ್ಗೊಂಡವು. ದಕ್ಷಿಣ ಕೊರಿಯಾದ ಕ್ರೀಡಾಪಟುಗಳು ತಮ್ಮ ದೇಶದ ಧ್ವಜ ಬೀಸುತ್ತಾ ದೋಣಿಯಲ್ಲಿ ಬಂದಾಗ ಆ ದೇಶವನ್ನು ಪರಿಚಯಿಸುವ ವೇಳೆ, ಡೆಮಾಕ್ರೆಟಿಕ್ ಪೀಪಲ್ಸ್ ಆಫ್ ಕೊರಿಯಾ ಎಂದು ಉದ್ಘೋಷಕರು ಹೇಳಿದರು. ಆದರೆ ಇದು ಉತ್ತರ ಕೊರಿಯಾದ ಅಧಿಕೃತ ಹೆಸರು. ರಿಪಬ್ಲಿಕ್ ಆಫ್ ಕೊರಿಯಾ ಎಂದರೆ ದಕ್ಷಿಣ ಕೊರಿಯಾ ಎಂದರ್ಥ. ಹೀಗಾಗಿ ಉದ್ಘಾಟನಾ ಪಂದ್ಯದಲ್ಲಿ ನಡೆದ ಈ ಅಚಾತುರ್ಯಕ್ಕೆ ದಕ್ಷಿಣ ಕೊರಿಯಾದಲ್ಲಿ ವ್ಯಾಪಕ ಟೀಕೆಗಳು ವ್ಯಕ್ತವಾಗಿವೆ.

ಕುದುರೆ ಏರಿದ ಬಿಲ್‌ಗೇಟ್ಸ್ ಅಳಿಯ

ಸೀನ್: ಕ್ರೀಡಾಕೂಟದ ಕುದುರೆ ಸವಾರಿ (ಈಕ್ವೆಸ್ಟ್ರಿಯನ್) ಸ್ಪರ್ಧೆಯಲ್ಲಿ ಮೈಕ್ರೋಸಾಫ್ಟ್ ಸ್ಥಾಪಕ ಬಿಲ್ ಗೇಟ್ಸ್ ಅವರ ಅಳಿಯ ನಾಯೆಲ್ ನಾಜರ್ ಪಾಲ್ಗೊಂಡಿದ್ದಾರೆ. ಈಜಿಪ್ಟ್ ದೇಶವನ್ನು ಪ್ರತಿನಿಧಿಸಿರುವ ನಾಜರ್, ಕುದುರೆ ಜಿಗಿತದ ವೈಯಕ್ತಿಕ ವಿಭಾಗದಲ್ಲಿ ಸ್ಪರ್ಧಿಸಿದ್ದಾರೆ. ಈಕ್ವೆಸ್ಟ್ರಿಯನ್‌ನಲ್ಲಿ ಮೂರು ವಿಭಾಗಗಳಿವೆ. ಆ. 5 ರಂದು ಈ ಸ್ಪರ್ಧೆ ನಡೆಯಲಿದೆ. ಈ ಹಿಂದೆಯೂ ನಾಯೆಲ್ ನಾಜರ್ 2020ರ ಟೋಕಿಯೋ ಒಲಿಂಪಿಕ್ಸ್ ಕ್ರೀಡಾಕೂಟದಲ್ಲೂ ಈಜಿಪ್ಟ್ ಪರವಾಗಿ ಸ್ಪರ್ಧಿಸಿದ್ದರು. ಈಜಿಪ್ಟ್ ಮೂಲದ ಅಮೆರಿಕನ್ ನಾಗರಿಕನಾಗಿರುವ ನಾಜರ್ ಕಳೆದ ಐದು ವರ್ಷಗಳಿಂದ ಕುದುರೆ ಸವಾರಿಯಲ್ಲಿ ಸಕ್ರಿಯರಾಗಿದ್ದಾರೆ. ನಾಜರ್ ತಂದೆ-ತಾಯಿ ಈಜಿಪ್ಟ್ ನಾಗರಿಕರಾಗಿರುವುದರಿಂದ ಒಲಿಂಪಿಕ್ಸ್‌ನಲ್ಲಿ ಆ ದೇಶದ ಪರ ಆಡುತ್ತಿದ್ದಾರೆ.

ಇಂದು ಕಣದಲ್ಲಿ

- ಪುರುಷರ ಸಿಂಗಲ್ಸ್ ಸ್ಕಲ್ಸ್
- 10 ಮೀ ಏರ್ ರೈಫಲ್ (ಮಹಿಳೆಯರ, ಪುರುಷರ ಅರ್ಹತೆ)
- 10ಮೀ ಏರ್ ರೈಫಲ್ (ಪುರುಷರ ಫೈನಲ್)
- 10ಮೀ ಏರ್ ಪಿಸ್ತೂಲ್ (ಮಹಿಳೆಯರ ಫೈನಲ್)
- ಬ್ಯಾಡ್ಮಿಂಟನ್ - ಪಿವಿ ಸಿಂಧು
- ಟೇಬಲ್ ಟೆನಿಸ್ - ಮಹಿಳೆಯರ, ಪುರುಷರ 64ನೇ ಸುತ್ತು
- ಟೇಬಲ್ ಟೆನಿಸ್ - ಮಹಿಳಾ ವಿಭಾಗ
- ಮಹಿಳೆಯರ 50 ಕೆಜಿ ಪಂದ್ಯ ಬಾಕ್ಸಿಂಗ್
- ಮಹಿಳಾ ತಂಡ- ಆರ್ಚರಿ



ಮೊದಲ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿದ ಬ್ಯಾಡ್ಮಿಂಟನ್ ಪಟು



7 ಮಂದಿ ವಿರುದ್ಧ ಶೂಟಿಂಗ್ ಫೈನಲ್‌ನಲ್ಲಿ ಭಾಕರ್ ಸೆಣಸಲಿದ್ದಾರೆ.

10 ಮೀಟರ್ ಏರ್ ಪಿಸ್ತೂಲ್‌ನಲ್ಲಿ ಭಾಕರ್ ಭರ್ಜರಿ ಪ್ರದರ್ಶನ

ಮನು ಭಾಕರ್ ಪ್ರಶಸ್ತಿ ಸುತ್ತಿಗೆ

ಪ್ಯಾರಿಸ್: ಒಲಿಂಪಿಕ್ಸ್ ಕ್ರೀಡಾಕೂಟದ ಶೂಟಿಂಗ್‌ನ ಅರ್ಹತಾ ಸುತ್ತಿನಲ್ಲಿ ಅದ್ಭುತ ಪ್ರದರ್ಶನ ನೀಡಿದ ಭಾರತದ ಗುರಿಕಾರ ಮನು ಭಾಕರ್, ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್‌ನ ಫೈನಲ್‌ಗೆ ಪ್ರವೇಶಿಸಿದ್ದು, ಪದಕದ ಭರವಸೆ ಮೂಡಿಸಿದ್ದಾರೆ. 45 ಕ್ರೀಡಾಪಟುಗಳಿರುವ ಈ ವಿಭಾಗದಲ್ಲಿ ಮನು 580-27 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು. ಶನಿವಾರ ನಡೆದ ಪಂದ್ಯದಲ್ಲಿ ಮನು,10-ಶಾಟ್ ಮೊದಲ ಸರಣಿಯಲ್ಲಿ ನೂರಕ್ಕೆ 97 ಅಂಕ ಪಡೆದು ಮುನ್ನಡೆ ಸಾಧಿಸಿದ್ದಾರೆ.

ಮೂರು ವರ್ಷಗಳ ಹಿಂದೆ ಪಿಸ್ತೂಲ್ ದೋಷದಿಂದಾಗಿ ಅಂತಿಮ ಸುತ್ತು ಪ್ರವೇಶಿಸಲು ವಿಫಲರಾಗಿದ್ದ ಮನು, ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಅದರಂತೆ ಹಂಗೇರಿಯ ವೆರೋನಿಕಾ ಮೇಜರು 582 ಅಂಕಗಳೊಂದಿಗೆ ಅಗ್ರಸ್ಥಾನಿಯಾಗಿ ಫೈನಲ್‌ಗೆ ಲಗ್ಗೆ ಇಟ್ಟರು. ಮೊದಲ ಸೀರಿಸ್‌ನಲ್ಲಿ 100ಕ್ಕೆ 97 ಅಂಕ ಕಲೆಹಾಕಿದ ಮನು, ಎರಡನೇ ಸೀರಿಸ್‌ನಲ್ಲಿ 97 ಅಂಕಗಳನ್ನು ಗಳಿಸಿದರು. ಈ ಅಮೋಘ ಪ್ರದರ್ಶನದ ಮೂಲಕ ಮನು, ಮೊದಲಾರ್ಧ ಮುಗಿಯುವ ವೇಳೆಗೆ 300ಕ್ಕೆ 292 ಅಂಕಗಳನ್ನು ಸಂಪಾದಿಸಿ, ಫೈನಲ್‌ಗೆ ತನ್ನ ಸ್ಥಾನ ಭದ್ರಪಡಿಸಿಕೊಂಡರು. ಮನು ಆರು ಸಿರೀಸ್‌ಗಳಲ್ಲಿ ಕ್ರಮವಾಗಿ 97, 97, 98, 96, 96 ಮತ್ತು 96 ಅಂಕ ಗಳಿಸಿದರು. ಆದರೆ ಭಾರತದ ಮತ್ತೊಬ್ಬ ಶೂಟರ್ ರಿದಮ್ ಸಾಂಗ್ವಾನ್ 573 ಅಂಕ ಗಳಿಸಿ 15ನೇ ಸ್ಥಾನ ಪಡೆದರು. ಇದರೊಂದಿಗೆ ಫೈನಲ್‌ಗೆ ಅರ್ಹತೆ ಪಡೆಯಲು ವಿಫಲರಾದರು. ಭಾರತೀಯ ಕಾಲಮಾನ ಭಾನುವಾರ ಸಂಜೆ 3.30ಕ್ಕೆ ಫೈನಲ್ ನಡೆಯಲಿದೆ. ಈಗ ನೀಡಿರುವುದಕ್ಕೆ ಸಮಾನ ವಾದ ಪ್ರದರ್ಶನ ನೀಡುವಲ್ಲಿ ಸಾಧ್ಯವಾದರೆ ಮನು ಅವರಿಗೆ ಪದಕ ಗೆಲ್ಲಲು ಸಾಧ್ಯವಾಗಲಿದೆ. ಇದೇ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ರಿದಮ್ ಸಾಂಗ್ವಾನ್, ಅಂತಿಮ ಸುತ್ತಿಗೆ ಪ್ರವೇಶಿಸುವಲ್ಲಿ ವಿಫಲರಾದರು. 573 ಅಂಕಗಳೊಂದಿಗೆ 15ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು

3ನೇ ಸ್ಥಾನದಲ್ಲಿ

ಅರ್ಹತಾ ಸುತ್ತಿನಲ್ಲಿ ಹಂಗೇರಿಯ ವೆರೋನಿಕಾ ಮೇಜರ್ ಅವರು ಒಟ್ಟು 588-22 ಅಂಕಗಳೊಂದಿಗೆ ಮೊದಲ ಸ್ಥಾನ ಪಡೆದರೆ, ಕೊರಿಯಾದ ಓಹ್ ಯೆ ಜಿನ್ 582-20 ನೊಂದಿಗೆ 2ನೇ ಸ್ಥಾನ ಪಡೆದರು. 580-27 ಅಂಕಗಳೊಂದಿಗೆ ಮನು 3ನೇ ಸ್ಥಾನದಲ್ಲಿದ್ದಾರೆ.

ಸೇನ್‌ಗೆ ಬಂಗಾರದ ಲಕ್ಷ್ಯ

ಪ್ಯಾರಿಸ್: ಇಲ್ಲಿ ನಡೆದ ಒಲಿಂಪಿಕ್ಸ್ ಕ್ರೀಡಾಕೂಟದ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಭಾರತದ ಷಟ್ಲರ್ ಲಕ್ಷ್ಯ ಸೇನ್ ಅವರು ಶುಭಾರಂಭ ಕಂಡಿದ್ದು, ಸೆಮಿಫೈನಲ್ ಪ್ರವೇಶಿಸಿದ್ದಾರೆ. ಇಲ್ಲಿ ನಡೆದ ಪುರುಷರ ಸಿಂಗಲ್ಸ್ ಟೂರ್ನಿಯ ಎಲ್ ಗುಂಪಿನ ಪಂದ್ಯದಲ್ಲಿ ಅವರು ಕೇವನ್ ಕೋರ್ಡನ್ ಅವರ ವಿರುದ್ಧ 2-0 ದಿಂದ ನೇರ ಸೆಟ್‌ಗಳಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ. ಜಿದ್ದಾಜಿದ್ದಿನ ಪಂದ್ಯದಲ್ಲಿ ಅವರು ಮೊದಲ ಸೆಟ್‌ನಲ್ಲಿ ಸೇನ್ ಅವರು ಗ್ವಾಟೆಮಾಲಾದ ಕೆವಿನ್ ಕಾರ್ಡನ್ ಅವರನ್ನು 21-8, 22-20ರಿಂದ ಸೋಲಿಸಿದರು. ಸೇನ್ ಮೊದಲ ಸೆಟ್‌ನಲ್ಲಿ ಕೇವಲ 14 ನಿಮಿಷಗಳಲ್ಲಿ 21-8 ರಿಂದ ಗೆದ್ದು ಶುಭಾರಂಭ ಮಾಡಿದರು. ಕಾರ್ಡನ್ ಮೊದಲ ಸುತ್ತಿನ ನಂತರ ಒಂದಿಷ್ಟು ಪ್ರತಿರೋಧ ತೋರಿದರು. ಎರಡನೇ ಸುತ್ತಿನಲ್ಲಿ ಸ್ಪಷ್ಟ ಮೇಲುಗೈ ಪಡೆದು ನಾಲ್ಕು ಅಂಕಗಳೊಂದಿಗೆ ಮುನ್ನಡೆದರು.

ಆದಾಗ್ಯೂ, ಸೇನ್ ಅವರು ಆರು ಅಂಕಗಳನ್ನು ಗಳಿಸುವ ಮೂಲಕ ಪಂದ್ಯವನ್ನು ಗೆದ್ದರು. ಲಕ್ಷ್ಯ ಸೇನ್ ಮುಂದಿನ ಜುಲೈ 29 ರಂದು ಬೆಲ್ಜಿಯಂನ ಜೂಲಿಯನ್ ಕರಾಗ್ಗಿ ವಿರುದ್ಧ ಆಡಲಿದ್ದಾರೆ.

ಶೂಟಿಂಗ್ ತ್ಯಜಿಸಲು ನಿರ್ಧರಿಸಿದ್ದ ಭಾಕರ್

ಪ್ಯಾರಿಸ್: ಕಳೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಶೂಟಿಂಗ್‌ನ 3 ವಿಭಾಗಗಳಲ್ಲಿ ಸ್ಪರ್ಧಿಸಿದ್ದ ಮನು, ಒಂದರಲ್ಲೂ ಫೈನಲ್ ಪ್ರವೇಶಿಸಲು ಸಾಧ್ಯವಾಗಿರಲಿಲ್ಲ. ಅವರ ಪದಕ ಗೆಲ್ಲುವ ಕನಸು ಭಗ್ನಗೊಂಡಿತ್ತು.

ತನ್ನ ಮೊದಲ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಲು ಸಾಧ್ಯ ವಾಗದ್ದಕ್ಕೆ ಶೂಟಿಂಗ್ ತ್ಯಜಿಸಲು ನಿರ್ಧರಿಸಿದ್ದರಂತೆ. ತನ್ನ ಮೊದಲ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಲು ಸಾಧ್ಯವಾಗದ್ದಕ್ಕೆ ಶೂಟಿಂಗ್ ತ್ಯಜಿಸಲು ನಿರ್ಧರಿಸಿದ್ದರಂತೆ.

ಪಂದ್ಯಗಳಿಗೆ ಮಳೆ ಅಡ್ಡಿ

ಪ್ಯಾರಿಸ್: ಮಳೆಯ ಕಾರಣ ಒಲಿಂಪಿಕ್ಸ್‌ನಲ್ಲಿ ಹಲವು ಸ್ಪರ್ಧೆಗಳಿಗೆ ಅಡಚಣೆಯಾಗಿದೆ. ಶನಿವಾರ ನಡೆಯಬೇಕಿದ್ದ ಟೆನಿಸ್ ಸ್ಪರ್ಧೆಗಳಿಗೂ ಸಮಸ್ಯೆಯಾಗಿದ್ದು, ಸ್ಪರ್ಧೆಗಳು ವಿಳಂಬವಾಗಿವೆ. ಚಾವಣಿಯ ಅಡಿಯಲ್ಲಿ ನಡೆಯುವ ಫಿಲಿಪ್ ಶಾಟಿಯೆ ಅಂಕಣ ಮತ್ತು ಸುಝೇನ್ ಲೆಂಗ್ಲೆನ್ ಅಂಕಣದಲ್ಲಿ ಸ್ಪರ್ಧೆಯು ಸಮಯಕ್ಕೆ ಪ್ರಾರಂಭ ವಾಯಿತು. ಆದರೆ, ಹೊರಾಂಗಣದಲ್ಲಿ ಸ್ಪರ್ಧೆಗಳು ವಿಳಂಬವಾದವು. ಐಫೆಲ್ ಗೋಪುರದ ಸಮೀಪ ಶನಿವಾರ ನಡೆದ ಬೀಚ್ ವಾಲಿಬಾಲ್ ಸ್ಪರ್ಧೆಗೂ ಮಳೆ ಅಡಚಣೆ ಉಂಟು ಮಾಡಿತು. ನಿಗದಿಯಂತೆ ಟ್ರಯಥ್ಲಾನ್ ಸ್ಪರ್ಧೆಗಳು ಮಂಗಳವಾರ ನಡೆಯಬಹುದು ಎಂಬ ವಿಶ್ವಾಸವನ್ನು ಸಂಘಟಕರು ವ್ಯಕ್ತಪಡಿಸಿದ್ದಾರೆ. ಭಾರತದ ಭೂಪಣ್ಣ ಹಾಗೂ ಬಾಲಾಜಿ ಆಡಬೇಕಿದ್ದ ಪಂದ್ಯವೂ ಮಳೆಯಿಂದಾಗಿ ಮುಂದೂಡಿಸಲಾಗಿದೆ.

ಮೊದಲ ಹಿಟ್‌ನಲ್ಲಿ ಪನ್ವರ್ ಭರ್ಜರಿ ಪ್ರದರ್ಶನ | ಕ್ವಾರ್ಟರ್‌ಗೆ ಮತ್ತೊಂದು ಅವಕಾಶ

ರೋಯಿಂಗ್: ಭಾರತಕ್ಕೆ 4ನೇ ಸ್ಥಾನ

ಪ್ಯಾರಿಸ್: ಮಹಾಕ್ರೀಡಾಕೂಟವು ಶನಿವಾರ ಚಾಲನೆಗೊಂಡಿದ್ದು, ಶುಕ್ರವಾರದ ಉದ್ಘಾಟನಾ ಸಮಾರಂಭ ವಿಜ್ರಂಭಣೆಯಿಂದ ನೆರವೇರಿತು. ಈ ಬಳಿಕ ಶನಿವಾರ ವಿವಿಧ ಸ್ಪರ್ಧೆಗಳು ನಡೆದವು. ಇಲ್ಲಿ ನಡೆದ ಒಲಿಂಪಿಕ್ ಕ್ರೀಡಾಕೂಟದ ಪುರುಷರ ಸಿಂಗಲ್ ಸ್ಕಲ್ ಈವೆಂಟ್‌ನ ಹೀಟ್ 1ರಲ್ಲಿ ಭಾರತದ ಏಕೈಕ ರೋವರ್‌ಪಟು ಬಲರಾಜ್ ಪನ್ವಾರ್ ಅವರು ನಾಲ್ಕನೇ ಸ್ಥಾನ ಗಳಿಸಿದ್ದು, ರಿಪಿಚೇಜ್‌ನಲ್ಲಿ ನಡೆಯಲಿರುವ ಮುಂದಿನ ಸುತ್ತಿನಲ್ಲಿ ಭಾಗವಹಿಸಲಿದ್ದಾರೆ. ಈ ಕ್ರೀಡಾಕೂಟದಲ್ಲಿ ಪ್ರತಿ ಹೀಟ್‌ನ ಅಗ್ರ ಮೂವರು ಆಟಗಾರರು ಕ್ವಾರ್ಟರ್‌ಫೈನಲ್‌ಗೆ ತಲುಪಿದರು.

ಪನ್ವರ್‌ಗೆ ಇನ್ನೊಂದು ಅವಕಾಶ: ಬಲರಾಜ್ ಪನ್ವಾರ್ ಹಿಂದಿಕ್ಕಿ ನ್ಯೂಜಿಲೆಂಡ್‌ನ ಥಾಮಸ್ ಮೆಕಿಂತೋಷ್ (6:55.92), ಸ್ಟೆಫಾನೋಸ್ ಆಂಟೊಸ್ಕೋಸ್ (7:01.79) ಮತ್ತು ಅಬ್ದೆಲ್ಲಲೆಕ್ ಎಲ್ಬಾನಾ (7:05.06) ಕ್ವಾರ್ಟರ್ ಫೈನಲ್‌ಗೆ ನೇರ ಅರ್ಹತೆ ಪಡೆದರು. ಪನ್ವಾರ್ 7:07.11 ಸಮಯದೊಂದಿಗೆ ನಾಲ್ಕನೇ ಸ್ಥಾನ ಪಡೆದರು. ಪ್ರತಿ ಹೀಟ್‌ನಲ್ಲಿ ಅಗ್ರ ಮೂವರು ಕ್ವಾರ್ಟರ್‌ಗಳು ನೇರ ಅರ್ಹತೆಯನ್ನು ಪಡೆಯುತ್ತಾರೆ. ಆದಾಗ್ಯೂ, ಭಾರತೀಯ ರೋವರ್‌ಗೆ ಸೆಮಿಫೈನಲ್ ಅಥವಾ ಫೈನಲ್‌ಗೆ ತಲುಪಲು ರೆಪಿಚೇಜ್‌ನಲ್ಲಿ ಇನ್ನೂ ಒಂದು ಅವಕಾಶವಿದೆ.

ಶೂಟಿಂಗ್‌ನಲ್ಲಿ 6ನೇ ಸ್ಥಾನ ಗಳಿಸಿದ ಭಾರತ 10 ಮೀಟರ್ ಏರ್ ರೈಫಲ್ ಮಿಶ್ರ ತಂಡ ಅರ್ಹತಾ ಹಂತದಲ್ಲಿ ಭಾರತದ ಶೂಟರ್‌ಗಳಿಗೆ ಹಿನ್ನಡೆಯಾಗಿದೆ. ಶೂಟಿಂಗ್‌ನಲ್ಲಿ ಭಾರತದ ದೊಡ್ಡ ತಂಡವೇ ಪಾರಿಸ್‌ಗೆ ತಲುಪಿದೆ. ಅರ್ಹತಾ ಸುತ್ತಿನಲ್ಲಿ ಎರಡು ಭಾರತೀಯ ಜೋಡಿಗಳು ಭಾಗವಹಿಸಿದ್ದರು. ರಮಿತಾ ಮತ್ತು ಅರ್ಜುನ್ ಬಾಬುಟಾ 628.7 ಅಂಕಗಳೊಂದಿಗೆ ಆರನೇ ಸ್ಥಾನ ಗಳಿಸಿದರೆ, ಎಲವೆನಿಲ್ ವಲರಿವನ್ ಮತ್ತು ಸಂದೀಪ್ ಸಿಂಗ್ 626.3 ಅಂಕಗಳೊಂದಿಗೆ 12ನೇ ಸ್ಥಾನ ಪಡೆದರು.

ಹೋರಾಡಿ ಸೋತ ರಮಿತಾ, ಅರ್ಜುನ್

ಆರಂಭದಲ್ಲಿ ರಮಿತಾ ಮತ್ತು ಅರ್ಜುನ್ ಜೋಡಿ ಭರವಸೆ ಮೂಡಿಸಿತ್ತು. ಮೂರು ಹೊಡೆತಗಳು ಉಳಿದಿರುವಂತೆಯೇ ಐದನೇ ಸ್ಥಾನವನ್ನು ಪಡೆಯಿತು. ಆದರೆ ಅಂತಿಮವಾಗಿ ಪದಕ ಸುತ್ತಿನ ಕಟ್-ಆಫ್‌ನಿಂದ 1.0 ಅಂಕ ಕಡಿಮೆಯಾಯಿತು. ಎರಡನೇ ಸರಣಿಯಲ್ಲಿ ಅರ್ಜುನ್ ಅಮೋಘ ಆರಂಭ ಮಾಡಿ 10.5, 10.6, 10.5, 10.9 ಅಂಕ ಗಳಿಸಿದರು. ಎರಡನೇ ಸರಣಿಯಲ್ಲಿ ರಮಿತಾ 10.2, 10.7, 10.3, 10.1 ಅಂಕ ಗಳಿಸಿದರು. ಇದರೊಂದಿಗೆ ಈ ಜೋಡಿ ಅಗ್ರ ಎಂಟರ ಘಟ್ಟ ತಲುಪಿತ್ತು. ಆದರೆ ಪದಕ ಸುತ್ತಿಗೆ ತಲುಪಲು ಅಗ್ರ 4ರಲ್ಲಿ ಸ್ಥಾನ ಪಡೆಯುವುದು ಅನಿವಾರ್ಯವಾಗಿದ್ದು, ಉತ್ತಮ ಆಟವಾಡಿದ್ದ ಈ ಜೋಡಿ ಪದಕ ಸುತ್ತಿಗೆ ಪ್ರವೇಶಿಸಲು ಸಾಧ್ಯವಾಗಲಿಲ್ಲ. ಚೀನಾ, ಕೊರಿಯಾ ಮತ್ತು ಕಜಕಿಸ್ತಾನ್ ತಂಡಗಳು ಅರ್ಹತಾ ಸುತ್ತಿನಲ್ಲಿ ಮೊದಲ ಮೂರು ಸ್ಥಾನಗಳಲ್ಲಿವೆ.

ಚಿನ್ನದಿಂದ ಚೀನಾ ಶುಭಾರಂಭ

ಪ್ಯಾರಿಸ್: ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಮೊದಲ ಚಿನ್ನ ಗೆದ್ದು ಚೀನಾ ಶುಭಾರಂಭ ಮಾಡಿದೆ. ಶೂಟಿಂಗ್‌ನ 10 ಮೀಟರ್ ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಚೀನಾದ ಸ್ಪರ್ಧಿಗಳು ಚಿನ್ನ ಗೆದ್ದ ಸಾಧನೆ ಮಾಡಿದ್ದಾರೆ. ಚೀನಾದ ಹುವಾಂಗ್ ಯುಟಿಂಗ್ ಮತ್ತು ಶೆಂಗ್ ಲಿಹಾವೊ ಜೋಡಿ ಚಿನ್ನದ ಪದಕ ಗೆದ್ದಿದ್ದಾರೆ. ಫೈನಲ್‌ನಲ್ಲಿ 16-12ರ ಅಂತರದಲ್ಲಿ ಚೀನಾದ ಜೋಡಿ ರಿಪಬ್ಲಿಕ್ ಆಫ್ ಕೊರಿಯಾ ವಿರುದ್ಧ ಜಯ ಗಳಿಸಿತು. ರಿಪಬ್ಲಿಕ್ ಆಫ್ ಕೊರಿಯಾದ ಕೆಯುಮ್ ಜಿ- ಹ್ಯೆಯಾನ್ ಮತ್ತು ಪಾರ್ಕ್ ಹಾ-ಜುನ್ ಜೋಡಿ ಬೆಳ್ಳಿ ಮತ್ತು ಕಜಕಸ್ತಾನದ ಅಲೆಕ್ಸಾಂಡ್ರಾ ಲೆ ಮತ್ತು ಇಸ್ಲಾಂ ಸತ್ಪಯೇವ್ ಜೋಡಿ ಕಂಚಿನ ಪದಕ ಗೆದ್ದಿದೆ. ಮೂರು ವರ್ಷಗಳ ಹಿಂದಿನ ಟೋಕಿಯೊ ಒಲಿಂಪಿಕ್ಸ್‌ನಲ್ಲೂ ಈ ವಿಭಾಗದಲ್ಲಿ ಚೀನಾ ದೇಶದ ಸ್ಪರ್ಧಿಗಳೇ ಚಿನ್ನದ ಪದಕ ಜಯಿಸಿದ್ದರು.

ಮೊದಲ ಪದಕ ಗೆದ್ದ ಕಜಕಸ್ತಾನ: ಕಜಕಸ್ತಾನ ಮೊದಲ ಪದಕ ಗೆದ್ದುಕೊಂಡಿದೆ. 10 ಮೀಟರ್ ಮಿಶ್ರ ಟೀಮ್ ಏರ್ ರೈಫಲ್ ಸ್ಪರ್ಧೆಯಲ್ಲಿ ಕಜಕಸ್ತಾನದ ಅಲೆಕ್ಸಾಂಡ್ರಾ ಲೆ ಮತ್ತು ಇಸ್ಲಾಂ ಸತ್ಪಯೇವ್ ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ಕಜಕಸ್ತಾನದ ಜೋಡಿ ಜರ್ಮನಿಯ ಮ್ಯಾಕ್ಸಿಮಿಲಿಯನ್ ಉಲ್ಬ್ರಿಚ್ ಮತ್ತು ಅನ್ನಾ ಜಾನ್ಸೆನ್ ವಿರುದ್ಧ 17-5ರ ಅಂತರದಿಂದ ಜಯ ಗಳಿಸಿತು.

ಹರ್ಮಿತ್ ಭರವಸೆ

ಪ್ಯಾರಿಸ್: ಒಲಿಂಪಿಕ್ಸ್ ಕ್ರೀಡಾಕೂಟದ ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ ಹರ್ಮೀತ್ ದೇಸಾಯಿ ಅವರು ಜೋರ್ಡಾನ್‌ನ ಜೈದ್ ಅಬೊ ಯಮನ್ ಅವರನ್ನು 11-7, 11-9, 11-5, 11-5 ಸೆಟ್‌ಗಳಿಂದ ಸೋಲಿಸಿದ್ದು, ಭಾರೀ ಮುನ್ನಡೆ ಸಾಧಿಸಿದ್ದಾರೆ. ಪಂದ್ಯ 30 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಮೊದಲನಿಂದಲೂ ಮುನ್ನಡೆ ಸಾಧಿಸಿದ್ದ ಅವರು, ಮೊದಲ ಸೆಟ್ ಗೆದ್ದರು. ಬಳಿಕ ಎರಡನೇ ಸೆಟ್‌ನಲ್ಲಿ ಜೈದ್ ಅಲ್ಪ ಪ್ರತಿರೋಧ ತೋರಿದರು. ಆದರೆ ಪುಟಿದೆದ್ದ ಹರ್ಮೀತ್ ಅವರು ಭರ್ಜರಿ ಗೆಲುವು ಸಾಧಿಸುವುದರೊಂದಿಗೆ ಪ್ರಧಾನ ಸುತ್ತಿಗೆ ಪ್ರವೇಶಿಸಿದ್ದಾರೆ. ಅವರು ಮುಂದಿನ 64ರ ಸುತ್ತಿನಲ್ಲಿ ವಿಶ್ವದ ನಂ.5 ರ ಫ್ರಾನ್ಸ್‌ನ ಫೆಲಿಕ್ಸ್ ಲೆಬ್ರುನ್ ಅವರನ್ನು ಎದುರಿಸಲಿದ್ದಾರೆ. ತನ್ನ ಚೊಚ್ಚಲ ಒಲಿಂಪಿಕ್ಸ್ ನಲ್ಲಿ ಕಾಣಿಸಿಕೊಂಡಿರುವ ಹರ್ಮೀತ್ ದೇಸಾಯಿ ಮೊದಲ ಸೆಟ್‌ನಲ್ಲಿ ಸರಳ ಗೆಲುವಿನ ನಂತರ, ಹರ್ಮೀತ್ ಅವರು 2ನೇ ಪಂದ್ಯದಲ್ಲಿ ನೇರ ಮುನ್ನಡೆ ಸಾಧಿಸಿದರು. ಮುಂದಿನ ಸೆಟ್‌ಗಳಲ್ಲೂ ಉತ್ತಮ ಆಟವಾಡಿದ ಅವರು ಗೆಲುವು ಸಾಧಿಸಿದರು.

ಸಾತ್ವಿಕ್ ಚಿರಾಗ್ ಜಯದ ಶುಭಾರಂಭ



ಪ್ಯಾರಿಸ್: ಭಾರತದ ಬ್ಯಾಡ್ಮಿಂಟನ್ ತಾರೆಗಳಾದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಜೋಡಿ ಪ್ಯಾರಿಸ್ ಒಲಿಂಪಿಕ್ಸ್ ಅಭಿಯಾನವನ್ನು ಭರ್ಜರಿ ಗೆಲುವಿನೊಂದಿಗೆ ಪ್ರಾರಂಭಿಸಿದ್ದಾರೆ. ಶನಿವಾರ ನಡೆದ ಪುರುಷರ ಡಬಲ್ಸ್ ಗುಂಪಿನ ಸಿ ಪಂದ್ಯದಲ್ಲಿ, ಏಷ್ಯನ್ ಕ್ರೀಡಾಕೂಟದ ಹಾಲಿ ಚಾಂಪಿಯನ್ ಆತಿಥೇಯ ರಾಷ್ಟ್ರದ ಲುಕಾಸ್ ಕಾರ್ವಿ ಮತ್ತು ರೊನಾನ್ ಲ್ಯಾಬರ್ ಅವರನ್ನು 46 ನಿಮಿಷಗಳಲ್ಲಿ 21-17, 21-14 ರಿಂದ ಸೋಲಿಸಿದರು. ತವರಿನ ಪ್ರೇಕ್ಷಕರ ಬೆಂಬಲದೊಂದಿಗೆ ಫ್ರೆಂಚ್ ಜೋಡಿ ತೀವ್ರವಾಗಿ ಹೋರಾಡಿತು, ಆದರೆ ಸಾತ್ವಿಕ್ ಸಾಯಿರಾಜ್ ಮತ್ತು ಚಿರಾಗ್ ಅಂತಿಮವಾಗಿ ಭರ್ಜರಿ ಗೆಲುವು ಸಾಧಿಸಿದ್ದು, ಮುಂದಿನ ಸುತ್ತಿಗೆ ಅರ್ಹತೆ ಪಡೆದಿದ್ದಾರೆ. ಭಾರತದ ಜೋಡಿ ಸೋಮವಾರ ಜರ್ಮನಿಯ ಮಾರ್ವಿನ್ ಸೀಡೆಲ್ ಮತ್ತು ಮಾರ್ಕ್ ಲ್ಯಾಮ್ಸ್‌ಫಸ್ ವಿರುದ್ಧ ಆಡಲಿದೆ.

28.07.2024 ಭಾನುವಾರ ವಿಶ್ವವಾಣಿ
ವಿರಾಮ
ಓದುವ ಲೋಕಕ್ಕೆ ಒದುವ ನಿಲ್ದಾಣ

ಉಳವರೆಯಲ್ಲಿ ಉಳಿದದ್ದೆಷ್ಟು?

ಅವೈಜ್ಞಾನಿಕವಾಗಿ ಗುಡ್ಡ ತರಿದು, ರಸ್ತೆ ನಿರ್ಮಿಸಿದ್ದರಿಂದಾಗಿ, ಭಾರಿ ಮಳೆ ಬಂದು, ಗುಡ್ಡ ಕುಸಿಯಿತು; ಅಂಕೋಲಾ ಸನಿಹದ ಶಿರೂರಿನ ಹತ್ತಕ್ಕೂ ಹೆಚ್ಚು ಜನರು ಮೃತರಾದರು. ನದಿಯ ಇನ್ನೊಂದು ದಡದಲ್ಲಿರುವ ಉಳವರೆ ಎಂಬ ಪುಟ್ಟ ಗ್ರಾಮದಲ್ಲಿ ಸರಿಸಮಾನ ಎನಿಸುವ ದುರಂತ ನಡೆದಿದೆ; ಗುಡ್ಡ ಕುಸಿದ ಸಂದರ್ಭದಲ್ಲೇ, ನದಿ ಉಕ್ಕಿ ಹರಿದು ಅಲ್ಲಿನ ಹಲವು ಮನೆಗಳನ್ನು ಕೊಚ್ಚಿಕೊಂಡು ಹೋಗಿದೆ. ಇನ್ನಷ್ಟು ಮನೆಗಳು ಹಾನಿಯಾಗಿವೆ. ಅಲ್ಲಿನ ಮುಗ್ಧ ಗ್ರಾಮೀಣ ಜನರಿಗೆ ಇದೊಂದು ಬೃಹತ್ ಆಘಾತ. ಅವರಿಗೆ ಬೇಕಿದೆ ಸರಕಾರದ ಸಹಾಯಹಸ್ತ.

» ಶಶಿ ಬೆಳ್ಳಾಯರು

ಅಲ್ಲಿ ಅನಾದಿ ಕಾಲದಿಂದ ಮೀನುಗಾರಿಕೆಯನ್ನೇ ನಂಬಿಕೊಂಡು ಜೀವನ ಸಾಗಿಸುತ್ತಿದ್ದ ಅಂಬಿಗ ಕುಟುಂಬಗಳು ವಾಸಿಸುತ್ತಿದ್ದವು. ಎದುರಿಗೆ ತಣ್ಣನೆ ಹರಿವ ಗಂಗಾವಳಿ ನದಿ ಮಳೆಗಾಲದಲ್ಲಿ ಭೋರ್ಗರೆದರೂ ಅಲ್ಲಿನ ಜನ ಭಯ ಪಡುತ್ತಿರಲಿಲ್ಲ. ನದಿಯೊಡಲನ್ನೇ ನಂಬಿಕೊಂಡು ಸಣ್ಣಪುಟ್ಟ ದೋಣಿಗಳಲ್ಲಿ ಮೀನು ಹಿಡಿದು ತಮ್ಮ ಸಂಸಾರ ಸಾಗಿಸುತ್ತಿದ್ದರು. ಕೂಡಿಡುವಷ್ಟು ಆಸ್ತಿ ಮಾಡದೇ ಹೋದರೂ ಕುಟುಂಬ ಸದಸ್ಯರ ಜೊತೆ ನೆಮ್ಮದಿಯ ಜೀವನಕ್ಕೆ ಎಂದೂ ಅಡ್ಡಿ ಆತಂಕ ಎದುರಾಗಿರಲಿಲ್ಲ. ಆದರೆ ಆ ಒಂದು ದುರಂತ ಅವರ ಬದುಕನ್ನು ನುಂಗಿ ನೀರು ಕುಡಿದು ಬಿಟ್ಟಿತ್ತು. ಅದೆಲ್ಲೋ ಕಿ.ಮೀ. ದೂರದಲ್ಲಿ ಕುಸಿದ ಗುಡ್ಡ ಇವರ ಬದುಕನ್ನು ಕಸಿಯುತ್ತೆ ಅಂತ ಅಲ್ಲಿನವರಿಗೆ ಸಣ್ಣ ಸುಳಿವು ಕೂಡ ಸಿಕ್ಕಿರಲಿಲ್ಲ. ಇದು ಶಿರೂರು ಗುಡ್ಡ ಕುಸಿತದಿಂದ ಮನೆ ಮಠ ಕಳೆದುಕೊಂಡಿರುವ ಉಳವರೆ ಅನ್ನೋ ಉತ್ತರ ಕನ್ನಡ ಜಿಲ್ಲೆಯ ಪುಟ್ಟ ಹಳ್ಳಿಯ ದೈನೇಸಿ ಸ್ಥಿತಿ.

ಕುಮಟಾದಿಂದ ಮುಂದೆ ಸಾಗಿದರೆ, ಅಂಕೋಲದ ಹೆದ್ದಾರಿಯಲ್ಲಿಶಿರೂರು ಸಿಗುತ್ತದೆ. ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಾಗಿ ಗುತ್ತಿಗೆ ಪಡೆದುಕೊಂಡ ಕಂಪೆನಿಯು, ಇಲ್ಲಿ ಬೇಕಾಬಿಟ್ಟಿ ಗುಡ್ಡ ಅಗೆದು ರಸ್ತೆಯನ್ನು ಮಾಡಿತ್ತು. ಇಲ್ಲೇ ಗುಡ್ಡದ ಬದಿಯಲ್ಲಿ ಸ್ಥಳೀಯರು ಗೂಡಂಗಡಿ, ಕ್ಯಾಂಟೀನ್ ಇರಿಸಿ ಜೀವನ ನಿರ್ವಹಣೆ ಮಾಡುತ್ತಿದ್ದರು. ಜು.16ರ ಮುಂಜಾನೆ ಗುಡ್ಡ ಭಾರೀ ಮಳೆಯಿಂದಾಗಿ ಹೆದ್ದಾರಿಗೆ ಜಾರಿಕೊಂಡು ಬಂದಿತ್ತು. ನೋಡನೋಡುತ್ತಿದ್ದಂತೆ ಕ್ಯಾಂಟೀನ್ ಸಮೇತ ಲಕ್ಷ್ಮಣ್ ನಾಯ್ಕ್‌ರ ಕುಟುಂಬ, ಲಾರಿಗಳು, ಗ್ಯಾಸ್ ಟ್ಯಾಂಕರ್, ಲಾರಿ ಚಾಲಕ, ಕ್ಲೀನರ್ ಸೇರಿದಂತೆ ಒಟ್ಟು 10 ಮಂದಿಯನ್ನು ಗಂಗಾವಳಿ ನದಿ ತನ್ನ ಒಡಲಿಗೆ ಸೆಳೆದುಕೊಂಡು ಬಿಟ್ಟಿತ್ತು.

ಇದು ಶಿರೂರಿನ ಕಥೆ. ಆದರೆ, ನದಿಯ ಇನ್ನೊಂದು ಬದಿಯಲ್ಲಿರುವ ಉಳವರೆ ಎಂಬ ಪುಟಾಣಿ ಗ್ರಾಮದ ಸ್ಥಿತಿ ಕೇಳುವುದೇ ಬೇಡ. ಗ್ರಾಮಸ್ಥರ ಪ್ರಕಾರ ಗುಡ್ಡ ಕುಸಿಯುತ್ತಿದ್ದಂತೆ ಗ್ಯಾಸ್ ಟ್ಯಾಂಕರ್ ನೀರಿಗೆ ಬಿದ್ದು ಜೋರಾದ ಸ್ಫೋಟದ ಸದ್ದು ಕೇಳಿಸಿತು. ಮನೆಯಿಂದ ಹೊರಬರುತ್ತಿದ್ದಂತೆ ನದಿಯ ನೀರು ಸುನಾಮಿ ರೀತಿ ತೆಂಗಿನ ಮರದೆತ್ತರಕ್ಕೆ ಬಡಿದು 6 ಮನೆಗಳನ್ನು ಅದರ ತಳಪಾಯ ಮಾತ್ರವೇ ಉಳಿಸಿ ತನ್ನೊಂದಿಗೆ ಕೊಂಡೊಯ್ದಿತ್ತು. ಮಕ್ಕಳು, ಮಹಿಳೆಯರು ನೀರಲ್ಲಿ ಕೊಚ್ಚಿಕೊಂಡು ಹೋಗಲು ಆರಂಭಿಸಿದರು; ಅಕ್ಕಪಕ್ಕದವರು ಧಾವಿಸಿ, ಕಷ್ಟಪಟ್ಟು ಮೇಲಕ್ಕೆತ್ತಿ ಕಾಪಾಡಿದ್ರು. ಇನ್ನೂ ಕೆಲವರು ಮನೆ ಬಿಟ್ಟು ಓಡೋಡುತ್ತಾ ಸಾಗಿ, ಮೇಲಿನ ಗುಡ್ಡ ಹತ್ತಿ ಪ್ರಾಣ ಉಳಿಸ್ಕೊಂಡ್ರು. ಆದರೆ ಮನೆಯೊಳಗಿದ್ದ ಸಣ್ಣಿ ಹನುಮಂತ ಗೌಡ ಎಂಬ ವೃದ್ಧೆ ಮಾತ್ರ ನೀರು ಪಾಲಾದರು.

ಕೆಲವೇ ನಿಮಿಷಗಳಲ್ಲಿ ಉಳವರೆ ಊರಿನ ಸ್ಥಿತಿಯೇ ಬದಲಾಗಿಬಿಟ್ಟಿತ್ತು. 6 ಮನೆಗಳು ನಾಮಾವಶೇಷಗೊಂಡರೆ 16 ಮನೆಗಳು ಭಾಗಶಃ ಭಾಗಶ: ಹಾನಿಗೊಳಗಾದವು. ಆ ಮನೆಗಳವರು ಪ್ರೀತಿಯಿಂದ ಸಾಕಿದ್ದ 50 ರಷ್ಟು ಗೋವುಗಳು, ಸಾಕು ನಾಯಿ, ಬೆಕ್ಕು, ಕೋಳಿ ಸಹಿತ ಜೀವನಕ್ಕೆ ಆಧಾರವಾಗಿದ್ದ ದೋಣಿ, ತೆಪ್ಪ ಇದಾವುದು ಕೂಡ ಉಳಿದಿಲ್ಲ. ಗದ್ದೆ, ತರಕಾರಿ ಕೃಷಿ ಭೂಮಿಯಲ್ಲಿ ಕಲ್ಲು ಮಣ್ಣು ತುಂಬಿದ್ದು, ಸದ್ಯ ಅಲ್ಲಿ ಕೃಷಿ ಮಾಡುವಂತಿಲ್ಲ. ಒಂದೆರಡು ನಿಮಿಷಗಳಲ್ಲಿ ನಡೆದು ಹೋದುದನ್ನು ಕಂಡ ಆ ಜನರು, ಇದೆಲ್ಲ ಏನಾಯ್ತು ಅನ್ನೋ ಶಾಕ್‌ನಲ್ಲಿ ಇದ್ದಾರೆ.

ಜಿಲ್ಲಾಡಳಿತ, ಪೊಲೀಸ್, ಭದ್ರತೆ ಯಾವುದೂ ಇಲ್ಲ!

ಘಟನೆ ನಡೆದ ಶಿರೂರು ಹೆದ್ದಾರಿಯಲ್ಲಿ ಮಣ್ಣು ತೆಗೆಯುವ ಕಾಮಗಾರಿ ನಡೆಯುತ್ತಿದೆ. ನೂರಾರು ಪೊಲೀಸರು, ಹಿರಿಯ ಅಧಿಕಾರಿಗಳು, ಸರಕಾರಿ ಅಧಿಕಾರಿಗಳು ಸಿಬ್ಬಂದಿ, ಸ್ಥಳೀಯ ಜನಪ್ರತಿನಿಧಿಗಳು ಹೀಗೆ ಎಲ್ಲರೂ ಬೀಡು ಬಿಟ್ಟಿದ್ದಾರೆ. ಮುಖ್ಯಮಂತ್ರಿಗಳು ಮತ್ತು ಇತರ ಪ್ರಮುಖರು ಅಲ್ಲಿಗೆ ಭೇಟಿಕೊಟ್ಟಿದ್ದು, ಆ ವಿವರಗಳು ಟಿವಿಗಳಲ್ಲಿ ಪ್ರಮುಖವಾಗಿ ಪ್ರಸಾರವಾಗಿವೆ.

ಆದರೆ ಅಲ್ಲಿಂದ ಕಾಣಿಸುವ ಉಳವರೆಯಲ್ಲಿ ನೀರವ ಮೌನ! ನದಿಯಿಂದ ಆಚೆ ಇರುವ ಹಳ್ಳಿ ಅದು. ಅಲ್ಲಿಗೆ ನದಿ ಮಧ್ಯೆ ಕಿರಿದಾದ ರಸ್ತೆಯಿದ್ದು ಜನರ ಪ್ರಾಣಕ್ಕೆ ಯಾವುದೇ ಭದ್ರತೆ ಇರದಿದ್ದರೂ ಕನಿಷ್ಠ ಒಬ್ಬ ಪೊಲೀಸ್ ಸಿಬ್ಬಂದಿ ಕೂಡ ಇಲ್ಲ. ನೀರುಪಾಲಾದ ಸಣ್ಣಿ ಗೌಡರ ಶವ 8 ದಿನಗಳ ಬಳಿಕ ಸಿಕ್ಕಿದ್ದು, ಶವಸಂಸ್ಕಾರ ಸಂದರ್ಭದಲ್ಲೂ ಸಹಾಯಕ್ಕೂ ಯಾರೂ ಇರಲಿಲ್ಲ. ಅಂತಿಮವಾಗಿ ಅಲ್ಲಿದ್ದ ಮಂಗಳೂರಿನ ಪತ್ರಕರ್ತರೇ ಶವಕ್ಕೆ ಹೆಗಲು ಕೊಟ್ಟು ಅಂತಿಮ ಸಂಸ್ಕಾರ ಮಾಡಬೇಕಾಯ್ತು. ಶಿರೂರಿನಲ್ಲಿ ನಡೆದದ್ದು ಮಾನವ ನಿರ್ಮಿತ ಪ್ರಾಕೃತಿಕ ದುರಂತ – ಗುಡ್ಡವನ್ನು ಅವೈಜ್ಞಾನಿಕವಾಗಿ ತರಿದು, ರಸ್ತೆ ನಿರ್ಮಿಸಿದ್ದರಿಂದಾಗಿ, ಗುಡ್ಡ ಕುಸಿಯಿತು, ಹಲವರು ಸತ್ತರು. ಅದೇ ರೀತಿ, ಉಳವರೆಯಲ್ಲೂ ನಡೆದಿರುವುದು ಮಾನವ ನಿರ್ಮಿತ ದುರಂತ. ಬಹುಷ, ಈ ದೊಡ್ಡ ದುರಂತವು, ಕರ್ನಾಟಕದ ಅತಿ ದೊಡ್ಡ ಮಾನವ ನಿರ್ಮಿತ ಪ್ರಾಕೃತಿಕ ದುರಂತ ಎನ್ನಬಹುದು.

ಉಳವರೆಯ ಜನರು ಮೊದಲೇ ನೋವಲ್ಲಿದ್ದಾರೆ. ಟಿವಿಯಲ್ಲಿ ಸಿಗಬಹುದಾದ ಪ್ರಚಾರಕ್ಕಾಗಿ ಶಿರೂರಿನ ಗುಡ್ಡ ಕುಸಿದ ಜಾಗಕ್ಕೆ ರಾಜಕೀಯ ನಾಯಕರು ಭೇಟಿಕೊಡುವುದೇನೋ ನಡೆಯುತ್ತಿದೆ; ಪರಿಹಾರವನ್ನು ಘೋಷಿಸುತ್ತಿದ್ದಾರೆ. ಅವರಲ್ಲಿ ಕೆಲವರಾದರೂ ಉಳವರೆ ಎಂಬ ಕುಗ್ರಾಮಕ್ಕೆ ಬಂದು ಅಲ್ಲಿನ ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಳ್ಳಬೇಕಿದೆ; ದುರಂತಕ್ಕೆ ಒಳಗಾದವರಿಗೆ ಸಾಂತ್ವನ ಹೇಳಬೇಕಿದೆ. ಉಳವರೆ ಎಂಬ ಹಳ್ಳಿಯನ್ನು ಮತ್ತೆ ನಿರ್ಮಿಸಬೇಕಿದೆ. ಗಂಗಾವಳಿಯಲ್ಲಿ ಕೊಚ್ಚಿಹೋದ ಬದುಕನ್ನು ಪುನಃ ಕಟ್ಟಿಕೊಡಬೇಕಿದೆ. ಉಳವರೆಯ ಮುಗ್ಧ ಮನಸುಗಳಿಗೆ ಧೈರ್ಯ ತುಂಬಬೇಕಿದೆ.

ಗುಡ್ಡದ ಆರೋಗ್ಯ ಕೆಡಿಸಿದ್ದಾರೆ

ಒಮ್ಮೆ ನಿಂತು ಮುಂದಕ್ಕೆ ಚಲಿಸಿ...

ಪ್ರತಿ ವರ್ಷ ಸಹ್ಯಾದ್ರಿಯಲ್ಲಿ ಮಳೆ ಸುರಿಯುವುದು ಮಾಮೂಲು; ಈ ವರ್ಷ ಅಧಿಕ ಮಳೆ ಸುರಿದಿದೆ. ಕಾಡು, ಗುಡ್ಡ, ಬೆಟ್ಟಗಳೆಲ್ಲವೂ ನೀರಿನಿಂದ ತೊಪ್ಪೆಯಾಗಿವೆ; ನದಿಗಳಲ್ಲಿ ನೀರು ತುಂಬಿದೆ. ಪಶ್ಚಿಮ ಘಟ್ಟವೆಲ್ಲವೂ ಸೂಕ್ಷ್ಮ ಪ್ರದೇಶ; ಇಲ್ಲಿ ರಸ್ತೆ ವಿಸ್ತರಿಸುವಾಗ, ಗುಡ್ಡವನ್ನು ಕೊರೆಯುವಾಗ, ವೈಜ್ಞಾನಿಕವಾಗಿಯೇ ಕಾಮಗಾರಿ ನಡೆಸಬೇಕು; ರಸ್ತೆ ಮಾಡಿದ ನಂತರ, ಪಕ್ಕದ ಗುಡ್ಡದ ದರೆಯು ಕುಸಿಯದಂತೆ ಸೂಕ್ತ ರಕ್ಷಣಾಗೋಡೆಯನ್ನು ನಿರ್ಮಿಸಲೇಬೇಕು. ಅಂತಹ ರಕ್ಷಣೆ ತೆಗೆದುಕೊಳ್ಳದೇ ಇದ್ದರೆ, ರಸ್ತೆಯ ಮೇಲೆ ಗುಡ್ಡ ಕುಸಿದೀತು. ಉತ್ತರ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ಇದೇ ಆಗಿರುವುದು.

» ವಿನುತಾ ಹೆಗಡೆ ಶಿರಸಿ

ಆತ ನಿಂತಿದ್ದ ನೆಲ ಘಟ್ಟಿಯಾಗಿಯೇ ಇತ್ತು. ಏಕೆಂದರೆ ಅದು ರಾಷ್ಟ್ರೀಯ ಹೆದ್ದಾರಿಯ ನಡು ರಸ್ತೆ. ಆದರೂ ಆತನಿಗೆ ಗುಡ್ಡದ ಬಾಗವೊಂದು ತನ್ನ ಕಬಂಧ ಬಾಹು ಚಾಚಿದಂತೆ ಅನಿಸಿತು; ಕಣ್ಣೆ ಕತ್ತಲಿಟ್ಟಿತು. ನಿಂತಿದ್ದ ನೆಲವೇ ಮೆತ್ತಗಾಗಿ ಕುಸಿದಂತೆ ಅನಿಸಿತು. ಒಂದು ಕ್ಷಣ ಕಣ್ಣರಳಿಸುವ ಹೊತ್ತಿಗೆ ಆತನಿಗೆ ರಪ್ ಎಂದು ಯಾರೋ ಹೊಡೆದ ರೀತಿಯಲ್ಲಿ ಮಣ್ಣು ರಭಸವಾಗಿ ಮೈಗೆ ಬಾರಿಸಿತು.

ಆತ ನೋಡುತ್ತಿದ್ದಂತೆ ಗುಡ್ಡವು ಓಡುತ್ತಾ ಬಂದು ಆತನ ಎದುರಿನ ಎಲ್ಲವನ್ನೂ ನುಂಗಿಯೇ ಬಿಟ್ಟಿತು. ತನ್ನ ಓವರ್ ಟೇಕ್ ಮಾಡಿದ ವಾಹನವೂ ಅದರೊಳಗೇ ಸೇರಿಹೋಯಿತು! ರಸ್ತೆ, ಮರ, ಗಿಡ, ರಸ್ತೆಯ ಮೇಲಿದ್ದ ಲಾರಿ, ರಸ್ತೆಯ ಪಕ್ಕದಲ್ಲಿದ್ದ ಪುಟಾಣಿ ಕ್ಯಾಂಟೀನ್, ಅದರೊಳಗಿದ್ದ ಜನರು ಎಲ್ಲವೂ ಕೆಲವೇ ಕ್ಷಣಗಳಲ್ಲಿ ನಾಪತ್ತೆ! ಎಲ್ಲವೂ ಮಣ್ಣಿನೊಳಗೆ ಸೇರಿ ಹೋಗಿತ್ತು. ಆತ ದೇವರಿಗೆ ಕೈ ಮುಗಿದ. ಆ ಕ್ಷಣದಲ್ಲಿ ನಿಧಾನಕ್ಕೆ ಚಲಿಸಿದ್ದಕ್ಕೇ ಇರಬೇಕು ಇನ್ನೂ ಜೀವಂತವಿದ್ದ. ಆದರೆ ಆತನ ಉಸಿರೇ ಕಟ್ಟಿದಂತಾಗಿತ್ತು. ಉತ್ತರ ಕನ್ನಡ ಜಿಲ್ಲೆಯ ಶಿರೂರಿನ ಬೃಹದಾಕಾರದ ಗುಡ್ಡ ಇಂಥದ್ದೆಲ್ಲ ಹಲವರಿಗೆ ಕಣ್ಣಾರೆ ಕಾಣಿಸಿದೆ. ಗುಡ್ಡದ ಬಾಹು ರಪ್ಪನೆ ಉರುಳಿ ತನ್ನ ಅಸ್ತಿತ್ವ ಕಳೆದುಕೊಂಡಿರುವುದರ ಜತೆಗೆ ಅಡಿಯಲ್ಲಿರುವ ವಸ್ತುಗಳ, ಮನುಷ್ಯರ ಬದುಕನ್ನೇ ಆಪೋಷನ ತೆಗೆದುಕೊಂಡಿತು. ಗುಡ್ಡ ತನ್ನ ಪಾಡಿಗೆ ತಾನಿತ್ತು; ಒಂದಷ್ಟು ಜೆಸಿಬಿಗಳು ಬಂದವು; ರಸ್ತೆ ವಿಸ್ತರಣೆಯ ಕಾಮಗಾರಿ ನಡೆಯಿತು; ಅಡ್ಡಾದಿಡ್ಡಿ ಅಗೆದು ರಸ್ತೆ ಮಾಡಿದವು; ಗುಡ್ಡ ಜರಿದು ಬೀಳದಂತೆ ಸೂಕ್ತ ರಕ್ಷಣಾ ಕ್ರಮವು ಅವರ 'ಕಾಮಗಾರಿ'ಯಲ್ಲಿ ಸೇರಿರಲಿಲ್ಲ; ಈ ವರ್ಷ ವಿಪರೀತ ಮಳೆ; ಜೆಸಿಬಿ ತರಿದು ಹಾಕಿದ್ದರಿಂದ, ಗುಡ್ಡಕ್ಕೆ ಸಪೋರ್ಟ್ ಇರಲಿಲ್ಲ; ಕುಸಿದು ಬಿತ್ತು; ರಸ್ತೆಯೇ ಮಾಯವಾಯಿತು; ರಸ್ತೆಯ ಮೇಲೆ ಚಲಿಸುತ್ತಿದ್ದ ಲಾರಿಗಳು ನದಿಗೆ ಕೊಚ್ಚಿ ಹೋದವು; ಅಲ್ಲಿದ್ದ ಪುಟ್ಟ ಹೊಟೆಲ್‌ನಲ್ಲಿದ್ದ ಪುಟ್ಟ ಕಂದಮ್ಮಗಳೂ ಸೇರಿದಂತೆ ನಾಲ್ವರು ಗುಡ್ಡದ ಮಣ್ಣಿನೊಳಗೆ ಹೂತು ಹೋದರು. ಅಡ್ಡಾದಿಡ್ಡಿಯಾಗಿ ಗುಡ್ಡ ಕೊರೆದು ರಸ್ತೆ ಮಾಡಿದ್ದರಿಂದಾಗಿ, ಮಳೆ ಬಂದು ಗುಡ್ಡ ಕುಸಿಯಿತು; ಇದು ಮಾನವ ನಿರ್ಮಿತ ದುರಂತ!

ನೀವೂ ರಸ್ತೆಯಲ್ಲಿ ಚಲಿಸುವಾಗ, ಗಾಳಿ ಮಳೆ ಇದ್ದರೆ, ಒಮ್ಮೆ ನಿಂತು ಚಲಿಸಿ. ಅದರಲ್ಲೂ ವಿಪರೀತವಾಗಿ ಬೀಸುವ ಗಾಳಿಗೆ ಯಾವುದೂ ಏನಾಗುವುದೋ ಅರಿವಿಗೆ ಬಾರದು. ಪಶ್ಚಿಮಘಟ್ಟ ಪ್ರದೇಶ ಮಳೆಗಾಲ ತುಸು ಅಪಾಯಕಾರಿ. ಮಳೆಯೊಂದಿಗೆ ರಪ ರಪನೆ ಬೀಸುವ ಗಾಳಿಗೆ ನಾವೂ ನೀವೂ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆಯೇ ಹೆಚ್ಚು. ಮೊನ್ನೆ ಆತ ಕಚೇರಿಗೆಂದು ಹೊರಟಿದ್ದ. ವಿಪರೀತ ಮಳೆ ಇರಲಿಲ್ಲ ನಿಜ, ಆದರೆ ಗಾಳಿ ಹೆಚ್ಚಾಗಿ ಬೀಸುತ್ತಿತ್ತು. ಗಾಳಿ ಬಂದಾಗೊಮ್ಮೆಯಾದರೂ ಬಯಲಲ್ಲಿ ಆತ ನಿಲ್ಲಬೇಕಿತ್ತು. ಆತ ನಿಲ್ಲಲೇ ಇಲ್ಲ. ಆತನ ಪ್ರಾಣ ಪಕ್ಷಿಯೂ ಅಷ್ಟೆ. ಚಲಿಸುತ್ತಿದ್ದ ಆತನ ಸ್ಕೂಟಿಯ ಮೇಲೆಯೇ ಮರ ರಪ್ಪನೆ ಎರಗಿತ್ತು. ನಾವು ಗುರಿ ಇಟ್ಟರೂ ಚಲಿಸುವ ವಾಹನಕ್ಕೆ ಏನನನ್ನಾದರೂ ತಾಗಿಸುವುದು ಕಷ್ಟ ಆದರೆ ಸಾವು ಗುರಿ ಇಟ್ಟಂತೆ ಚಲಿಸುವ ಮರ ವಾಹನದ ಮೇಲೆಯೇ ಬಿದ್ದು ಕ್ಷಣ ಮಾತ್ರದಲ್ಲಿ ಆತ ಹೆಣವಾದ. ಬೀಸುವ ಗಾಳಿಯ ರಭಸ ನೋಡಿಯಾದರೂ ಆತ ನಿಲ್ಲಬೇಕಿತ್ತು. ಇಲ್ಲಿ ಆತ ತನಗಾಗಿ ಒಂದು ಕ್ಷಣ ಆರೈಕೆಮಾಡಿಕೊಂಡಿದ್ದರೂ ಸಾಕಿತ್ತು. ರಭಸವಾಗಿ ಬೀಸುವ ಗಾಳಿಯನ್ನು ನೋಡಿ ಕ್ಷಣ ನಿಲ್ಲಬೇಕಿತ್ತು. ಆಗ ಆಯುಷ್ಯವಿನ್ನೂ ಘಟ್ಟಿಯಾಗಿರುತ್ತಿತ್ತು.

ಬೇಕು ಎಚ್ಚರ

ಉತ್ತರ ಕನ್ನಡ ಜಿಲ್ಲೆ ಎಂದರೇನೆ ಗುಡ್ಡ, ಕಾಡಿನ ಪ್ರದೇಶ. ಇಲ್ಲಿ ಯಾವ ಹೊತ್ತಲ್ಲಿ ಬಿರು ಮಳೆ ಬರುತ್ತದೆ, ಕಾಮಗಾರಿ ನಡೆದ ರಸ್ತೆಯ ಪಕ್ಕದಲ್ಲಿರುವ ಗುಡ್ಡ ಕುಸಿಯುತ್ತದೆ, ಮರ ಬೀಳುತ್ತದೆ ಎನ್ನುವುದನ್ನು ಊಹಿಸುವುದು ಕಷ್ಟ. ಆದ್ದರಿಂದ ಇಲ್ಲಿ ಪ್ರವಾಸಿಗರಿರಲಿ, ಸ್ಥಳೀಯರಿರಲಿ ಒಮ್ಮೆ ನಿಂತು, ತಮ್ಮ ಜಾಗ್ರತೆಯನ್ನು ಖಚಿತಪಡಿಸಿಕೊಂಡು, ಮುಂದೆ ಸಾಗುವುದು ಒಳಿತು. ಅದರಲ್ಲೂ ಹಳ್ಳ, ಕೊಳ್ಳಗಳು ಸಣ್ಣದೇ ಇರಲಿ ದೊಡ್ಡದೇ ಇರಲಿ ಅದರಲ್ಲಿ ಇಳಿಯುವ ಸಾಹಸಕ್ಕೆ ಹೋಗಬಾರದು. ಯಾವ ಸಮಯದಲ್ಲಿ ಹಳ್ಳ ಉಕ್ಕಲಿದೆ ಎನ್ನುವುದೇ ತಿಳಿಯದು. ಏಕೆಂದರೆ ಈ ಗುಡ್ಡ ಪ್ರದೇಶದಲ್ಲಿ ಒಂದೆಡೆ ಮಳೆಯಾದರೆ ಇನ್ನೊಂದೆಡೆ ಇಳಿಜಾರು ಗುಡ್ಡದ ಕೆಳಗಡೆಯ ಹಳ್ಳ ತುಂಬಿ ಹರಿಯುತ್ತದೆ. ನಾವಿರುವಲ್ಲಿಯೇ ಮಳೆ ಸುರಿಯಬೇಕೆಂದಿಲ್ಲ ಹಳ್ಳ, ನದಿ ಉಕ್ಕುವುದಕ್ಕೆ. ಆದರೆ ಕೆಲವರಿಗೆ ಇದರ ಸಾಮಾನ್ಯ ಜ್ಞಾನವೂ ಇರದೇ, ಸಾಕಷ್ಟು ಅನಾಹುತಗಳು ನಡೆದೇ ಬಿಡುತ್ತದೆ.

ಕರಾವಳಿ ತೀರವನ್ನು ಸಂಪರ್ಕಿಸಬೇಕೆಂದರೆ ಗುಡ್ಡ, ಕಾಡಿನ ಮಧ್ಯೆ ಹಾವಿನಂತೆ ಅಂಕು ಡೊಂಕಿನ ದಾರಿಯಲ್ಲಿ ಸಾಗಲೇ ಬೇಕು. ಘಟ್ಟದ ಮೇಲಿಂದ ಕರಾವಳಿಗೆ ವಡ್ಡಿ ಘಾಟ್, ಶಿರಸಿಯಿಂದ ಕುಮಟಾಕ್ಕೆ ಸಾಗಲು ದೇವಿಮನೆ ಘಾಟ್, ಯಲ್ಲಾಪುರದಿಂದ ಅಂಕೋಲಾಕ್ಕೆ ಸಾಗಲು ಅರಬೈಲ್ ಘಾಟ್, ಸಿದ್ದಾಪುರದಿಂದ ಹೊನ್ನಾವರಕ್ಕೆ ಸಾಗಲು ಮಮನಮೆ ಘಾಟ್, ಜೋಯಿಡಾದಿಂದ ಕಾರವಾರಕ್ಕೆ ಸಾಗಲು ಅಣಶಿಘಾಟ್ ಹೀಗೆ ಎಲ್ಲ ಘಡ್ಡಗಳನ್ನು ಇಳಿಯಲೇ ಬೇಕು. ಆದರೆ ಮಳೆಗಾಲದಲ್ಲಿ ಈ ದಾರಿಯಲ್ಲಿ ಒಮ್ಮೊಮ್ಮೆ ಎದುರಾಗಬಹುದಾದ ಅಪಾಯನ್ನು ಎಂದಿಗೂ ಮರೆಯಲೇ ಬಾರದು. ಮಣ್ಣು ಸ್ವಲ್ಪ ಹಸಿಯಾದರೆ ಮರ ಕುಸಿಯುತ್ತದೆ, ಮರ ಕುಸಿದರೆ ಧರೆಯೇ ಕೆಳಗುರುಳುತ್ತದೆ. ಇಲ್ಲವೇ ಗುಡ್ಡ ಸವಲ್ಪ ಕುಸಿದರೂ ಮರದ ಭಾರ ತಾಳಲಾದರೇ ಇಡೀ ಗುಡ್ಡವೇ ಕುಸಿಯುತ್ತದೆ. ಅದರಲ್ಲೂ ಹೊಸದಾಗಿ ರಸ್ತೆ ನಿರ್ಮಾಣವಾಗಿದೆ ಎಂದಾದರೆ, ಆ ರಸ್ತೆ ಮಳೆಗಾಲದಲ್ಲಿ ಸುರಕ್ಷವಲ್ಲವೇ ಅಲ್ಲ; ಏಕೆಂದರೆ, ರಸ್ತೆ ಮಾಡುವವರು, ರಕ್ಷಣೆಯ ದೃಷ್ಟಿಕೋನವನ್ನು ಪೂರ್ತಿ ಅಲಕ್ಷಿಸಿ, ರಸ್ತೆ ಮಾಡುವ ಅಭ್ಯಾಸ ಬೆಳೆಸಿಕೊಂಡಿದ್ದಾರೆ. ಆದ್ದರಿಂದ, ಮಳೆಗಾಲದಲ್ಲಿ ಅಲ್ಲಿ ಅಪಾಯ ಕಾದಿಟ್ಟಂತೆಯೇ – ಎಷ್ಟೇ ಎಚ್ಚರವಹಿಸಿದರೂ ಅದು ನಮ್ಮ ದಾರಿಗೆ ಅಡ್ಡ ಬಂದೇ ಬರುತ್ತದೆ.

ಇನ್ನೂ ಒಂದು ಹೇಳಬೇಕು. ಮಳೆಗಾಲದ ಫಾಲ್ಸ್ ನಂತೆಯೇ ಡ್ಯಾಂಗಳೂ ಕೂಡಾ. ಮೊನ್ನೆ ಧರ್ಮಾ ಡ್ಯಾಂನಲ್ಲಿ ಈಜಲು ಹೋದವರು ನಾಪತ್ತೆಯಾಗಿದ್ದಾರೆ. ಅವರೇನು ಜೀವಂತ ಇರುವ ನಿರೀಕ್ಷೆ ಇಟ್ಟುಕೊಳ್ಳುವಂತಿಲ್ಲ. ಮಳೆಗಾಲದಲ್ಲಿ ಹಳ್ಳ, ನದಿ, ಗುಡ್ಡ, ಡ್ಯಾಂಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತವೆ. ಹಾಗಿದ್ದಾಗ ನಾವು ಅದರೊಂದಿಗೆ ಎಷ್ಟು ಎಚ್ಚರಿಕೆಯಿಂದ ಇರುತ್ತೇವೆಯೋ ಅಷ್ಟೂ ಒಳ್ಳೆಯದು. ಮಳೆಗಾಲದಲ್ಲಿ ಉತ್ತರ ಕನ್ನಡ ಜಿಲ್ಲೆಯ ಮಳೆಗಾಲಕ್ಕೆ ಹುಟ್ಟಿಕೊಳ್ಳುವ ಸುಂದರ ಸಣ್ಣ ಜಲಪಾತಗಳ ವೀಕ್ಷಿಸಲು ಬರುವ ಪ್ರವಾಸಿಗರು ಇದನ್ನೂ ಅರಿತುಕೊಳ್ಳಿ. ಜೀವ ಉಳಿದಿದ್ದರೆ, ಚಳಿಗಾಲದಲ್ಲಿ, ಬೇಸಿಗೆಯಲ್ಲಿ ಹರಿವ ತೊರೆ, ಜಲಪಾತಗಳ ವೀಕ್ಷಿಸಲು ಬರಬಹುದು! ನೀರಿನ ಜತೆ ಸರಸ ಬೇಡ; ಹಾಗೆಯೇ, ರಸ್ತೆ ನಿರ್ಮಿಸುವವರು, ಗುಡ್ಡದ ಆರೋಗ್ಯದ ಕಡೆಗೂ ಗಮನ ನೀಡಬೇಕು, ಮಾಡಿದ ಕೆಲಸವನ್ನು ಸರಿಯಾಗಿ ಮಾಡಬೇಕು!

ಕುಸಿದ ಆ ಗುಡ್ಡದ ಬಳಿ ನಾನಿದ್ದೆ!

ಹೆದ್ದಾರಿ ವಿಸ್ತರಣೆ ಮಾಡುವಾಗ, ಸೂಕ್ತ ರಕ್ಷಣಾ ವ್ಯವಸ್ಥೆ ಮಾಡದೇ ಗುಡ್ಡವನ್ನು ತರಿದು ಹಾಕಿದ್ದರಿಂದ, ಕಳೆದ ವಾರದ ನಿರಂತರ ಮಳೆಗೆ ಗುಡ್ಡ ಕುಸಿಯಿತು, ಹಲವು ವಾಹನಗಳು ಒಂದು ಪುಟ್ಟ ಕ್ಯಾಂಟೀನ್, ಅದರಲ್ಲಿದ್ದ ಮಕ್ಕಳು, ಇತರರು ಗುಡ್ಡ ಕುಸಿತಕ್ಕೆ ಸಿಲುಕಿಕೊಂಡರು; ಅವರ ಬದುಕು ನಾಶವಾಯಿತು. ಆ ಗುಡ್ಡ ಕುಸಿದ ಕೆಲವೇ ನಿಮಿಷಗಳ ಅಂತರದಲ್ಲಿ, ಅದೇ ರಸ್ತೆಯಲ್ಲಿ ಸಾಗಿ ಬಂದವರೊಬ್ಬರು ತಮ್ಮ ಮನದಾಳದ ತುಮುಲವನ್ನು, ನೋವನ್ನು ಹಂಚಿಕೊಂಡಿದ್ದಾರೆ.

» ವಿದ್ಯಾ ಶಿವರಾಮ್

ಕಳೆದ ವಾರ ಕರ್ನಾಟಕವನ್ನು ತಲ್ಲಣಗೊಳಿಸಿದ ಗುಡ್ಡ ಕುಸಿತದ ಘಟನೆ ನಡೆದ ದಿನ ನಾನು ಊರಿಗೆ ಹೊರಟಿದ್ದೆ. ನಮ್ಮೂರು ಕುಂದಾಪುರದ ಒಂದು ಪುಟ್ಟ ಹಳ್ಳಿ. ಹುಬ್ಬಳ್ಳಿಯಿಂದ ಕುಂದಾಪುರಕ್ಕೆ ಹೋಗುವಾಗ ನಾನು ಸಾಮಾನ್ಯವಾಗಿ ಪ್ರಯಾಣಿಸುವುದು ಸರ್ಕಾರಿ ಬಸ್ಸುಗಳಲ್ಲೆ. ಅಂಕೋಲಾ ಮಾರ್ಗವಾಗಿ ಹೊರಟ ಬಸ್ಸು ಚಲಿಸಿ ಶಿರೂರನ್ನು ತಲುಪುವಷ್ಟರಲ್ಲಿ ಗುಡ್ಡ ಕುಸಿದು, ಸುಮಾರು ಮೂರು ನಿಮಿಷ ಕಳೆದಿರಬಹುದು. ರಸ್ತೆಯ ಇಕ್ಕೆಲಗಳಲ್ಲಿ ನಾಲ್ಕಾರು ಜನ ನಿಂತಿದ್ದರು. ಒಂದೆರಡು ಕಾರು, ಬೈಕುಗಳು, ಎರಡು ಲಾರಿಗಳನ್ನು ಬದಿಯಲ್ಲಿ ನಿಲ್ಲಿಸಲಾಗಿತ್ತು. ಒಬ್ಬಾತ ವ್ಯಕ್ತಿ ಬಸ್ಸನ್ನು ಅಡ್ಡಗಟ್ಟಿದ, 'ಮುಂದೆ ಹೋಗಬೇಡಿ ಅಲ್ಲಿ ಕರೆಂಟ್ ಲೈನ್ ಕೆಳಗೆ ಬಿದ್ದಿದೆ, ಗುಡ್ಡ ಕುಸಿದಿದೆ, ಅಪಾಯವಿದೆ' ಎಂದು ಗಾಬರಿಯಿಂದ ಹೇಳಿದ. ಆತನ ಗಾಬರಿಯ ವರ್ತನೆ ಕಂಡು ಅಚ್ಚರಿಯಾಯಿತು. ಇವನ್ಯಾಕೆ ಹೀಗಾಡುತ್ತಿದ್ದಾನೆ ಎಂದು ಬಸ್ಸಿನಲ್ಲಿದ್ದ ಕೆಲವರು ಮಾತನಾಡಿಕೊಂಡರು.

ನಮ್ಮ ಬಸ್ಸಿನ ಚಾಲಕ, ತುಸು ಮುಂದೆ ಹೋಗಿ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದ. ನಡೆಯಬಾರದ್ದೇನೋ ನಡೆದುದರ ಮುನ್ಸೂಚನೆ ಕಾಣುತ್ತಿತ್ತು. ಚಾಲಕ, ನಿರ್ವಾಹಕ ಮತ್ತು ಕೆಲವು ಪ್ರಯಾಣಿಕರು ಬಸ್ಸಿನಿಂದ ಇಳಿದು ಅಲ್ಲೇನಾಗಿದೆ ಎಂದು ನೋಡಲು ಹೊರಟರು.

'ಗುಡ್ಡ ಕುಸಿದು ಟ್ಯಾಂಕರ್ ಹೊಳೆಯಲ್ಲಿ ಕೊಚ್ಚಿಕೊಂಡು ಹೋಯ್ತು. ಓ ಅಲ್ಲಿ ಹೋಗ್ತಿದೆ ನೋಡಿ'ಎಂದು ಒಬ್ಬಾತ ಗಂಗಾವಳಿ ನದಿಯತ್ತ ಕೈ ತೋರಿಸಿದ. ಬಸ್ಸಿನಲ್ಲಿ ಗೌಜು ಗದ್ದಲ ಶುರುವಾಯಿತು. ಬಹುತೇಕರು ಕೆಳಗಿಳಿದು, ಏನಾಗಿದೆ ಎಂದು ನೋಡಲು ಹೋದರು. ನಾನು ಬಸ್ ಒಳಗೆ ಕುಳಿತಿದ್ದೆ. 'ಮುಂದೆ ಹೋಗಲಾಗದೆ ಇಲ್ಲೇ ಸಂಜೆವರೆಗೆ ನಿಲ್ಲುವಂತಾದರೆ ಏನು ಮಾಡುವುದು' ಎಂದಷ್ಟೆ ಯೋಚಿಸುತ್ತಿದ್ದೆ.

▶▶ 4ನೇ ಪುಟಕ್ಕೆ

ಪುಸ್ತಕ ವಿಮಾನ

ಉಪಯುಕ್ತ ಅಧ್ಯಯನ

ನೂರಾರು ವರ್ಷಗಳ ಹಿಂದೆ ಕರ್ನಾಟಕದ ಕರಾವಳಿಗೆ ವಲಸೆ ಬಂದು, ಗುಡ್ಡಗಾಡು ಪ್ರದೇಶಗಳಲ್ಲಿ ನೆಲೆನಿಂತ ಮರಾಟಿ ಸಮುದಾಯದ ಜನಾಂಗೀಯ ಅಧ್ಯಯನದ ಈ ಕೃತಿ, ಹಲವು ಆಯಾಮಗಳಿಂದ ಪ್ರಮುಖ ಎನಿಸಿದೆ.

» ಡಾ. ಬಿ. ಜನಾರ್ದನ ಭಟ್

ಕರ್ನಾಟಕದಲ್ಲಿ, ಅದೂ ಕರಾವಳಿ ಜಿಲ್ಲೆಗಳಲ್ಲಿ ಮರಾಠಿ ಭಾಷೆಯ ವಿವಿಧ ಪ್ರಭೇದಗಳನ್ನು ಆಡುವ ಜನ ಸಮುದಾಯಗಳಿವೆ. ಅವರಲ್ಲಿ ಕೆಲವು ಸಮುದಾಯಗಳು ತಮ್ಮ ಮೂಲ ಸೀಮೆಯ ಹೆಸರನ್ನು ಇಟ್ಟುಕೊಂಡಿದ್ದಾರೆ. 'ಮರಾಟಿ' ಎನ್ನುವ ಹೆಸರನ್ನೇ ಇರಿಸಿಕೊಂಡಿರುವ ಸಮುದಾಯದವರು ತುಳುನಾಡಿನಲ್ಲಿ ತಮ್ಮದೇ ಆದ ಸಂಸ್ಕೃತಿ ಮತ್ತು ಆಚರಣೆಗಳನ್ನು ಉಳಿಸಿಕೊಂಡಿರುವ ವಿಶಿಷ್ಟ ಜನಸಮುದಾಯದವರಾಗಿದ್ದಾರೆ. ಇವರನ್ನು 'ಕರ್ನಾಟಕ ಬುಡಕಟ್ಟು ಜನಾಂಗ' ಎಂದು ಗುರುತಿಸಲಾಗಿದೆ. ಅವರು ಮಹಾರಾಷ್ಟ್ರ, ಗೋವಾ, ಉತ್ತರ ಕರ್ನಾಟಕದ ಮೂಲಕ ನೂರಾರು ವರ್ಷಗಳ ಹಿಂದೆ ವಲಸೆ ಬಂದು ತುಳುನಾಡಿನ ಗುಡ್ಡಗಾಡು ಪ್ರದೇಶಗಳಲ್ಲಿ ನೆಲೆನಿಂತು, ಇಲ್ಲಿನವರೇ ಆಗಿದ್ದಾರೆ. ಅವರ ಸಂಸ್ಕಾರ ಮತ್ತು ಸಂಸ್ಕೃತಿಗಳನ್ನು ಮರೆಯದೆ ಕಾಪಾಡಿಕೊಂಡು ಬಂದಿರುವ ಅವರ ಸಂಸ್ಕೃತಿಪ್ರೇಮ ಶ್ಲಾಘನೀಯವಾದದ್ದು.

ಗೋಂದೋಲು, ಭೈರವಾರಾಧನೆ ಮತ್ತು ಹೋಳಿ ಕುಣಿತ ಅವರ ಮುಖ್ಯವಾದ ವಿಶಿಷ್ಟ ಆಚರಣೆಗಳು. ಈ ಕಲೆಯನ್ನು ಸಂರಕ್ಷಿಸುವ ಉದ್ದೇಶದಿಂದ ಈ ಸಮುದಾಯದವರು 'ಶ್ರೀ ದುರ್ಗಾಪರಮೇಶ್ವರಿ ಮರಾಟಿ ಸಮುದಾಯ ಕಲಾ ಸಂಘ'ವನ್ನು ಸ್ಥಾಪಿಸಿಕೊಂಡಿದ್ದಾರೆ. ಈಗ ಇದೇ ಸಂಸ್ಥೆಯು ತಮ್ಮ ಸಂಸ್ಕೃತಿ, ತಮ್ಮ ಬೇರುಗಳು, ಆಚರಣೆಯ ಕ್ರಮಗಳು, (ಆಚರಣೆಯಲ್ಲಿ ಬಳಸುವ) ಪೂರಕ ಸಾಹಿತ್ಯ ಇತ್ಯಾದಿಗಳನ್ನು ಸಂಗ್ರಹಿಸಿ, ಪುಸ್ತಕ ರೂಪದಲ್ಲಿ ದಾಖಲಿಸಿದ್ದಾರೆ. ಈ ಪುಸ್ತಕದ ಸಂಪಾದಕರಾದ ವೆಂಕಟೇಶ ನಾಯ್ಕರು ಗ್ರಂಥಪಾಲಕರು ಮತ್ತು ಈ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಮತ್ತೋರ್ವ ಸಂಪಾದಕರು ಡಾ. ಮೋಹನ ನಾಯ್ಕರು ಹಂಪಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದಾರೆ.

ಈ ಸಂಗ್ರಹಯೋಗ್ಯ ಕೃತಿಯಲ್ಲಿ ಇರುವ ಲೇಖನಗಳು – ಡಾ. ಮೋಹನ ನಾಯ್ಕರು ಬರೆದ 'ಹಿನ್ನೆಲೆ: ಭೌಗೋಳಿಕ ನೆಲೆ, ವಲಸೆ, ವಿಕಾಸ, ಕಾರಣ'; ಸಂಜೀವ ನಾಯ್ಕ ಅವರ 'ಹೋಳಿ ಹುಣ್ಣಿಮೆ ಅಥವಾ ಸಿಗ್ಮೋ'; ಡಾ. ಅಶೋಕ ಆಳ್ವರ 'ಗೋಂದೋಲು ಪೂಜೆಯ ತಾತ್ವಿಕ ಅಧ್ಯಯನ'; ಡಾ. ಅಶೋಕ ಆಳ್ವರ 'ಬಾಲೆಸಾಂತ್ ಮರಾಟಿಗರ ಅಪೂರ್ವ ಜಾನಪದ ಕುಣಿತ'; ಡಾ. ಅಶೋಕ ಆಳ್ವರೇ ಸಂಗ್ರಹಿಸಿರುವ 'ಮರಾಟಿಗರ ಸಾಂದರ್ಭಿಕ ಹಾಡುಗಳು'; ಪ್ರಫುಲ್ಲ ಅವರ 'ಮರಾಟಿಯವರಲ್ಲಿ ಮದುವೆ ಸಂಪ್ರದಾಯ'; ವೆಂಕಟೇಶ ನಾಯ್ಕರ 'ಮರಾಟಿಯವರಲ್ಲಿ ಅಪರಕ್ರಿಯೆ'; ಕೆ. ಶ್ರೀನಿವಾಸ ನಾಯ್ಕರು ಸಂಗ್ರಹಿಸಿರುವ 'ಮರಾಟಿಯವರ ಉಪನಾಮ ಕುಲದೇವರು– ಗುರುಗಳು ಗೋತ್ರಗಳು' ಇವುಗಳು. ಕೊನೆಯಲ್ಲಿ ಈ ಸೀಮೆಯ ಮರಾಟಿ ಜನಾಂಗದ ಎರಡು ಪ್ರಮುಖ ಆರಾಧನಾ ಕ್ಷೇತ್ರಗಳಾದ 'ಶ್ರೀ ದುರ್ಗಾಪರಮೇಶ್ವರೀ ಗದ್ದಿಗೆ ಅಮ್ಮನವರ ದೇವಸ್ಥಾನ, ಅಂಜಾರು' (ಪ್ರದೀಪ ನಾಯ್ಕ) ಮತ್ತು 'ಶ್ರೀ ಸಿಂಹವಾಹಿನಿ ದುರ್ಗಾ ಪರಮೇಶ್ವರೀ ಗದ್ದಿಗೆ ಅಮ್ಮನವರ ದೇವಸ್ಥಾನ, ಗಂಪ – ಹಿರಿಯಡಕ' (ವೆಂಕಟೇಶ ನಾಯ್ಕ) ಇವುಗಳ ಕುರಿತು ಲೇಖನಗಳಿವೆ. ಅನುಬಂಧ ರೂಪದಲ್ಲಿ 'ಉಡುಪಿ ಜಿಲ್ಲೆಯ ಮರಾಟಿ ಸಮುದಾಯದ ಗದ್ದುಗೆ ದೇವಸ್ಥಾನಗಳು' ಎಂಬ ಪಟ್ಟಿ ಇದೆ.

ಇಷ್ಟು ಮಾಹಿತಿ, ಅಧ್ಯಯನ, ಚಿಂತನೆ ಮತ್ತು ದಾಖಲೀಕರಣಗಳು ಒಂದು ಕಡೆ ಇದ್ದರೆ ಸಮುದಾಯದ ಸದಸ್ಯರಿಗೂ, ಆಸಕ್ತ ಅಧ್ಯಯನಕಾರರಿಗೂ ಯಥೇಷ್ಟವಾದ ಒಂದು ಆಕರ ದೊರಕಿದಂತಾಯಿತು. ಇದರಲ್ಲಿ ಎಂಟು ಕಲರ್ ಪುಟಗಳಲ್ಲಿ ಉಪಯುಕ್ತ ವರ್ಣಚಿತ್ರಗಳಿವೆ.

ಮರಾಟಿ ಸಮುದಾಯದವರು ಕರ್ನಾಟಕದ ದಕ್ಷಿಣ ಕರಾವಳಿಯಲ್ಲಿ ಮತ್ತು ಕಾಸರಗೋಡಿಗೆ ವಲಸೆ ಬಂದಿರುವ ಎರಡು ಮೂರು ಸಂದರ್ಭಗಳನ್ನು ಈ ಕೃತಿ ಗುರುತಿಸಿದೆ. ಮಹಾರಾಷ್ಟ್ರದಲ್ಲಿ ಕನ್ನಡಿಗರ ರಾಜ್ಯಗಳಿದ್ದರಿಂದ ಹಿಂದಿನಿಂದಲೇ ಈ ರಾಜ್ಯಗಳ ನಡುವಿನ ವಲಸೆ ನಡೆದಿರುವ ಸಾಧ್ಯತೆ ಇದೆ. 16 ನೆಯ ಶತಮಾನದಲ್ಲಿ ಕರಾಡ ಬ್ರಾಹ್ಮಣರ ವಲಸೆಯೊಂದಿಗೆ ಮರಾಟಿ ಜನಾಂಗದವರೂ ಬಂದಿದ್ದಾರೆ, ಕೆಳದಿ ಅರಸರ ಕಾಲದಲ್ಲಿ ಅವರು ಇಲ್ಲಿ ನೆಲೆಸಿರಬೇಕು ಎನ್ನುವುದು ಡಾ. ರಾಧಾಕೃಷ್ಣ ಬೆಳ್ಳೂರು ಅವರ ಅಭಿಮತ. ಅದೇ ಕಾಲದ (16 ನೆಯ ಶತಮಾನ) ಗೋವಾದ ಪೋರ್ಚುಗೀಸ್ ಇನ್ಕ್ವಿಸಿಷನ್ ಸಂದರ್ಭದಲ್ಲಿಯೂ ಮತ್ತೊಂದು ವಲಸೆ ನಡೆದಿರಬಹುದು. ಕೆಲವು ದಶಕಗಳ ನಂತರ ಶಿವಾಜಿ, ಔರಂಗಜೇಬರ ಕಾಲದಲ್ಲಿಯೂ (17 ನೆಯ ಶತಮಾನ) ವಲಸೆ ನಡೆದಿರಬಹುದು. ಸಂಜೀವ ನಾಯ್ಕರ ಲೇಖನದ ಪ್ರಕಾರ, 'ಕ್ರಿ.ಶ. 1001 ರಿಂದ 1310 ರವರೆಗೆ ಉತ್ತರದ ಮುಸಲ್ಮಾನರ ದಾಳಿಯಿಂದ ಹಾಗೂ ಮಹಾರಾಷ್ಟ್ರದಲ್ಲಿ ಆಗಾಗ ತಲೆದೋರುತ್ತಿದ್ದ ಕ್ಷಾಮಗಳು, ಅಲ್ಲಿಯ ಜನರನ್ನು ಬಲಾತ್ಕಾರವಾಗಿ ಮತಾಂತರಗೊಳಿಸಲು ನಡೆಸಿದ ದುಷ್ಕೃತ್ಯದಲ್ಲಿ ನೊಂದ ಹಾಗೂ ಮಾರಣಾಂತಿಕ ಆಘಾತಕ್ಕೆ ಒಳಗಾದ ಮರಾಟಿಗರು.... ಕರ್ನಾಟಕ ಹಾಗೂ ಕೇರಳದ ಗಿರಿ ಕಂದರಗಳತ್ತ ವಲಸೆ ಬಂದು ಅಲ್ಲಿಯೇ ಕುಮೇರಿ ಬೇಸಾಯ ಮಾಡಿಕೊಂಡು ಜೀವನ ಕಟ್ಟಿಕೊಂಡವರು.' (ಪುಟ 11)



ಮರಾಟಿ ಜನಾಂಗದ ಸಾಂಸ್ಕೃತಿಕ ಆಚರಣೆಗಳು
ಸಂ: ಸಂಜೀವ ನಾಯ್ಕ ಮತ್ತು ವೆಂಕಟೇಶ ನಾಯ್ಕ
ಪ್ರ: ಶ್ರೀ ದುರ್ಗಾಪರಮೇಶ್ವರಿ ಮರಾಟಿ ಸಮುದಾಯ ಕಲಾ ಸಂಘ (ರಿ), ಹಿರಿಯಡ್ಕ.
ಪುಟಗಳು: 132. ಬೆಲೆ: ರೂ. 150/-

ಇವರು ಮರಾಠಿಯ ಉಪಭಾಷೆಯೊಂದನ್ನು ಆಡುತ್ತಾರೆ. ಇದು ಕನ್ನಡಕ್ಕಿಂತ ತುಳುವಿನ ಪ್ರಭಾವಕ್ಕೆ ಹೆಚ್ಚು ಒಳಗಾಗಿದೆ. ತುಳುನಾಡಿನಲ್ಲಿಯೇ ಇವರು ಪ್ರಧಾನವಾಗಿ ನೆಲೆಸಿರುವುದಾಗಿದೆ. ಇವರ ಪ್ರಧಾನ ಕಸುಬು ಕೃಷಿ. ಇವರಿಗಿಂತ ಮುಂಚೆಯೆ ದಕ್ಷಿಣ ಕನ್ನಡಕ್ಕೆ ವಲಸೆ ಬಂದಿರುವ ಗೌಡ (ಒಕ್ಕಲಿಗ) ಮುಂತಾದ ಜನಾಂಗಗಳು ಕಾಡು, ಗುಡ್ಡಗಳನ್ನು ಕಡಿದು ಫಲವತ್ತಾದ ಕೃಷಿ ಭೂಮಿಗಳನ್ನು ಮೊದಲೇ ನಿರ್ಮಿಸಿಕೊಂಡದ್ದರಿಂದ ಇವರು ಸ್ವಲ್ಪ ದುರ್ಗಮವಾಗಿದ್ದ ಕಾಡಿನ ಅಂಚುಗಳಲ್ಲಿ ನೆಲೆಸಿ, ಕಷ್ಟಪಟ್ಟು ಗದ್ದೆ, ಕುಮೆರಿಗಳನ್ನು ನಿರ್ಮಿಸಿಕೊಂಡರು. ಬ್ರಿಟಿಷರು ಇವರನ್ನು ಶೋಷಿತ ವರ್ಗ (ಡಿಪ್ರೆಸ್ಡ್ ಕ್ಲಾಸ್) ಎಂದು ಗುರುತಿಸಿ ಶಿಕ್ಷಣ ಮತ್ತು ಕೃಷಿಗಾಗಿ ಜಮೀನನ್ನು (ದರ್ಖಾಸ್ತು ಜಮೀನುಗಳು) ಮಂಜೂರು ಮಾಡಿದ ಕಾರಣ ಇವರ ಸ್ಥಿತಿ ಸ್ವಲ್ಪ ಸುಧಾರಿಸಿತು. ಸ್ವತಂತ್ರ ಭಾರತದಲ್ಲಿ ಇವರನ್ನು ಪರಿಶಿಷ್ಟ ಪಂಗಡದಲ್ಲಿ ಗುರುತಿಸಲಾಗಿದೆ.

ಅವರು ತಮ್ಮ ಆರಾಧನಾ ಸಂಪ್ರದಾಯಗಳನ್ನು ಇನ್ನೂ ಅನೂಚಾನವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಮುಖ್ಯವಾಗಿ ಗೋಂದೋಲು ಆಚರಣೆ, ಹೋಳಿ ಕುಣಿತ, ಭೈರವ ಆರಾಧನೆ, ಬಾಲ್ ಸಾಂತು ಇತ್ಯಾದಿಗಳನ್ನು ಈ ಕೃತಿಯಲ್ಲಿ ಚೆನ್ನಾಗಿ ಪರಿಚಯಿಸಿ, ವಿಶ್ಲೇಷಿಸಲಾಗಿದೆ. ಗೋಂದೋಲು ಪೂಜೆಯನ್ನು ನಡೆಸಬೇಕಾದರೆ ಅಮ್ಮನವರ ದೇವಸ್ಥಾನದಿಂದ ಗದ್ದುಗೆಯನ್ನು ತಂದು ಪೂಜಿಸಬೇಕು. ರಾತ್ರಿ ಹೊತ್ತು ನಡೆಸುವ ಈ ಪೂಜೆಯಲ್ಲಿ ಮಂಡಲ ಬರೆದು, ಗದ್ದಿಗೆ ಸ್ಥಾಪಿಸಿ, ದೀಪ ಮತ್ತು ದೊಂದಿಗಳನ್ನಿಟ್ಟು ಪೂಜೆ ಸಲ್ಲಿಸಲಾಗುತ್ತದೆ. ಸಮೀಪದಲ್ಲಿಯೇ ಭೈರವನ ಸಾನ್ನಿಧ್ಯವನ್ನೂ ಆವಾಹಿಸಿ ಅರ್ಚಿಸಲಾಗುತ್ತದೆ. ಹಂದಿ ಅಥವಾ ಕೋಳಿ ಪ್ರಾಣಬಲಿ ನೀಡಿಯೂ ಗೋಂದೋಲು ಪೂಜೆ ಮಾಡುತ್ತಾರೆ. ಅದರ ಭಾಗವಾಗಿ ಗೋಂದೋಲು ಕುಣಿತವೂ ಇದೆ. ಇದು ಪ್ರಾಚೀನ ಜನರು ಯುದ್ಧಕ್ಕೆ ಹೊರಡುವ ಮೊದಲು ಯುದ್ಧದಲ್ಲಿ ಗೆಲುವು ತಂದುಕೊಡುವಂತೆ ದುರ್ಗೆಯನ್ನು ಪೂಜಿಸಿ ನಡೆಸುವ ಉಗ್ರ ನರ್ತನದಂತೆ ಕಂಡುಬರುತ್ತದೆ ಎಂದು ಗೋಂದೋಲು ಕುಣಿತದ ಬಗ್ಗೆ ಫಿನ್ಲೆಂಡಿನ ಜಾನಪದ ತಜ್ಞ ಆಸ್ಕೋ ಪರ್ಪೋಲ ಅಭಿಪ್ರಾಯಪಟ್ಟಿದ್ದಾರೆ. (ಪುಟ 40) – ಇತ್ಯಾದಿ ವಿವರಗಳು ಡಾ. ಅಶೋಕ ಆಳ್ವರ ಲೇಖನದಲ್ಲಿವೆ. ಅವರು ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಿದ್ದು ಅವರ ಮೂರು ಬರಹಗಳು ಅಮೂಲ್ಯವಾಗಿವೆ. ಒಟ್ಟಿನಲ್ಲಿ ಇದೊಂದು ಜನಾಂಗೀಯ ಸಂಸ್ಕೃತಿಯ ಮಾಹಿತಿಗಳ ದಾಖಲೀಕರಣ ಕೃತಿ, ಸಂಗ್ರಹಿಸಿಟ್ಟುಕೊಳ್ಳಬೇಕಾದುದು.

ಪರ್ಯಾಯ ಚಿಕಿತ್ಸೆಯ ಪರಿಚಯ

» ಶಶಿಕಿರಣ

ಇಂದಿನ ಆಧುನಿಕ ಜೀವನ ಶೈಲಿಯಲ್ಲಿ ಹಲವು ರೀತಿಯ ಕಾಯಿಲೆಗಳು ಮನುಷ್ಯನನ್ನು ಕಾಡುತ್ತಿವೆ; ಇವುಗಳ ನಿವಾರಣೆಗೆ ಪರ್ಯಾಯ ಚಿಕಿತ್ಸೆಯಲ್ಲಿ ಅವಕಾಶಗಳಿವೆ ಎಂದು ತಿಳಿಸುತ್ತವೆ, ಈ ಗ್ರಂಥದ ಮೂರು ಸಂಪುಟಗಳು.

ವೃತ್ತಿಯಲ್ಲಿ ಭಾರತೀಯ ಆಡಳಿತಾತ್ಮಕ ಸೇವೆಯಲ್ಲಿ (ಐಎಎಸ್) ಹಿರಿಯ ಅಧಿಕಾರಿಯಾಗಿರುವ ಡಾ. ಡಿ.ಎಸ್. ವಿಶ್ವನಾಥ್ ಅವರಿಗೆ ಆರೋಗ್ಯದ ಕುರಿತು ಅಪಾರ ಕಾಳಜಿ; ಪರ್ಯಾಯ ಚಿಕಿತ್ಸೆಯಲ್ಲಿ (ಆಲ್ಟರ್‌ನೇಟಿವ್ ಹೀಲಿಂಗ್) ನಲ್ಲಿ ಸಂಶೋಧನೆ ಮಾಡಿರುವ ವಿಶ್ವನಾಥ್ ಅವರು, ಧ್ಯಾನ, ಆರೋಗ್ಯ ಚಕ್ರಗಳು, ಬಿಂದು ಚಿಕಿತ್ಸೆ , ಅಯಸ್ಕಾಂತ ಚಿಕಿತ್ಸೆ, ಪುಷ್ಪಗಳಿಂದ ರೋಗ ನಿಧಾನ – ಈ ರೀತಿ ಹಲವು ಚಿಕಿತ್ಸಾ ಪದ್ಧತಿಗಳಲ್ಲಿ ಪರಿಣತಿ ಸಾಧಿಸಿದ್ದಾರೆ. ತಮ್ಮ ಅನುಭವವನ್ನು ಅವರು ಮೂರು ಸಂಪುಟಗಳಲ್ಲಿ ಅಡಕಗೊಳಿಸಿದ್ದು, ಒಂದೊಂದು ಸಂಪುಟವೂ ವಿವರವಾಗಿ ವಿವಿಧ ಚಿಕಿತ್ಸಾ ವಿಧಾನಗಳನ್ನು ಪ್ರಸ್ತುತಪಡಿಸುತ್ತದೆ. ಈ ಪುಸ್ತಕದಲ್ಲಿರುವ ಚಿತ್ರಗಳು, ಓದುಗರಿಗೆ ಆಯಾ ಚಿಕಿತ್ಸಾಪದ್ಧತಿಯನ್ನು ಹೆಚ್ಚು ಅರಿತುಕೊಳ್ಳಲು ಸಹಕಾರಿ. ವೃತ್ತಿ ಜವಾಬ್ದಾರಿಯ ನಡುವೆಯೂ, ಅಪಾರ ಶ್ರಮ ಹಾಕಿ ಈ ಮೂರು ಸಂಪುಟಗಳನ್ನು ಅವರು ರಚಿಸಿದ್ದಾದರೂ ಏಕೆ? ಈ ಕುರಿತು 'ನಾನೇಕೆ ಈ ಪುಸ್ತಕ ಬರೆದೆ' ಎಂಬ ಅಧ್ಯಾಯದಲ್ಲಿ ತಮ್ಮ ಮನದ ಇಂಗಿತವನ್ನು ತೋಡಿಕೊಂಡಿದ್ದಾರೆ. ತಾವೇ ಸ್ವತಃ ಹಲವು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದು, ಬಿಂದು ಚಿಕಿತ್ಸೆ ಮತ್ತು ಜೀವನ ಶೈಲಿ ಬದಲಾವಣೆಯಿಂದ, ಆ ಸಮಸ್ಯೆಗಳನ್ನು ದೂರಮಾಡಿಕೊಂಡು, ಮಾತ್ರೆಗಳನ್ನೂ ತ್ಯಜಿಸುವ ಉತ್ತಮ ಮಟ್ಟಕ್ಕೆ ಬಂದಿದ್ದು, ತಮ್ಮ ಅನುಭವವನ್ನು ಇತರರ ಲಾಭಕ್ಕೆ ಉಪಯೋಗಿಸಲು ಮತ್ತು ವಿವರಗಳನ್ನು ಇತರರಿಗೆ ತಿಳಿಸಲು ಈ ಪುಸ್ತಕಗಳನ್ನು ಬರೆದಿದ್ದೇನೆಂದು ಹೇಳಿಕೊಂಡಿದ್ದಾರೆ. (ಪುಟ 10–38, ಭಾಗ ಒಂದು). ಈ ಪುಸ್ತಕಗಳು ಮೂರು ಸಂಪುಟಗಳಲ್ಲಿದ್ದು, ಒಟ್ಟು ಸುಮಾರು 900 ಪುಟಗಳಿವೆ; ಮಧುಮೇಹ, ಕೊಲೆಸ್ಟ್ರಾಲ್, ಥೈರಾಯ್ಡ್ ಮತ್ತು ನಾನಾ ರೀತಿಯ ಆರೋಗ್ಯ ಸಮಸ್ಯೆಗಳ ವಿವರವಾದ ಚರ್ಚೆ ಮತ್ತು ಅದಕ್ಕೆ ಸೂಕ್ತ ಎನಿಸಬಹುದಾದ ಚಿಕಿತ್ಸೆಯ ವಿವರಗಳಿವೆ. ಇವರಿಂದ ಚಿಕಿತ್ಸೆ ಪಡೆದು, ಆರೋಗ್ಯ ಸಮಸ್ಯೆಯನ್ನು ನಿವಾರಿಸಿಕೊಂಡ ಕೆಲವರ ಉದಾಹರಣೆಗಳನ್ನು ಸಹ ಇಲ್ಲಿ ನೀಡಲಾಗಿದೆ. (ಆರೋಗ್ಯ ಶಾಸ್ತ್ರದ ದೃಷ್ಟಿಯಿಂದ ಸ್ವಯಂ ಚಿಕಿತ್ಸೆ ಸಲ್ಲದು.)



ಆರೋಗ್ಯ ಮತ್ತು ಚಿಕಿತ್ಸೆಗಳು
(ಮೂರು ಭಾಗ)
ಲೇ: ಡಾ. ಡಿ.ಎಸ್.ವಿಶ್ವನಾಥ್
ಪ್ರ: ಗಣೇಶ್ ಪಬ್ಲಿಕೇಷನ್ಸ್
ಬೆಂಗಳೂರು
9632476333
ಬೆಲೆ ರು.999/-

ಈ ಮೂರು ಸಂಪುಟಗಳಲ್ಲಿ ಮುಖ್ಯವಾಗಿ ಬಿಂದು ಚಿಕಿತ್ಸೆ, ಅಯಸ್ಕಾಂತೀಯ ಚಿಕಿತ್ಸೆ ಮತ್ತು ಆಹಾರದಲ್ಲಿ ಬದಲಾವಣೆ, ಮಾನಸಿಕ ಸ್ಥಿಮಿತ, ಜೀವನದಲ್ಲಿ ಶಾಂತಿ ಮತ್ತು ಜೀವನಶೈಲಿಯ ನಿರ್ವಹಣೆಯ ಕುರಿತು ಹಲವು ವಿಚಾರಗಳನ್ನು ಚರ್ಚಿಸಲಾಗಿದೆ. ಇವೆಲ್ಲಾ ವಿವರಗಳನ್ನು ಡಾ. ಡಿ. ಎಸ್.ವಿಶ್ವನಾಥ್ ಅವರು ಸ್ವಾನುಭವದಿಂದ ತರ್ಕಿಸಿ, ಪ್ರಸ್ತುತಪಡಿಸಿರುವುದು ಗಮನಾರ್ಹ ಎನಿಸುತ್ತದೆ. ಆರೋಗ್ಯ ಸಮಸ್ಯೆಗಳಿಗೆ ಪರ್ಯಾಯ ಚಿಕಿತ್ಸೆಯ ಕುರಿತು ವಿವರ ತಿಳಿಯಲು ಈ ಮೂರು ಸಂಪುಟಗಳು ನಿಜಕ್ಕೂ ಉತ್ತಮ ಆಕರ ಎನಿಸಿವೆ.

ಅರ್ಥಪೂರ್ಣ ಕವಿತೆಗಳು

» ಶಹಾ

ನಿರಂತರವಾಗಿ ಅರ್ಥಪೂರ್ಣ ಕವನಗಳನ್ನು ಬರೆದುಕೊಂಡು ಬರುತ್ತಿರುವ ಕವಿ ವಾಸುದೇವ ನಾಡಿಗ್ ಅವರ ಹೊಸ ಕವನ ಸಂಕಲನ 'ಕಾಲಾಂತರಕ್ಕೊಂದು ಕನ್ನಡಿ' ಗಮನ ಸೆಳೆಯುವಂತಹ ಕೃತಿ. ಸುಮಾರು 65 ಕವನಗಳನ್ನು ಹೊಂದಿರುವ ಈ ಸಂಕಲನದಲ್ಲಿ, ಕೆಲವು ಕವನಗಳು ಚಿಕ್ಕವು ಎನಿಸಿದರೆ, ಇನ್ನು ಕೆಲವು ಕವನಗಳು ತುಸು ದೀರ್ಘ. ಸಮಕಾಲೀನ ವಿದ್ಯಮಾನಗಳನ್ನು ಆಯ್ದುಕೊಂಡು, ಅದಕ್ಕೊಂದು ಅರ್ಥಪೂರ್ಣ ಚೌಕಟ್ಟನ್ನು ನೀಡಿ ಕಾವ್ಯಾನುಭವ ನೀಡುವಲ್ಲಿ ನಾಡಿಗರು ಸಿದ್ಧಹಸ್ತರು. ಇದಕ್ಕೆ ಉದಾಹರಣೆಯಾಗಿ 'ಮಿಸ್ಟರ್ ಬೀನ್ ಮತ್ತು ವೀಣೆ' ಕವನವನ್ನು ಗಮನಿಸಬಹುದು. (ಪುಟ 82)

ಅವರಿವರ ಅನುಕರಿಸುವ ಬೀನನ
ವ್ಯಂಗ್ಯ ಯಾರೂ ಅನುಕರಿಸಲಾರರು
ಬಿದ್ದು ಹೊರಳಾಡುವಂತೆ ನಗಿಸುವಾಗೆಲ್ಲ
ಕಣ್ಣಂಚಿನಲ್ಲಿ ಯಾಕೊ ಹನಿ ಉರುಳಾಡುತ್ತದೆ
..ಮಿಸ್ಟರ್ ಬೀನನ ಕೈಗೆ ಒಮ್ಮೆ ವೀಣೆ ಕೊಡಬೇಕು
ತಂತಿಗಳ ಕಿತ್ತೋ ಬೆರಳ ಸಿಕ್ಕಿಸಿಕೊಂಡೂ
ಪೆಟ್ಟು ಗೆರೆ ರಕ್ತ ಗಾಯ ಬರೆಸಿಕೊಂಡೂ
ನಗೆಯ ನಾದ ಹೊಮ್ಮುವುದ ಕಾಣಬೇಕು.

'ಇಲ್ಲಿನ ಕವಿತೆಗಳ ವಸ್ತುವಿನಲ್ಲಿಯ ವೈವಿಧ್ಯ ಬೆರಗು ಹುಟ್ಟಿಸುವಂಥದ್ದು. ಮಿಸ್ಟರ್ ಬೀನ್‌ನಿಂದ ಹಿಡಿದು ಗೆಳೆಯ ಶ್ರೀರಾಮ್ ಅವರ ಮಗಳವರೆಗೆ ಇಲ್ಲಿ ಹಾಯ್ದು ಹೋಗುವ ಪ್ರತಿ ಪಾತ್ರವನ್ನು ನಾಡಿಗರು ಚಿತ್ರಿಸುವ ರೀತಿ ಅತ್ಯಂತ ಆಪ್ತವಾದುದು. ಕವನ ಸಂಕಲನದುದ್ದಕ್ಕೂ ನಾಡಿಗರ ಸ್ವಭಾವಸಹಜವಾದ ಆಪ್ತತೆ ಪ್ರತಿಯೊಂದು ಕವಿತೆಯನ್ನೂ ನನ್ನ ಕವಿತೆ ಎಂದು ಓದಿಸಿಕೊಳ್ಳುತ್ತದೆ ಮತ್ತು ಯಾವಾಗ ಕವಿತ ನನ್ನದಾಗುತ್ತದೆಯೋ ಆಗ ಆ ಕವಿತ ಜಗತ್ತಿನದ್ದೂ ಆಗುತ್ತದೆ.' (ಬೆನ್ನುಡಿಯಲ್ಲಿ ಚಿದಂಬರ ನರೇಂದ್ರ)

ಕಾಲಾಂತರಕ್ಕೊಂದು ಕನ್ನಡಿ
ಲೇ: ವಾಸುದೇವ ನಾಡಿಗ್
ಪ್ರ: ಅವ್ಯಕ್ತ ಪ್ರಕಾಶನ, ಬೆಂಗಳೂರು
8792693438
ಬೆಲೆ ರು.195/-

ಸುನಂದಾರ ಝುವಾದಿ

ಆಫ್ರಿಕಾದ ಟಾಂಜಾನಿಯಾ ರಾಜ್ಯದ ಹಿನ್ನೆಲೆ ಹೊಂದಿರುವ ಝುವಾದಿ ಕಾದಂಬರಿಯು, ಕನ್ನಡದ ಮುಖ್ಯ ಕಾದಂಬರಿಗಳಲ್ಲೊಂದು.

» ಡಾ. ಸುಭಾಷ್ ಪಟ್ಟಾಜೆ

ಆಫ್ರಿಕಾದ ಸ್ವಾಹಿಲಿ ಭಾಷೆಯಲ್ಲಿ 'ಝುವಾದಿ' ಎಂದರೆ ಕಾಣಿಕೆ ಎಂದರ್ಥ. ದೇವರ ಕಾಣಿಕೆಯಾಗಿರುವ ಮಾನವ ಜನ್ಮವನ್ನು ಸಾರ್ಥಕಗೊಳಿಸಬೇಕು ಎಂಬ ದನಿಯು ಇಲ್ಲಿದೆ. ಆಫ್ರಿಕಾ ದೇಶದ ಟಾಂಜಾನಿಯಾ ರಾಜ್ಯದ ಜನರ ಪಾಲಿಗೆ ಸಿಂಬಾ (ಸಿಂಹ) ಎಂದರೆ ದೇವದೂತ. ಸಿಂಬಾದ ಸಂಸಾರದ ಕತೆಯು ಶಂಕರರಾಯರ ಸಂಸಾರದ ಕತೆಯ ಪ್ರತಿಬಿಂಬವಾಗಿದೆ. ಸಿಂಬಾನಲ್ಲಿ ಅವರು ತಮ್ಮನ್ನು, ಕ್ವೀನಳಲ್ಲಿ ಸೌದಾಮಿನಿಯನ್ನು, ಮರಿಗಳಲ್ಲಿ ತನ್ನ ಮಕ್ಕಳಾದ ಅಭಿ ಮತ್ತು ಅಂಜಲಿಯರನ್ನು, ಸಿಂಬಾನ ಬದುಕಿಗೆ ಪ್ರವೇಶಿಸಿದ ಸಿಂಹಿಣಿ ಕ್ಲಿಯೋಪಾತ್ರಾಳನ್ನು ತನ್ನ ಅಬಚಿಯಾಗಿ ಕಾಣುವಲ್ಲಿ ಸಿಂಹಗಳ ಬದುಕು ಕಾದಂಬರಿಯ ಸುತ್ತ ಪ್ರತೀಕವಾಗಿ ರೂಪುಗೊಳ್ಳುತ್ತದೆ. ತನ್ನ ಅಪ್ಪನ ಎರಡನೇ ಹೆಂಡತಿಯಾದ ಅಬಚಿಯೊಂದಿಗಿನ ಸಹವಾಸವು ಶಂಕರರಾಯರ ಅರ್ಧ ಆಯುಷ್ಯವನ್ನು ವ್ಯರ್ಥಗೊಳಿಸಿದರೆ ಆಫ್ರಿಕಾದ ನೀಗ್ರೋ ಜನಾಂಗಕ್ಕೆ ಸೇರಿದ ಟೆಂಬೋನ ಮಾತುಗಳು ಅವರ ಬದುಕಿನ ದೃಷ್ಟಿಯನ್ನು ಬದಲಿಸುತ್ತದೆ.

ಹೆಂಡತಿಯ ಮೇಲೆ ಸಿಟ್ಟುಗೊಂಡ ಶಂಕರರಾಯರು ಉದ್ಯೋಗ ನಿಮಿತ್ತ ಆಫ್ರಿಕಾಕ್ಕೆ ತೆರಳಿದ ಬಳಿಕ ಅಲ್ಲಿನ ಅರಣ್ಯದಲ್ಲಿ ಸಿಂಹ – ಸಿಂಹಿಣಿಯರ ಸಂಸಾರವನ್ನು ಕಂಡು, ತಮ್ಮ ನಡೆ ನುಡಿಗಳನ್ನು ತಿದ್ದಿಕೊಂಡು ಊರಿಗೆ ಮರಳಿ ಹೆಂಡತಿ ಸೌದಾಮಿನಿಯ ಮುಂದೆ ತಪ್ಪೊಪ್ಪಿಕೊಂಡು ಪರಿಪೂರ್ಣತೆಯೆಡೆಗೆ ಚಲಿಸುವ ಪ್ರಕ್ರಿಯೆಯು ಈ ಕಾದಂಬರಿಯ ವಸ್ತು. ಅವರು ತಮ್ಮ ಬದುಕಿನ ಬೇರೆ ಬೇರೆ ಸಂದರ್ಭಗಳಲ್ಲಿ ಬಂದ ಹೆಂಗಸರ ಸ್ವಭಾವಗಳನ್ನು, ಅವರೊಂದಿಗಿನ ಸಂಬಂಧಗಳ ಸ್ವರೂಪವನ್ನು ವಿಮರ್ಶಿಸುವ, ಆತ್ಮವಿಮರ್ಶೆಯನ್ನು ಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದವರು ಎಂಬುದಕ್ಕೆ 'ಆಶಾ, ರೂತ ಪತಿಯಿದ್ದೂ ಪರಪುರುಷನಿಗೆ ಮನಸೋತು ಮಜಾ ಮಾಡುವ ಚಂಚಲೆಯರು. ಆದರೆ ಪೂರ್ಣಿಮಾ ಎಳೆ ಜೀವ. ಯೌವನದ ಶಾರೀರಿಕ ಎಳೆತ. ರೂಪ ಮೋಹಿಸಿ ಭಾವನೆಗಳಿಗೆ ಬಲಿಯಾಗಿ, ಭವಿಷ್ಯದ ಕಲ್ಪನೆಯಿಲ್ಲದೆ ತಪ್ಪುದಾರಿ ತುಳಿದಿದ್ದು ಕೇವಲ ಅವಳ ಯೌವನದ ತಪ್ಪಲ್ಲ. ಸಮಾಜದಲ್ಲಿ ಸಜ್ಜನ, ಪ್ರತಿಷ್ಠಿತ, ಬುದ್ಧಿವಂತ, ಐಶ್ವರ್ಯವಂತ ಎಂದು ಬೀಗುತ್ತಿದ್ದ ತಮ್ಮ ತಪ್ಪು' ಎಂಬ ಸಾಲುಗಳು ಸಾಕ್ಷಿಯಾಗುತ್ತವೆ. ಕಾದಂಬರಿಯು ಶಂಕರರಾಯರನ್ನು ಸಮರ್ಥಿಸದೆ, ಅವರ ಮೂಲಕ ಜಟಿಲವೂ ಸಂಕೀರ್ಣವೂ ಆದ ಪ್ರಶ್ನೆಗಳನ್ನು ಸೂಕ್ಷ್ಮವಾದ, ಪ್ರಬುದ್ಧವಾದ ಅನುಭವ, ವಿಶ್ಲೇಷಣೆಯ ಬೆಳಕಿನಲ್ಲಿ ಶೋಧಿಸಿ ತನ್ನ ದರ್ಶನಕ್ಕೆ ಅಧಿಕೃತತೆಯನ್ನು ಗಳಿಸಿಕೊಳ್ಳುತ್ತದೆ.

ಸಾಂಪ್ರದಾಯಿಕ ಬ್ರಾಹ್ಮಣ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬದುಕುತ್ತಿರುವ ಹಳ್ಳಿಯ ಜನರ ಸ್ಥಿತಿಗತಿಗಳನ್ನು ಚಿತ್ರಿಸುವ ಕಾದಂಬರಿಯಲ್ಲಿ ಸುಧಾರಣೆಯ ಆವೇಶವಾಗಲೀ ಸಮಾಜದ ಅಂಧಶ್ರದ್ಧೆಗಳ ಬಗ್ಗೆ ಆಕ್ರೋಶವಾಗಲೀ ಇಲ್ಲ. ಮಧ್ಯಂತರದಲ್ಲೇ ಆರಂಭಗೊಂಡು ಹಿನ್ನೋಟ ತಂತ್ರದ ಮೂಲಕ ವಿಷಯಗಳನ್ನು ನಿರೂಪಿಸುತ್ತಾ ಒಂದು ಕಾಲದ ಜೀವನಕ್ರಮವನ್ನು ಹಿಡಿದಿಡುವ ಕಾದಂಬರಿಯು ಮಾನವೀಯ ಸಂಬಂಧಗಳ ಸೂಕ್ಷ್ಮ ರೂಪವನ್ನು ವಿಶ್ಲೇಷಿಸುತ್ತದೆ. ಗಂಡು ಹೆಣ್ಣೆಂಬ ಭೇದವಿಲ್ಲದೆ ತಮಗೊದಗಿದ ಕಷ್ಟಕರ ಪರಿಸ್ಥಿತಿಯ ನಡುವೆ ಸಿಕ್ಕು ಅಸಹಾಯಕರಾದವರು ಸ್ವೀಕರಿಸುವ ದಿಟ್ಟ ನಿಲುವು, ಸಮಸ್ಯೆಗಳನ್ನು ಎದುರಿಸುವ ರೀತಿಯು ಮುಖ್ಯವಾಗುತ್ತದೆ. ಗಂಡಸರನ್ನು ಶೋಷಕರನ್ನಾಗಿಯೂ ಹೆಂಗಸರನ್ನು ಶೋಷಿತರನ್ನಾಗಿಯೂ ಕಲ್ಪಿಸಿ ಅಭ್ಯಾಸವಾದ ಹೊತ್ತಿನಲ್ಲಿ ಹೆಣ್ಣು ಕೂಡ ಹೆಣ್ಣನ್ನು ಶೋಷಣೆ ಮಾಡಬಲ್ಲಳು ಎಂಬುದನ್ನು ಧ್ವನಿಸುವ ಮೂಲಕ ಲೇಖಕಿಯು ವಸ್ತುಸ್ಥಿತಿಯ ಎರಡೂ ಮಗ್ಗುಲಿಗೆ ಕಣ್ಣುಹಾಯಿಸಿದ್ದಾರೆ. ಹಿಂದಿನ ತಲೆಮಾರಿನ ಬದುಕು ಮತ್ತು ಸಾಹಿತ್ಯದ ಅಧ್ಯಯನದ ಮೂಲಕ ಶಾಶ್ವತವಾದ ಜೀವನಸೂತ್ರಗಳನ್ನು ಕಂಡುಕೊಳ್ಳುವ ಕಾದಂಬರಿಯು ಸಂಪ್ರದಾಯ ನಿಷ್ಠ ಸಮಾಜವನ್ನು ನಿಷ್ಠೆಯಿಂದ ಚಿತ್ರಿಸುತ್ತಾ ಅದರಲ್ಲಿನ ಒಳಿತನ್ನು ಸ್ವೀಕರಿಸುವುದರೊಂದಿಗೆ ಜಡತ್ವವನ್ನು ಪ್ರಶ್ನಿಸುತ್ತದೆ.

ಝುವಾದಿ
ಲೇ: ಸುನಂದಾ ಬೆಳಗಾಂವಕರ
ಪ್ರ: ವಸಂತ ಪ್ರಕಾಶನ
ಬೆಂಗಳೂರು
080 22443996
ಬೆಲೆ ರು.250/-

ಧಾರವಾಡದ ಸಾಂಪ್ರದಾಯಿಕ ಬದುಕು ಮತ್ತು ದೇಸೀಯತೆಯು ಈ ಕಾದಂಬರಿಯ ವಿಶೇಷತೆಯಾಗಿದೆ. ನಿರೂಪಣೆಯನ್ನು ಶಿಷ್ಟ ಭಾಷೆಯಲ್ಲಿ ಬರೆದ ಲೇಖಕಿಯು ಸಂಭಾಷಣೆ ಯಲ್ಲಿ ದೇಸೀಯತೆಯನ್ನು ಮೆರೆದಿದ್ದಾರೆ. ಅವರ ಮನೋ ಭಾವವು ಸಂಕ್ಷೇಪಕ್ಕಿಂತ ವಿಸ್ತಾರದ ಕಡೆಗೆ ಒಲಿದಿದೆ. ರಚನೆಯ ರೂಪವನ್ನು ಗಮನಿಸದೆ, ಆತ್ಮೀಯರ ಎದುರು ಕುಳಿತು ನೆನಪುಗಳನ್ನು ತೋಡಿಕೊಳ್ಳುವ ರೀತಿಯಲ್ಲಿ ಬರೆದುದರಿಂದ ಅಪ್ರಸ್ತುತವೆನಿಸುವ ವಿಷಯಗಳು ಸೇರಿಕೊಂಡಿವೆ. ಆಫ್ರಿಕಾ ಮತ್ತು ಭಾರತ ದೇಶಗಳ ನಡುವಿನ ಸಾಂಸ್ಕೃತಿಕ ಭಿನ್ನತೆಯನ್ನು ಅಂಶಿಕವಾಗಿ, ಅದರಲ್ಲೂ ಮುಖ್ಯವಾಗಿ ಉತ್ತರ ಕರ್ನಾಟಕದ ಜೀವನವಿಧಾನವನ್ನು ದಟ್ಟವಾಗಿ ಕಟ್ಟಿಕೊಡುವ ಸಂದರ್ಭದಲ್ಲಿ ಕಾದಂಬರಿಯ ಮೊದಲ ಭಾಗಗಳು ಯಾತ್ರಾ ವಿವರಣೆಯಂತೆ ಭಾಸವಾಗುತ್ತವೆ. ಲೋಕಾಭಿರಾಮದ ಮಾತುಗಳು ಕಾದಂಬರಿಯ ಒಡಲಿಗೆ ಬೊಜ್ಜು ತರಿಸುತ್ತವೆ. ಏನೇ ಇದ್ದರೂ ಕಾದಂಬರಿಯ ವಸ್ತುವನ್ನು ಗ್ರಾಮ ಜೀವನದಿಂದಲೇ ಆರಿಸಿಕೊಂಡಿರುವ ಅವರು ಹಳ್ಳಿಯ ಬದುಕನ್ನು ಬಹಳ ಚೆನ್ನಾಗಿ ಪುನರ್ ಸೃಷ್ಟಿಸಿದರೇ ಹೊರತು ವೈಭವೀಕರಿಸಲಿಲ್ಲ.

ಈ ಕಾದಂಬರಿಯು ಪಾಪ, ಪಶ್ಚಾತ್ತಾಪ ಮತ್ತು ಪ್ರಾಯಶ್ಚಿತ್ತಗಳ ಕಥನವಾಗಿದೆ. ಇದು ಶಂಕರರಾಯರ ಮಡದಿ ಸೌದಾಮಿನಿಯ ಬದುಕಿನ ಘಟ್ಟಗಳನ್ನು, ಅನುಭವಿಸಿದ ಕಷ್ಟಗಳನ್ನು ಎದುರಿಸುತ್ತಾ, ಅವರ ವ್ಯಕ್ತಿತ್ವ ಮಾಗುತ್ತಾ ಹೋಗುವುದನ್ನು, ಪ್ರಬುದ್ಧ ನೋಟದಲ್ಲಿ ಬದುಕು ವ್ಯಾಖ್ಯಾನಕ್ಕೆ ಒಳಗಾಗುವುದನ್ನು ಧಾರವಾಡದ ಆಡುಮಾತಿನ ಲಯದಲ್ಲಿ ನಿರೂಪಿಸುತ್ತದೆ. ಆಫ್ರಿಕಾದಲ್ಲಿ ಸಿಂಬಾ ಮತ್ತು ಕ್ವೀನ್ ಎಂಬ ಸಿಂಹ ದಂಪತಿಗಳು ಅನುಭವಿಸುವ ಐಹಿಕ ಸುಖ ಶಂಕರರಾಯರ ದಾಂಪತ್ಯದ ಸೋಲಿಗೆ ವಿರುದ್ಧ ಪ್ರತಿಮೆಯಾಗುತ್ತದೆ. ಆ ಹಿನ್ನೆಲೆಯಲ್ಲಿ ಗಂಡು ಹೆಣ್ಣಿನ ಸಂಬಂಧದ ಮಾದರಿಗಳು, ಉಚ್ಚ ನೀಚ ತರತಮಗಳನ್ನು ಮೀರಿ ನಿಲ್ಲುವ ದುಃಖ ಯಾತನೆಗಳು, ತ್ಯಾಗ ಶರಣಾಗತಿಗಳ ಮೂಲಕ ದೊರಕುವ ಶಾಂತಿ, ಮನುಷ್ಯನ ಒಳ್ಳೆಯತನ ಮತ್ತು ಕೆಟ್ಟತನಗಳ ನಿದರ್ಶನಗಳು, ಸೋಲು ಗೆಲುವುಗಳು ಮೊದಲಾದ ಆಶಯಗಳು ಮೈದಾಳುತ್ತವೆ. ಗಂಡು ಹೆಣ್ಣಿನ ಸಂಬಂಧಗಳನ್ನು ಅವುಗಳ ಹಲವು ನೆಲೆಗಳಲ್ಲಿ, ವಿನ್ಯಾಸಗಳಲ್ಲಿ ಶೋಧಿಸುವ ಲೇಖಕಿಯು ದಾಂಪತ್ಯ ಬದುಕು ಮಾತ್ರ ಪೂರ್ಣ. ಆರೋಗ್ಯಕಾರಿ. ಉಳಿದ ರೀತಿಯ ಸಂಬಂಧಗಳು ಅಪೂರ್ಣ; ಅತೃಪ್ತಿಕರ. ಗಂಡುಹೆಣ್ಣಿನ ಸಂಬಂಧಗಳು ಎಲ್ಲಿ ಯಾವಾಗ ಬೇಕಿದ್ದರೂ ಏರ್ಪಡಬಹುದು. ಆದರೆ ಆ ಸಂಬಂಧಗಳು ವೈವಾಹಿಕ ಚೌಕಟ್ಟಿನಲ್ಲಿ ಮಾತ್ರ ಅರ್ಥಪೂರ್ಣವೆನಿಸುತ್ತದೆ. ಇದು ಕೇವಲ ಹೊರಗಿನ ಅವಲೋಕನಕ್ಕೆ ದಕ್ಕುವ ಸತ್ಯವಲ್ಲ, ಪ್ರತಿಯೊಂದು ಗಂಡು ಹೆಣ್ಣು ತಮ್ಮ ಅನುಭವದಲ್ಲಿ ಕಂಡುಕೊಳ್ಳಬೇಕಾದ ನಿಜ ಎಂಬ ತೀರ್ಮಾನಕ್ಕೆ ಬರುತ್ತಾರೆ. ಶಂಕರರಾಯ ಮತ್ತು ಸೌದಾಮಿನಿಯ ಚಾರಿತ್ರ್ಯವನ್ನು ನಿರೂಪಿಸುವಾಗ ಲೇಖಕಿಯು ಯಾರನ್ನೂ ವೈಭವೀಕರಿಸುವುದಿಲ್ಲ, ತೆಗಳುವುದಿಲ್ಲ. ಸೌದಾಮಿನಿಯ ಕಷ್ಟಗಳ ಬಗೆಯನ್ನು ಬಣ್ಣಿಸಿ ಕಣ್ಣೀರು ತರಿಸುವುದಿಲ್ಲ. ಇಬ್ಬರ ಸ್ಥಿತಿಯನ್ನು ವಿವರಿಸಿ ಅವರ ವ್ಯಕ್ತಿತ್ವದಲ್ಲಿ ಸುಪ್ತವಾಗಿದ್ದ ಸಾಧ್ಯತೆಗಳನ್ನು ಅನಾವರಣಗೊಳಿಸುತ್ತಾರೆ. ಸೌದಾಮಿನಿಯ ತಾಳ್ಮೆಯನ್ನು ಮಾತ್ರ ಹೊಗಳದೆ ಆಕೆಯ ಸಂಕಲ್ಪಬಲ ಮತ್ತು ಸಾತ್ವಿಕ ಛಲಗಳನ್ನು ಮುಂದಿಡುತ್ತಾರೆ. ತಾತ್ವಿಕವಾಗಿ ಆಕೆಯ ಲೋಕಗ್ರಹಿಕೆಯನ್ನು ಮತ್ತು ಭಾರತೀಯ ನಾರಿಯ ಪರಿಕಲ್ಪನೆಯನ್ನು ಒಪ್ಪಲು ಹಿಂದೇಟು ಹಾಕುವವರೂ ಆಕೆಯ ಸಾಚಾತನವನ್ನು ಅನುಮಾನಿಸಲಾರರು. ಆ ರೀತಿಯ ಪಾತ್ರ ಮಾದರಿಯನ್ನು ಲೇಖಕಿಯು ನೀಡಿದ್ದಾರೆ. ಆದರೆ ಮಾಸ್ತಿ, ಕಾರಂತ, ಎಂ. ತ್ರಿವೇಣಿ, ಕೆ. ಇಂದಿರಾ ಮೊದಲಾದವರ ಕೃತಿಗಳಲ್ಲಿ ಇಂಥ ಮಹಿಳೆಯರು ಕಾಣಿಸಿಕೊಂಡಿರುವುದರಿಂದ ಆ ಪಾತ್ರವನ್ನು ಒಂಟಿ ಮಾದರಿ ಎನ್ನಲು ಸಾಧ್ಯವಿಲ್ಲ.

ಬೆಳಗಾಂವಕರರು ಧಾರವಾಡದ ಮಣ್ಣಿನ ಕಂಪು ಮರುಕಳಿಸುವಂತೆ ಕೃತಿಗಳನ್ನು ಬರೆದಿದ್ದಾರೆ. ಉದ್ಯೋಗದ ನಿಮಿತ್ತ ಅವರು ತಮ್ಮ ಬದುಕಿನ ಬಹುಭಾಗವನ್ನು ವಿದೇಶದಲ್ಲಿ ಕಳೆದರೂ ಅವರ ಕೃತಿಗಳಲ್ಲಿ ಅಲ್ಲಿನ ಅನುಭವಗಳು ಕಂಡುಬರುವುದು ವಿರಳ. ಆದರೆ 'ಝುವಾದಿ'ಯಲ್ಲಿ ಆ ಅನುಭವಗಳನ್ನು ತರಲು ಶ್ರಮಿಸಿದ್ದಾರೆ. ಕೃತಿಗಳ ಗುಣಮಟ್ಟದ ಆಧಾರದಲ್ಲಿ ನೋಡಿದರೆ ಕನ್ನಡದ ಕಾದಂಬರಿ ಪರಂಪರೆಯಲ್ಲಿ ಬೆಳಗಾಂವಕರರಿಗೂ ಪ್ರಮುಖ ಸ್ಥಾನ ದೊರೆಯಬೇಕಿದೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಕರ್ಪೂರಿ ಠಾಕೂರ್
(ಸಮಾಜವಾದದ ಹರಿಕಾರ – ಜನನಾಯಕ – ಭಾರತರತ್ನ)
ಲೇ: ಡಾ| ಎಸ್. ಗುರುಮೂರ್ತಿ
ಪ್ರ: ಭವತಾರಿಣಿ ಪ್ರಕಾಶನ, ಬೆಂಗಳೂರು
ಬೆಲೆ : ರೂ 300/-



2
ಪೀಜಿ
(ಡೋಣೂರರ ಹೊಸ ಕಾದಂಬರಿ)
ಲೇ: ಸುಶೀಲಾ ಡೋಣೂರ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 330/-

3
ಪಾಕಿಸ್ತಾನದ ಐ.ಎಸ್.ಐ
(ಪಾಕಿಸ್ತಾನದ ಬೇಹುಗಾರಿಕಾ ಇಲಾಖೆಯನ್ನು ಕುರಿತು)
ಲೇ: ಡಾ| ಡಿ.ವಿ.ಗುರುಪ್ರಸಾದ್
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 495/-



4
ಫ್ರೇಗ್ರನ್ಸ್ ಆಫ್ ಗ್ವಾವ
(ಮಾರ್ಕ್ವೆಜ್ ಜೊತೆ ಒಂದು ಮಾತುಕತೆ)
ಲೇ: ಪ್ಲಿನಿಯೋ ಅಪುಲೆಯೋ ಮೆಂಡೋಝ
ಅನು : ಎಸ್. ಗಂಗಾಧರಯ್ಯ
ಪ್ರ: ಜೀರುಂಡೆ ಪುಸ್ತಕ, ಬೆಂಗಳೂರು
ಬೆಲೆ : ರೂ 175/-



5
ಜ್ಞಾನಸಿಂಧು
(ವೇದಾಂತ ಕಾವ್ಯ)
ಸಂ : ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ
ಪ್ರ: ಉದಯ ಪ್ರಕಾಶನ, ಬೆಂಗಳೂರು
ಬೆಲೆ : ರೂ 800/-



6
ನಿಮ್ಮದೀ ನೆಮ್ಮದಿ
(ಖುಷಿಯಾಗಿರಲು ಇದೊಂದೇ ಹಾದಿ)
ಲೇ: ಪದಚಿಹ್ನ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 180/-

7
ಸಿಗ್ನಲ್ ಜಂಪ್
(ದಿಕ್ಕು ತಪ್ಪಿದ ಕತೆಗಳು)
ಲೇ: ರವೀಂದ್ರ ಮುದ್ದಿ
ಪ್ರ: ಅವ್ವ ಪುಸ್ತಕಾಲಯ, ಬೆಂಗಳೂರು
ಬೆಲೆ : ರೂ 150/-



8
ಡಾ| ಶಿವರಾಮ ಕಾರಂತರ ವಾಚಿಕೆ
(ಕಾರಂತರ ಸಾಹಿತ್ಯದ ಪರಿಚಯ)
ಸಂ : ಡಾ| ಬಿ.ಮಾಲಿನಿ ಮಲ್ಯ
ಪ್ರ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಬೆಲೆ : ರೂ 300/-



9
ತೇಜಸ್ವಿ ಕೆಲವು ಪ್ರಸಂಗಗಳು
(ತೇಜಸ್ವಿ ಕುರಿತ ಕೆಲವು ಬರಹಗಳು)
ಲೇ: ಡಾ| ಎಚ್. ಎಸ್. ಸತ್ಯನಾರಾಯಣ
ಪ್ರ: ಆಲಂಪು ಪ್ರಕಾಶನ, ಮಾಲೂರು
ಬೆಲೆ : ರೂ 150/-



10
ಜಗಜ್ಯೋತಿ
(ಬಸವ ಧರ್ಮಗ್ರಂಥ)
ಲೇ: ಶ್ರೀ ಬಸವ ನವಲಿಂಗ ಶರಣರು
ಪ್ರ: ಶರಣ ಪ್ರಕಾಶನ, ಸಂತೆ ಕಡೂರು
ಬೆಲೆ : ರೂ 1000/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಒಡನಾಟ

» ಶ್ರೀಧರಮೂರ್ತಿ ಎನ್.ಎಸ್.

ಇತಿಹಾಸದ ಪುಟಗಳಿಗೆ ಸೇತುವೆಯಾದವರು

ಅವರ ಜೊತೆ ಮಾತಿಗೆ ಕುಳಿತರೆ ಇತಿಹಾಸದ ಪುಟಗಳು ಒಂದೊಂದಾಗಿ ತೆರೆದು ಕೊಳ್ಳುತ್ತಿದ್ದವು. ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್. ಎಂ.ವಿಶ್ವೇಶ್ವರಯ್ಯರಂತಹ ದಿಗ್ಗಜರನ್ನು ಅವರು ಕಂಡಿದ್ದರು. ಮಾಸ್ತಿ, ಬೇಂದ್ರೆ ಅವರಿಗೆ ಏಕ ವಚನದ ಗೆಳೆಯರಾಗಿದ್ದರು. ಕೆಂಗಲ್ ಹನುಮಂತಯ್ಯ, ದೇವರಾಜ ಅರಸರಂತಹವರೇ ಅವರನ್ನು ರಾಜಕೀಯ ಗುರುಗಳು ಎಂದು ಪರಿಗಣಿಸಿದ್ದರು. ಶೃಂಗೇರಿಯ ಜಗದ್ಗುರು ಚಂದ್ರಶೇಖರ ಭಾರತಿಗಳನ್ನು ನಿಕಟವಾಗಿ ಬಲ್ಲವರಾಗಿದ್ದರು.

ಅವರ ಹೆಸರು ಮ.ಸು.ಶ್ರೀನಿವಾಸ ರಾವ್. 1941ರಲ್ಲಿ 'ಉದಯ ಪ್ರಕಾಶನ'ವನ್ನು ಸ್ಥಾಪಿಸಿ ಅರವತ್ತು ವರ್ಷಗಳ ಕಾಲ ನಿರಂತರವಾಗಿ ನಡೆಸಿದರು. ತಲೆಯ ಮೇಲೆ ಪುಸ್ತಕಗಳನ್ನು ಹೊತ್ತು ಮಾರಿದರು. ನನಗೆ ಅವರ ಪರಿಚಯವಾಗಿದ್ದು ಕಥೆಗಾರರಾದ ಡಾ.ಬಿ.ಎನ್.ದಾಕ್ಷಾಯಣಿಯವರಿಂದ ಅವರ ಪುಸ್ತಕಕ್ಕೆ ನನ್ನಿಂದ ಮುನ್ನುಡಿ ಬರೆಸಿದಾಗ. ಅದಕ್ಕೆ ಶ್ರೀನಿವಾಸ ರಾಯರು ಪ್ರಕಾಶಕರು. ಹೀಗೆ ಪರಿಚಿತರಾದವರು ಬಹುಬೇಗ ಹತ್ತಿರವಾದರು. ಮನೆಯ ಹಿರಿಯರಂತೆ ಮಾರ್ಗದರ್ಶನ ಮಾಡಿದರು. ನಮ್ಮ ತಂದೆ ನಿಧನರಾದಾಗ ಅವರು ನೀಡಿದ ಬೆಂಬಲ ನಾನು ಯಾವತ್ತೂ ಮರೆಯಲಾರೆ.

ಶ್ರೀನಿವಾಸ ರಾಯರು ಮಂಡ್ಯ ಭಾಗದಲ್ಲಿ ಸ್ವಾತಂತ್ರ್ಯ ಚಳುವಳಿಯ ನೇತೃತ್ವ ವಹಿಸಿದವರು. 1936ರಲ್ಲಿ ಕರ್ನಾಟಕ ಏಕೀಕರಣದ ಕುರಿತು ಅವರು ಬರೆದ ಲೇಖನವನ್ನು ಯಾರೂ ಪ್ರಕಟಿಸದಾದಾಗ 'ಉದಯ ಕರ್ನಾಟಕ' ಎನ್ನುವ ಪ್ರಕಾಶನ ಸಂಸ್ಥೆ ಆರಂಭಿಸಿದರು. 1941ರಲ್ಲಿ ಅದನ್ನು 'ಉದಯ ಪ್ರಕಾಶನ' ಎಂದು ಬದಲಾಯಿಸಿದರು. ಎಚ್.ಎಂ. ಶಂಕರನಾರಾಯಣ ರಾವ್ ಮತ್ತು ಹೊಯ್ಸಳ ಅವರ ಸಂಪಾದಕೀಯ ಬಳಗದಲ್ಲಿದ್ದರು. ನಂತರ 'ಪ್ರತಿಭಾ' ಎನ್ನುವ ಪತ್ರಿಕೆಯನ್ನು ಆರಂಭಿಸಿದರು. ಅವರೇ ಸಂಪಾದಕ, ಪ್ರಕಾಶಕರು. ಬ್ರಿಟಿಷರ ಕೆಂಗಣ್ಣು ಇವರ ಪತ್ರಿಕೆಯ ಮೇಲಿತ್ತು. ಶಿವಪುರ ಸತ್ಯಾಗ್ರಹದ ಸಂದರ್ಭದಲ್ಲಿ ಇವರ ಮುದ್ರಣ ಯಂತ್ರ ಮುಟ್ಟುಗೋಲಾಯಿತು. ಮತ್ತೆ ಪತ್ರಿಕೆ ಮಾಡುವುದು ಕಷ್ಟವಾಗಿತ್ತು. ಹೀಗಾಗಿ ಎ.ಎನ್.ಮೂರ್ತಿ ರಾವ್, ನಾ.ಕಸ್ತೂರಿ, ತೀ.ನಂ.ಶ್ರೀಕಂಠಯ್ಯ ಅವರ ಒಂದು ಸಂಪಾದಕ ಮಂಡಳಿ ಮಾಡಿ, ಪುಸ್ತಕ ಪ್ರಕಟಣೆಗೆ ಗಮನ ನೀಡಿದರು. ಕಷ್ಟದ ದಿನಗಳಲ್ಲಿ ಧನ ಸಹಾಯ ಮಾಡಿದ ಮಾಸ್ತಿ, 'ನಮ್ಮಲ್ಲಿ ಓದುಗರಿದ್ದಾರೆ, ಅವರಿಗೆ ಪುಸ್ತಕಗಳನ್ನು ತಲುಪಿಸು' ಎಂದರು. ಅವರ ಮಾತಿನಂತೆ ಕೊನೆಯವರೆಗೂ ಅವರು ಯಾವುದೇ ಗ್ರಂಥಾಲಯದ ನೆರವನ್ನು ಅಪೇಕ್ಷಿಸದೆ ಮನೆ ಮನೆಗೆ ಪುಸ್ತಕವನ್ನು ಹೊತ್ತು ಮಾರಿದರು. ಜಗದ್ಗುರು ಚಂದ್ರಶೇಖರ ಭಾರತಿಗಳ ಬಳಿ ಕುಳಿತು ವಿಷಯ ಸಂಗ್ರಹಿಸಿ 'ಜಗದ್ಗುರು ವಾಣಿ' ಪುಸ್ತಕ ತಂದರು, ನಾ.ಕಸ್ತೂರಿಯವರ 'ಯದ್ವಾತದ್ವಾ' ಮತ್ತು ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಗರುಡಗಂಭದ ದಾಸಯ್ಯ' ಚೆನ್ನಾಗಿ ಮಾರಾಟವಾದವು. ಬಿ.ಎಂ.ಶ್ರೀ 'ಕನ್ನಡ ತಲೆ ಎತ್ತುವ ಬಗೆ' ಬರೆದು ಕೊಟ್ಟರು. ಅವರ ಪ್ರೇರಣೆಯಿಂದಲೇ ಎರಡಾಣೆ ಮಾಲಿಕೆ ಆರಂಭಿಸಿದರು. ಅದರಲ್ಲಿ ಬಂದ ವ್ಯಕ್ತಿ ಚಿತ್ರಗಳು ಜನ ಪ್ರಿಯವಾದವು. ಇದು ಸರ್.ಎಂ. ವಿಶ್ವೇಶ್ವರಯ್ಯನವರ ಗಮ ನಕ್ಕೂ ಬಂದು ತಮ್ಮ 'ಪ್ಲಾನ್ಡ್ ಎಕಾನಮಿ' ಪುಸ್ತಕವನ್ನು ಪ್ರಕಟ ಣೆಗೆ ಕೊಟ್ಟರು. ಸರ್.ಎಂ.ವಿಯವರದ್ದೇ ನಾಲ್ಕು ಪುಸ್ತಕಗಳು ಅವರ ಪ್ರಕಾಶನದಿಂದ ಬಂದವು. ಹಳೆ ಮೈಸೂರು ಭಾಗದಲ್ಲಿ, ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂದು ಹೆಸರಿಸುವ ಕುರಿತು ಒಲ ವಿರಲಿಲ್ಲ. ಶ್ರೀನಿವಾಸ ರಾಯರು ಅದಕ್ಕಾಗಿ

ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ಬರಲು ಹಲವರ ಕೊಡುಗೆ ಇದೆ. ದೇವರಾಜ ಅರಸು ಅವರ ಮನವೊಲಿಸಿ, ಕರ್ನಾಟಕ ಎಂದು ಮರುನಾಮಕರಣ ಮಾಡಿಸುವಲ್ಲಿ ಇವರ ಕೊಡುಗೆಯು ಮಹತ್ವದ್ದು.

ಸರಣಿ ಪುಸ್ತಕ ಗಳನ್ನೇ ತಂದರು. ಅವರು ಪ್ರಕಟಿಸಿದ್ದ ಬೆಳ್ಳಾವೆ ನರಹರಿ ಶಾಸ್ತ್ರಿಗಳ ಶ್ರೀ ಚಾಮುಂಡೇಶ್ವರಿ ಕೃತಿಯನ್ನು ಮೆಚ್ಚಿದ ಮೈಸೂರಿನ ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರು ಮೇಕ್ರಿಯವರ ಬಳಿ ಹೇಳಿ ಕಳುಹಿಸಿ ಅರಮನೆಯಲ್ಲಿ ರಾಜಸನ್ಮಾನವನ್ನು ಮಾಡಿದ್ದರು.

ಮಂತ್ರಿಯಾಗಲು ಆಹ್ವಾನ

ನಿರಂಜನರು ಭೂಗತರಾಗಿದ್ದಾಗ ಅವರ ಕಥಾ ಸಂಕಲನ ವನ್ನು ಪ್ರಕಟಿಸಿದರು.ಇದರಿಂದ ಪೋಲೀಸನವರ ಕೆಂಗಣ್ಣು ಇವರ ಮೇಲೆ ಬಿದ್ದು ಬಂಧಿಸಿದರು. ಸ್ವಾತಂತ್ರ್ಯ ಹೋರಾಟ ದಲ್ಲಿ ಹತ್ತಾರು ಸಲ ಸೆರೆಮನೆಗೆ ಹೋಗಿದ್ದ ಇವರು ಅಂಜಲಿಲ್ಲ. ನಿರಂಜನರು ಎಲ್ಲಿದ್ದಾರೆ ಎನ್ನುವ ಗುಟ್ಟನ್ನು ಎಂತಹ ಹಿಂಸೆ ಕೊಟ್ಟರೂ ಬಿಡಲಿಲ್ಲ. ಸ್ವಾತಂತ್ರ್ಯ ನಂತರ ಅವರ ಆತ್ಮೀಯ ಮಿತ್ರ ಕೆ.ಸಿ.ರೆಡ್ಡಿ ಮುಖ್ಯಮಂತ್ರಿಗಳಾದರು. ಸಚಿವ ಸಂಪುಟಕ್ಕೆ ಬಾ ಎಂದು ಕರೆದರೆ ಒಪ್ಪಲಿಲ್ಲ. ಮುಂದೆ ಇವರನ್ನು ಗುರು ಎಂದೇ ಕರೆಯುತ್ತಿದ್ದ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾದರು. 'ನೀವು ಕೇಳಿದ ಖಾತೆ ಕೊಡುತ್ತೇನೆ ಬನ್ನಿ' ಎಂದು ಕರೆದರು. ಶ್ರೀನಿವಾಸ ರಾಯರು ಒಪ್ಪಲಿಲ್ಲ. ಬದಲಾಗಿ ಅವರ ದುರಾಡಳಿತ ವಿರೋಧಿಸಿ ಕುಮಾರ ವೆಂಕಣ್ಣನವರಿಂದ 'ಮಂಗಪ್ಪಾಜಿ ಪುರಾಣ' ಬರೆಸಿದರು. ಸರ್ಕಾರ ಅದನ್ನು ಮಟ್ಟುಗೋಲು ಹಾಕಿತು. ಇವರು ಕಣ್ಣು ತಪ್ಪಿಸಿ ಮೆಜೆಸ್ಟಿಕ್‌ನಲ್ಲಿ ಮಾರಾಟ ಮಾಡಿದರು.

ಕರ್ನಾಟಕವಾಯಿತು ರಾಜ್ಯದ ಹೆಸರು

ಮುಂದೆ ಇನ್ನೊಬ್ಬ ಶಿಷ್ಯ ದೇವರಾಜ ಅರಸರು ಮುಖ್ಯ ಮಂತ್ರಿಗಳಾದರು. ಶ್ರೀನಿವಾಸ ರಾಯರನ್ನು ಗೌರವದಿಂದ ಕರೆಸಿ 'ನೀವು ಹೇಳಿದ್ದನ್ನು ಅಪ್ಪಣೆ ಎಂದು ಮಾಡುತ್ತೇನೆ' ಎಂದರು. ಶ್ರೀನಿವಾಸ ರಾಯರು ಹೇಳಿದ್ದು ಒಂದೇ ಮಾತು: 'ಈ ನಾಡಿಗೆ ಕರ್ನಾಟಕ ಎಂದು ಹೆಸರನ್ನಿಡ ಬೇಕು'. ಅದನ್ನು ದೇವರಾಜ ಅರಸರು ಈಡೇರಿಸಿದ್ದು ಈಗ ಇತಿಹಾಸ.

ದೇಶಕ್ಕೆ ಸ್ವಾತಂತ್ರ್ಯ, ಕರ್ನಾಟಕ ಏಕೀಕರಣ ಮತ್ತು ನಾಮ ಕರಣ ಈ ಮೂರೂ ಶ್ರೀನಿವಾಸ ರಾಯರ ಮುಖ್ಯ ಉದ್ದೇಶ ವಾಗಿತ್ತು. ಅದು ಈಡೇರಿದ ನಂತರ ಪ್ರಕಾಶನ ನಿಲ್ಲಿಸ ಬಹುದು ಎಂದು ಯೋಚಿಸಿದ್ದರು. ಆದರೆ ಅವರ ಆತ್ಮೀಯ ಮಿತ್ರರಾದ ವಿದ್ವಾನ್ ರಂಗನಾಥ ಶರ್ಮರು 'ನೋಡಯ್ಯ, ಶ್ರುತಿ ಸಾರ ಸಮುದ್ಧರಣ ಅನುವಾದ ಮಾಡಿ ಮೂವತ್ತು ವರ್ಷವಾಯಿತು, ಯಾರೂ ಪ್ರಕಾಶಕರೇ ಸಿಕ್ಕಿಲ್ಲ' ಎಂದರು. ಕೂಡಲೇ ಶ್ರೀನಿವಾಸ ರಾಯರು ಪ್ರಕಟಿಸಿದರು. ಹೀಗೆ ತಮ್ಮ 97ನೆಯ ವಯಸ್ಸಿನಲ್ಲಿ ಎಂದರೆ 2014ರಲ್ಲಿ ಅವರು ನಿಧನರಾ ಗುವವರೆಗೂ ಪುಸ್ತಕ ಪ್ರಕಟಣೆ ನಿರಂತರವಾಗಿ ಸಾಗಿತು. ಅರವತ್ತು ವರ್ಷ ಪ್ರಕಟಣೆ ನಡೆಸಿದ್ದರೂ ಅವರು ಪ್ರಕಟಿಸಿದ್ದು 180 ಪುಸ್ತಕಗಳು ಮಾತ್ರ. ಆದರೆ ಪಟ್ಟಿ ನೋಡಿದರೆ ಇಡೀ ಕನ್ನಡ ಸಾಹಿತ್ಯ ಚರಿತ್ರೆಯೇ ಕಣ್ಮುಂದೆ ಬರುತ್ತಿತ್ತು. ಇದು ಅವರು ಮೌಲಿಕತೆಗೆ ನೀಡಿದ ಮಹತ್ವವನ್ನು ಸೂಚಿಸುತ್ತದೆ. ಇನ್ನೊಂದು ವಿಶೇಷ ಸಂಗತಿ ಎಂದರೆ ಅವರು ಸ್ವತ: ಬರಹಗಾರ ರಾಗಿದ್ದರೂ, ತಮ್ಮ ಒಂದೂ ಪುಸ್ತಕವನ್ನು ಪ್ರಕಟಿಸಲಿಲ್ಲ. ಶ್ರೀನಿವಾಸ ರಾಯರ ಮನೆ ಅಕ್ಷರಶ: ಧರ್ಮ ಛತ್ರದಂತೆಯೇ ಇತ್ತು. ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ನೀಡಿ ಸೂಕ್ತ ಉದ್ಯೋಗ ಕೊಡಿಸಿ, ಮದುವೆ ಮಾಡಿಸುವವರೆಗೂ ಅವರು ಹೊಣೆಯನ್ನು ನಿರ್ವಹಿಸುತ್ತಿದ್ದರು. ಹೀಗೆ ಅವರು ಸಾವಿರಾರು ಜನರ ಬದುಕಿಗೆ ಬೆಳಕಾಗಿದ್ದಾರೆ. ವೈಯಕ್ತಿಕವಾಗಿ ನನ್ನ ಒಡನಾಟ ಕೊನೆಯ ಎರಡು ದಶಕಗಳದ್ದಾಗಿದ್ದರೂ ಅತ್ಯಂತ ನಿಕಟವಾಗಿತ್ತು. ಹೆಚ್ಚು ಕಡಿಮೆ ಪ್ರತಿನಿತ್ಯವೂ ನಮ್ಮ ಭೇಟಿ ಇದ್ದೇ ಇರುತ್ತಿತ್ತು. ಅವರಿಗೆ ಮಕ್ಕಳ ಪುಸ್ತಕ ಪ್ರಕಟಿಸಬೇಕು ಎನ್ನುವ ಹಂಬಲವಿತ್ತು. ಒಮ್ಮೆ ನಾನು 'ಅಂಕಲ್ ಟಾಮ್ಸ್ ಕ್ಯಾಬಿನ್' ಬಗ್ಗೆ ಮಾತನಾಡಿದ್ದನ್ನು ಕೇಳಿ ಪಟ್ಟು ಹಿಡಿದು ನನ್ನಿಂದ ಅದನ್ನು ಅನುವಾದ ಮಾಡಿಸಿ ಪ್ರಕಟಿಸಿದರು. ಸದ್ಗುರು ಶಂಕರಲಿಂಗ ಭಗವಾನರ ಬಗ್ಗೆ ಯಾರೋ ಮಾತನಾಡಿದ್ದನ್ನು ಕೇಳಿ, ಅವರು ನನಗೆ ಪೂರ್ವಾಶ್ರಮದಲ್ಲಿ ತಾತನ ಅಣ್ಣ ಎಂದು ತಿಳಿದು ಪಟ್ಟು ಹಿಡಿದು ಅವರ ಉಪದೇಶಗಳ ಕುರಿತ 'ಗುರುವೇ ಅರಿವಾದಾಗ' ಕೃತಿ ಪ್ರಕಟಿಸಿದರು. ನೂರು ಬರಹಗಾರರನ್ನು ಮರು ಓದುವ ಪ್ರಕ್ರಿಯೆಗೆ ಅವರದ್ದೂ ಪ್ರೇರಣೆ. ಅವರಲ್ಲಿ ನಲವತ್ತು ಜನರ 'ಮರು ಓದಿನ ಬೆಳಕಿನ ಬೆರಗು' ಸಂಕಲನವನ್ನು ಗಾತ್ರದಲ್ಲಿ ದೊಡ್ಡದು ಎಂದು ಚಿಂತಿಸದೇ ಪ್ರಕಟಿಸಿದರು.

ಅವರು ಎಂದಿಗೂ ಎರಡು ಸಾವಿರಕ್ಕೂ ಕಡಿಮೆ ಪ್ರತಿಗಳನ್ನು ಪ್ರಕಟಿಸಿದವರೇ ಅಲ್ಲ. ಮನೆ ಮನೆಗೆ ಓಡಾಡಿ ಮಾರಾಟ ಮಾಡುತ್ತಿದ್ದರು. ಅವರ ಕಾರಿನಲ್ಲಿ, ಮನೆಯ ತುಂಬಾ ಎಲ್ಲೆಂದರಲ್ಲಿ ಪುಸ್ತಕ. ಪುಸ್ತಕಗಳನ್ನು ನಿಧಾನವಾಗಿ ನೇವರಿಸುತ್ತಿದ್ದರೆ ನೆಮ್ಮದಿ ಎನ್ನುತ್ತಿದ್ದ ಅವರು ಅಪ್ಪಟ ಪುಸ್ತಕ ಪ್ರೇಮಿ. ಅವರ ಸಾಕುಮಗಳು ಶೈಲಜಾ ಹೆಗಡೆ 'ಉದಯ ಪ್ರಕಾಶನ'ವನ್ನು ಈಗಲೂ ಮುಂದುವರೆಸಿ ಕೊಂಡು ಹೋಗುತ್ತಿದ್ದಾರೆ ಎನ್ನುವುದು ಸಮಾಧಾನದ ಸಂಗತಿ.

ಕಾಪಿ ಪುಸ್ತಕ ಕಲಿಸುವ ಪಾಠ

ಲಹರಿ

» ಸುಮಾ ರಮೇಶ್, ಹಾಸನ

ಶಾಲಾದಿನಗಳ ಆರಂಭ ಕಾಲದಲ್ಲಿ ಸ್ಲೇಟಿನ ಮೇಲೆ ಬಳಪದಿಂದ ಅಕ್ಷರಮಾಲೆಯನ್ನು ತಿದ್ದಿ ಕೈ ಪಳಗಿದ ನಂತರ ನಮಗೆ ಪುಸ್ತಕ, ಪೆನ್ಸಿಲ್ ಗೆ ಬಡ್ತಿ ದೊರೆಯುತ್ತಿತ್ತು. ಅದೇ ಖುಷಿಯಲ್ಲಿ ಮೈಮನ ಪುಳಕ ಗೊಂಡು ಬೆರಳುಗಳ ಮುಖೇನ ಲೇಖನಿಯಲ್ಲಿ ಮೂಡು ತ್ತಿದ್ದ ಅಕ್ಷರಗಳು ಎಗ್ಗಿಲ್ಲದೆ ಪುಟಿಯುತ್ತಾ ಹಿಗ್ಗಾಮುಗ್ಗಾ ಓಲಾಡುತ್ತಿದ್ದವು. ಗೆರೆಯ ಮೇಲೆ ಕೂರಲೊಲ್ಲದೆ ಅತ್ತಿತ್ತ ಸರಿದು ಬಾಗಿ ಬಳುಕುತ್ತಿದ್ದವು. ಅಂತಹ ಕೋಳಿ ಕಾಲಿನ ಲಿಪಿಗಳಿಗೆ ಮೂಗುದಾರ ಬಿಗಿದು ಶಿಸ್ತಾಗಿ ನಿಲ್ಲಿಸಲೆಂದೇ ಕಾಪಿ ಪುಸ್ತಕಗಳ ಆವಿಷ್ಕಾರವಾಗಿತ್ತು. ಅದರ ಎರಡು ಪ್ಯಾರಲಲ್ ಅಡ್ಡ ಗೆರೆಗಳ ಸೀಮಿತ ವಲಯದೊಳಗೇ ಅಕ್ಷರಗಳು ತಲೆತಗ್ಗಿಸಿ ಮುಂದೆ ಸಾಗಬೇಕಿತ್ತು. ಒತ್ತು, ಇಳಿಗಳಿಗಷ್ಟೇ ಗೆರೆಯಿಂದ ಮೇಲೆ ಹತ್ತಿ ಕೆಳಗೆ ಇಳಿಯಲು ಅವಕಾಶವಿತ್ತು. ಒಳಗಿನ ಬೌಂಡರಿಯೊಳಗೆ ಶಿಸ್ತಾಗಿ ಸಾಗುತ್ತಾ ನಿಧಾನವಾಗಿ ನಮ್ಮ ಬೆರಳುಗಳೂ ಒಂದು ಹದಕ್ಕೆ ಬಂದು ಅಕ್ಷರಗಳೂ ಸುಂದರ ಆಕಾರ ಪಡೆಯುತ್ತಿದ್ದವು. ಇದರೊಂ ದಿಗೆ ಕಾಗುಣಿತವೂ ಚೆನ್ನಾಗಿ ಕರಗತವಾಗುತ್ತಿತ್ತು. ಹೀಗೆ ಲಿಪಿಗಳು ದಾರಿ ತಪ್ಪದಂತೆ ಕಾಪಿಡುತ್ತಿದ್ದ ಕಾಪಿ ಪುಸ್ತಕದಲ್ಲೂ 2 ನಮೂನೆ ಗಳಿದ್ದವು. ಕನ್ನಡ ಅಕ್ಷರಗಳಿಗಾಗಿ ಎರಡು ಸಾಲಿನದು. ಇಂಗ್ಲಿಷ್ ಅಕ್ಷರಗಳಿಗೆ ನಾಲ್ಕು ಸಾಲಿನದು. ಇಂಗ್ಲಿಷ್ ಕಾಪಿ ಪುಸ್ತಕದಲ್ಲಿ ಇಂಗ್ಲಿಷರಂತೆಯೇ ಕೆಂಪಗಿನ ಎರಡೆರಡು ಸಾಲು ಗಳು ನೀಲಿ ಸಾಲುಗಳ ಹೊರಭಾಗದಲ್ಲಿ ವಿರಾಜಮಾನವಾಗಿ ಇರುತ್ತಿದ್ದವು. ಮಾರ್ಜಿನ್ ಕೂಡಾ ಕೆಂಪು ಬಣ್ಣದಲ್ಲೇ ಇರುತ್ತಿತ್ತು.

ಕೈ ಕೆಸರಾದರೆ ಬಾಯಿ ಮೊಸರು

ಕಸ್ತೂರಿ ಕನ್ನಡದ ಸುಂದರ ಅಕ್ಷರಗಳನ್ನು ಕನ್ನಡ ಕಾಪಿ ಪುಸ್ತಕದ ಎರಡು ಸಾಲಿನ ಮಧ್ಯೆ ಅದಕ್ಕೆ ತಾಗಿದಂತೆ ಗುಂಡಾಗಿ ಬರೆದುಕೊಂಡು ಹೋಗುವುದು ಪ್ರತಿದಿನ ನಮ್ಮ ಮನೆಕೆಲಸದ ಒಂದು ಭಾಗವೇ ಆಗಿತ್ತು. ಅದಕ್ಕಾಗಿ ದಿನಕ್ಕೊಂದು ಗಾದೆಯನ್ನೋ, ಜನಪ್ರಿಯರ ಹೇಳಿಕೆಗಳನ್ನೋ ಹುಡುಕಿ ಒಂದು ಪುಟದಷ್ಟು ಬರೆದುಕೊಂಡು ಹೋಗುವುದನ್ನು ನಾವು ನಿಜಕ್ಕೂ ಆನಂದಿಸುತ್ತಿದ್ದೆವು. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?' 'ಮಳೆ ನಿಂತರೂ ಮರದ ಹನಿ ನಿಲ್ಲದು' 'ಗಾಳಿ ಬಂದಾಗ ತೂರಿಕೋ' 'ಕೈ ಕೆಸರಾದರೆ ಬಾಯಿ ಮೊಸರು' ಇಂತಹ ಸಾಲುಗಳು ಎಲ್ಲರ ಪುಸ್ತಕಗಳಲ್ಲೂ ಹರಿದಾಡುತ್ತಿದ್ದವು. ಹೊಸ ಸಾಲುಗಳ, ಘೋಷ ವಾಕ್ಯಗಳ ಪೇಟೆಂಟ್ ಪಡೆದವರು ಅದನ್ನು ಮರುದಿನ ಅವರ ಆಪ್ತರಿಗೂ ನೀಡುತ್ತಿದ್ದರು. ಕೆಲವೇ ದಿನಗಳಲ್ಲಿ ಅದು ಎಲ್ಲರ ಪುಸ್ತಕಗಳಲ್ಲೂ ಹರಿದಾಡಿ ಹಳತಾದಂತೆ ಪುನಃ ಹೊಸದರ ಶೋಧ ಶುರುವಾಗುತ್ತಿತ್ತು.

ಕನ್ನಡಕ್ಕೆ ಹೋಲಿಸಿದರೆ ಇಂಗ್ಲಿಷ್ ಕಾಪಿ ಪುಸ್ತಕದಲ್ಲಿ ಬರೆಯುವುದು ನಮಗೆ ತುಸು ಕಷ್ಟ. ಅದರಲ್ಲಿ ಯಾವ ಅಕ್ಷರಗಳು ಎರಡು ಸಾಲುಗಳ ಮಿತಿಯಲ್ಲಿ ಸಿಲುಕಬೇಕು, ಯಾವ ಆಲ್ಫಾ ಬೆಟ್ ಮೇಲಿನ ಮೂರು ಸಾಲಿಗೆ ವಿಸ್ತರಿಸಬೇಕು, ಯಾವುದು ಕೆಳಗಿನ ನಾಲ್ಕನೇ ಸಾಲಿಗೆ ರೀಚ್ ಆಗಬೇಕೆಂಬ ಗೊಂದಲ! ಕೆಲವೊಮ್ಮೆ ವಿಸ್ತರಣೆಯ ಸಮಯ ಕೈ ನಡುಗಿ ಜಿ, ವೈ, ಎಫ್ ಅಕ್ಷರಗಳು ಗುರಿ ಮುಟ್ಟದೆ ಒಂದು ಕಡೆಗೆ ವಾಲಿಕೊಳ್ಳುತ್ತಿದ್ದವು. ಕಬಡ್ಡಿ ಆಟಗಾರರು ಎಷ್ಟು ನಿಲುಕಿಸಿದರೂ ಲೈನ್ ಟಚ್ ಮಾಡಲಾಗದೆ ಸೋತು ಔಟ್ ಆಗುವಂತೆ ವಿಸ್ತರಿಸಲಾಗದ ಅಕ್ಷರಗಳು ಮಾರ್ಗ ಮಧ್ಯದಿ ಮುರುಟಿ ಕೊಂಡಿರುತ್ತಿದ್ದವು.

ಇನ್ನು ಕೆಲವು ಬಾರಿ ವಿಸ್ತರಣೆ ಮಿತಿಮೀರಿ ಲಿಪಿಗಳ ಬಾಲ ನಾಲ್ಕನೆಯ ಸಾಲಿನ ಗಡಿಯನ್ನೂ ದಾಟಿ ಮುನ್ನುಗ್ಗಿ ದಿಕ್ಕು ತೋರದೆ ಅಬ್ಬೇಪಾರಿಯಾಗಿ ನಿಂತಿರುತ್ತಿತ್ತು. ಕರೆಕ್ಷನ್ ಸಮಯದಿ ಮುರುಟಿಕೊಂಡವು ಉಪಾಧ್ಯಾಯರ ಕೆಂಪು ಶಾಯಿಯ ಊರುಗೋಲು ಪಡೆದು ನೆಟ್ಟಗಾದರೆ ಅಬ್ಬೇಪಾರಿಗಳು ಬಾಲ ಕತ್ತರಿಸಿಕೊಂಡು ಕೆಂಪಗಾಗುತ್ತಿದ್ದವು.

ವಿಂಕ್ ಮತ್ತು ಇಂಕ್

ಇಂಗ್ಲಿಷ್ ಕಾಪಿ ಪುಸ್ತಕಕ್ಕೆಂದು ಆರಿಸಿಕೊಳ್ಳುತ್ತಿದ್ದ ಪ್ರಾವರ್ಬ್ಸ್ ನಮಗೆ ಸಂಪೂರ್ಣವಾಗಿ ಅರ್ಥವಾಗುತ್ತಿರಲಿಲ್ಲ. 'ಪ್ರಿವೆಂಶನ್ ಈಸ್ ಬೆಟರ್ ದ್ಯಾನ್ ಕ್ಯೂರ್' 'ಫ್ರೆಂಡ್ ಇನ್ ನೀಡ್ ಈಸ್ ಎ ಫ್ರೆಂಡ್ ಇನ್ ಡೀಡ್' 'ವರ್ಕ್ ಈಸ್ ವರ್‌ಶಿಪ್' ಇಂತಹ ಹಲವು ಸಾಲುಗಳು ಎಲ್ಲರ ಪುಸ್ತಕಗಳಲ್ಲೂ ಹರಿದಾಡುತ್ತಿದ್ದವು.

ಒಮ್ಮೆ ನಮ್ಮ ಸಹಪಾಠಿಯೊಬ್ಬ 'ಥಿಂಕ್ ಬಿಫೋರ್ ಯು ವಿಂಕ್' ಎಂಬ ವಾಕ್ಯವನ್ನು ಬರೆದು ತಂದಿದ್ದ. ಕರೆಕ್ಷನ್ ಸಮಯ ಅದನ್ನು ಓದಿದ ಇಂಗ್ಲಿಷ್ ಶಿಕ್ಷಕರ ಮುಖ ಕೆಂಪಗಾಯ್ತು. ಇನ್ನೂ ಬ್ಯಾಚುಲರ್ ಪಟ್ಟ ಹೊತ್ತಿದ್ದ ಅವರು ಅವನೆಡೆಗೊಮ್ಮೆ ಕೆಂಗಣ್ಣು ಬೀರಿ ಅದನ್ನು ಹೇಳಿ ಕೊಟ್ಟವರ ಬಗ್ಗೆ ಎನ್‌ಕ್ವೈರಿ ಶುರುವಿಟ್ಟರು. ಅವನು ಹೆದರುತ್ತಲೇ 'ನಮ್ಮ ಅಕ್ಕ' ಎಂದುಸುರಿದ್ದ. ಕಾಲೇಜು ಓದುತ್ತಿದ್ದ ಅವನ ಅಕ್ಕ ಬಹಳ ಸುಂದರವಾಗಿದ್ದಳು. ಅವನ ಎದುರು ಮನೆಯಲ್ಲೇ ವಾಸವಿದ್ದ ಸರ್ ಮುಖ ಆ ಚಣ ಮತ್ತೂ ಕೆಂಪಗಾಯಿತು. ಕೊನೆಗೆ ಅದು ಹಾಗಲ್ಲ ಎನ್ನುತ್ತಾ 'ಥಿಂಕ್ ಬಿಫೋರ್ ಯು ಇಂಕ್' ಎಂದು ತಿದ್ದಿ ಕಳಿಸಿದ್ದರು. ಏನೂ ಅರ್ಥವಾಗದ ನಾವು ಬರಿದೇ ಮಿಕಿ ಮಿಕಿ ನೋಡಿದ್ದೆವು.

ನಂತರದ ದಿನಗಳಲ್ಲಿ ಕಾಪಿ ಪುಸ್ತಕದ ಪ್ರತೀ ಪುಟದ ಮೊದಲ ಸಾಲಿನಲ್ಲಿ ಜನಪ್ರಿಯರ ಹೇಳಿಕೆಗಳೋ ಗಾದೆ ಮಾತುಗಳೋ ಪ್ರಿಂಟೆಡ್ ಫಾರ್ಮ್‌ನಲ್ಲಿ ಇರುತ್ತಿದ್ದವು. ನಾವೆಲ್ಲಾ ಮೇಲಿನ ಅದೇ ರೆಡಿಮೇಡ್ ಸಾಲುಗಳನ್ನು ಮಕ್ಕಿಕಾಮಕ್ಕಿ ಬಟ್ಟಿ ಇಳಿಸುತ್ತಿದ್ದೆವು. ಇದು ಸುಲಭ; ಆದರೆ ಅರ್ಥ ತಿಳಿದು ಕಲಿಯುವ ಆಸಕ್ತಿ ನಶಿಸಿ ಅದು ನಮ್ಮ ಸೃಜನಶೀಲತೆಗೆ ಮಾರಕವೆನಿಸುತ್ತಿತ್ತು. ಆದರೆ ಕರ್ಸಿವ್ ರೈಟಿಂಗ್‌ನ ಪರಿಚಯವಿರದಿದ್ದ ನಾವು ಇಂತಹ ಮೇಲಿನ ಸಾಲುಗಳನ್ನು ನೋಡಿ ಅಕ್ಷರಗಳನ್ನು ಸರಿಯಾದ ವಿಧಾನದಲ್ಲಿ ಕೂಡಿಸಿ ಬರೆಯುವುದನ್ನು ಕಲಿತೆವು. ಪೆನ್ಸಿಲ್ ಮೇಲೆತ್ತದಂತೆ ಹೆಣೆದು ಬರೆಯುವ ಈ ಹೊಸ ವಿಧಾನ ನಮಗೆ ಬಹಳ ಪ್ರಿಯವಾಯಿತು.

ಕಾಪಿ ಪುಸ್ತಕವನ್ನು ಕರೆಕ್ಷನ್ ಮಾಡುವ ಸಮಯ ಎರಡು ಗೆರೆಗಳಿಗೆ ಸರಿಯಾಗಿ ಕೂಡದ, ನಿಯಮಾನುಸಾರ ರೂಪುಗೊಳ್ಳದ ಲಿಪಿಗಳಿದ್ದರೆ ನಮ್ಮ ಗೆಣ್ಣುಗಳು ಬಿಸಿಯಾಗುತ್ತಿದ್ದವು. ಎಲ್ಲಾ ಪದ, ಅಕ್ಷರಗಳೂ ಸ್ಫುಟವಾಗಿದ್ದು ಗುರುಗಳಿಗೆ ಮೆಚ್ಚುಗೆಯಾಗಿ ಎಲ್ಲಿಯೂ ಕೆಂಪು ಶಾಯಿಯ ತಿದ್ದುಪಡಿ, ರಿಮಾರ್ಕ್ಸ್ ಲಭಿಸದಿದ್ದರೆ 'ಗುಡ್ , ವೆರಿ ಗುಡ್' ಎಂಬ ಶಹಬ್ಬಾಸ್ ಗಿರಿ ಮೌಖಿಕವಾಗಿಯೂ, ಲಿಖಿತ ರೂಪದಲ್ಲೂ ದಕ್ಕುತ್ತಿತ್ತು. ಕನ್ನಡ ಅಧ್ಯಾಪಕರುಗಳು 'ಉತ್ತಮ' 'ಅತ್ಯುತ್ತಮ' ಎಂದು ಬರೆದು ಸಹಿ ಹಾಕುತ್ತಿದ್ದರು. ಇಂದಿಗೂ ಹಳೆಯ ತಲೆಮಾರಿನವರ ಅಕ್ಷರಗಳು ಇಳಿ ವಯಸ್ಸಿನಲ್ಲೂ ಮುತ್ತು ಪೋಣಿಸಿದಂತೆ ಸ್ಫುಟವಾಗಿರುವುದು ಎನಿಸುವುದು.

ಇಂದು ಕಾಣುವ ರಸ್ತೆ ವಿಭಜಕಗಳು, ನಿಯಮಗಳನ್ನು ಅರುಹುವ ಗೀರುಗಳು, ಗಡಿ ರೇಖೆಗಳು ನನಗೆ ಹಲವು ಬಾರಿ ಕಾಪಿ ಪುಸ್ತಕಗಳ ಗೀರುಗಳಂತೆಯೇ ಗೋಚರಿಸುವುದು. ಅವನ್ನು ಅನುಸರಿಸಿಯೇ ಮುಂದುವರಿದರೆ ಅಪಘಾತಕ್ಕೆ ಅವಕಾಶವಿರದು. ಅಕ್ಷರಗಳೊಂದಿಗೆ ಬದುಕಿಗೂ ಇಂತಹ ಸಾಲುಗಳು, ಮಾರ್ಜಿನ್‌ಗಳು ಗಡಿರೇಖೆಗಳು ಇದ್ದಾಗ ವ್ಯಕ್ತಿತ್ವವೂ ಸುಂದರವಾಗಿ ರೂಪುಗೊಳ್ಳುವುದೂ ಅಷ್ಟೇ ಸತ್ಯವಲ್ಲವೇ?

ಆನೆಯೂರಿಗೆ ಉಲ್ಲಾಸದ ಅಂಬಾರಿ

ಬಹು ಭಾಷೆ, ಸಂಸ್ಕೃತಿಯ ಮಹಾನಗರವಾಸಿಗಳದ್ದು ಹಲವುಗಳೊಂದಿಗೆ ಗೆಲುವನ್ನು ಸಾಧಿಸುವ ಮಹಾ ಮನಸ್ಸು. ಆನೆ ನಡೆದದ್ದೇ ದಾರಿ

ಮುಂಬಾಪುರಿ

» ಕಲಾ ಭಾಗ್ವತ್

ಎಂಬಂತೆ ದಡಬಡನೆ ಮುನ್ನಡೆವಾಗ ಅವರು ಬದುಕಿನ ಸಣ್ಣ ಪುಟ್ಟ ತೊಡಕುಗಳಿಗೆ ತಡವರಿಸುವುದಿಲ್ಲ. ಬಹುತ್ವವೇ ಈ ನಗರಕ್ಕೆ ಆನೆ ಬಲವನ್ನು ನೀಡಿದೆ.

ಇಲ್ಲಿ ಈಗ ಜೀವಂತ ಆನೆ ಕಾಣದಿರಬಹುದು, ಆದರೆ ಆನೆಗಳಿಗೂ ಮುಂಬೈಗೂ ಒಂದು ಬಗೆಯ ಅನ್ಯೋನ್ಯ ಸಂಬಂಧವಿದೆ. ಹದಿನಾಲ್ಕನೆಯ ಶತಮಾನದ ರಾಜಾ ಭೀಮದೇವನ ಕಾಲದಲ್ಲಿ ಸಾವಿರಾರು ಆನೆಗಳನ್ನು ಸಾಕಿ ಸಲಹಿದ್ದನೆನ್ನುವ ಐತಿಹಾಸಿಕ ಹಿನ್ನೆಲೆಯಿರುವ ಮಾತುಂಗಾ ಮುಂಬೈಯಲ್ಲಿದೆ. ಅಷ್ಟೇ ಅಲ್ಲ ಆನೆಮೊಗದ ಗಣೇಶನ ಉತ್ಸವದ ಆಚರಣೆಯಾದ ಬಳಿಕ ಇಲ್ಲಿನ ಜನಜೀವನದಲ್ಲಿ ಹೊಸ ಶಕ್ತಿಯ ಪ್ರವಾಹವಾಗುವುದು ಬಹುತೇಕ ಎಲ್ಲರಿಗೂ ತಿಳಿದ ಸಂಗತಿಯಾಗಿದೆ.

ಇವೆರಡಕ್ಕೂ ಹೊರತಾಗಿ ಆನೆಯ ಹೆಸರಿನ ಇನ್ನೊಂದು ನಂಟಿರುವುದು ಮುಂಬಾಪುರಿಗೆ ಮೆರುಗು ನೀಡಿದ ಎಲಿಫೆಂಟಾ ದ್ವೀಪದಿಂದ. ಅರಬ್ಬೀ ಕಡಲಿನಲ್ಲಿರುವ ಈ ನಡುಗಡ್ಡೆಯು ಪ್ರಕೃತಿ ನಿರ್ಮಿತ ಅಚ್ಚರಿಯೆಂದರೆ ತಪ್ಪಾಗಲಾರದು. ಏಕೆಂದರೆ ಇಲ್ಲಿರುವುದು ಕೇವಲ ಸಸ್ಯ ಮತ್ತು ಜೀವ ಸಂಕುಲದ ಸೊಬಗಷ್ಟೇ ಅಲ್ಲ, ಜೊತೆಗೆ ಗುಹೆಗಳಿಂದ, ಗುಹಾಂತರ ದೇವಾಲಯಗಳಿಂದ ಕಲಾತ್ಮಕವಾಗಿ ದೇಶ ವಿದೇಶಗಳ ಪ್ರವಾಸಿಗರ ಗಮನವನ್ನು ಸೆಳೆಯುವ ಗಜ ಗಾಂಭೀರ್ಯವಿದೆ. ಮುಂಬೈಯನ್ನು ನೋಡಲು ಬಂದವರು ಸಾಗರದ ನಡುವಿನ ಈ ಸುಂದರಿಯನ್ನು ನೋಡದೆ ಹೋದರೆ ಅವರ ಪ್ರವಾಸವು

ಅಪೂರ್ಣವೇ ಸರಿ. ಇಲ್ಲಿಯ ಪ್ರವಾಸೋದ್ಯಮದ ಕೇಂದ್ರ ಬಿಂದು ಈ ಎಲಿಫೆಂಟಾ. ಸಾಗರವನ್ನು ಕ್ರಮಿಸಿ ಇಲ್ಲಿಗೆ ನಿತ್ಯ ಬಂದು ಹೋಗುವ ಜನಸಾಗರ ದೊಡ್ಡದು. ಮೂಲತಃ ಘರ್ ಪುರಿ ದ್ವೀಪ ಅಂದರೆ ಗುಹೆಗಳ ಊರು ಎಂಬ ಹೆಸರನ್ನೂ ಹೊಂದಿರುವ ಈ ದ್ವೀಪವು ಮುಂಬಯಿಯಿಂದ ಸುಮಾರು ಹತ್ತು ಕಿ.ಮೀ. ಅಂತರದಲ್ಲಿದೆ. ಪೋರ್ಚುಗೀಸರಿಂದ ಆದಿಯಾಗಿ ವಿದೇಶ ವ್ಯಾಪಾರ, ವಸಾಹತುಗಳ ನೆಪದಿಂದ ವಲಸೆ ಬಂದ ಅನ್ಯ



ದೇಶೀಯರು ದ್ವೀಪದಲ್ಲಿದ್ದ ಬೃಹತ್ ಕಲ್ಲಾನೆಯೊಂದನ್ನು ಕಂಡು ಇದಕ್ಕೆ 'ಎಲಿಫೆಂಟಾ' ಎಂದು ನಾಮಕರಣ ಮಾಡಿದರು. ಸಜೀವ ಆನೆಯ ಗಾತ್ರವಿದ್ದ, ಶಿಲೆಯಲ್ಲೇ ನಿರ್ಮಿತವಾದ ಆ ಅಪರೂಪದ ಆನೆಶಿಲ್ಪವು, ವಿದೇಶಿ ವಸಾಹತುಶಾಹಿಗಳ ಧ್ವಂಸ ಪ್ರವೃತ್ತಿಯಿಂದಾಗಿ ಕ್ರಮೇಣ ತುಂಡುತುಂಡಾಯಿತು. ಸದ್ಯ ಆ ತುಂಡುಗಳನ್ನು ತಂದು ಮುಂಬಯಿಯ ಜೀಜಾಬಾಯಿ ಉದ್ಯಾನದಲ್ಲಿ ಜೋಡಿಸಿಡಲಾಗಿದೆ.

ಎಲಿಫೆಂಟಾಕ್ಕೆ ತೆರಳಲು ಇರುವುದು ಜಲಮಾರ್ಗ ಒಂದೇ. ಹೋಗಿ ಬರುವ ಪ್ರಯಾಣದ ಸುಮಾರು ಎರಡು ಗಂಟೆಯ ಜಲವಿಹಾರವು ಬಲು ರೋಚಕವಾದುದು. ಮುಂಬಯಿಯ ಹೆಬ್ಬಾಗಿಲು ಗೇಟ್ ವೇ ಆಫ್ ಇಂಡಿಯಾದ ಹೊರಾಂಗಣದಲ್ಲಿ ತಲೆಯೆತ್ತಿ ಸುತ್ತಾಡಿ ಸೊಬಗ ಸವಿಯುವ ಪ್ರವಾಸಿಗರು ಎಲಿಫೆಂಟಾ ಪಯಣಕ್ಕೆ ಹೊರಡುವಾಗ ಕೌಂಟರಿನಿಂದ ಟಿಕೆಟ್ ಪಡೆದು ಹಿಂಭಾಗಕ್ಕೆ ಹೋದರೆ ಸಾಲಿನಲ್ಲಿ ಲಂಗರು ಹೊಡೆದ ಫೇರಿ ಲಾಂಚುಗಳು ಪ್ರಯಾಣಿಕರಿಗಾಗಿ ಕಾಯುತ್ತಲಿರುತ್ತವೆ. ಇವುಗಳ ತಿರುಗಾಟವು ಬೆಳಿಗ್ಗೆ ಒಂಬತ್ತುವರೆಯಿಂದ ಸಂಜೆ ಐದುವರೆತನಕವಷ್ಟೇ. ಬೋಟ್ ಹತ್ತಿ ಕುಳಿತ ಹೆಚ್ಚಿನವರ ತಲೆಗೆ ಟೊಪ್ಪಿಗೆಯ ಅಲಂಕಾರ.

ಸುಮಾರು ಎಪ್ಪತ್ತು ಜನರನ್ನು ಸಾಗಿಸುವ ಸಾಮರ್ಥ್ಯವನ್ನು ಹೊಂದಿರುವ ಪುಟ್ಟ ನೌಕೆಯು ನೊರೆಯೆಬ್ಬಿಸುತ್ತಾ ಹೊರಟಾಗ ಅಲ್ಲಿಂದ ಕಾಣುವ ಗೇಟ್ ವೇ ಹಾಗೂ ತಾಜ್ ಹೊಟೆಲ್ಲಿನ ದೃಶ್ಯವು ಮನಮೋಹಕ. ದಾರಿಯುದ್ದಕ್ಕೂ ನಮ್ಮೊಂದಿಗೆ ಬರುವ ಹಕ್ಕಿಗಳು ಹಾರಿ ಹಾರಿ ಮುಂದೆ ಸಾಗುವಾಗ 'ದೇವರು ರುಜುಮಾಡಿದನು' ಎಂಬ ಕುವೆಂಪು ವಾಣಿಯು ಅರಿವಿನ ಲಹರಿಯಾಗಿ ಸಾಗಿ ಹೋಗುತ್ತದೆ. ವಲಸೆ ಬಂದು ಮುಂಬೈ ಹವೆಯಲ್ಲಿ ಹಾರಾಡುವ ಪಕ್ಷಿಗಳೂ ಜನ ಸ್ನೇಹಿ. ನಡುಗಡ್ಡೆಯನ್ನು ತಲುಪಿದೊಡನೆ ಎಲ್ಲರನ್ನೂ ಇಳಿಸುವ ಫೇರಿಯು ನಮಗೆ ಟಾಯ್ ರೈಲಿನ ಕಡೆಗೆ ಬೊಟ್ಟು ಮಾಡಿ ಮುಂದಿನ ದಾರಿಯನ್ನು ಸುಗಮಗೊಳಿಸುತ್ತದೆ. ಅದರಿಂದಿಳಿದು ಮಂಗಗಳ ಚೇಷ್ಟೆಗಳನ್ನು ಸಹಿಸಿ ಸುಮಾರು ನೂರಿಪ್ಪತ್ತು ಮೆಟ್ಟಿಲುಗಳನೇರಿ ಏರಿ ಹೊರಟಾಗ, ಇಕ್ಕೆಲಗಳಲ್ಲಿ ಅಲಂಕಾರಿಕ ಕರಕುಶಲ ವಸ್ತುಗಳು, ಸೌಂದರ್ಯ ಸಾಧನಗಳು, ಆಟಿಕೆಗಳು ಹೀಗೆ ಒಂದೆರಡಲ್ಲ ಕಣ್ತಣಿಸುವ ಕರಾಮತ್ತು! ಇಲ್ಲಿ ಪ್ರವಾಸಿಗರಿಗೆ ಹಸಿವನ್ನೋಡಿಸುವ ರೆಸ್ಟೋರೆಂಟುಗಳೂ ಇವೆ.

ಆನೆ ಹೆಸರನ್ನು ಹೊತ್ತ ಈ ದ್ವೀಪಗಳು ನಮ್ಮ ದೇಶದ ಪುರಾತನ ಪರಂಪರೆಯ ಪ್ರತಿನಿಧಿಗಳೆನಿಸಿದ್ದು, ಅಪರೂಪದ ವಾಸ್ತು ರಚನೆಗಳಿಗೆ ಆಶ್ರಯ ನೀಡಿವೆ.

ಸುಮಾರು ಸಾವಿರಕ್ಕೂ ಹೆಚ್ಚು ಜನವಸತಿಯಿರುವ ಶೆಂಟ್ ಬಂದರ್, ಮೋರಬಂದರ್ ಮತ್ತು ರಾಜಬಂದರ್ ಎಂಬ ಮೂರು ಗ್ರಾಮಗಳಿರುವ ಎಲಿಫೆಂಟಾ ಗುಹೆಯೂರಿನವರು, ಜೀವನೋಪಾಯಕ್ಕಾಗಿ ಮುಂಬಯಿಯಿಂದ ಮಾರಾಟದ ಸಾಮಾನುಗಳು, ಪ್ಯಾಕ್ ಮಾಡಿದ ತಿಂಡಿ ತಿನಿಸುಗಳು, ತಂಪು ಪಾನೀಯ, ಹಾಲು ಇತ್ಯಾದಿಗಳನ್ನು ಫೇರಿಯಲ್ಲೇ ಸಾಗಿಸುತ್ತಾರೆ. ಮಳೆಗಾಲದಲ್ಲಿ ಅನಿಶ್ಚಿತತೆಯ ಕಾರಣ ಕೇವಲ ಎಂಟು ತಿಂಗಳ ಪ್ರವಾಸೋದ್ಯಮ ಚಟುವಟಿಕೆಯಲ್ಲಿ ಅವರು ಪೂರ್ಣ ವರ್ಷಕ್ಕೆ ಸಾಕಾಗುವಷ್ಟನ್ನು ಗಳಿಸಿಕೊಳ್ಳಬೇಕು. ನಾಮಕೇವಾಸ್ತೆ ಶಾಲೆ, ಕೆಲವೇ ಸಮಯದ ಮಟ್ಟಿಗೆ ವಿದ್ಯುತ್, ಇತ್ಯಾದಿ ಅವ್ಯವಸ್ಥೆಗಳ ಜೊತೆಯಲ್ಲೇ ಹೇಗೋ ಜೀವನ ನಡೆಸುವ ಜನರ ಮನೋಬಲವು ಮೆಚ್ಚುವಂಥದ್ದು.

ಎಲಿಫೆಂಟಾದ ಇತಿಹಾಸ ದೊಡ್ಡದು. ಕನಿಷ್ಟ ಎರಡು ಸಾವಿರ ವರ್ಷಗಳ ಇತಿಹಾಸ ಈ ದ್ವೀಪಕ್ಕೆ ಇದೆ. ಇದು ಅನೇಕ ರಾಜವಂಶಗಳ ಆಡಳಿತಕ್ಕೆ ಒಳಪಟ್ಟಿತ್ತು. ಇಲ್ಲಿ ರಾಷ್ಟ್ರಕೂಟರ ಕಾಲದ ರಚನೆಗಳು ದೊಡ್ಡ ಪ್ರಮಾಣದಲ್ಲಿ ಕಾಣಸಿಗುತ್ತವೆ. ಕನೇರಿ ಗುಹಾಲಯದಂತೆ ಬೌದ್ಧ ವಾಸ್ತು ಶಿಲ್ಪ, ಚಾಲುಕ್ಯ, ಶಿಲಾಹಾರರ ಕಾಲದ ಕಲಾವಿನ್ಯಾಸವು ಇಲ್ಲಿ ಚಿತ್ತಾಕರ್ಷಕವಾಗಿವೆ. ಮಹಾಯೋಗಿ, ತ್ರಿಮೂರ್ತಿಗಳು, ಅರ್ಧನಾರೀಶ್ವರ, ಗಂಗಾಧರ, ಕಲ್ಯಾಣ ಸುಂದರ ಮೂರ್ತಿ, ಶಿವನ ಗಣಸಮೂಹವಲ್ಲದೆ ಶಿವಲಿಂಗಗಳೂ ಇವೆ. ಪಾರ್ವತಿ ಕಲ್ಯಾಣ, ಗಂಗಾವತರಣ ಇವೆಲ್ಲವೂ ರಾಜವಂಶಗಳ ಶಿವೋಪಾಸನೆಯನ್ನು ಹೇಳುತ್ತವೆ. ದೇವಾಲಯದ ಸಂಕೀರ್ಣದಲ್ಲಿ ಮುಖ್ಯ ಕೋಣೆ, ಪಾರ್ಶ್ವ ಕೋಣೆಗಳು ಮತ್ತು ಪ್ರಾಂಗಣಗಳಿವೆ. ಇಲ್ಲಿನ ಅಮೋಘ ವಾಸ್ತುಶಿಲ್ಪಗಳೆಲ್ಲವೂ ಪರರ ಆಕ್ರಮಣಕಾಲದಲ್ಲಿ ಭಗ್ನಗೊಂಡವು; ಕೆಲವು ವಿದೇಶಿ ಸೈನಿಕರು ಇಲ್ಲಿನ ವಾಸ್ತು ರಚನೆಗಳನ್ನು ಗುರಿಯಿಡುವ ನಿಶಾನೆಯನ್ನಾಗಿಸಿಕೊಂಡು, ಬಂದೂಕು ಚಲಾಯಿಸಿ ಪುಡಿ ಪುಡಿ ಮಾಡಿದ್ದರಂತೆ! ಇಂದು ಕೆಲವು ಗುಹೆಗಳಲ್ಲಿರುವ ಶಿಲ್ಪಗಳು, ಭಗ್ನಗೊಂಡಿದ್ದರೂ ಚೆನ್ನಾಗಿವೆ, ತ್ರಿಮೂರ್ತಿ ಎಂದೇ ಹೆಸರಾಗಿರುವ ಶಿವನ ಬೃಹತ್ ಮುಖವು ವಿಶ್ವವಿಖ್ಯಾತ ಎನಿಸಿದೆ. ಈಗ ಉಳಿದಿರುವ ಗುಹೆಗಳು, ವಾಸ್ತು ರಚನೆಗಳು ಭಾರತೀಯ ಪುರಾತತ್ವ ಇಲಾಖೆಯ ರಕ್ಷಣೆಯಲ್ಲಿರುವುದರಿಂದ ಇಷ್ಟಾದರೂ ನೋಡಲು ಲಭ್ಯವಾಗಿವೆ.

ಇಲ್ಲಿನ ಕ್ಯಾನನ್ ಗುಡ್ಡದಲ್ಲಿ ಕಡಲನ್ನು ಕಾಯಲು ಬಳಸುತ್ತಿದ್ದ ಫಿರಂಗಿಗಳಿವೆ. ಮೇಲೆ ನಿಂತು ನೋಡಿದರೆ ಇದೊಂದು ತೇಲುವ ಭೂಮಿಯಂತಿದ್ದು ಯುನೆಸ್ಕೊ ವಿಶ್ವ ಪರಂಪರೆಯ ತಾಣಗಳಲ್ಲಿ ಸ್ಥಾನವನ್ನು ಪಡೆದಿದೆ. ಚಿರನೂತನ ಸ್ಮಾರಕಗಳಿಂದ ಮುಂಬಾಪುರಿಯ ಸಾಂಸ್ಕೃತಿಕ ಮೆರುಗನ್ನು ಹೆಚ್ಚಿಸಿದ ಸುಮಾರು ಐದು ಚದರ ಮೈಲಿ ವಿಸ್ತೀರ್ಣದ ಎಲಿಫೆಂಟಾ ನಡುಗಡ್ಡೆಯು ನಗರಕ್ಕೆ ಒಂದು ಬಗೆಯಲ್ಲಿ ಶಾಸ್ತ್ರೀಯ ಝಲಕ್ ನೀಡಿರುವುದಷ್ಟೇ ಅಲ್ಲ ಬೇಸರ ಕಳೆಯುವ ಸ್ನೇಹಿತನಂತೆಯೂ ಇರುವುದು ವಿಶೇಷ.

ಹಸಿರು ಹುಲ್ಲಿನ ಪ್ರಣತಿ

» ಬೆಂಶ್ರೀ ರವೀಂದ್ರ

ಮುಖ ಕಪ್ಪಿಟ್ಟಿದೆಯಲ್ಲ
ಸಾಕು, ಸರಿದುಬಿಡು ನೇಪಥ್ಯಕ್ಕೆ
ಬಡಿಸಿದ್ದ ಪಂಚಭಕ್ಷ ಪರಮಾನ್ನ
ಸಾಲದೆಂದು ಅಡಿಗೆಮನೆ
ಉಗ್ರಾಣವನೆಲ್ಲ ಲೂಟಿ ಮಾಡಿದೆಯಲ್ಲ
ಮುಂದಿನ ಪಂಕ್ತಿಗಿರಲಿ,
ಮುಂದಿನ ಸಾಲಿಗೆ ಏನು ಬಡಿಸುವುದು
ನಿನ್ನ ಹೊಟ್ಟೆಯ ಬಡಿವಾರಕ್ಕೆ
ಹಾರಹಾಕಿದ್ದು ಸಾಲದೇ

ಅಮಾವಾಸ್ಯೆಯ ಕಾರಿರುಳಿನಲ್ಲಿ
ಅಂಬರದ ತಾರಾಪುಂಜಗಳ ತೋರಿ
ಅಗೋ ಅಲ್ಲಿ ನಿಮ್ಮ ಕನಸುಗಳ ಬಿತ್ತ
ಇನ್ನೇನು ಸುಗ್ಗಿಯಾಗಿ ತಣಿಸುವುದು ಚಿತ್ತ
ಮೋಹಪರದೆಯನೆಸೆದು ಮರೆಸಿದೆ
ಮರಸಿದೆ ಬೇರೂರಲು ಕನಸುಗಳು
ಬೇಕು ಬಿತ್ತ ನೆಲಕೆಂಬ ಸತ್ಯ

ಸತ್ಯ ಸತ್ಯ
ಹುಡುಕಲು ಬೇಕಲ್ಲ ಧೈರ್ಯದ ಮೊತ್ತ
ಮಾತ ಮಂಡಿಗೆಯ ಮಂತ್ರದ ಹುಡಿಗೆ
ಕಡಿ ಬಡಿ ಕಡಿ ಬಡಿ ಭೇಷ್ ಭೇಷ್ ಮೋಡಿಗೆ
ಹಾಕಬೇಕು ತಿರುಮಂತ್ರದ ಗಾರುಡಿ
ಬೇಕದಕೆ ನನ್ನುಸಿರು ನನ್ನದೆಂಬ ಎದೆಗಾರಿಕೆ
ಗಮ್ಮೆಂಬ ಮುಂಗಾರು ಬಸಿರಾಗಿ ಹಡೆದರೆ
ಕೋಟಿ ಹಸಿರು ಹುಲ್ಲಿನ ಪ್ರಣತಿ॥

ನಚಿಕೇತನೆಂಬ ಎಳೆ ಹುಲ್ಲೆಮರಿ
ಅಂತಕನರಿವ ಸಂದೂಕಕ್ಕೆ ಕೈಯಿಟ್ಟ ನಲ್ಲ
ಸತ್ಯದ ಡಿಂಬ ಹೊತ್ತ ಡಂಬಕ್ಕೆ ಕೈಕಾಸಿದ ಮಲ್ಲ॥

ಸಲ್ಲಲೆಲ್ಲೆಡೆ ಇದ್ದಾರೆ ನಲ್ಲರು
ಹಂಚುವರು ಬಿಸಿ ಬೆಲ್ಲ
ನಲ್ಲರಹುದೇನು ಅವರು
ಮೋಡಿಯ ಮಲ್ಲರು॥

ನಮ್ಮೆದೆ ಬಗೆಯ ಬಗೆದು
ಧೈರ್ಯದೊಸಗೆಯ ಸವಿದು
ಏರಿಸಿ ಬಿಡು ನಿಶಾನೆ
ಲಂಕೆಯ ಸುಟ್ಟ ಹನುಮನಂತೆ
ಅಂಬುಧಿಯಲಿ ಬಾಲವದ್ದಿದಂತೆ॥

ನಡೆ ಆಗೋ ಅಲ್ಲಿ ಎಲ್ಲ
ಸಾಲಿನಲ್ಲಿ ಕೂತು ಉಂಡು
ಬೀಡಾಡಿಗಳ ಬಳಸಿ ಎಸೆದು
ಕಂದಕಗಳ ಕೂಡಿ ಕಟ್ಟೆ ಕಟ್ಟಿ
ಹೂಂಕರಿಸಿ ಕಟ್ಟೋಣ ಮಹಲು

ಸಾಕು ಸಾಕಿನ್ನು ನೀನು ಸರಿದುಬಿಡು
ನೇಪಥ್ಯಕೆ.

ಉಪೇಕ್ಷಿತ ಮಹಾಕವಿ ಪರಮದೇವ

» ಪ್ರೊ. ಜಿ. ಎನ್. ಉಪಾಧ್ಯ. ಮುಂಬೈ



ಪರಮದೇವ ಕವಿ ವಿರಚಿತ 'ತುರಂಗ ಭಾರತ' ಕನ್ನಡದ ಅಪೂರ್ವ ಮಹಾಕಾವ್ಯಗಳಲ್ಲಿ ಒಂದು. ಪಂಪ, ಕುಮಾರವ್ಯಾಸ, ಲಕ್ಷ್ಮೀಶ ಮೊದಲಾದವರು ಮಹಾಭಾರತದ ಕಥೆಯನ್ನು ಪೂರ್ತಿಯಾಗಿ ತಮ್ಮ ಕಾವ್ಯದಲ್ಲಿ ಹೇಳಿಲ್ಲ. ಈ ಕೊರತೆಯನ್ನು ತುಂಬಿಕೊಟ್ಟ ಏಕೈಕ ಕನ್ನಡ ಕವಿ ಪರಮದೇವ. 'ತುರಂಗ ಭಾರತ'ವನ್ನು ಮೊದಲ ಬಾರಿಗೆ ಸಂಪಾದಿಸಿ ಪ್ರಕಟಿಸಿದ ಹಿರಿಮೆ ಮುಂಬೈ ಕನ್ನಡಿಗ, ಪತ್ರಿಕೋದ್ಯಮಿ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರಿಗೆ ಸಲ್ಲುತ್ತದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಉಪೇಕ್ಷೆಗೆ ಒಳಗಾದ ಪರಮದೇವನ ಯಶೋಗಾಥೆ, ಸಾಹಿತ್ಯ ಸಾಧನೆಯ ಕಿರುನೋಟ ಇಲ್ಲಿದೆ.

ಕನ್ನಡ ಭಾಷೆಗೆ ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘವಾದ ಇತಿಹಾಸವಿದ್ದರೆ ಕನ್ನಡ ಸಾಹಿತ್ಯಕ್ಕೆ ಹತ್ತಿರ ಹತ್ತಿರ ಒಂದೂವರೆ ಸಾವಿರ ವರ್ಷಗಳ ಹಿನ್ನೆಲೆಯಿದೆ. ಹತ್ತನೆಯ ಶತಮಾನ ಕನ್ನಡ ಸಾಹಿತ್ಯದ ಸುವರ್ಣಯುಗ. ಪಂಪ, ಪೊನ್ನ, ರನ್ನ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರವರ್ಣಿ ಹೀಗೆ ಹಲವು ಕವಿಗಳು ಮಹಾಕಾವ್ಯಗಳನ್ನು ರಚಿಸಿ ಕನ್ನಡ ಸಾಹಿತ್ಯವಾಹಿನಿ ತುಂಬಿ ತೀವಿ ಬರುವಂತೆ ಮಾಡಿದ್ದು ಈಗ ಇತಿಹಾಸ. ಹೀಗಾಗಿ ಮಹಾಕಾವ್ಯ ಪರಂಪರೆ ಆಧುನಿಕ ಕಾಲಘಟ್ಟದಲ್ಲೂ ಜನಪ್ರಿಯವಾಗಲು ಈ ಅಂಶ ಪ್ರೇರಣೆ ನೀಡಿತು. ಇತರ ಭಾರತೀಯ ಭಾಷೆಗಳಲ್ಲಿ ಕನ್ನಡದಂತೆ ಮಹಾಕಾವ್ಯ ಪರಂಪರೆ ಇತ್ತೀಚಿನ ದಿನಗಳಲ್ಲಿ ಬೆಳೆದು ಬಂದುದು ಬಹಳ ಕಡಿಮೆ ಎಂದೇ ಹೇಳಬಹುದು.

ಮಹಾಭಾರತ ಜಗತ್ತಿನ ವಿಶಿಷ್ಟ ಮಹಾಕಾವ್ಯಗಳಲ್ಲಿ ಒಂದು. ವ್ಯಾಸ ವಿರಚಿತ ಮಹಾಭಾರತ ಭಾರತೀಯ ಭಾಷೆಗಳ ಸಾಹಿತ್ಯ ನಿರ್ಮಾಣದಲ್ಲಿ ನೀಡಿದ ಪ್ರೇರಣೆ, ಪ್ರಭಾವ ಅಪಾರ. ಕನ್ನಡದ ನಾಡೋಜ, ಅಗ್ರಕವಿ ಖ್ಯಾತಿಯ ಪಂಪ 'ವ್ಯಾಸಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನೀಸುವೆನ್ ಕವಿ ವ್ಯಾಸನೆಂಬ ಗರ್ವಮೆನಗಿಲ್ಲ' ಎಂದಿದ್ದಾನೆ. ಕುಮಾರವ್ಯಾಸ ವಿರಚಿತ 'ಕರ್ಣಾಟ ಭಾರತ ಕಥಾ' ಮಂಜರಿ'ಯನ್ನು 'ಗದುಗಿನ ಭಾರತ' ಎಂದು ಕರೆಯುವುದೇ ಹೆಚ್ಚು ರೂಢಿಯಲ್ಲಿದೆ. ಕನ್ನಡದ ಇನ್ನೊಬ್ಬ ಪ್ರತಿಭಾಶಾಲಿ ಕವಿ ಲಕ್ಷ್ಮೀಶನ ಮಹಾಕಾವ್ಯ 'ಜೈಮಿನಿ ಭಾರತ' ಇಂದಿಗೂ ಜನಸಾಮಾನ್ಯರ ನಾಲಿಗೆಯ ಮೇಲಿದೆ.

.ಈ ಸಾಲಿಗೆ ಸೇರಿಸಬೇಕಾದ ಇನ್ನೊಂದು ಮಹತ್ವದ ಮಹಾಕಾವ್ಯ ಕೃತಿ 'ತುರಂಗ ಭಾರತ'. ಇದನ್ನು ರಚಿಸಿದವನು ಪರಮದೇವ ಕವಿ. 'ತುರಂಗ ಭಾರತ' ಮಹಾಕಾವ್ಯವನ್ನು ಮೊದಲಿಗೆ ಸಂಪಾದಿಸಿ ಪ್ರಕಟಿಸಿದವರು, ಮುಂಬೈ ಕನ್ನಡಿಗ, ಪತ್ರಿಕೋದ್ಯಮಿ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರು. ಈ ಕೃತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು 1986ರಲ್ಲಿ ಮರುಮುದ್ರಿಸಿದ್ದು, ಇದಕ್ಕೆ ಕೆ. ಜಗನ್ನಾಥ ಶಾಸ್ತ್ರಿ ಅವರು ವಿಸ್ತಾರವಾದ ಮುನ್ನುಡಿಯನ್ನು ಬರೆದಿರುವುದು ಉಲ್ಲೇಖನೀಯ ಅಂಶ. ಇತ್ತೀಚೆಗೆ ನಮ್ಮನ್ನು ಅಗಲಿದ ಸಾಹಿತಿ ಡಾ. ಕಮಲಾ ಹಂಪನಾ ಅವರು ಈ ಕೃತಿಯ ಕುರಿತು ಪಿಎಚ್.ಡಿ. ಅಧ್ಯಯನ ನಡೆಸಿ, ಕೃತಿಯೊಂದನ್ನು ಪ್ರಕಟಿಸಿ ಈ ಕವಿಯ ಬಹುಮುಖ ಪ್ರತಿಭೆಯನ್ನು ಬೆಳಕಿಗೆ ಹಿಡಿದರು. ಬೆಂಗಳೂರಿನ ಅಗ್ನಿ ಸೇವಾ ಟ್ರಸ್ಟ್ ಈ ಕವಿಯ ಸಾಧನೆಯ ಪ್ರಚಾರದಲ್ಲಿ ಕೆಲಸ ಮಾಡಿರುವುದು ಉಲ್ಲೇಖನೀಯ.

ಉಪೇಕ್ಷಿತ ಕವಿ

'ತುರಂಗ ಭಾರತ'ದ ಕರ್ತೃ ಪರಮದೇವ ಕವಿ. ಅವನ ಕಾಲ ಕ್ರಿ.ಶ. 1721–1805 ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಕೃತಿಯ ಆರಂಭದ ಪದ್ಯಗಳಲ್ಲಿ ಕವಿ ತನ್ನ ಮೂಲಚೂಲಗಳನ್ನು ಸವಿಸ್ತಾರವಾಗಿ ಹೇಳಿಕೊಂಡಿದ್ದಾನೆ. ಪರಮದೇವ ಕವಿ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಕೊಡಚಾದ್ರಿ, ತಪ್ಪಲಿನ ಸುಳಿಗೋಡಿನವನು. ಇವನು ಹವ್ಯಕ ಬ್ರಾಹ್ಮಣ ಸಮಾಜಕ್ಕೆ ಸೇರಿದವನು. ತಂದೆ ಶಂಕರನಾರಾಯಣಯ್ಯ, ತಾಯಿ ಮಹಾಲಕ್ಷ್ಮಮ್ಮ. ಪರಮದೇವನ ತಂದೆ ತಾಳಮದ್ದಲೆಯ ಅರ್ಥಧಾರಿಯೂ, ಪಂಡಿತರೂ, ಕೃಷಿಕರೂ ಆಗಿದ್ದರು. ಅವರು ಕೊಲ್ಲೂರು ಮೂಕಾಂಬಿಕೆಯ ಭಕ್ತರಾಗಿದ್ದರು. ಪರಮದೇವನ ಮೂಲ ಹೆಸರು ಪರಮೇಶ್ವರ. ಬಾಲ್ಯದಲ್ಲೇ ಸಂಸ್ಕೃತ ವಿದ್ಯಾಭ್ಯಾಸ ಪೂರೈಸಿದ ಪರಮದೇವ ತಂದೆಯಂತೆ ಯಕ್ಷಗಾನ, ತಾಳಮದ್ದಲೆ ಪ್ರಸಂಗಗಳಲ್ಲಿ ಭಾಗವಹಿಸಿ ಸೈ ಎನಿಸಿಕೊಂಡ. ಭಾಗೀರಥಿಯನ್ನು ಮದುವೆಯಾಗಿ ಪರಮದೇವ ಎರಡು ಮಕ್ಕಳ ತಂದೆಯೂ ಆದ.

ಆದರೆ ಮಳೆಯಾಶ್ರಿತ ಕೃಷಿಯನ್ನು ನಂಬಿಕೊಂಡಿದ್ದ ಆ ಸಂಸಾರ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿ, ಊರು ಬಿಟ್ಟು ಇಕ್ಕೇರಿಗೆ ಬಂದು ಅಘೋರೇಶ್ವರ ಹಾಗೂ ಗಣಪತಿ ದೇವಾಲಯಗಳ ಪರಿಚಾರಕನಾಗಿ ಕೆಲಸ ಮಾಡಬೇಕಾಯಿತು. ಇಕ್ಕೇರಿ ಸಮೀಪದ ಚಿಪ್ಪಳಿಯಲ್ಲಿ ಗೋಪಾಲಯ್ಯ ಮತ್ತು ಲಕ್ಷ್ಮೀನಾರಾಯಣ ಎಂಬವರು ಈ ಕುಟುಂಬಕ್ಕೆ ಆಶ್ರಯ ನೀಡಿದರು. ಪರಮದೇವನಿಗೆ ಆ ಊರಲ್ಲಿ ಪೂಜಾ ಕಾರ್ಯದ ಜತೆಗೆ ಪಾಠ ಹೇಳುವ ಐಗಳ ವೃತ್ತಿಯೂ ಸಿಕ್ಕಿತು. ಪರಮದೇವ ಅನೇಕ ಧಾರ್ಮಿಕ ಕೃತಿಗಳ ಪ್ರತಿ ಮಾಡುವ ಕೆಲಸವನ್ನು ಒಂದಷ್ಟು ದಿನ ಮಾಡಿದ್ದು ತಿಳಿದು ಬರುತ್ತದೆ.

ಒಳ್ಳೆಯ ವಿದ್ವಾಂಸನೂ, ಲೇಖಕನೂ ಆಗಿದ್ದ ಪರಮದೇವ ಆ ಸಂದರ್ಭದಲ್ಲಿ ಜನಪ್ರಿಯವಾಗಿದ್ದ 'ತುರಂಗ ಲಯ'ದ ಗಮಕ ವಾಚನದಲ್ಲೂ ಸೈ ಎನಿಸಿಕೊಂಡಿದ್ದ. ಕಾವ್ಯ ವಾಚನ, ತಾಳಮದ್ದಲೆಯ ಮಾತುಗಾರಿಕೆಯ ಮೂಲಕ ಜನರ ಪ್ರೀತ್ಯಾದರಗಳಿಗೆ ಪಾತ್ರನಾದ ಪರಮದೇವ ಉತ್ತಮ ಗಮಕಿಯಾಗಿ, ವ್ಯಾಖ್ಯಾನಕಾರನಾಗಿ, ಪುರಾಣಿಕನಾಗಿ ಮನೆಮಾತಾದ. ಇದೇ ಹೊತ್ತಿಗೆ ಈತನಿಗೆ ಚಿಪ್ಪಳಿಗೆ ಪಕ್ಕದ ಮಹಾಗಣಪತಿ ದೇವಾಲಯದ ಅರ್ಚಕರಾಗಿ ನಿಯುಕ್ತಿಯಾಯಿತು. ಕನ್ನಡದಲ್ಲಿ ಸಮಗ್ರವಾದ ಭಾರತದ ಕೃತಿ ಇಲ್ಲ ಎಂಬುದನ್ನು ಮನಗಂಡ ಪರಮದೇವ ಆ ಕೃತಿ ರಚನೆಯಲ್ಲಿ ತೊಡಗಿ ಯಶಸ್ವಿಯಾಗುತ್ತಾನೆ. ಈ ಸಂಕ್ಷಿಪ್ತ ಭಾರತ ಬಹುಬೇಗನೆ 'ತುರಂಗ ಭಾರತ' ಎಂದೇ ಬಹು ಪ್ರಸಿದ್ಧಿಯನ್ನು ಪಡೆಯಿತು.

ವ್ಯಾಸರ ತರುವಾಯ ಒಂದನೆಯ ಗುಣವರ್ಮ (ಕಾವ್ಯ ಅನುಪಲಬ್ದ), ಪಂಪ, ರನ್ನ, ಕುಮಾರವ್ಯಾಸರ ಮೂಲಕ ಕನ್ನಡದಲ್ಲಿ ಮಹಾಭಾರತದ ಕಥೆ ಬೆಳೆದು ಬಂದಿದೆ. ಇವರ ಸಾಲಿಗೆ ಸೇರಬೇಕಾದ ಇನ್ನೊಂದು ಪ್ರಮುಖ ಹೆಸರು ಕವಿ ಪರಮದೇವನದು. ಇದುವರೆಗೆ ಅಚ್ಚಾಗಿ ಬಂದಿರುವ ಸಾಹಿತ್ಯ ಚರಿತ್ರೆಗಳಲ್ಲಿ ಕೆಲವು ಲೇಖಕರಿಗೆ ನ್ಯಾಯವಾಗಿ ಸಲ್ಲಬೇಕಾದ ಮರ್ಯಾದೆ ಸಂದಿಲ್ಲ. ಸಾಹಿತ್ಯ ಚರಿತ್ರೆಕಾರರ ಅನಾದರಕ್ಕೆ ಗುರಿಯಾಗಿರುವ ಕವಿಗಳಲ್ಲಿ ಪರಮದೇವ ಕವಿಯೂ ಒಬ್ಬ. ಕನ್ನಡದಲ್ಲಿ ಪಂಪ, ರನ್ನ, ಕುಮಾರವ್ಯಾಸ, ತಿಮ್ಮಣ್ಣ ಕವಿಗಳ ಮಹಾಭಾರತಗಳು, ಹದಿನೆಂಟು ಪರ್ವಗಳನ್ನು ಪೂರ್ತಿಯಾಗಿ ಒಳಗೊಂಡಿಲ್ಲ. 'ಸಮಗ್ರ ಮಹಾಭಾರತದ ಕಥೆಯನ್ನು ಕನ್ನಡ ಕಾವ್ಯದಲ್ಲಿ ಹೇಳಿದ ಏಕಮೇವಾದ್ವಿತೀಯ ಕವಿ ಪರಮದೇವ' ಎಂಬುದಾಗಿ ಖ್ಯಾತ ಸಂಶೋಧಕ ಡಾ. ಹಂಪನಾ ಅವರು ಅಭಿಪ್ರಾಯಪಟ್ಟಿದ್ದಾರೆ.

ಸಮಗ್ರ ಮಹಾಭಾರತ

'ತುರಂಗ ಭಾರತ'ವು ಸಮಗ್ರವಾಗಿ, ಸಂಕ್ಷಿಪ್ತವಾಗಿ ಮಹಾಭಾರತವನ್ನು ತಿಳಿಗನ್ನಡದಲ್ಲಿ ಸೆರೆಹಿಡಿದಿದೆ. ಮಹಾಭಾರತದ ಕಥೆಯನ್ನು ಪಂಪ ವಸ್ತುಕದ ರೀತಿಯಲ್ಲಿ, ಕುಮಾರವ್ಯಾಸ ವರ್ಣಕದ ರೀತಿಯಲ್ಲಿ ಎರಕ ಹೊಯ್ದರೆ, ಪರಮದೇವ ಕವಿ 'ತುರಂಗ ಲಯ'ದಲ್ಲಿ ಸಾದರಪಡಿಸಿದ್ದಾನೆ. ಈತ ಭಕ್ತ ಕವಿ. ಸಾಕಷ್ಟು ತತ್ವ ಪದಗಳನ್ನು, ಕೀರ್ತನಗಳನ್ನು, ಚಾರಿತ್ರಿಕ ಮಹತ್ವದ ಪದಗಳನ್ನು ಕಟ್ಟಿ ಹಾಡಿದ್ದಾನೆ. ದಂಡಕ ಶೈಲಿಯಲ್ಲಿ ಕಾವ್ಯ ರಚನೆ ಮಾಡಿದ ಹಿರಿಮೆ ಇವನಿಗೆ ಸಲ್ಲುತ್ತದೆ.

ತುರಂಗ ಭಾರತದ ಆಯಾಮ ಹಾಗೂ ಅನನ್ಯತೆ

ಪರಮದೇವ ಕವಿ ವಿರಚಿತ 'ತುರಂಗ ಭಾರತ' ಒಂದು ಅನನ್ಯ ಕೃತಿ. ಇದರಲ್ಲಿ ಪೀಠಿಕೆ ಅಥವಾ ನಾಂದಿ ಭಾಗ ಸೇರಿ ಒಟ್ಟು ಹದಿನೆಂಟು ಪರ್ವಗಳಿವೆ. ತನ್ನ ಕಾವ್ಯವನ್ನು ಆತ ಸಂಕ್ಷೇಪ ಭಾರತ ಎಂದೇ ಕರೆದಿದ್ದಾನೆ; ಕ್ರಮೇಣ ಈ ಕೃತಿ ತನ್ನ ತುರಂಗ ಲಯದ ಕಾರಣದಿಂದ 'ತುರಂಗ ಭಾರತ' ಎಂದೇ ಖ್ಯಾತಿಯನ್ನು ಪಡೆಯಿತು. 'ಅಷ್ಟದಶ ಪರ್ವದೊಳಗಣ ಸಾರಗಳನ್ನು ವೈಶಿಷ್ಟ್ಯ ಪರಮಣ್ಣ ಕವಿಯಂಬವಂ ಬರೆವ ಕವಿಗೊಟ್ಟು ಕೇಳ್ವರ ಹೇಳ್ವರ ರಘುಗಳು ಪರಿಹರಿಪುದೀ ಪುಣ್ಯಚಾರಿತ್ರವು ಕೃಷ್ಣ ದೇವರು ಹೃದಯವಂ ಪೊಕ್ಕು ನುಡಿಸಿದಂ ತಪ್ಪನಾಡಿದೆನಿದನು ಸಂಕ್ಷೇಪದಿಂದ ತಿಳಿದಷ್ಟನಾ ಮರುತಸುತ್ತ ಕೋಣೆ ಲಕ್ಷ್ಮೀಪತಿಯ ಕರುಣದಿಂ ವರ್ಣಿಸಿದೆನು' (18–56).

ಸ್ವಂತಿಕೆಯ ಹಿರಿಮೆ

ಕುಮಾರವ್ಯಾಸ ಭಾರತ, ಚಾಟು ವಿಠಲನಾಥನ ಭಾರತ ಕೃತಿಗಳ ಪ್ರಭಾವದಿಂದ ಈ ಕೃತಿ ರಚನೆಯಾದರೂ, ಪರಮದೇವ ಕವಿ ಸ್ವಂತಿಕೆಯನ್ನು ಮೆರೆದಿದ್ದಾನೆ ಎಂಬುದರಲ್ಲಿ ಎರಡು ಮಾತಿಲ್ಲ. ತುರಂಗ ಭಾರತ ಆರಂಭವಾಗುವುದು ಪೌಲೋಮ ಪರ್ವದಿಂದ. ಚಾಟು ವಿಠಲನಾಥನ ಭಾರತವನ್ನೇ ಪರಮದೇವ ಹೆಚ್ಚಾಗಿ ಅನುಸರಿಸಿದಂತೆ ಕಾಣುತ್ತದೆ. ಮುಂದೆ ಆಸ್ತಿಕ ಪರ್ವ, ಆದಿ ಪರ್ವ, ಸಭಾ ಪರ್ವ, ಅರಣ್ಯ ಪರ್ವ, ವಿರಾಟ ಪರ್ವ, ಉದ್ಯೋಗ ಪರ್ವ, ಭೀಷ್ಮ ಪರ್ವ, ದ್ರೋಣ ಪರ್ವ, ಕರ್ಣ ಪರ್ವ, ಶಲ್ಯ ಪರ್ವ, ಗದಾ ಪರ್ವ, ಶಾಂತಿ ಪರ್ವ, ಅಶ್ವಮೇಧ ಪರ್ವ, ಆಶ್ರಮ ಪರ್ವ, ಮುಸಲ ಪರ್ವ, ಸ್ವರ್ಗಾರೋಹಣ ಪರ್ವ ಹೀಗೆ ಸಂಕ್ಷಿಪ್ತವಾಗಿ ಮಹಾಭಾರತವನ್ನು ಹೇಳಿದ 'ಏಕೈಕ ಕವಿ' ಎಂಬ ಹಿರಿಮೆಗೂ ಪರಮದೇವ ಪಾತ್ರನಾಗಿದ್ದಾನೆ. ಕನ್ನಡದ ಬೇರಾವ ಕವಿಗಳೂ ಅಷ್ಟಾಗಿ ವರ್ಣಿಸದ ಆಶ್ರಮ ಪರ್ವ, ಮುಸಲ ಪರ್ವ, ಸ್ವರ್ಗಾರೋಹಣ ಪರ್ವಗಳು ಬಹು ಸುದೀರ್ಘವಾಗಿದ್ದು ಕುರುಕುಲದವರಿಗೆಲ್ಲ ಮುಕ್ತಿ ಸಿಗುವಲ್ಲಿಯವರೆಗೂ ಈ ಕಾವ್ಯದ ನಡಿಗೆ ಸಾಗಿದೆ.

ತುರಂಗ ಲಯ ಪ್ರಿಯನಾದ ಪರಮದೇವ ಕನ್ನಡದ ನಾಮಾಂಕಿತ ಕವಿ ಲಕ್ಷ್ಮೀಶನನ್ನು ಅನೇಕ ಕಡೆಗಳಲ್ಲಿ ಅನುಸರಿಸಿದಂತೆ ಕಂಡು ಬರುತ್ತದೆ. ಸ್ವತಃ ತಾಳಮದ್ದಲೆ, ಯಕ್ಷಗಾನ, ಕೀರ್ತನ ರಚನೆಗಳಲ್ಲಿ ನಿಪುಣನಾದ ಈತ ಮಹಾಭಾರತದಲ್ಲಿ ಬರುವ ಯಾವ ರೋಚಕ ಕಥೆಯೂ ಸೋರಿ ಹೋಗದಂತೆ ನೋಡಿಕೊಂಡಿರುವುದು ಉಲ್ಲೇಖನೀಯ ಅಂಶ. ಯಕ್ಷಗಾನ ಪ್ರಸಂಗಗಳನ್ನು ಈತನ ಕಾವ್ಯದಿಂದ ಬಹು ಸುಲಭವಾಗಿ ಹೆಕ್ಕಿ ತೆಗೆಯಬಹುದಾಗಿದೆ. ಜನಮೇಜಯನ ಸರ್ಪಯಾಗ, ದ್ರೌಪದಿ ಸ್ವಯಂವರ, ಸುಭದ್ರಾ ಕಲ್ಯಾಣ, ಮಾಗಧ ವಧೆ, ಶಿಶುಪಾಲ ವಧೆ, ನಳದಮಯಂತಿ, ಯಯಾತಿ, ಹರಿಶ್ಚಂದ್ರನ ಕಥೆ, ಕೀಚಕ ವಧೆ, ಕೃಷ್ಣಸಂಧಾನ, ಅಭಿಮನ್ಯು ಚಕ್ರವ್ಯೂಹ, ಸೈಂಧವನ ವಧೆ, ದುಶ್ಯಾಸನ ವಧೆ, ಗದಾಯುದ್ಧ ಕರ್ಣಾವಸಾನ, ಕೌರವನ ವಧೆ, ಅಶ್ವತ್ಥಾಮ, ಬಬ್ರುವಾಹನ ಕಾಳಗ, ಅಶ್ವಮೇಧ, ಕೃಷ್ಣನ ಕೊನೆಯ ದಿನಗಳು, ಯಾದವರ ಕಲಹ, ಪರೀಕ್ಷಿತ ರಾಜನ ಕಾರುಬಾರು, ಕುರುಕುಲ ಮೋಕ್ಷ ಹೀಗೆ ನೂರಾರು ಸ್ವಾರಸ್ಯಪೂರ್ಣ ಕಥಾ ಪ್ರಸಂಗಗಳನ್ನು ಮನೋಜ್ಞವಾಗಿ ಬಣ್ಣಿಸುವಲ್ಲಿ ಈ ಕವಿ ಯಶಸ್ಸು ಕಂಡಿದ್ದಾನೆ. ಈ ಎಲ್ಲ ಪ್ರಸಂಗಗಳನ್ನು ನಿರೂಪಿಸುವಾಗ ಕೆಲವೊಮ್ಮೆ ವ್ಯಾಸಭಾರತವನ್ನು ಅನುಸರಿಸಿದರೆ ಮತ್ತೆ ಕೆಲವು ಕಡೆ ಕಿರು ಬದಲಾವಣೆ ಮಾಡಿ ಕಥೆ ಹೆಣೆದಿದ್ದಾನೆ. ಕುಮಾರವ್ಯಾಸ, ಚಾಟು ವಿಠಲನಾಥ, ಲಕ್ಷ್ಮೀಶರ ಪ್ರಭಾವವೂ ಅಲ್ಲಲ್ಲಿ ಕಂಡು ಬಂದರೂ ತನ್ನ ಅಸಾಧಾರಣ ಪ್ರತಿಭೆಯನ್ನು ಮೆರೆದಿರುವುದು ಗಮನೀಯ ಅಂಶ. ಪರಮದೇವ 96 ಸಂಧಿಗಳಲ್ಲಿ, 4824 ಷಟ್ಪದಿ ಪದ್ಯಗಳಲ್ಲಿ ಮಹಾಭಾರತದ ಕಥೆಯನ್ನು ಆಕರ್ಷಕವಾಗಿ ಲೀಲಾಜಾಲವಾಗಿ ಮನಂಬುಗುವಂತೆ ಹೇಳಿದ್ದಾನೆ. ಇಂಥ ಒಬ್ಬ ಮಹಾಕವಿಯನ್ನು ಕನ್ನಡ ಸಾರಸ್ವತ ವಲಯ ಕಡೆಗಣಿಸಿರುವುದು ಬೇಸರದ ಸಂಗತಿ.

...ಬಳಿ ನಾನಿದ್ದೆ!

ಮೊದಲ ಪುಟದಿಂದ

ನಮ್ಮ ಬಸ್ ನಿಲ್ಲಿಸಿದ ಎಡಬದಿಯ ಗುಡ್ಡ ನೋಡಿದೆ. ಎತ್ತರದ ಗುಡ್ಡ; ಅಲ್ಲಲ್ಲಿ ಮಳೆಯ ನೀರು ಜಲಪಾತದಂತೆ ಚಿಮ್ಮುತ್ತಿತ್ತು. ಜೊತೆಗೆ ಸ್ವಲ್ಪಸ್ವಲ್ಪವೇ ಮಣ್ಣು ಕಲ್ಲು ಕೆಳಕ್ಕುರುಳುತ್ತಿತ್ತು. ಅಲ್ಲಿ ನಡೆಯಬಹುದಾದ ಅನಾಹುತದ ಕಲ್ಪನೆ ಮೂಡಿ ನಾನು ಬೆಚ್ಚಿಬಿದ್ದೆ. ಯಾವುದೇ ಕ್ಷಣದಲ್ಲಾದರೂ ಆ ಮಣ್ಣು ಕುಸಿದು ಬಸ್ಸು ಅದರೊಳಗೆ ಹೂತುಹೋಗಿಬಿಡಬಹುದಾದ ಸ್ಥಿತಿ ಇತ್ತು.

ಹೋಟೆಲ್‌ನಲ್ಲಿದ್ದವರೂ ಮಣ್ಣಿನಡಿ

ಪ್ರಯಾಣಿಕರೆಲ್ಲಾ ಜೋರಾಗಿ ಕೂಗಿ ಡ್ರೈವರ್‌ನ್ನು ಕರೆದರು, 'ವಾಪಾಸು ಹೊರಡೋಣ ಇಲ್ಲಿ ನಿಲ್ಲುವುದೇ ಅಪಾಯ'ವೆಂದು ತಿಳಿಹೇಳಿದರು. ಚಾಲಕನಿಗೂ ಅಪಾಯದ ಅರಿವಾಗಿರಬೇಕು. ಅವನು ತಕ್ಷಣ ಬಸ್ಸನ್ನು ಯುಟರ್ನ್ ಮಾಡಿ, ಸ್ವಲ್ಪ ದೂರದಲ್ಲಿ ಗುಡ್ಡವಿಲ್ಲದ ಸಮತಟ್ಟಾದ ಜಾಗದಲ್ಲಿ ನಿಲ್ಲಿಸಿದ. 'ಈಗಾಗಲೇ ಗುಡ್ಡ ಕುಸಿದು ಒಂದು ಟ್ಯಾಂಕರ್ ಮತ್ತು ಕಾರು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ. ಅಲ್ಲೊಂದು ಪುಟ್ಟ ಹೋಟೆಲು ಇತ್ತಂತೆ, ಅದೂ ಕೊಚ್ಚಿ ಹೋಗಿದೆ. ಅದರಲ್ಲಿ ಯಾರಿದ್ದರೋ ಗೊತ್ತಿಲ್ಲ.' ನೋಡಿ ಬಂದವರಲ್ಲಿ ಕೆಲವರು ಮಾತನಾಡುತ್ತಿದ್ದರು.

ಕೆಲವು ಹೆಂಗಸರು-ಗಂಡಸರು ದುಗುಡದಿಂದ ಮಣ್ಣು ಕುಸಿದತ್ತ ಓಡುತ್ತಿರುವುದನ್ನು ಕಂಡೆ. ಅಲ್ಲೊಂದು ಅನಾಹುತವೇ ನಡೆದಿದೆ ಎಂದು ಅರ್ಥವಾಯಿತು. ನಮ್ಮ ಬಸ್ಸು ಈ ಗುಡ್ಡ ಕುಸಿತಕ್ಕೆ ಸಿಲುಕುವುದು ಕೆಲವೇ ನಿಮಿಷಗಳ ಅಂತರದಲ್ಲಿ ತಪ್ಪಿತ್ತು. ಬಸ್ಸಲ್ಲಿದ್ದ ಪ್ರಯಾಣಿಕರಲ್ಲಿ ಕೆಲವರು ಭಗವಂತನನ್ನು ಸ್ಮರಿಸುತ್ತಿದ್ದರು. ಕೆಲವರು ನಮ್ಮ ಪುಣ್ಯ ಇವತ್ತು ಬದುಕಿದ್ದೆ ಹೆಚ್ಚು ಅಂದರು. ನಮ್ಮ ಬಸ್ಸನ್ನು ತಡೆದ ವ್ಯಕ್ತಿ ಹಾಗ್ಯಾಕೆ ಚೀರುತ್ತಿದ್ದ ಎಂದು ನನಗಾಗ ಅರ್ಥವಾಯಿತು. ಸುಮಾರು 20 ನಿಮಿಷದ ನಂತರ 'ವಾಪಾಸು ಅಂಕೋಲಾ ನಿಲ್ದಾಣಕ್ಕೆ ಹೋಗುವುದು, ನಂತರ ಏನೆಂದು ತೀರ್ಮಾನ ಮಾಡುವುದು' ಎಂದು ಚಾಲಕ, ನಿರ್ವಾಹಕ ಮಾತನಾಡಿಕೊಂಡು ಹೊರಟರು.

ಅಂಕೋಲಾ ನಿಲ್ದಾಣಕ್ಕೆ ಬಂದ ಮೇಲೆ ಕಂಡಕ್ಟರ್ ನನಗೆ ಕೇಳಿದರು. 'ಏನು ಮಾಡ್ತೀರಿ ಮೇಡಮ್? ಎಷ್ಟೊತ್ತಾಗುತ್ತೋ ಗೊತ್ತಿಲ್ಲ. ವಾಪಾಸು ಹೋಗ್ತೀರಾ?' ನಾನು ಏನೂ ಹೇಳಲಿಲ್ಲ. ಯಾರೋ ಕುಮ್ಟಾ , ಹೊನ್ನಾವರಕ್ಕೆ ಹೋಗಲು ಹಿಲ್ಲೂರು ಮಾರ್ಗವಾಗಿ ರಸ್ತೆಯಿದೆ ಎಂದರು. ಸರಿ ಅಲ್ಲಿಂದ ಹೋಗುವುದೆಂದು ತೀರ್ಮಾನವಾಯಿತು. ಬಸ್ ಹೊರಡುವ ಮುನ್ನ ಕಂಡಕ್ಟರ್ ಪ್ರಯಾಯಣಿಕರಿಗೆ, 'ನೋಡಿ ಬೇರೊಂದು ಒಳರಸ್ತೆಯಲ್ಲಿ ಹೋಗುತ್ತಿದ್ದೇವೆ. ಅಲ್ಲೆಲ್ಲಾದರೂ ಗುಡ್ಡ ಕುಸಿದಿದ್ದರೆ ಬೊಬ್ಬೆ ಹಾಕ್ಲಿಕ್ಕಿಲ್ಲ. ಬರುವವರು ಬನ್ನಿ. ಇಲ್ಲೇ ಇಳ್ಕೋತಿರಿ ಅನ್ನುವವರು ಇಳ್ಕೊಳ್ಳಿ' ಅಂದಿದ್ದೆ ತಡ, ಕೆಲವರು ದಬದಬನೆ ಇಳಿದು ಹೋದರು. ನಾಲ್ಕಾರು ಗಂಡಸರು, ನಾನು, ಮತ್ತೊಬ್ಬರು ಹೆಂಗಸನ್ನು ಬಿಟ್ಟರೆ ಮತ್ಯಾರು ಇರಲಿಲ್ಲ. ಹಾಗೆ ಇಳಿದು ಹೋಗುವಾಗ ಕೆಲವರು 'ಜೀವ ಉಳ್ಸಿಕೊಂಡ್ರೆ, ಸಾಕು' ಎನ್ನುವುದು ಕೇಳಿಸಿತು.

ಲೇಖಕ ಜೋಗಿಯವರು 'ಸಾವು' ಪುಸ್ತಕದಲ್ಲಿ ಬರೆದ ಕಥೆಯೊಂದು ನೆನಪಾಯಿತು. ಬಾಗ್ದಾದಿನ ವ್ಯಾಪಾರಿಯೊಬ್ಬ ತನ್ನ ಸೇವಕನನ್ನು ಸಂತೆಗೆ ಕಳುಹಿಸಿದ. ಸಂತೆಗೆ ಹೋಗಿದ್ದ ಸೇವಕ ಹೆದರುತ್ತ ನಡುಗುತ್ತ ಮರಳಿ ಬಂದವನೇ 'ಮಾರುಕಟ್ಟೆಯಲ್ಲಿ ನಾನು ಸಾವನ್ನು ಕಂಡೆ. ಅದು ನನ್ನನ್ನೆ ದಿಟ್ಟಿಸಿ ನೋಡಿತು, ಅವುಡುಗಚ್ಚಿತು. ನನಗೆ ಭಯವಾಗುತ್ತಿದೆ. ನಿಮ್ಮದೊಂದು ಕುದುರೆಯನ್ನು ಕೊಡಿ ನಾನಿಲ್ಲಿಂದ ದೂರ ಓಡಿ ಹೋಗಿ ತಪ್ಪಿಸಿಕೊಳ್ಳುತ್ತೇನೆ' ಎಂದ. ವ್ಯಾಪಾರಿ ಸೇವಕನಿಗೆ 'ಸಾವಿನಿಂದ ತಪ್ಪಿಸಿಕೊಳ್ಳಲು ಎಲ್ಲಿಗೆ ಹೋಗುತ್ತಿ?' ಎಂದು ಕೇಳಿದ. 'ನಾನು ಇಲ್ಲಿಂದ 125 ಕಿ.ಮೀ. ದೂರವಿರುವ ಸಮರಾ ನಗರಕ್ಕೆ ಹೋಗುತ್ತೇನೆ. ಅಲ್ಲಿ ಯಾರಿಗೂ ನನ್ನ ಗುರುತಿಲ್ಲ' ಎಂದನು. ವ್ಯಾಪಾರಿ ಸೇವಕನಿಗೆ ತನ್ನ ಕುದುರೆಯನ್ನು ಕೊಟ್ಟು ಕಳುಹಿಸಿದ. ಅವನು ಹೊರಟು ಹೋದಮೇಲೆ ವ್ಯಾಪಾರಿ ಮಾರುಕಟ್ಟೆಗೆ ಬಂದ. ಅವನು ಬಂದಾಗಲೂ ಸಾವು ಅಲ್ಲೇ ನಿಂತಿರುವುದನ್ನು ಕಂಡು ಬಳಿ ಹೋಗಿ, 'ನೀನು ನನ್ನ ಸೇವಕನನ್ನು ಹೆದರಿಸಿಯಂತೆ. ಯಾಕೆ ಹಾಗೆ ಮಾಡಿದೆ' ಎಂದು ಕೇಳಿದೆ. ಅದಕ್ಕೆ ಸಾವು, 'ನಾನೇನೂ ಹೆದರಿಸಲಿಲ್ಲ. ಅವನನ್ನು ನೋಡಿ ಆಶ್ಚರ್ಯವಾಯಿತು. ಅವನಿನ್ನೂ ಬಾಗ್ದಾದಿನಲ್ಲೇ ಇದ್ದಾನಲ್ಲಾ ಎಂದು ಬೆರಗಾಗಿ ಅವನನ್ನು ನೋಡುತ್ತಿದ್ದೆ. ಏಕೆಂದರೆ ಇವತ್ತು ಸಂಜೆ ನಾನವನನ್ನು ಸಮರಾ ನಗರದಲ್ಲಿ ಭೇಟಿಯಾಗುವುದೆಂದು ನಿಗದಿಯಾಗಿದೆ' ಎಂದಿತು.

ನಮ್ಮ ಸಮಯ ಮುಗಿದ ಮೇಲೆ ಸಾವು ಎಲ್ಲಿ ಸಂಧಿಸಬೇಕೊ ಅಲ್ಲಿ ಸಂಧಿಸುತ್ತದೆ. ಹಾಗಂತ ದಿನಾ ಹೆದರಿ ಬದುಕಲಾಗುವುದಿಲ್ಲ. ನಾನಂತೂ ಬಸ್ ಇಳಿಯಲಿಲ್ಲ. ಚಾಲಕ, ನಿರ್ವಾಹಕರದ್ದೂ ಪ್ರಾಣವೇ ತಾನೇ? ಅವರೇ ಹೊರಟಿದ್ದಾರೆಂದ ಮೇಲೆ ನೋಡೋಣ ಹೊಸದೊಂದು ಮಾರ್ಗ ನೋಡಿದಂತಾಯಿತು ಎಂದುಕೊಂಡು ಸುಮ್ಮನೇ ಕುಳಿತೆ. ನಾವು ಹೊರಟ ದಾರಿಯಲ್ಲಿ ಎಲ್ಲಿ ಯಾವ ಕ್ಷಣದಲ್ಲಾದರೂ ಅಪಾಯ ಎದುರಾಗುವ ಸನ್ನಿವೇಶವಿತ್ತು. ಆದರೆ ಅಂದು ಯಾವ ಅಪಾಯವೂ ಎದುರಾಗಲಿಲ್ಲ, ಅಂತೂ ಅವತ್ತು 2 ಗಂಟೆ ತಡವಾಗಿ ಊರು ಸೇರಿಕೊಂಡೆ.

ಇಲ್ಲಿ ಕಂಡಕ್ಟರ್ ತೋರಿದ ಕಾಳಜಿಯ ಬಗ್ಗೆ ಹೇಳಲೇ ಬೇಕು. ಅಂದು ಬಸ್ಸು ಬೆಳಿಗ್ಗಿನ ಜಾವ 5.30ಕ್ಕೆ ಹುಬ್ಬಳ್ಳಿಯಿಂದ ಹೊರಟಿತ್ತು. ಸುಮಾರು 7 ಗಂಟೆಯಷ್ಟೊತ್ತಿಗೆ ಯಲ್ಲಾಪುರದಲ್ಲಿ ಚಹ ಕುಡಿಯಲು ನಿಲ್ಲಿಸಿದ್ದರು. ಗುಡ್ಡ ಕುಸಿತದ ಘಟನೆ ನಡೆದು ಬಸ್ಸು ಪುನಃ ಅಂಕೋಲಾಕ್ಕೆ ಬಂದು ಅಲ್ಲಿಂದ ಬೇರೊಂದು ಮಾರ್ಗದಲ್ಲಿ ಹೊರಟಾಗ, ಕಂಡಕ್ಟರ್ 'ಮೇಡಮ್ ನೀವು ಬೆಳಿಗ್ಗೆ ಯಲ್ಲಾಪುರದಲ್ಲಿ ಏನೂ ತಿಂದಿಲ್ಲ. ಹಸಿವಾಗ್ತಿದಿಯಾ?' ಕೇಳಿದರು. 'ಇಲ್ಲಾ ನನಗೇನು ಹಸಿವಾಗ್ತಿಲ್ಲ' ಅಂದೆ. (ಬೆಳಿಗ್ಗೆ ಹೊರಡುವ ಮುನ್ನ ಕುಡಿದ ರಾಗಿ ಗಂಜಿ ಇನ್ನೂ ಕರಗಿರಲಿಲ್ಲ) 'ಸ್ವಲ್ಪ ನೀರು ಕುಡಿತಾ ಇರಿ. ಮುಂದೆ ಬಸ್ ನಿಲ್ಲಿಸಿದಾಗ ಬಿಸ್ಕಿಟ್ ತಂದುಕೊಡ್ತೇನೆ' ಅಂದ್ರು. ನಾನು ಬೇಡ ಅಂದೆ. 'ನಂಗೂ ಹಸಿವಾಗ್ತಿದೆ. ಅದ್ಕೆ ನೋಡಿ ನೀರು ಕುಡಿತಾ ಇದ್ದೇನೆ' ಎಂದರು. ನಿಜವಾದ ಕಾಳಜಿ ಅವರ ಮಾತಿನಲ್ಲಿತ್ತು.

ಜಗತ್ತಿನಲ್ಲಿರುವ ಜನರೆಲ್ಲಾ ಕೆಟ್ಟವರು, ಸ್ವಾರ್ಥಿಗಳು ಅಂತ ಕೆಲವರು ಹೇಳುತ್ತಿರುತ್ತಾರೆ. ನನಗ್ಯಾಕೋ ಹಾಗನಿಸುವುದಿಲ್ಲ. ನಾನು ಹೋದಲ್ಲೆಲ್ಲಾ ತುಂಬಾ ಒಳ್ಳೇಜನ ಸಿಕ್ತಾರೆ. ಚೆನ್ನಾಗಿ ಮಾತಾಡ್ತಾರೆ, ಕಾಳಜಿ ತೋರಿಸ್ತಾರೆ. ಸಾಕು ಇನ್ನೇನು ಬೇಕು ಹೇಳಿ? ನಾವು ಬೇರೆಯವರ ಒಳ್ಳೇತನವನ್ನು ಗುರುತಿಸುವುದನ್ನು ಕಲಿಯಬೇಕು. ಸಣ್ಣ ಸಹಾಯವನ್ನೂ ಸ್ಮರಿಸಬೇಕು. ನಮಗೆ ಸಹಾಯ ಮಾಡಲೇಬೇಕಾದ ಅಗತ್ಯತೆ ಯಾರಿಗೂ ಇಲ್ಲ. ಹಾಗೊಂದು ವೇಳೆ ಯಾರಾದರೂ ಸಹಾಯ ಮಾಡುತ್ತಾರೆನ್ನಿ, ಅದು ನಮ್ಮ ಸ್ನೇಹಿತರೇ ಇರಬಹುದು. ಅದು ಅವರ ಒಳ್ಳೆತನ. ಯಾರೂ ತಮ್ಮ ಆಸ್ತಿಯನ್ನು ನಮ್ಮ ಹೆಸರಿಗೆ ಬರೆದುಕೊಡುವುದಿಲ್ಲ. ಅಷ್ಟು ಒಳ್ಳೆತನ ನಿರೀಕ್ಷೆ ಮಾಡಿ ಕೂತ್ರೆ ಈ ಜನ್ಮದಲ್ಲಿ ನಮಗ್ಯಾರೂ ಒಳ್ಳೆಯವರು ಸಿಗಲು ಸಾಧ್ಯವಿಲ್ಲ. ಈ ಕಂಡಕ್ಟರ್ ವಿಷಯವನ್ನೇ ತೆಗೆದುಕೊಳ್ಳಿ. ನಾನು ತಿಂಡಿ ತಿಂದ್ರೇನು? ಬಿಟ್ರೇನು? ಅವರಿಗೆ ಸಂಬಂಧ ಇಲ್ಲ. ನೀವನ್ನಬಹುದು, ಹೆಣ್ಣುಮಕ್ಕಳಿಗೆ ಹಾಗೇ ಕೆಲವರೆಲ್ಲಾ ಬೇಕಂತಲೇ ಅತಿಯಾದ ಕಾಳಜಿ ತೋರ್ತಾರೆ ಅಂತ. ಆದರೆ ಆ ಕಂಡಕ್ಟರ್ ವರ್ತನೆಯಲ್ಲಿ ಆ ರೀತಿಯ ಯಾವ ಭಾವವೂ ನನಗೆ ಗೋಚರಿಸಲಿಲ್ಲ. ನಿಜವಾದ ಕಕ್ಕುಲತೆ ಇತ್ತು.

ಮರುದಿನ ಮತ್ತೆ ಮರಳಿ ಹುಬ್ಬಳ್ಳಿಗೆ ಹೊರಡುವುದೆಂದು ನಿಶ್ಚಯಿಸಿದ್ದೆ. ಆದರೆ ಮಳೆ ನಿಲ್ಲಲೇ ಇಲ್ಲ. ಎಲ್ಲಾ ಕಡೆ ರಸ್ತೆ ಬ್ಲಾಕ್ ಆಗಿದ್ದವು. ಹಾಗಾಗಿ ಬುಧವಾರ ಹೊರಡುವುದನ್ನು ಬಿಟ್ಟು ಗುರುವಾರ ಹೊರಡುವ ತೀರ್ಮಾನಕ್ಕೆ ಬಂದೆ. ಆದರೆ ಪರಿಸ್ಥಿತಿ ಹಾಗೆಯೇ ಇತ್ತು. ಶಿರ್ಸಿ ಮಾರ್ಗ ಗುಡ್ಡ ಕುಸಿದು ಬಂದಾಗಿತ್ತು. ಅಂಕೋಲಾ ಹೆದ್ದಾರಿ ತೆರವು ಕಾರ್ಯ ನಡೆದೇ ಇತ್ತು. ಹೊನ್ನಾವರ ಕುಮಟಾ ಮಾರ್ಗವೂ ಬಂದ್ ಆಗಿತ್ತು. ನಮ್ಮನೆವರೆಲ್ಲಾ ಇನ್ನೆರಡು ದಿನ ಬಿಟ್ಟು ಹೊರಡು ಎಂದರೂ ಕೇಳದೆ, ಬ್ಯಾಗ್ ಹೆಗಲಿಗೇರಿಸಿಕೊಂಡು ಗುರುವಾರ ಬೆಳಿಗ್ಗೆ ಹೊರಟೆ. ಬಸ್ ಸ್ಟ್ಯಾಂಡ್‌ಗೆ ಬಂದು ಬಸ್ ಹತ್ತಿದರೆ, ಕಂಡಕ್ಟರ್, 'ಹೊನ್ನಾವರದೊರೆಗೆ ಮಾತ್ರ ಟಿಕೆಟ್ ಕೊಡ್ತೇನೆ. ಮುಂದೆ ಏನ್ಮಾಡ್ಬೇಕು ಅಂತ ಹೊನ್ನಾವರದಲ್ಲಿ ಗೊತ್ತಾಗತ್ತೆ' ಅಂದುಬಿಟ್ಟ.

ಗೇರುಸೊಪ್ಪೆಯಲ್ಲಿ ಹಸುರಿನ ಸಿರಿ

ನಾನು ಹೊನ್ನಾವರಕ್ಕೆ ಟಿಕೆಟ್ ತಗೊಂಡೆ. ಬಸ್ ಹೊನ್ನಾವರ ತಲುಪಿತು. ಅಲ್ಲಿಂದ ಗೇರುಸೊಪ್ಪ ಮಾರ್ಗವಾಗಿ ಹೊರಡುವುದೆಂದು ತೀರ್ಮಾನವಾಯಿತು. ಅಸಲಿಗೆ ಚಾಲಕನಿಗೂ ಆ ಮಾರ್ಗ ಸರಿಯಾಗಿ ಗೊತ್ತಿರಲಿಲ್ಲ. ಬಸ್ ಹೊರಟಿತು. ಆ ಮಾರ್ಗದ ಇಕ್ಕೆಲಗಳಲ್ಲಿ ದುರ್ಗಮವಾದ ಕಾಡು. ಎತ್ತ ನೋಡಿದರೂ ದಟ್ಟ ಹಸಿರು. ಜಿಟಿ ಜಿಟಿ ಮಳೆ, ಚುಮು ಚುಮು ಚಳಿ, ಮಂಜು ಮುಸುಕಿದ ಮಾರ್ಗ, ಕತ್ತಲೆ ಕವಿದ ವಾತಾವರಣ, ದುರ್ಗಮ ಅರಣ್ಯದ ನಡುವಿನ ರಸ್ತೆ. ಆಹಾ..! ಎಂಥಾ ಪ್ರಯಾಣ ಗೊತ್ತಾ? ಗುಡ್ಡ ಕುಸಿತ, ಮಳೆ, ಮರ ಬೀಳುವುದು, ಅಪಾಯ, ಆತಂಕ ಇದೆಲ್ಲಾ ಮರೆತ್ಹೋಗಿ ನಾನು ಪ್ರಯಾಣವನ್ನು ಎಂಜಾಯ್ ಮಾಡತೊಡಗಿದೆ.

ಇತ್ತೀಚೆಗೆ ಅಂತಹದ್ದೊಂದು ಪ್ರಯಾಣ ಮಾಡಿ ವರ್ಷಗಳೇ ಕಳೆದಿದ್ದವು. ಗೇರುಸೊಪ್ಪ ದಾಟಿದ ಮೇಲಂತೂ ಕಾನನ ಇನ್ನಷ್ಟು ದಟ್ಟವಾಗುತ್ತಾ ಹೋಯಿತು. ಅಲ್ಲಿಂದ ಸಿದ್ದಾಪುರದ ತನಕ ದಾರಿಯಲ್ಲಿ ಸಿಕ್ಕ ಹಳ್ಳಿಗಳ ಹೆಸರುಗಳು ನನ್ನ ಗಮನ ಸೆಳೆದವು. ಕತ್ಲೇಕಾನ್, ಹೆಜನಿ, ನೊಗಳ್ಳಿ, ಬಸವನ ಬೈಲ್, ಮಸ್ತಾನೆ, ಕೊಡಕಣಿ, ಮಾವಿನಗುಂಡಿ, ಹಳಗೋಡುಮನೆ, ಕುಳಿಬೀಡು, ಕಿಲಾರ, ಮೆಣಸಿ, ಹಲಗೇರಿ, ಸುಂಕತ್ತಿ, ಕುಂಬಾರಕುಳಿ, ದುಗಡಿಮನೆ, ಪಡುವನ ಬೈಲು ಎಂತೆಂಥಹ ಹೆಸರುಗಳು! ಆ ಊರಿಗೆಲ್ಲಾ ಹೆಸರುಗಳನ್ನಿಟ್ಟವರಾರೋ? ಆದರೆ ಖಂಡಿತ ಅವಕ್ಕೊಂದು ಹಿನ್ನೆಲೆ ಇದ್ದಿರಲೇಬೇಕು. ಕತ್ಲೇಕಾನ್ ಅಂತೂ ಹೆಸರಿಗೆ ತಕ್ಕಂತೆ ಕತ್ಲೇಕಾನೇ. ಆ ಕಾಡಿನ ಮಧ್ಯೆ ಮನೆ ಮಾಡಿಕೊಂಡಿರುವ ಜನ ಹೇಗೆ ಬದುಕುಸಾಗಿಸುತ್ತಿರಬಹುದು! ಅಲ್ಲಿ ಕೂಗಿದರೂ ಕೇಳಲು ಹತ್ತಿರ ಮನೆಗಳಿಲ್ಲ. ಮಳೆಗಾಲದಲ್ಲಿ ಮರ ಬಿದ್ದೋ ಇನ್ನೇನಾಗಿಯೋ ಕರೆಂಟ್ ಹೋದರೆ ನಾಲ್ಕಾರು ದಿನವಾದರೂ ಕರೆಂಟ್ ಇಲ್ಲದ ಸ್ಥಿತಿ. ಆ ಜನರ ಧೈರ್ಯದ ಬಗ್ಗೆ ಮೆಚ್ಚುಗೆ ಮೂಡಿತು.

ಭಾವನೆಗಳ ಮನೆ: ಬಸ್ಸು ಸಿದ್ದಾಪುರ ತಲುಪುತ್ತಿದ್ದಂತೆ ಅಲ್ಲೊಂದು ಫಾಸ್ಟ್ ಫುಡ್ ಹೋಟೆಲ್ ಹೆಸರು ನನ್ನ ಗಮನ ಸೆಳೆಯಿತು. 'ಬಾವನಮನೆ ಫಾಸ್ಟ್‌ಫುಡ್' ಎಂದು ಬರೆದಿತ್ತು. ಅದು ಅಕ್ಕನ ಗಂಡ 'ಭಾವ' ತನ್ನ 'ಬಾಲ' ಕಳೆದುಕೊಂಡು 'ಬಾವ' ಆಗಿದ್ದೋ ಅಥವಾ ಅವರ ಮನೆಯ ಹೆಸರೇ ಬಾವನಮನೆಯೋ ಎಂದು ಯೋಚಿಸಿ ಮನದಲ್ಲೇ ನಕ್ಕೆ. ನಾನೀಗ ಹಾದು ಬಂದ ಕಾಡು, ಗುಡ್ಡ, ಹಸಿರು, ಜಲಪಾತ ಎಲ್ಲವನ್ನೂ ನೋಡಿದ್ದ ಭಾವನೆಯಲ್ಲೇ ಇದ್ದೆ, 'ಭಾವನ ಮನೆ' ಎಂದರೆ, 'ಭಾವ'ಗಳ ಮನೆಯೂ (ಭಾವನೆಗಳ ಮನೆ) ಆಗಬಹುದಲ್ಲವೆ? ಹೆಸರುಗಳ ಕರಾಮತ್ತಿನದ್ದೇ ಬೇರೊಂದು ಲೋಕ. ಇದನ್ನೆಲ್ಲಾ ಗಮನಿಸುವಷ್ಟು ಆಸಕ್ತಿ ಇರಬೇಕು. ಈಗೆಲ್ಲಾ ಬಹುತೇಕರಿಗೆ ಸಮಯವಿಲ್ಲ. ಯಾವಾಗಲೂ ಅವಸರದಲ್ಲೇ ಇರುತ್ತಾರೆ. ಅವಸರವಸರವಾಗಿ ಬದುಕುವ ಅನೇಕರು ಬದುಕಿನ ಸಣ್ಣ ಸಣ್ಣ ರಸನಿಮಿಷಗಳನ್ನು ಗಮನಿಸುವುದನ್ನು ಎಂಜಾಯ್ ಮಾಡುವುದನ್ನೇ ಮರೆಯುತ್ತಾರೆ.

ಅವತ್ತು ಬಸ್ ಸಿದ್ದಾಪುರಕ್ಕೆ ಹೋಗಿ ಅಲ್ಲಿಂದ ಶಿರಸಿ ಮಾರ್ಗವಾಗಿ ಬಸ್ಸು ಹುಬ್ಬಳ್ಳಿ ತಲುಪಿತು. ಆ ಇಡೀ ಪ್ರಯಾಣ ಪ್ರಾರಂಭವಾಗುವಾಗ ಮುಂದೇನಾಗತ್ತೋ, ಎಲ್ಲಿ ಸಿಕ್ಕಿಹಾಕಿಕೊಳ್ತೀನೋ ಎಂಬ ಆತಂಕವಿದ್ದರೂ ನಂತರ, ಮನಸ್ಸಿಗೆ ಮುದ ನೀಡಿತು. ಪ್ರಯಾಣದ ಆಯಾಸ ಬಾಧಿಸಲಿಲ್ಲ. ಈ ಕಾರಣಕ್ಕೆ ನನಗೆ ಪ್ರಯಾಣವೆಂದರೆ ಇಷ್ಟ. ಪ್ರಯಾಣಿಸುವಾಗ ಮೊಬೈಲ್ ನೋಡುತ್ತಲೋ ನಿದ್ದೆ ಮಾಡುತ್ತಲೋ ಸಮಯ ವ್ಯರ್ಥ ಮಾಡುವುದಿಲ್ಲ. ಯಾವಾಗಲೂ ಕಿಟಕಿ ಪಕ್ಕದ ಸೀಟನ್ನೇ ಆಯ್ದುಕೊಂಡು ಕಿಟಕಿಯಾಚೆ ನೋಡುತ್ತಾ, ಕುಳಿತು ಬಿಡುತ್ತೇನೆ. ಅಲ್ಲೇನೋ ಹೊಸದು ಕಾಣುತ್ತದೆ. ನಾವು ಎಲ್ಲಾದರೂ ಹೊರಟಾಗ ನಾವು ತಲುಪಬೇಕಾದ ಗಮ್ಯಸ್ಥಾನ ಎಷ್ಟು ಮುಖ್ಯವೋ ಸಾಗುವ ದಾರಿ ಕೂಡ ಅಷ್ಟೇ ಮುಖ್ಯ. ಅದು ಅನೇಕ ಜೀವನ ಪಾಠಗಳನ್ನು ಕಲಿಸುತ್ತದೆ.

ದತ್ತು ಪದ್ಧತಿಗೆ ಹೊಸ ವ್ಯಾಖ್ಯೆ

» ಡಿ.ಎಸ್. ಹೆಗಡೆ ಶಿರಸಿ

ದೊಡ್ಡ ನಗರಗಳಿಂದ ದೂರ ಇರುವ ಪಟ್ಟಣಗಳಲ್ಲಿ ಕಲಾಚಟುವಟಿಕೆ ನಡೆಯುವುದು ನಿಜಕ್ಕೂ ಉತ್ತಮ ಸಂಸ್ಕೃತಿ. ಇತ್ತೀಚೆಗೆ ಶಿರಸಿಯಲ್ಲಿ ನಡೆದ ಈ ನಾಟಕವು ದತ್ತು ಪದ್ಧತಿಗೆ ಹೊಸ ಅರ್ಥವನ್ನು ಸೂಚಿಸುವ ಮೂಲಕ, ವೀಕ್ಷಕರ ಮನೆ ಗೆದ್ದಿದೆ.

ಅದೊಂದು ಕಾಲವಿತ್ತು. ಮಕ್ಕಳಿಲ್ಲದ ದಂಪತಿಗಳು ತಮ್ಮ ವಂಶೋದ್ಧಾರಕ್ಕೆ ಅನಾಥ ಮಕ್ಕಳನ್ನು ಅಥವಾ ಸಂಬಂಧಿಕರಲ್ಲಿ ಹೆಚ್ಚು ಮಕ್ಕಳನ್ನು ಹೊಂದಿರುವ ಕುಟುಂಬದಿಂದ ಪರಸ್ಪರ ಒಪ್ಪಿಗೆಯನ್ವಯ ದತ್ತು-ಸ್ವಿಕಾರ ಮಾಡುವ ಪದ್ಧತಿ ಇತ್ತು. ಇದು ನಮ್ಮ ಪರಂಪರೆಯಲ್ಲಿ ಪುರಾತನ ಕಾಲದಿಂದಲೂ ರೂಢಿಯಲ್ಲಿರುವ ವಿಚಾರ. ಸೂತಪುತ್ರ ಕರ್ಣ, ಅಂಬಿಗರ ಮನೆಯ ದತ್ತು ಪುತ್ರನಾದ.

ಕೆಲಮೊಮ್ಮೆ ಹುಟ್ಟಿದ ಮನೆಯ ಗೋತ್ರ ಒಂದಾಗಿ ದ್ದರೆ ಸೇರುವ ಮನೆಯ ಗೋತ್ರ ಬೇರೆಯದೇ ಇರುತ್ತದೆ. ಆಗ ಶಾಸ್ತ್ರದಲ್ಲಿ ಗೋತ್ರ ಸ್ವೀಕಾರ ಅಥವಾ ಗೋತ್ರ ಬದಲಾವಣೆಗೂ ಅವಕಾಶವಿದೆ. ಇನ್ನು ಕಾನೂನು ಬದ್ಧವಾಗಿ ಒಂದು ಮಗುವನ್ನು ಅನಾಥಾಶ್ರಮದಿಂದಲೋ, ಆಸ್ಪತ್ರೆಯಿಂದಲೋ ಅಥವಾ ಅಪರಿಚಿತ ಮೂಲದಿಂದಲೋ ಸ್ವೀಕರಿಸಲು ಅವಕಾಶವಿದೆ. ಇತ್ತೀಚೆಗೆ ಮಕ್ಕಳ ನಿರಾಪೇಕ್ಷೆ, ಪ್ರಸವದ ಅನಾಸಕ್ತಿ ಕಾರಣಗಳಿಂದ ಮಾನವ ಸಂತತಿ ಕ್ಷೀಣವಾಗುತ್ತಿದೆ. ಪ್ರನಾಳ ಶಿಶು, ಬಾಡಿಗೆ ತಾಯಿ, ಇತ್ತೀಚಿಗಿನ ಬೆಳವಣಿಗೆ.

ಇತ್ತೀಚೆಗೆ ಶಿರಸಿಯಲ್ಲಿ ಅಭಿನಯಿಸಲ್ಪಟ್ಟ ನಾಟಕ 'ಕಾಲಚಕ್ರ' ದತ್ತು ಸ್ವೀಕೃತಿಗೆ ಹೊಸ ವ್ಯಾಖ್ಯೆಯೊಂದಕ್ಕೆ ಮುನ್ನುಡಿ ಬರೆದಿದೆ. ಈ ನಾಟಕದಲ್ಲಿ ವೃದ್ಧ ದಂಪತಿಗಳಾದ ವಿಠಲ ಇನಾಮದಾರ, ರುಕ್ಮಿಣಿ-ಬಾಯಿ ದಂಪತಿಗಳಿಗೆ ಇಬ್ಬರು ಮಕ್ಕಳಿದ್ದೂ, ಮನೋವೇದನೆಗೊಳಗಾಗುವ, ವೃದ್ಧಾಪ್ಯದಲ್ಲಿ ಸರಿಯಾದ ಆಹಾರ, ಸ್ವಾತಂತ್ರ್ಯ ಸಂತೋಷದಿಂದ ವಂಚಿತರಾಗುವ, ಸನ್ನಿವೇಶವಿದೆ. ಅಂತಿಮವಾಗಿ, ತಮ್ಮ ಸ್ವಾಭಿಮಾನಕ್ಕೆ ದಕ್ಕೆಯುಂಟಾದಾಗ ಇನಾಮದಾರ ಸಾಹೇಬರು ಪತ್ರಿಕಾ ಪ್ರಕಟಣೆಯೊಂದನ್ನು ಪ್ರಚುರ ಪಡಿಸಿ, 'ಎಪ್ಪತ್ತೈದರ ಹರೆಯದ ವೃದ್ಧದಂಪತಿಗಳು ದತ್ತು ಸ್ವೀಕಾರಕ್ಕೆ ಲಭ್ಯವಿದ್ದಾರೆ' ಎಂದು ಪ್ರಕಟಿಸಿ, ಯಾರಾದರೂ ಇವರನ್ನೂ ಸಾಕುವವರಿದ್ದರೆ ಸಂಪರ್ಕಿಸಿ ಎಂದು ತಿಳಿಸುತ್ತಾರೆ.

ಪತ್ರಿಕಾ ಪ್ರಕಟಣೆಯನ್ನು ನೋಡಿದ, ರಾಘವ-ಲೀಲಾವತಿ ದಂಪತಿಗಳು ಇನಾಮದಾರ ಮನೆ ಹುಡುಕಿ ಬರುತ್ತಾರೆ. ಆದರೆ, ಇವರ ಮಕ್ಕಳು ಇದು ತಮ್ಮ ವ್ಯಕ್ತಿತ್ವಕ್ಕೆ ಹಾನಿಯಾಗುತ್ತದೆಯೆಂಬ ಕಾರಣ ಮುಂದೆ ಮಾಡಿ ವೃದ್ಧ ತಂದೆ-ತಾಯಿಯನ್ನು ತಮ್ಮ ಪತ್ನಿಯರ ಆಗ್ರಹದ ಮೆರೆಗೆ ಒಂದು ದತ್ತಿ ಸಂಸ್ಥೆಗೆ ಸೇರಿಸುತ್ತಾರೆ. ಆದರೆ ಬಾಲ್ಯದಲ್ಲೇ ತಂದೆ-ತಾಯಿಯವರನ್ನು ಕಳೆದುಕೊಂಡು, ಹಿರಿಯರ ಪ್ರೀತಿ ವಾತ್ಸಲ್ಯದಿಂದ ವಂಚಿತರಾದ ಹಾಗೂ ಮಕ್ಕಳಿಲ್ಲದ ಕೊರಗಿನಲ್ಲಿ ಇರುವ ರಾಘವ-ಲೀಲಾ ದಂಪತಿಗಳು, ಇನಾಮದಾರ ದಂಪತಿಗಳನ್ನು ಅರಸುತ್ತಾ ಬಂದಾಗ, ಅದೇ ಸಮಯದಲ್ಲಿ, ವೃದ್ಧಾಶ್ರಮದ ನೀತಿ-ನಿಯಮಗಳಿಂದ ಬೇಸತ್ತ ದಂಪತಿಗಳು ತಿರುಗಿ ಮನೆಯತ್ತ ಹೆಜ್ಜೆ ಹಾಕುತ್ತಾರೆ. 'ರೋಗಿ ಬಯಸಿದ್ದು ಹಾಲು ವೈದ್ಯ ಕೊಟ್ಟಿದ್ದೂ ಹಾಲು' ಎಂಬಂತೆ ಸ್ವಂತ ಹೆತ್ತ ಮಕ್ಕಳು, ತಮ್ಮ ತಂದೆ-ತಾಯಿಯನ್ನು ರಾಘವ ದಂಪತಿಗಳಿಗೆ ಇವರನ್ನು ಸಾಗುಹಾಕುತ್ತಾರೆ. ವೃದ್ಧ ದಂಪತಿಗಳ ಬಾಳು ಮತ್ತೆ ಹಸನಾಗುತ್ತದೆ. ರಾಘವ ದಂಪತಿಗಳು ಇನಾಮದಾರ ದಂಪತಿಗಳನ್ನು ಅತ್ಯಂತ ಪ್ರೀತಿ, ಗೌರವ, ಮಮತೆ ಕಾಳಜಿಯಿಂದ ನೋಡುತ್ತಾರೆ.

ಇದೊಂದು ಹೊಸ ಕಲ್ಪನೆ. ಅನಾಥ ಅಥವಾ ಅಸಡ್ಡೆಗೊಳಗಾದ ವೃದ್ಧರ ಬಾಳಲಿ ಒಂದು ಹೊಸ ಆಶಾ ಕಿರಣ. ಒಮ್ಮೊಮ್ಮೆ 'ಹೀಗೂ ನಡೆಯುವ ಸಾಧ್ಯತೆ ಇದೆಯೆ?' ಎಂಬ ಅಚ್ಚರಿಗೆ ಕಾರಣವಾದರೂ, ಅಸಾಧ್ಯವಾದುದಲ್ಲ ಎಂದಾದು ಮನವರಿಕೆಯಾಗುತ್ತದೆ. ವೃದ್ಧ ಮಾತಾ-ಪಿತರನ್ನು ಹೇಗೆ ನೋಡಿಕೋಳ್ಳಬೇಕು ಮತ್ತು ವೃದ್ಧರು ತಮ್ಮ ಯೌವನದಲ್ಲಿ ಭವಿಷ್ಯದ ಬಗ್ಗೆ ಹೇಗೆ ಯೋಜಿಸಿಬೇಕೆಂಬ ನೀತಿ ಪಾಠಗಳು ಈ ನಾಟಕದಲ್ಲಿ ಮೂಡಿ ಬಂದಿದೆ.

ಮಂಚಿಕೇರಿ ರಂಗ ಸಮೂಹ ಪ್ರಸ್ತುತ ಪಡಿಸಿದ ನಾಟಕ 'ಕಾಲಚಕ್ರ'ದ ಮೂಲ ಕರ್ತೃ ಜನಪ್ರಿಯ ಮರಾಠಿ ಲೇಖಕ ಜಯಂತ ದಳವಿ, ಕನ್ನಡಕ್ಕೆ ಅನುವಾದಿಸಿದವರು ಎಚ್. ಕೆ. ಕರ್ಕೆರಾ. ಹುಲಗಪ್ಪ ಕಟ್ಟಿಮನೆಯವರ ನಿರ್ದೇಶನದಲ್ಲಿ ಪ್ರದರ್ಶಿಸಲ್ಪಟ್ಟ ಈ ನಾಟಕ, ನೋಡುಗರ ಕಣ್ಣಲ್ಲಿ ನೀರು ಬರುವಂತೆ ಮಾಡಿತು.